ಶುಕ್ರವಾರ, ಅಕ್ಟೋಬರ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 276 | ಪುಟ18

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ

ಹಬ್ಬಗಳಿಗಿಲ್ಲ ಸ್ಟಾರ್ ಚಿತ್ರಗಳ ಅಬ್ಬರ! ಪ್ರಮುಖ ಹಬ್ಬಗಳಂದು ಪರಭಾಷಾ ನಟರ ಚಿತ್ರಗಳೇ ಹೆಚ್ಚು ಅಬ್ಬರಿಸುತ್ತಿವೆ...



ಅನುಭವ ಮಂಟಪ

ಸತ್ಯ, ಅರ್ಧ ಸತ್ಯಗಳ ಮಧ್ಯೆ ಜಾತಿ ಗಣತಿ ಚರ್ಚೆ

ಇ.ಡಿಗೆ ದಾಖಲೆ ಸಲ್ಲಿಸಿದ ಸ್ನೇಹಮಯಿ ಕೃಷ್ಣ 10

ಪಿಯು ಪ್ರಾಯೋಗಿಕ ಪರೀಕ್ಷೆಗೆ ಅನ್ಯಕಾಲೇಜು 5

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
82,497	25,250	₹79,870 (ಬೆಂಗಳೂರು)	₹97,100 (ಬೆಂಗಳೂರು)	83.96

ಅವಧಿ ಪೂರ್ಣಗೊಳಿಸುವೆ: ದಸರಾ ಉದ್ಘಾಟನಾ ವೇದಿಕೆಯಲ್ಲಿ ಸಿದ್ದರಾಮಯ್ಯ ವಿಶ್ವಾಸ

ರಾಜೀನಾಮೆ ರಾಜಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಮೈಸೂರು: 'ಮುಡಾ ನಿವೇಶನ ಹಂಚಿಕೆಯ ಹಗರಣದ ಆರೋಪ ಎದುರಿಸುತ್ತಿರುವ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು' ಎಂದು ಪ್ರತಿಪಕ್ಷಗಳಾದ ಬಿಜೆಪಿ–ಜೆಡಿಎಸ್ ನಾಯಕರು ಪಟ್ಟು ಹಿಡಿದಿರುವ ಹೊತ್ತಿನೊಳಗೆ, ರಾಜೀನಾಮೆ ಅಗತ್ಯವೇ ಇಲ್ಲ ಎಂದು ವಿಪಕ್ಷ ಶಾಸಕರೇ ಧ್ವನಿ ಎತ್ತಿರುವುದು ರಾಜಕೀಯ ತಿರುವಿಗೆ ಕಾರಣವಾಗಿದೆ.

ಗುರುವಾರ ಮೈಸೂರಿನಲ್ಲಿ ದಸರಾ ಉದ್ಘಾಟಿಸಿದ ಸಾಹಿತಿ ಹಂ.ಪ. ನಾಗರಾಜಯ್ಯ ಅವರು, ಪ್ರಜಾಪ್ರಭುತ್ವಕ್ಕೆ ಎದುರಾಗಿರುವ ಆತಂಕಗಳ ಬಗ್ಗೆ ಪ್ರಾಸಂಗಿಕವಾಗಿ ಉಲ್ಲೇಖಿಸಿದರು. ಇದನ್ನೇ, ವಿಸ್ತರಿಸಿದ ಚಾಮುಂಡೇಶ್ವರಿ ಕ್ಷೇತ್ರದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರು, 'ಎಫ್ಐಆರ್ ದಾಖಲಾಗಿರುವ ಎಲ್ಲರೂ ತಾಕತ್ತಿದ್ದರೆ ರಾಜೀನಾಮೆ ಕೊಡಲಿ' ಎಂದು ಸವಾಲೆಸೆದರು.

10ನೇ ಪುಟ ನೋಡಿ

ಸರ್ಕಾರ ಉರುಳಿಸುವ ದುರಾಲೋಚನೆ ಬೇಡ: ಹಂಪನಾ

ಮೈಸೂರು: 'ಸರ್ಕಾರಗಳನ್ನು ಉರುಳಿಸುವ ದುರಾಲೋಚನೆ ಬರದಂತೆ ತಡೆದು, ಚುನಾಯಿತ ಸರ್ಕಾರಗಳನ್ನು ಉಳಿಸುವ ಚಿಂತನೆಗಳನ್ನು ಲೋಕಾಂಬಿಕೆಯು ಮೂಡಿಸಲಿ' ಎಂದು ಹಂ.ಪ. ನಾಗರಾಜಯ್ಯ ಆಶಿಸಿದರು.

ಈ ಮಾತನ್ನು ಪ್ರಸ್ತಾಪಿಸಿದ ಸಿದ್ದರಾಮಯ್ಯ, 'ಹಂ.ಪ. ನಾಗರಾಜಯ್ಯ ಅವರು ಮೌಲ್ಯಯುತ ಭಾಷಣ ಮಾಡಿದ್ದಾರೆ. ಚುನಾಯಿತ ಸರ್ಕಾರಗಳನ್ನು ವಾಮ ಮಾರ್ಗಗಳಲ್ಲಿ ಕಿತ್ತು ಹಾಕುವುದು ಪ್ರಜಾಪ್ರಭುತ್ವ ವಿರೋಧಿ ಎಂದು ಹೇಳಿದ್ದಾರೆ' ಎಂದರು.

10ನೇ ಪುಟ ನೋಡಿ

ಎಫ್ಐಆರ್ ಆದವರೆಲ್ಲರೂ ರಾಜೀನಾಮೆ ಕೊಡಿ: ಶಾಸಕ ಜಿ.ಟಿ.ದೇವೇಗೌಡ

ಮೈಸೂರು: 'ಯಾರೆಲ್ಲರ ವಿರುದ್ಧ ಎಫ್ಐಆರ್ ದಾಖಲಾಗಿದೆಯೋ ಅವರೆಲ್ಲರೂ ತಾಕತ್ತಿದ್ದರೆ, ವಿಧಾನಸೌಧದ ಮುಂದೆ ಬಂದು ರಾಜೀನಾಮೆ ಕೊಡಲಿ' ಎಂದು ಆಗ್ರಹಿಸಿದ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ, 'ಅಂತಹವರಿಗೆ ದೇವಿ ಚಾಮುಂಡೇಶ್ವರಿ ಒಳ್ಳೆ ಬುದ್ಧಿ ಕೊಡಲಿ' ಎಂದರು.

ಇಲ್ಲಿನ ಚಾಮುಂಡಿಬೆಟ್ಟದಲ್ಲಿ ಗುರುವಾರ ದಸರಾ ಮಹೋತ್ಸವ ಉದ್ಘಾಟನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 'ಎಲ್ಲರೂ ಗಾಜಿನ ಮನೆಯಲ್ಲೇ ಕುಳಿತಿದ್ದಾರೆ. ಎಫ್ಐಆರ್ ಬಿತ್ತೆಂದರೆ ಯಾರೂ ಇರೋ ಹಂಗೇ ಇಲ್ಲ. ಬಿಜೆಪಿಯ ಅಶೋಕನೂ ಇಲ್ಲ. ಜನತಾದಳವೂ ಇಲ್ಲ, ಕಾಂಗ್ರೆಸ್ಸೂ ಇಲ್ಲ' ಎಂದರು.

10ನೇ ಪುಟ ನೋಡಿ

ರಾಜೀನಾಮೆ ಕೊಡೋಣ ಬಿಡಿ: ಎಚ್‌ಡಿಕೆ

ಬೆಂಗಳೂರು: 'ಎಫ್ಐಆರ್ ದಾಖಲಾಗಿರುವ ಎಲ್ಲರೂ ರಾಜೀನಾಮೆ ಕೊಡಬೇಕು ಎಂದು ನಮ್ಮದೇ ಜಿ.ಟಿ. ದೇವೇಗೌಡ ಹೇಳಿದ್ದಾರೆ. ನಾನು ಕೊಡಬೇಕಾದಾಗ ಕೊಡುತ್ತೇನೆ ಬಿಡಿ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಅವರದೇ ಕ್ಷೇತ್ರದ ಕಾರ್ಯಕ್ರಮದಲ್ಲಿ ಮಾತನಾಡುವಾಗ ಹೊಗಳಿಕೆ ಸಹಜವಾಗಿ ಇರುತ್ತದೆ' ಎಂದರು.

10ನೇ ಪುಟ ನೋಡಿ

ಎಚ್‌ಡಿಕೆ ವಿರುದ್ಧ ಎಫ್ಐಆರ್




ಬೆಂಗಳೂರು: ಕೇಂದ್ರ ಕೈಗಾರಿಕಾ ಸಚಿವ ಎಚ್.ಡಿ.ಕುಮಾರಸ್ವಾಮಿ ಹಾಗೂ ಜೆಡಿಎಸ್ ಬೆಂಗಳೂರು ನಗರ ಘಟಕದ ಅಧ್ಯಕ್ಷ ಎಚ್.ಎಂ. ರಮೇಶ್‌ಗೌಡ ವಿರುದ್ಧ ಹಣಕ್ಕೆ ಬೇಡಿಕೆ ಇಟ್ಟು ರಿಯಲ್ ಎಸ್ಟೇಟ್ ಉದ್ಯಮಿಗೆ ಜೀವ ಬೆದರಿಕೆ ಹಾಕಿದ ಆರೋಪದ ಅಡಿ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಗುರುವಾರ ಎಫ್ಐಆರ್ ದಾಖಲಾಗಿದೆ.

ದಾಸರಹಳ್ಳಿ ನಿವಾಸಿ ವಿಜಯ್ ತಾತಾ ನೀಡಿದ ದೂರು ಆಧರಿಸಿ ಎಫ್ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

10ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ





ದಸರಾ ಆರಂಭ

ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಗುರುವಾರ ಚಾಮುಂಡೇಶ್ವರಿ ಉತ್ಸವಮೂರ್ತಿಗೆ ಪುಷ್ಪಾರ್ಚನೆ ಮಾಡಿ ಪ್ರೊ.ಹಂ.ಪ.ನಾಗರಾಜಯ್ಯ ಅವರು ನಾಡಹಬ್ಬ ದಸರಾ ಮಹೋತ್ಸವವನ್ನು ಉದ್ಘಾಟಿಸಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಎಚ್.ಕೆ.ಪಾಟೀಲ, ಶಾಸಕರಾದ ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪಾ ಇದ್ದರು ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

'ಜಾತಿ ಆಧಾರಿತ ತಾರತಮ್ಯ ಸಹಿಸಲ್ಲ'

ನವದೆಹಲಿ (ಪಿಟಿಐ): ದೇಶದ ಯಾವುದೇ ಜೈಲಿನಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಸಹಿಸಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದ್ದು, ಈ ಸಂಬಂಧ ಜೈಲು ಕೈಪಿಡಿಯಲ್ಲಿರುವ ನಿಬಂಧನೆಗಳನ್ನು ರದ್ದುಗೊಳಿಸಿತು. 11

ಮರಾಠಿಗೆ ಶಾಸ್ತ್ರೀಯ ಭಾಷೆಯ ಸ್ಥಾನ

ನವದೆಹಲಿ (ಪಿಟಿಐ): ಮರಾಠಿ, ಬಂಗಾಳಿ, ಪಾಲಿ, ಪ್ರಾಕೃತ ಹಾಗೂ ಅಸ್ಸಾಮಿ ಭಾಷೆಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನ ನೀಡಲು ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ಸೂಚಿಸಿದೆ. 9

ವಯನಾಡು ಭೂಕುಸಿತ: ₹ 15 ಕೋಟಿ ನೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇರಳದ ಮಾತಾ ಅಮೃತಾನಂದಮಯಿ ಮಠವು ವಯನಾಡು ಜಿಲ್ಲೆಯಲ್ಲಿ ಭೂಕುಸಿತದಿಂದ ಹಾನಿಗೀಡಾದ ಪ್ರದೇಶದಲ್ಲಿನ ದುರಂತ ಪರಿಹಾರಕ್ಕಾಗಿ ₹ 15 ಕೋಟಿ ವೆಚ್ಚದಲ್ಲಿ 'ಅಮೃತ ಭೂಕುಸಿತ ಮುನ್ನೆಚ್ಚರಿಕೆ ವ್ಯವಸ್ಥೆ' ರೂಪಿಸಿದೆ.

ಮಾತಾ ಅಮೃತಾನಂದಮಯಿ ದೇವಿ ಅವರ 71ನೇ ಜನ್ಮದಿನಾಚರಣೆ ಪ್ರಯುಕ್ತ ಈ ಯೋಜನೆಯನ್ನು ಅಮೃತ್ ವಿದ್ಯಾಪೀಠದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ. ಇದು ಭೂಕುಸಿತ ದುರಂತ ಹಾಗೂ ಜೀವಹಾನಿ ತಡೆಯುವ ಪ್ರಯತ್ನವಾಗಿದೆ. ಕೇರಳ ಸರ್ಕಾರದಿಂದ ಅನುಮತಿ ದೊರೆತ ಬಳಿಕ ಯೋಜನೆ ಪ್ರಾರಂಭಿಸಲಾಗುತ್ತದೆ ಎಂದು ಮಠ ತಿಳಿಸಿದೆ.



ಆಲದಮರ ಬಸ್ ನಿಲ್ದಾಣದ ಬಳಿ ಮರ ಬಿದ್ದಿರುವುದು



ತೂಬರಹಳ್ಳಿ ಬಳಿ ರಸ್ತೆಯಲ್ಲಿ ಹರಿಯುತ್ತಿದ್ದ ನೀರಿನಲ್ಲೇ ವಾಹನಗಳು ಸಾಗಿದವು

ಧರೆಗುರುಳಿದ ಮರಗಳು • ರಸ್ತೆಯಲ್ಲೇ ಹರಿದ ನೀರು • ವಾಹನ ಸವಾರರ ಪರದಾಟ

ಹಲವೆಡೆ ಮಳೆ: ರಸ್ತೆಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಗುರುವಾರ ಮಧ್ಯಾಹ್ನದ ಬಳಿಕ ಮಳೆಯಾಗಿದ್ದು, ಹಲವು ಕಡೆಗಳಲ್ಲಿ ಚರಂಡಿ ವ್ಯವಸ್ಥೆ ಸರಿ ಇಲ್ಲದೇ ರಸ್ತೆಯಲ್ಲೇ ನೀರು ಹರಿಯಿತು.

ತೂಬರಹಳ್ಳಿ ಬಳಿ ರಸ್ತೆಯಲ್ಲಿ ನೀರು ನಿಂತಿರುವುದರಿಂದ ಸಿದ್ದಾಪುರ ಕಡೆಗೆ ತೆರಳುವ ವಾಹನಗಳಿಗೆ ಸಮಸ್ಯೆ ಉಂಟಾಯಿತು. ಯಲಹಂಕ ರೈಲ್ವೆ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ನಗರದ ಕಡೆಗೆ ಬರುವ ವಾಹನಗಳ ಸಂಚಾರಕ್ಕೆ ತೊಂದರೆಯಾಯಿತು. ಆಲದಮರ ಬಸ್ ನಿಲ್ದಾಣದ ಬಳಿ ಮರ ಬಿದ್ದಿದ್ದರಿಂದ ಬಿಡಿಎ ಜಂಕ್ಷನ್‌ನಿಂದ ಕೆಂಗೇರಿ ಕಡೆಗೆ ಸಾಗುವ ವಾಹನಗಳಿಗೆ ತೊಡಕುಂಟಾಯಿತು. ಸುಬ್ರಹ್ಮಣ್ಯ ಪೊಲೀಸ್ ಠಾಣೆಯ ಬಳಿ ರಾಜ್‌ಕುಮಾರ್ ರಸ್ತೆಗೆ ಸಂಪರ್ಕಿಸುವ ಒಳ ರಸ್ತೆಯಲ್ಲಿ ಮರ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ಕೆಲ ಹೊತ್ತು ಸಮಸ್ಯೆಯಾಯಿತು.



ಯಲಹಂಕ ರೈಲ್ವೆ ಕೆಳಸೇತುವೆಯಲ್ಲಿ ನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಡಕುಂಟಾಯಿತು

ರಾಜಾಜಿನಗರ, ಮಹಾಲಕ್ಷ್ಮೀ ಬಡಾವಣೆ, ಯಶವಂತಪುರ. ಎಂ.ಜಿ. ರಸ್ತೆ, ಕೆಂಗೇರಿ, ನಾಯಂಡಹಳ್ಳಿ, ರಾಜರಾಜೇಶ್ವರಿನಗರ, ವಿಜಯನಗರ, ಬಸವೇಶ್ವರನಗರ, ಬನಶಂಕರಿ, ಪದ್ಮನಾಭನಗರ, ಕೋರಮಂಗಲ, ಬಿಟಿಎಂ ಲೇಔಟ್, ಜಯನಗರ, ವಿಶ್ವೇಶ್ವರಪುರ, ಮಾರತ್ತಹಳ್ಳಿ, ಹೂಡಿ, ಗರುಡಾಚಾರ್ ಪಾಳ್ಯ, ಹೊರಮಾವು, ವಿದ್ಯಾರಣ್ಯಪುರ, ಶೆಟ್ಟಿಹಳ್ಳಿ ಸುತ್ತಮುತ್ತ ಧಾರಾಕಾರ ಮಳೆಯಾಗಿದೆ.

ಬಾಗಲಗುಂಟೆ, ಹಗದೂರು, ನಂದಿನಿ ಲೇಔಟ್, ದೊಡ್ಡನೆಕ್ಕುಂದಿ, ಸಂಪಂಗಿನಗರ, ಶೆಟ್ಟಿಹಳ್ಳಿ, ವಿಶ್ವನಾಥ ನಾಗೇನಹಳ್ಳಿಗಳಲ್ಲಿ 1ರಿಂದ 1.5 ಸೆಂ.ಮೀ ಮಳೆ ದಾಖಲಾಗಿದೆ.

ಸಿಡಿಲು ಬಡಿದು ಹಾಳಾಗಿದ್ದ ಟ್ರಾನ್ಸ್‌ಫಾರ್ಮರ್ ದುರಸ್ತಿ

ಬೆಂಗಳೂರು: ಹಾರೋಹಳ್ಳಿ ಹಾಗೂ ಟಿ.ಕೆ ಹಳ್ಳಿಯಲ್ಲಿರುವ ಬೆಂಗಳೂರು ಜಲಮಂಡಳಿ ಪಂಪಿಂಗ್ ಸ್ಟೇಷನ್‌ಗಳಿಗೆ ವಿದ್ಯುತ್ ಪೂರೈಸುವ ಟ್ರಾನ್ಸ್‌ಫಾರ್ಮರ್‌ಗಳು ಬುಧವಾರ ರಾತ್ರಿ ಸುರಿದ ಭಾರಿ ಮಳೆ ಮತ್ತು ಸಿಡಿಲಿನ ಹೊಡೆತದಿಂದ ಹಾಳಾಗಿದ್ದವು. ಕೆಪಿಟಿಸಿಎಲ್ ತುರ್ತು ದುರಸ್ತಿ ಕಾಮಗಾರಿ ಕೈಗೊಂಡಿದ್ದು, ವಿದ್ಯುತ್ ಪೂರೈಕೆ ಪುನರಾರಂಭವಾಗಿದೆ.

ಪಂಪಿಂಗ್ ಸ್ಟೇಷನ್‌ಗಳಿಗೆ ವಿದ್ಯುತ್ ಸಂಪರ್ಕ ನೀಡುತ್ತಿದ್ದ ಲೈನ್‌ಗಳಿಗೆ ಬುಧವಾರ ರಾತ್ರಿ 11 ಗಂಟೆಗೆ ಸಿಡಿಲು ಬಡಿದಿದ್ದರಿಂದ ಟ್ರಾನ್ಸ್‌ಫಾರ್ಮರ್‌ಗಳಲ್ಲಿ ತಾಂತ್ರಿಕ ಸಮಸ್ಯೆ ಉಂಟಾಗಿತ್ತು. ಈ ಅವಘಡದಿಂದಾಗಿ ಬೆಂಗಳೂರು ನಗರಕ್ಕೆ ನೀರು ಸರಬರಾಜು ಮಾಡುವ ಪ್ರಮುಖ ಪಂಪಿಂಗ್ ಸ್ಟೇಷನ್ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕದಲ್ಲಿ ವ್ಯತ್ಯಯ ಉಂಟಾಗಿತ್ತು. ನೀರು ಪಂಪಿಂಗ್ ಸ್ಥಗಿತಗೊಂಡಿತ್ತು.

ಕೆಪಿಟಿಸಿಎಲ್ ಹಾಗೂ ಬೆಂಗಳೂರು ಜಲಮಂಡಳಿ ಸಿಬ್ಬಂದಿ ಸಮನ್ವಯದಿಂದ ರಾತ್ರಿ ಮಳೆಯಲ್ಲೇ ತುರ್ತು ದುರಸ್ತಿ ಕಾಮಗಾರಿಯನ್ನು ಆರಂಭಿಸಿದ್ದರು. ಸತತ ಪ್ರಯತ್ನದಿಂದ ತಾಂತ್ರಿಕ ಸಮಸ್ಯೆ ನಿವಾರಿಸಿದ್ದಾರೆ. ಸುಮಾರು 10 ಗಂಟೆ ವಿದ್ಯುತ್ ಇಲ್ಲದೇ ನೀರು ಸರಬರಾಜು ಸ್ಥಗಿತಗೊಂಡಿದ್ದು, ಹಲವು ಪ್ರದೇಶಗಳಿಗೆ ನೀರು ಪೂರೈಕೆ ವ್ಯತ್ಯಯವಾಗಿತ್ತು ಎಂದು ಬೆಂಗಳೂರು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್ ತಿಳಿಸಿದ್ದಾರೆ.

₹26 ಲಕ್ಷ ವಂಚನೆ

ತುಮಕೂರು: ಪಾರ್ಟ್ ಟೈಮ್ ಕೆಲಸದ ಆಮಿಷಕ್ಕೆ ಒಳಗಾಗಿ ಬ್ಯಾಂಕ್ ನೌಕರ, ಶಿರಾ ತಾಲ್ಲೂಕಿನ ಬ್ಯಾಡರಹಳ್ಳಿ ಗ್ರಾಮದ ನರಸಿಂಹಮೂರ್ತಿ ₹26.72 ಲಕ್ಷ ಕಳೆದುಕೊಂಡಿದ್ದಾರೆ. ಸೈಬರ್ ಠಾಣೆಯಲ್ಲಿ ದೂರು ದಾಖಲಾಗಿದೆ,

ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತಾ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಬೀದಿ ಬದಿ ವ್ಯಾಪಾರ ಮಾಡುವವರಿಗೆ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಜಾಗೃತಿ ಮೂಡಿಸಲು ಬೆಂಗಳೂರು ಘನ ತ್ಯಾಜ್ಯ ನಿರ್ವಹಣೆ (ಬಿಎಸ್‌ಡಬ್ಲ್ಯುಎಂಎಲ್) ಘಟಕದ ಮುಖ್ಯ ಕಾರ್ಯಾಚರಣೆ ಅಧಿಕಾರಿ ರಮಾಮಣಿ ನೇತೃತ್ವದಲ್ಲಿ ಜಾಥಾ ಹಮ್ಮಿಕೊಳ್ಳಲಾಯಿತು.

'ಎಲ್ಲೆಂದರಲ್ಲಿ ಕಸ ಎಸೆಯಬಾರದು. ಉತ್ಪತ್ತಿಯಾಗುವ ತ್ಯಾಜ್ಯವನ್ನು ಪ್ರತ್ಯೇಕ ಚೀಲಗಳಲ್ಲಿ ಸಂಗ್ರಹಿಸಿ ಪಾಲಿಕೆಯಿಂದ ಬರುವ ವಾಹನಕ್ಕೆ ನೀಡಬೇಕು' ಎಂದು ಹಣ್ಣು, ಸೊಪ್ಪು ಮತ್ತು ತರಕಾರಿ ಮಾರಾಟಗಾರರಿಗೆ ಮನವಿ ಮಾಡಲಾಯಿತು.

ಸ್ವಚ್ಛತೆ ಕಾಪಾಡದೇ ಇದ್ದರೆ ಸಾರ್ವಜನಿಕರ ಓಡಾಟ ಹಾಗೂ ವಾಹನಗಳ ಸಂಚಾರಕ್ಕೆ ಸಮಸ್ಯೆಯಾಗುತ್ತದೆ. ಮುಂದಿನ ದಿನಗಳಲ್ಲಿ ಸ್ವಚ್ಛತೆ ಕಾಪಾಡದಿದ್ದರೆ ದಂಡ ವಿಧಿಸಲಾಗುವುದು ಎಂದು ಎಚ್ಚರಿಕೆ ನೀಡಲಾಯಿತು.

ನವರಾತ್ರಿ ಹಾಗೂ ದೀಪಾವಳಿ ಹಬ್ಬದಿಂದಾಗಿ ಮಾರುಕಟ್ಟೆಗೆ ಬರುವ ಜನರ ಸಂಖ್ಯೆ ಹೆಚ್ಚಾಗಲಿದೆ. ಇದರಿಂದ ತ್ಯಾಜ್ಯದ ಉತ್ಪಾದನೆಯೂ ಹೆಚ್ಚಾಗಲಿದೆ. ಎಲ್ಲೆಂದರಲ್ಲಿ ಕಸ ಬಿಸಾಡದಂತೆ ಎಚ್ಚರ ವಹಿಸಬೇಕು ಎಂದು ಸೂಚನೆ ನೀಡಲಾಯಿತು.

ಬಿಎಸ್‌ಡಬ್ಲ್ಯುಎಂಎಲ್ ಉಪ ಪ್ರಧಾನ ವ್ಯವಸ್ಥಾಪಕ ಭೀಮೇಶ್, ಸಹಾಯಕ ಪ್ರಧಾನ ವ್ಯವಸ್ಥಾಪಕ ಸಂತೋಷ್, ಪೌರಕಾರ್ಮಿಕರು ಜಾಥಾದಲ್ಲಿ ಪಾಲ್ಗೊಂಡಿದ್ದರು.



ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಸ್ವಚ್ಛತಾ ಜಾಗೃತಿ ಜಾಥಾ ನಡೆಸಲಾಯಿತು

ಶೂನ್ಯ ತ್ಯಾಜ್ಯ ಕಚೇರಿ ಮಾಡಿ: ತುಷಾರ್ ಗಿರಿನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಕಚೇರಿಗಳಲ್ಲಿ ಶೂನ್ಯ ತ್ಯಾಜ್ಯ (ಜೀರೋ ವೇಸ್ಟ್) ಅಭಿಯಾನವನ್ನು ಹಮ್ಮಿಕೊಳ್ಳಬೇಕು. ಕಚೇರಿ ಆವರಣದಲ್ಲಿ ಸ್ವಚ್ಛತೆ ಕಾಪಾಡಿ ತ್ಯಾಜ್ಯ ಮುಕ್ತ ಆವರಣವನ್ನಾಗಿ ಮಾಡಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು.



ತುಷಾರ್ ಗಿರಿನಾಥ್

ಪಾಲಿಕೆ ವ್ಯಾಪ್ತಿಯಲ್ಲಿನ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ಗುರುವಾರ ವರ್ಚ್ಯುವಲ್ ಕಾನ್ಫರೆನ್ಸ್ ಮೂಲಕ ನಡೆದ ಸಭೆಯಲ್ಲಿ ಅವರು ಮಾತನಾಡಿದರು.

ಶೂನ್ಯ ತ್ಯಾಜ್ಯ ಕಚೇರಿಗಳನ್ನಾಗಿ ಮಾಡಲು ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಕ್ರಮಗಳು ಪರಿಣಾಮಕಾರಿಯಾಗಿ ಜಾರಿಯಾಗಬೇಕು ಎಂದು ಹೇಳಿದರು.

ಇದಲ್ಲದೇ ನಗರದಾದ್ಯಂತ ಸ್ವಚ್ಛತಾ ಅಭಿಯಾನ ಕೈಗೊಳ್ಳಬೇಕು. ರಸ್ತೆ ಬದಿಯಲ್ಲಿ ಕಸ ಬಿಸಾಡುವುದನ್ನು ತಡೆಯಬೇಕು. ಮನೆಗಳ ಬಳಿ ಬರುವ ಆಟೋ ಟಿಪ್ಪರ್‌ಗಳಿಗೆ ಹಸಿ ಕಸ ಹಾಗೂ ಒಣ ಕಸವನ್ನು ಬೇರ್ಪಡಿಸಿ ನೀಡಲು ನಾಗರಿಕರಲ್ಲಿ ಅರಿವು ಮೂಡಿಸಬೇಕು. ಲಿಂಕ್ ವರ್ಕರ್ಸ್ ಮನೆ ಮನೆಗೆ ಭೇಟಿ ನೀಡಿ ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು. ವಿಶೇಷ ಆಯುಕ್ತರಾದ ಮುನೀಶ್ ಮೌದ್ಗಿಲ್, ಕೆ. ಹರೀಶ್ ಕುಮಾರ್, ಸುರಳ್ಕರ್ ವಿಕಾಸ್ ಕಿಶೋರ್, ಅವಿನಾಶ್ ಮೆನನ್ ರಾಜೇಂದ್ರನ್, ವಲಯ ಆಯುಕ್ತರು, ಜಂಟಿ ಆಯುಕ್ತರು, ಪ್ರಧಾನ ಎಂಜಿನಿಯರ್‌ಗಳು, ಮುಖ್ಯ ಎಂಜಿನಿಯರ್‌ಗಳು ಉಪಸ್ಥಿತರಿದ್ದರು.

ಸ್ವರಾಜ್ ಸಮ್ಮೇಳನ' ನ. 13, 14ಕ್ಕೆ

ಬೆಂಗಳೂರು: ರಾಜ್ಯದಲ್ಲಿ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್' ಕಾಯ್ದೆ ಜಾರಿಗೆ ಬಂದು ಮೂರು ದಶಕ ತುಂಬಿದ ನೆನಪಿಗಾಗಿ ನ. 13 ಮತ್ತು 14ರಂದು 'ರಾಷ್ಟ್ರೀಯ ಸ್ವರಾಜ್ ಸಮ್ಮೇಳನ' ಆಯೋಜಿಸಲು ಉದ್ದೇಶಿಸಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

'ರಾಜ್ಯಪಾಲರನ್ನು ವಾಪಸ್ ಕರೆಸಿಕೊಳ್ಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸಂವಿಧಾನ ಮತ್ತು ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ. ಅವರನ್ನು ರಾಷ್ಟ್ರಪತಿ ವಾಪಸ್ ಕರೆಸಿಕೊಳ್ಳಬೇಕು' ಎಂದು ಕರ್ನಾಟಕ ಜಾಗೃತ ವಕೀಲರ ವೇದಿಕೆ ಒತ್ತಾಯಿಸಿದೆ.

ನಗರದಲ್ಲಿ ಗುರುವಾರ ಆಯೋಜಿಸಲಾಗಿದ್ದ ವಕೀಲರ ರಾಜ್ಯ ಮಟ್ಟದ ಸಮಾವೇಶದಲ್ಲಿ ವೇದಿಕೆಯು ಈ ಬಗ್ಗೆ ನಿರ್ಣಯ ಅಂಗೀಕರಿಸಿದೆ. 'ದಲಿತ, ದಮನಿತ ಸಮುದಾಯಗಳ ಧ್ವನಿಯಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತೇಜೋವಧೆ ಮಾಡಲಾಗುತ್ತಿದೆ. ಚುನಾಯಿತ ಸರ್ಕಾರವನ್ನು ಅಸ್ಥಿರಗೊಳಿಸಲು ಯತ್ನಿಸುತ್ತಿರುವ ಪಿತೂರಿಗಳಿಗೆ ಪೂರಕವಾಗಿ ರಾಜ್ಯಪಾಲರು ವರ್ತಿಸುತ್ತಿದ್ದಾರೆ. ಇದನ್ನು ನಾವು ಖಂಡಿಸುತ್ತೇವೆ' ಎಂದು ನಿರ್ಣಯದಲ್ಲಿ ಹೇಳಿದೆ.

'ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳ ನೇಮಕಾತಿಯಲ್ಲಿ ಸಾಮಾಜಿಕ ನ್ಯಾಯದ ಅನುಷ್ಠಾನಕ್ಕಾಗಿ ಮೀಸಲಾತಿ ಕಲ್ಪಿಸಲು ಕೇಂದ್ರವು ಕಾನೂನು ಜಾರಿಗೆ ತರಬೇಕು. ಇದಕ್ಕೆ ಅಗತ್ಯವಿರುವ ಪ್ರಸ್ತಾವ ಮತ್ತು ಶಿಫಾರಸನ್ನು ರಾಜ್ಯ ಸರ್ಕಾರ ಮಾಡಬೇಕು' ಎಂದು ಒತ್ತಾಯಿಸಿದೆ.

'ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ವಕೀಲರ ಜಾಗೃತಿ ಸಭೆ ಆಯೋಜಿಸಲಾಗುವುದು. ಇದೇ 15ರಂದು ರಾಜ್ಯವ್ಯಾಪಿ ಪ್ರತಿಭಟನಾ ಮೆರವಣಿಗೆ ನಡೆಸಲಾಗುವುದು' ಎಂದು ತಿಳಿಸಿದೆ.

ವಕೀಲರಾದ ಬಾಬಾಸಾಹೇಬ್ ಜಿನರಾಲ್ಕರ್, ವೆಂಕಟೇಶ ವೊರಸೆ, ಎಚ್.ಎ.ಹಾವಿನ್, ಸಾಯಿಬಣ್ಣ, ಕೆ.ಎಚ್. ಮಲ್ಲೇಶಪ್ಪ, ಕರ್ನಾಟಕ ಜಾಗೃತ ವೇದಿಕೆಯ ಎನ್. ಅನಂತನಾಯ್ಕ ಸೇರಿ ಹಲವರು ಸಮಾವೇಶದಲ್ಲಿ ಭಾಗಿಯಾಗಿದ್ದರು.

ಹೇಮಾ ಪ್ರಶಸ್ತಿ ಪ್ರದಾನ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೆಬಿಲಿಟಿ (ಎಪಿಡಿ) ವತಿಯಿಂದ ಅಕ್ಟೋಬರ್ 4ರಂದು (ಶುಕ್ರವಾರ) ಕಾಚರಕನಹಳ್ಳಿ ಪೀಸ್ ಲೇಔಟ್‌ನಲ್ಲಿರುವ ಇಂಡಿಯಾ ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರೈಸ್ಟ್‌ನಲ್ಲಿ ಎನ್.ಎಸ್. ಹೇಮಾ ಸ್ಮಾರಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಎಪಿಡಿ ನಿರ್ದೇಶಕ ಜನಾರ್ದನ್.ಎ.ಎಲ್, 'ಅಂಗವಿಕಲರ ಕ್ಷೇತ್ರದಲ್ಲಿ ಕೆಲಸ ಮಾಡುವ ಮೂರು ಅತ್ಯುತ್ತಮ ಸ್ವಯಂ ಸೇವಾ ಸಂಸ್ಥೆಗಳಿಗೆ ಎಪಿಡಿ ಸಂಸ್ಥೆಯಿಂದ ಪ್ರಶಸ್ತಿ ನೀಡಲಾಗುತ್ತದೆ. ಪ್ರಥಮ ಬಹುಮಾನ ₹ 1 ಲಕ್ಷ, ದ್ವಿತೀಯ ಬಹುಮಾನ ₹ 50 ಸಾವಿರ, ತೃತೀಯ ಬಹುಮಾನ ₹ 25 ಸಾವಿರ ನಗದು ಮತ್ತು ಪ್ರಶಸ್ತಿ ಪತ್ರ ಹಾಗೂ ಟ್ರೋಫಿ ಒಳಗೊಂಡಿದೆ' ಎಂದು ಮಾಹಿತಿ ನೀಡಿದರು.

'ಅ. 4ರಂದು ನಡೆಯುವ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ 3 ವಿಜೇತ ಸಂಸ್ಥೆಗಳ ಹೆಸರುಗಳನ್ನು ಘೋಷಿಸಲಾಗುತ್ತದೆ ಅತಿಥಿಗಳಾಗಿ ಸರ್ಕಾರ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಂಗವಿಕಲರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ನಿರ್ದೇಶಕ ಟಿ. ರಾಘವೇಂದ್ರ, ಎನ್.ಎಸ್. ಹೇಮಾ ಕುಟುಂಬದ ಸದಸ್ಯರಾದ ಶ್ರೀನಿವಾಸ್ ಗರುಡಾಚಾರ್ ಎನ್.ಎಸ್, ಪ್ರಶಸ್ತಿ ತೀರ್ಪುಗಾರರ ಸಮಿತಿಯ ಅಧ್ಯಕ್ಷೆ ಜಯಂತಿ ಯಶವಂತ್ ಪಾಲ್ಗೊಳ್ಳಲಿದ್ದಾರೆ' ಎಂದರು.

ಮಂಜುನಾಥ್ ಅದ್ದೆ ನೇಮಕ

ಹೆಸರಘಟ್ಟ: ಹೆಸರಘಟ್ಟ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾಗಿ ಮಂಜುನಾಥ್ ಅದ್ದೆ ಅವರನ್ನು ನೇಮಕ ಮಾಡಲಾಗಿದೆ ಎಂದು ಕಾಂಗ್ರೆಸ್ ಪಕ್ಷದ ಪತ್ರಿಕಾ ಪ್ರಕಟಣೆ ತಿಳಿಸಿದೆ.


ಮಂಜುನಾಥ್ ಅದ್ದೆ

ಶ್ವಾನಗಳ ಪ್ರದರ್ಶನ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಯಲ್ ಕೆನೈನ್ ಡ್ರೂಲ್ಸ್ ಕ್ರೌನ್ ಕ್ಲಾಸಿಕ್ ಸಂಸ್ಥೆಯಿಂದ ಇದೇ 5 ಮತ್ತು 6ರಂದು ಹೆಬ್ಬಾಳದ ಪಶು ವೈದ್ಯಕೀಯ ಕಾಲೇಜಿನ ಆವರಣದಲ್ಲಿ ಶ್ವಾನಗಳ ಪ್ರದರ್ಶನ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಅಧ್ಯಕ್ಷೆ ರಾಜಲಕ್ಷ್ಮಿ, 'ಈ ಪ್ರದರ್ಶನದಲ್ಲಿ 60ಕ್ಕೂ ಹೆಚ್ಚು ತಳಿಗಳ 600ಕ್ಕೂ ಹೆಚ್ಚು ಶ್ವಾನಗಳು ಭಾಗವಹಿಸಲಿವೆ. ಅಂತರರಾಷ್ಟ್ರೀಯ ಮಟ್ಟದ ತೀರ್ಪುಗಾರರಾದ ಆಸ್ಟ್ರೇಲಿಯಾದ ವೆಂಡೆ ಸ್ಲಾಟಿಯರ್, ಮಿಚೆಲ್ ಹ್ಯಾಮಂಡ್, ಜಪಾನ್‌ನ ಸುಮಿಕೊ ಇಕೆಡಾ, ಅಮೆರಿಕದ ಅಲ್ ಫೆರುಗಿಯಾರೊ ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು.

ಪ್ರದರ್ಶನದಲ್ಲಿ ಪಾಲ್ಗೊಳ್ಳಲು www.dogsnshows.comನಲ್ಲಿ ನೋಂದಣಿ ಮಾಡಿಕೊಳ್ಳಬಹುದು ಎಂದರು.

ಡಿಎಸ್‌ಎಸ್ ಮಹಾ ಅಧಿವೇಶನ 5ರಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ದಲಿತ ಸಂಘರ್ಷ ಸಮಿತಿಯು (ಅಂಬೇಡ್ಕರ್ ವಾದ) ಅಕ್ಟೋಬರ್ 5 ಮತ್ತು 6ರಂದು ತುಮಕೂರಿನಲ್ಲಿ ರಾಜ್ಯ ಸರ್ವ ಸದಸ್ಯರ ಮಹಾ ಅಧಿವೇಶನವನ್ನು ಹಮ್ಮಿಕೊಂಡಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಮಿತಿಯ ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್, 'ಅ. 5ರಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಈ ಅಧಿವೇಶನವನ್ನು ಉದ್ಘಾಟಿಸಲಿದ್ದಾರೆ. ಸಹಕಾರ ಸಚಿವ ಕೆ.ಎನ್. ರಾಜಣ್ಣ, ಪ್ರೊ.ಬಿ. ಕೃಷ್ಣಪ್ಪ ಟ್ರಸ್ಟ್‌ನ ಅಧ್ಯಕ್ಷೆ ಇಂದಿರಾ ಕೃಷ್ಣಪ್ಪ, ಶೋಷಿತ ಸಮುದಾಯಗಳ ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2ಕ್ಕೆ 'ಬುದ್ಧ ಭಾರತ v/s ಬ್ರಾಹ್ಮಣತ್ವ', 'ದಲಿತ ಚಳವಳಿಯ ಚಾರಿತ್ರಿಕ ಮಹತ್ವ ಮತ್ತು ವರ್ತಮಾನದ ಸವಾಲುಗಳು' ಎಂಬ ಗೋಷ್ಠಿಗಳು ನಡೆಯಲಿವೆ' ಎಂದು ಮಾಹಿತಿ ನೀಡಿದರು.

'ಅ. 6ರಂದು 'ಒಳಮೀಸಲಾತಿ, ಸುಪ್ರೀಂ ಕೋರ್ಟಿನ ತೀರ್ಪು ಮತ್ತು ಸಾಮಾಜಿಕ ನ್ಯಾಯ' ಎಂಬ ಗೋಷ್ಠಿ ನಡೆಯಲಿದ್ದು, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರವಿಕುಮಾರ್ ನೀಹ, ರಮೇಶ್ ಡಾಕುಳಕಿ ಭಾಗವಹಿಸಲಿದ್ದಾರೆ. ಮಧ್ಯಾಹ್ನ 2ಕ್ಕೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ, ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಪಾಲ್ಗೊಳ್ಳಲಿದ್ದಾರೆ' ಎಂದರು.

ಮಾರತ್ತಹಳ್ಳಿ ದಟ್ಟಣೆ: ಪರ್ಯಾಯ ಮಾರ್ಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ರಸ್ತೆಯ ಮಾರತ್ತಹಳ್ಳಿ ಸೇತುವೆ ಬಳಿ ವಾಹನ ದಟ್ಟಣೆ ತೀವ್ರವಾಗಿದ್ದು, ದಟ್ಟಣೆ ನಿಯಂತ್ರಣಕ್ಕೆ ಕ್ರಮ ಕೈಗೊಂಡಿರುವ ಎಚ್‌ಎಎಲ್ ವಿಮಾನ ನಿಲ್ದಾಣ ಸಂಚಾರ ಪೊಲೀಸ್ ಠಾಣಾ ಪೊಲೀಸರು, ಪರ್ಯಾಯ ವ್ಯವಸ್ಥೆ ಮಾಡಿದ್ದಾರೆ. ಗುರುವಾರದಿಂದಲೇ ಈ ಸಂಚಾರ ಮಾರ್ಗ ಬದಲಾವಣೆ ಜಾರಿಗೆ ಬಂದಿದೆ.

ಹೊರವರ್ತುಲ ರಸ್ತೆಯ ಕೆಎಲ್‌ಎಂ ಸರ್ವಿಸ್‌ರಸ್ತೆಯಿಂದ ಕುಂದಲಹಳ್ಳಿ ಗೇಟ್ ಕಡೆಗೆ ವಾಹನ ಸಂಚಾರವನ್ನು ಪ್ರತಿನಿತ್ಯ ಬೆಳಿಗ್ಗೆ 7ರಿಂದ 11ರ ವರೆಗೆ ಹಾಗೂ ಸಂಜೆ 4ರಿಂದ ರಾತ್ರಿ 10 ಗಂಟೆವರೆಗೆ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ಹೊರವರ್ತುಲ ರಸ್ತೆಯ ಕೆಎಲ್‌ಎಂ ಸರ್ವಿಸ್ ರಸ್ತೆ ಕಡೆಯಿಂದ ಕುಂದಲಹಳ್ಳಿ ಗೇಟ್ ಕಡೆಗೆ ಸಂಚರಿಸುವ ಲಘು ವಾಹನಗಳು, ಆಕಾಶ್ ವಿಹಾರ್ ವಸತಿಗೃಹದ ಮುಂಭಾಗದಲ್ಲಿ 'ಯು–ಟರ್ನ್' ಪಡೆದು ಮಾರತ್ತಹಳ್ಳಿ ಸೇತುವೆ ಮೂಲಕ ಕುಂದಲಹಳ್ಳಿ ಗೇಟ್ ಕಡೆಗೆ ಸಂಚರಿಸಬಹುದು. ಭಾರಿ ವಾಹನಗಳು, ತುಳಸಿ ಚಿತ್ರಮಂದಿರದ ಜಂಕ್ಷನ್‌ನಲ್ಲಿ 'ಯು–ಟರ್ನ್' ಪಡೆದು ಮಾರತ್ತಹಳ್ಳಿ ಸೇತುವೆ ಮೂಲಕ ಕುಂದಲಹಳ್ಳಿ ಗೇಟ್ ಕಡೆಗೆ ಸಂಚರಿಸಬಹುದಾಗಿದೆ.

ಇದೇ ಸಂದರ್ಭದಲ್ಲಿ ಪಾದಚಾರಿಗಳು ರಸ್ತೆ ದಾಟುವುದನ್ನು ನಿರ್ಬಂಧಿಸಲಾಗಿದೆ. ವರ್ತೂರು ರಸ್ತೆ ಮತ್ತು ಹಳೇ ವಿಮಾನ ನಿಲ್ದಾಣ ರಸ್ತೆ ದಾಟಲು ಪಾದಚಾರಿಗಳು ಸ್ಕೈವಾಕ್ ಬಳಕೆ ಮಾಡುವಂತೆ ಸಂಚಾರ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್. ಜೈನ್ ಪ್ರಕಟಣೆಯಲ್ಲಿ ಕೋರಿದ್ದಾರೆ.

ಇಂದಿನಿಂದ ಎಂಡೋಸ್ಕೋಪಿ ಸಮ್ಮೇಳನ

ಬೆಂಗಳೂರು: ಇಂಡಿಯನ್ ಅಸೋಸಿಯೇಷನ್ ಆಫ್ ಗೈನಾಕಾಲಜಿಕಲ್ (ಐಎಜಿಇ) ವತಿಯಿಂದ ಇದೇ 4 ರಿಂದ 6ರವರೆಗೆ ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 'ಎಂಡೋಸ್ಕೋಪಿ ರಾಷ್ಟ್ರೀಯ ಸಮ್ಮೇಳನ' ನಡೆಯಲಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ರಾಧಾಕೃಷ್ಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕಿ ಡಾ. ವಿದ್ಯಾ ವಿ. ಭಟ್, 'ದೇಶದಾದ್ಯಂತ ಸ್ತ್ರೀರೋಗ ತಜ್ಞರನ್ನು ಎಂಡೋಸ್ಕೋಪಿ ಶಸ್ತ್ರಚಿಕಿತ್ಸೆಯ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಪ್ರೇರೇಪಿಸುವುದರ ಜೊತೆಗೆ ರೋಗಿಗಳ ಆರೈಕೆ ಮಟ್ಟವನ್ನು ಉತ್ತೇಜಿಸುವುದು ಸಮ್ಮೇಳನ ಉದ್ದೇಶವಾಗಿದೆ. 400ಕ್ಕೂ ಹೆಚ್ಚು ಸ್ತ್ರೀರೋಗ ತಜ್ಞರು ಸಮ್ಮೇಳನದಲ್ಲಿ ಪಾಲ್ಗೊಳ್ಳಲಿದ್ದಾರೆ' ಎಂದರು.

'ದೇಶದ 20 ಮಹಿಳಾ ಎಂಡೋಸ್ಕೋಪಿಕ್ ಶಸ್ತ್ರಚಿಕಿತ್ಸಕರು ನಡೆಸುವ ಶಸ್ತ್ರಚಿಕಿತ್ಸೆ ಪ್ರಕ್ರಿಯೆಗಳನ್ನು ಸಮ್ಮೇಳನದಲ್ಲಿ ನೇರ ಪ್ರಸಾರ ಮಾಡಲಾಗುವುದು' ಎಂದು ತಿಳಿಸಿದರು.

ಹಬ್ಬಗಳಿಗಿಲ್ಲ ಸ್ಟಾರ್ ಚಿತ್ರಗಳ ಅಬ್ಬರ!



ವರಮಹಾಲಕ್ಷ್ಮಿ, ದಸರಾ, ದೀಪಾವಳಿ ಮೊದಲಾದ ಹಬ್ಬಗಳಿಗೆ ಸ್ಟಾರ್ ನಟರ ಚಿತ್ರಗಳು ತೆರೆಗೆ ಬರುವ ವಾಡಿಕೆ ಹಿಂದಿನಿಂದಲೂ ಇತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ಹಬ್ಬಗಳಂದು ಪರಭಾಷಾ ನಟರ ಚಿತ್ರಗಳೇ ನಮ್ಮಲ್ಲಿ ಹೆಚ್ಚು ಅಬ್ಬರಿಸುತ್ತಿವೆ...

ವಿನಾಯಕ ಕೆ.ಎಸ್

ಒಂದು ಕಾಲದಲ್ಲಿ ಕನ್ನಡ ಚಿತ್ರರಂಗದವರು ಪ್ರಮುಖ ಹಬ್ಬಗಳು, ಸಾಲು-ಸಾಲು ರಜೆಗಳು ಬರುವ ದಿನಗಳನ್ನೇ ಕಾಯುತ್ತಿದ್ದರು. ಸಂಕ್ರಾಂತಿ, ಯುಗಾದಿ, ವರಮಹಾಲಕ್ಷ್ಮಿ, ಗೌರಿ-ಗಣೇಶ, ದಸರಾ, ದೀಪಾವಳಿ, ಕ್ರಿಸ್‌ಮಸ್‌ಗೆ ಸ್ಟಾರ್ ನಟರ ಒಂದಲ್ಲ ಒಂದು ಚಿತ್ರ ತೆರೆಯ ಮೇಲೆ ಇರುತ್ತಿತ್ತು. ಎಲ್ಲರಿಗೂ ರಜೆ ಇರುತ್ತದೆ. ಮನೆ ಮಂದಿಯೆಲ್ಲ ಒಟ್ಟಾಗಿ ಸೇರಿರುತ್ತಾರೆ. ಹೀಗಾಗಿ ಫ್ಯಾಮಿಲಿ ಆಡಿಯನ್ಸ್‌ನಿಂದ ದೊಡ್ಡ ಓಪನಿಂಗ್ ಸಿಗುತ್ತದೆ ಎಂಬ ಲೆಕ್ಕಾಚಾರವೂ ಇದರ ಹಿಂದೆ ಇತ್ತು.

ವರಮಹಾಲಕ್ಷ್ಮಿ, ಯುಗಾದಿ, ವಿಜಯದಶಮಿ ಮೊದಲಾದವು ಶುಭದ ಸಂಕೇತ. ಈ ಹಬ್ಬಗಳಲ್ಲಿ ಚಿತ್ರ ಬಿಡುಗಡೆ ಮಾಡಿದರೆ ಗೆಲ್ಲುತ್ತದೆ ಎಂಬ ನಂಬಿಕೆಯೂ ಕೆಲ ನಿರ್ಮಾಣ ಸಂಸ್ಥೆಗಳು, ನಿರ್ಮಾಪಕರಿಗೆ ಇತ್ತು. ಈ ವೇಳೆ ಸ್ಟಾರ್ ಚಿತ್ರಗಳು ಬಂದೇ ಬರುತ್ತವೆ ಎಂಬ ನಂಬಿಕೆಯಿಂದ ಉಳಿದ ಸಣ್ಣ, ಹೊಸಬರ ಚಿತ್ರಗಳು ಬಿಡುಗಡೆಯಿಂದ ದೂರ ಉಳಿಯುತ್ತಿದ್ದವು.

ಆದರೆ ಈಗ ದೊಡ್ಡ ಹಬ್ಬಗಳಂದು ಕನ್ನಡದ ಸ್ಟಾರ್ ನಟರ ಚಿತ್ರಗಳು ತೆರೆಗೆ ಬರುತ್ತಿಲ್ಲ. ಬದಲಿಗೆ ತಮಿಳು, ತೆಲುಗು ಸ್ಟಾರ್ ನಟರ ಸಿನಿಮಾಗಳು ಆ ಜಾಗವನ್ನು ಆಕ್ರಮಿಸುತ್ತಿವೆ. ಕಳೆದ ವರ್ಷದ ದಸರಾಕ್ಕೆ ಶಿವರಾಜ್‌ಕುಮಾರ್ ನಟನೆಯ 'ಘೋಸ್ಟ್' ತೆರೆಯ ಮೇಲಿತ್ತು. ಅದೇ ವಾರ ಚಿರಂಜೀವಿ ನಟನೆಯ 'ಗಾಡ್‌ಫಾದರ್' ಬಿಡುಗಡೆಗೊಂಡಿತ್ತು. ಈ ಸಲ ಧ್ರುವ ಸರ್ಜಾ ಅಭಿನಯದ 'ಮಾರ್ಟಿನ್' ತೆರೆಗೆ ಬರುತ್ತಿದೆ. ಅದರ ಜೊತೆಗೆ ರಜನಿಕಾಂತ್, ಅಮಿತಾಭ್ ಬಚ್ಚನ್ ಮೊದಲಾದ ಸ್ಟಾರ್ ನಟರ ದಂಡನ್ನೇ ಹೊಂದಿರುವ 'ವೆಟ್ಟೈಯನ್' ರಾಜ್ಯದ ಬಹುಪಾಲು ಚಿತ್ರಮಂದಿರಗಳನ್ನು ಆಕ್ರಮಿಸಲಿದೆ.

'ಹಿಂದೆ ಒಂದು ಸಿನಿಮಾ ಶುರುವಾಗುವ ಸಮಯದಲ್ಲೇ ಬಿಡುಗಡೆಯ ದಿನಾಂಕವೂ ತಿಳಿದಿರುತ್ತಿತ್ತು. ವರಮಹಾಲಕ್ಷ್ಮಿ, ದಸರಾ, ಸಂಕ್ರಾಂತಿಗೆ ಕೆಲ ನಟರ ಅಥವಾ ನಿರ್ಮಾಣ ಸಂಸ್ಥೆಯ ಸಿನಿಮಾಗಳು ನಿಶ್ಚಿತ ಎನ್ನುವಂತೆ ಇತ್ತು. ಆಗ ಹಲವಾರು ಸ್ಟಾರ್‌ಗಳಿದ್ದರು. ಯಾರದ್ದಾದರೊಂದು ಸಿನಿಮಾ ಹಬ್ಬಗಳಂದು ತೆರೆಗೆ ಬರುತ್ತಿತ್ತು' ಎನ್ನುತ್ತಾರೆ ಸಿನಿಮಾ ವಿತರಕ ಮಾರ್ಸ್ ಸುರೇಶ್.

ಸ್ಟಾರ್ ಸಿನಿಮಾಗಳ ಕೊರತೆ: ಕೋವಿಡ್ ನಂತರ ಹಬ್ಬಗಳಂದು ಸ್ಟಾರ್ ಸಿನಿಮಾಗಳು ತೆರೆಗೆ ಬರುವುದು ಗಣನೀಯವಾಗಿ ಕುಸಿದಿದೆ. ಸಂಕ್ರಾಂತಿ ಹಬ್ಬಕ್ಕಂತೂ ರಾಜ್ಯದಲ್ಲಿಯೂ ತಮಿಳಿನ ದೊಡ್ಡ ಸಿನಿಮಾ ನಿಶ್ಚಿತ ಎಂಬಂತಾಗಿದೆ. ದಸರಾಗೆ ತೆಲುಗು ಸ್ಟಾರ್‌ಗಳ ಪೈಪೋಟಿ ಪ್ರಾರಂಭವಾಗಿದೆ. 2024ರಲ್ಲಿ ಕನ್ನಡದಲ್ಲಿ ತೆರೆಕಂಡ ಸ್ಟಾರ್‌ಗಳ ಚಿತ್ರವೇ ಕಡಿಮೆ ಇದೆ. ಈ ಸಲ ಸಂಕ್ರಾಂತಿ, ಯುಗಾದಿಗೆ ಸ್ಟಾರ್ ಸಿನಿಮಾಗಳು ಇರಲಿಲ್ಲ. ಗಣೇಶ್ ನಟನೆಯ 'ಕೃಷ್ಣಂ ಪ್ರಣಯ ಸಖಿ' ವರಮಹಾಲಕ್ಷ್ಮಿ ಹಬ್ಬದಂದು ತೆರೆಕಂಡು ಗೆಲುವಿನ ನಗೆ ಬೀರಿತ್ತು. ದುನಿಯಾ ವಿಜಯ್ ನಟನೆಯ 'ಭೀಮ', ಶಿವರಾಜ್‌ಕುಮಾರ್ ಅಭಿನಯದ 'ಕರಟಕ ದಮನಕ', ಧನಂಜಯ ನಟನೆಯ 'ಕೋಟಿ' ಬಿಡುಗಡೆಗೊಂಡಿವೆ.

ಈಗ ತೆರೆ ಕಾಣುತ್ತಿರುವ 'ಮಾರ್ಟಿನ್' ಪ್ರಾರಂಭವಾಗಿ ಬಹಳ ಕಾಲವಾಗಿದೆ. ಉಪೇಂದ್ರ ನಟನೆಯ 'ಯುಐ'ಗೆ ಬಿಡುಗಡೆ ಮುಹೂರ್ತ ಕೂಡಿ ಬಂದಿಲ್ಲ. ಶಿವರಾಜ್‌ಕುಮಾರ್ 'ಭೈರತಿ ರಣಗಲ್' ಆಗಸ್ಟ್‌ನಲ್ಲಿಯೇ ತೆರೆ ಕಾಣಬೇಕಿತ್ತು. ಸುದೀಪ್ 'ಮ್ಯಾಕ್ಸ್' ಚಿತ್ರ ಇನ್ನೂ ಪೋಸ್ಟ್ ಪ್ರೊಡಕ್ಷನ್‌ನಲ್ಲಿದೆ. ಶ್ರೀಮುರಳಿ ನಟನೆಯ 'ಬಘೀರ' ಕೂಡ ಬಹಳ ಹಿಂದೆಯೇ ತೆರೆ ಕಾಣಬೇಕಿದ್ದ ಚಿತ್ರ. ದರ್ಶನ್ ನಟನೆಯ 'ಡೆವಿಲ್' ಕೂಡ ಈ ವರ್ಷ ತೆರೆಗೆ ಬರುವುದು ಅನುಮಾನ.

ಬಿಡುಗಡೆಯಾದ ದಿನವೇ ಹಬ್ಬ!

'ಕನ್ನಡದಲ್ಲಿ ಸದ್ಯ ಇರುವುದೇ ನಾಲ್ಕಾರು ಸ್ಟಾರ್‌ಗಳು. ಅವರು ವರ್ಷಕ್ಕೆರಡು ಸಿನಿಮಾ ಮಾಡುತ್ತಿಲ್ಲ. ಕೆಲ ನಟರು ಎರಡು ವರ್ಷಕ್ಕೊಂದು ಸಿನಿಮಾ ಮಾಡುತ್ತಿದ್ದಾರೆ! ಸಿನಿಮಾಗಳೇ ಇಲ್ಲದಿದ್ದರೆ ಬಿಡುಗಡೆ ಮಾತು ಎಲ್ಲಿಂದ? ಹಿಂದೆ ವರ್ಷಕ್ಕೆ ಸ್ಟಾರ್‌ಗಳದ್ದೇ 15-20 ಸಿನಿಮಾಗಳು ಇರುತ್ತಿದ್ದವು. ಹೀಗಾಗಿ ಹಬ್ಬವೆಂಬುದು ಚಿತ್ರರಂಗಕ್ಕೂ ಹಬ್ಬವಾಗಿತ್ತು. ಈಗ ತಮ್ಮ ಸಿನಿಮಾ ಬಿಡುಗಡೆಯಾದ ದಿನವೇ ಹಬ್ಬ ಎಂದು ಸ್ಟಾರ್ ನಟರು ಭಾವಿಸಿದಂತಿದೆ. ಹೀಗಾಗಿ ಆ ಜಾಗಕ್ಕೆ ಬೇರೆ ಭಾಷೆಯ ಸ್ಟಾರ್‌ಗಳು ಬಂದು ಕುಳಿತುಕೊಳ್ಳುವುದು ಸಹಜ' ಎನ್ನುತ್ತಾರೆ ಮಾರ್ಸ್ ಸುರೇಶ್.

ಇದು ಮಾರ್ಟಿನ್ ಜಗತ್ತು!



ವೈಭವಿ ಶಾಂಡಿಲ್ಯ

ಧ್ರುವ ಸರ್ಜಾ ನಟನೆಯ 'ಮಾರ್ಟಿನ್' ಅಕ್ಟೋಬರ್ 11ರಂದು ತೆರೆಗೆ ಬರಲಿದೆ. ಉದಯ್ ಕೆ. ಮೆಹ್ತಾ ನಿರ್ಮಾಣದ ಚಿತ್ರಕ್ಕೆ ಎ.ಪಿ.ಅರ್ಜುನ್ ನಿರ್ದೇಶನವಿದೆ.

'ನನ್ನ ಸಿನಿಪಯಣದ ಬಿಗ್ ಬಜೆಟ್ ಚಿತ್ರವಿದು. ನಿರ್ಮಾಪಕರು ನನ್ನ ಮೇಲೆ ಭರವಸೆಯಿಟ್ಟು ಇಷ್ಟು ದುಡ್ಡನ್ನು ಹಾಕಿದ್ದಾರೆ. ಮಾವ ಅರ್ಜುನ್ ಸರ್ಜಾ ಅವರು ಉತ್ತಮ ಕಥೆ ಮಾಡಿಕೊಟ್ಟಿದ್ದಾರೆ. ಪ್ರತಿಯೊಬ್ಬ ತಂತ್ರಜ್ಞ ಹಾಗೂ ಕಲಾವಿದರ ಸಹಕಾರದಿಂದ ಚಿತ್ರ ಉತ್ತಮವಾಗಿ ಮೂಡಿಬಂದಿದೆ. ಮೂರು ವರ್ಷಗಳ ನಂತರ ನನ್ನ ಚಿತ್ರ ಭಾರತದಾದ್ಯಂತ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಅದಕ್ಕೂ ಮುನ್ನ ಕೆಲವು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೇವೆ. ಹೈದರಾಬಾದಿನಲ್ಲಿ ಹಾಡೊಂದರ ಬಿಡುಗಡೆಯಾಗಲಿದೆ. ಉತ್ತರ ಕರ್ನಾಟಕದ ಹುಬ್ಬಳ್ಳಿಗೆ ಭೇಟಿ ನೀಡಲಿದ್ದೇವೆ. ದಾವಣಗೆರೆಯಲ್ಲಿ ಅ.6ರಂದು ಚಿತ್ರದ ಪ್ರೀ ರಿಲೀಸ್ ಇವೆಂಟ್ ನಡೆಯಲಿದೆ. ಅ.8ರಂದು ಮುಂಬೈನಲ್ಲಿ ಮತ್ತೊಂದು ಹಾಡು ಬಿಡುಗಡೆ ಮಾಡುತ್ತೇವೆ' ಎಂದರು ಧ್ರುವ ಸರ್ಜಾ.

'3000 ಚಿತ್ರಮಂದಿರಗಳಲ್ಲಿ ಕನ್ನಡ ಸೇರಿದಂತೆ ಆರು ಭಾಷೆಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ' ಎಂದರು ನಿರ್ಮಾಪಕರು.

ಚಿತ್ರಕ್ಕೆ ರವಿ ಬಸ್ರೂರು ಸಂಗೀತ, ಸತ್ಯ ಹೆಗಡೆ ಛಾಯಾಚಿತ್ರಗ್ರಹಣವಿದೆ. ವೈಭವಿ ಶಾಂಡಿಲ್ಯ ಚಿತ್ರದ ನಾಯಕಿ. ಭಾರತ ಮತ್ತು ಪಾಕಿಸ್ತಾನ ನಡುವಿನ ಕಥೆಯಲ್ಲಿ ದೇಶಭಕ್ತಿಯ ಎಳೆಯನ್ನು ಹೊಂದಿರುವ ಚಿತ್ರವಿದು.

'ಜೀಬ್ರಾ'ವನ್ನೇರಿ ಬಂದ ಧನಂಜಯ!

ನಟ ಧನಂಜಯ ಹಾಗೂ ತೆಲುಗಿನ ಸತ್ಯದೇವ್ ಮುಖ್ಯಭೂಮಿಕೆಯಲ್ಲಿರುವ 'ಜೀಬ್ರಾ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಶಿವರಾಜ್‌ಕುಮಾರ್ ಟೀಸರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು. ದೀಪಾವಳಿಗೆ ಚಿತ್ರ ತೆರೆಗೆ ಬರಲಿದೆ.

ಈಶ್ವರ್ ಕಾರ್ತಿಕ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರ ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ನಿರ್ಮಾಣಗೊಂಡಿದೆ. ಇದು ಧನಂಜಯ ಅಭಿನಯದ 26ನೇ ಸಿನಿಮಾ. 'ಕ್ರೈಂ ಮತ್ತು ಥ್ರಿಲ್ಲರ್ ಕಂಟೆಂಟ್ ಇರುವ ಚಿತ್ರ. ಡಾಲಿ ವೈಟ್ ಹಾರ್ಸ್, ಸತ್ಯದೇವ್ ಬ್ಲಾಕ್ ಹಾರ್ಸ್ ಎಂಬ ಕಲ್ಪನೆಯ ಕಥೆ. ತಮಿಳು, ಮಲಯಾಳಂ ಭಾಷೆಗಳಿಗೂ ಚಿತ್ರ ಡಬ್ ಆಗಿದೆ' ಎಂದಿದೆ ಚಿತ್ರತಂಡ.

ಪದ್ಮಜಾ ಫಿಲ್ಮ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಓಲ್ಡ್ ಟೌನ್ ಪಿಕ್ಚರ್ಸ್ ಈ ಚಿತ್ರವನ್ನು ನಿರ್ಮಾಣ ಮಾಡಿವೆ. ಪ್ರಿಯಾ ಭವಾನಿಶಂಕರ್, ಸುನಿಲ್ ವರ್ಮಾ, ಸತ್ಯರಾಜ್ ಮುಂತಾದವರು ತಾರಾಗಣದಲ್ಲಿದ್ದಾರೆ. ರವಿ ಬಸ್ರೂರ್ ಸಂಗೀತ ನೀಡಿದ್ದು, ಸತ್ಯ ಪೊನ್ಮಾರ್ ಅವರ ಛಾಯಾಚಿತ್ರಗ್ರಹಣ, ಅನಿಲ್ ಕ್ರಿಶ್ ಸಂಕಲನವಿದೆ.




ಧನಂಜಯ, ಸತ್ಯದೇವ್



'ಡ್ರೈವ್'ನಲ್ಲಿ ಮಗ್ನರಾಗಿರುವ ಕಿಶೋರ್

ರಜನಿಕಾಂತ್ ಸೇರಿದಂತೆ ಬಹುಭಾಷಾ ಸ್ಟಾರ್‌ಗಳನ್ನು ಹೊಂದಿರುವ 'ವೆಟ್ಟೈಯನ್' ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ಚಿತ್ರದಲ್ಲಿ ಖಡಕ್ ಪೊಲೀಸ್ ಅಧಿಕಾರಿಯಾಗಿ ಕಾಣಿಸಿಕೊಂಡಿರುವ ಕನ್ನಡದ ನಟ ಕಿಶೋರ್ ಈ ಬಗ್ಗೆ ಮಾತಿಗೆ ಸಿಕ್ಕರು.



'ಚಿತ್ರದಲ್ಲಿ ಪೊಲೀಸ್ ಅಧಿಕಾರಿ ಪಾತ್ರ ಮಾಡಿದ್ದೇನೆ. ಚಿತ್ರದಲ್ಲಿ ಇರುವ ಬಹುತೇಕ ಸ್ಟಾರ್‌ಗಳದ್ದು ಇದೇ ಪಾತ್ರ. ಹಲವು ಸ್ಟಾರ್‌ಗಳ ಸಿನಿಮಾದಲ್ಲಿ ಚಿತ್ರೀಕರಣ ಡೇಟ್ ಹೊಂದಾಣಿಕೆ ಒಂದು ರೀತಿಯ ಸರ್ಕಸ್. ಆದರೂ ಹಲವು ಭಾಷೆಯ ದೊಡ್ಡ ಸ್ಟಾರ್‌ಗಳು ಇದ್ದಾಗ ಚಿತ್ರ ತಲುಪುವ ವ್ಯಾಪ್ತಿಯೂ ದೊಡ್ಡದಾಗುತ್ತದೆ. ಜೊತೆಗೆ ಒಂದು ಆಸಕ್ತಿದಾಯಕ ಕಥೆ. ಟಿ.ಜೆ.ಗುಣವೇಲು ಬಹಳ ಸೂಕ್ಷ್ಮಸಂವೇದಿ ನಿರ್ದೇಶಕ. ಹೀಗಾಗಿ ಚಿತ್ರ ಒಪ್ಪಿಕೊಂಡೆ. ಜನ ಈ ಕಥೆಯನ್ನು ಹೇಗೆ ಸ್ವೀಕರಿಸುತ್ತಾರೆ ನೋಡಬೇಕು' ಎಂದು ಚಿತ್ರದ ಬಗ್ಗೆ ವಿವರಿಸಿದರು.

'ನನಗೆ ರಜನಿಕಾಂತ್, ಫಹಾದ್ ಫಾಸಿಲ್ ಮತ್ತು ಅಭಿರಾಮಿ ಜೊತೆಗಿನ ದೃಶ್ಯಗಳಿತ್ತು. ಹೀಗಾಗಿ ಈ ಚಿತ್ರದಲ್ಲಿ ಬೇರೆ ಸ್ಟಾರ್‌ಗಳು ಸಿಗಲಿಲ್ಲ. ಕನ್ನಡದಲ್ಲಿ ನನ್ನ ನಟನೆಯ '5' ಎನ್ನುವ ಸಿನಿಮಾ ಬಿಡುಗಡೆಗೆ ಸಿದ್ಧವಿದೆ. ಇದಲ್ಲದೆ ನಾಲ್ಕೈದು ಪುಟ್ಟ ಸಿನಿಮಾಗಳಲ್ಲಿ ನಟಿಸಿರುವೆ. ತೆಲುಗಿನಲ್ಲಿ 'ಮಟ್ಕಾ' ಎಂಬ ಕಮರ್ಷಿಯಲ್ ಸಿನಿಮಾ ಚಿತ್ರೀಕರಣ ಪೂರ್ಣಗೊಂಡಿದೆ' ಎಂದು ತಮ್ಮ ಪ್ರಾಜೆಕ್ಟ್‌ಗಳ ಮಾಹಿತಿ ಬಿಚ್ಚಿಟ್ಟರು.

'ಇದರ ನಡುವೆ ನಾವೇ ಒಂದಷ್ಟು ಗೆಳೆಯರು ಸೇರಿಕೊಂಡು ಒಂದು ಸಿನಿಮಾ ಮಾಡುತ್ತಿದ್ದೇವೆ. ಪೊಲೀಸ್ ಅಧಿಕಾರಿಗಳು ಒಂದು ಪ್ರಕರಣಕ್ಕಾಗಿ ಜರ್ನಿ ಮಾಡುವ ಕಥೆ. 'ಡ್ರೈವ್' ಎಂಬ ಹೆಸರಿನ ಈ ಚಿತ್ರವನ್ನು ಬರೆದು ನಿರ್ದೇಶನ ಮಾಡುತ್ತಿರುವೆ. ಶೇ 75ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ನನ್ನ 'ವಿಸ್ತಾರ' ಮತ್ತು ಸಂಗೀತಾ ಭಟ್ ಅವರ ನಿರ್ಮಾಣ ಸಂಸ್ಥೆಯಿಂದ ಈ ಚಿತ್ರ ನಿರ್ಮಾಣಗೊಂಡಿದೆ. ಪ್ರಕಾಶ್ ರಾಜ್, ಅವಿನಾಶ್ ಇದ್ದಾರೆ. ನನ್ನನ್ನು ಸೇರಿಸಿ ನಾಲ್ಕಾರು ನಟರಿದ್ದಾರೆ. ಒಂದು ಸಣ್ಣ ಚೌಕಟ್ಟಿನ ಸಿನಿಮಾ. ಕನ್ನಡದ ಪ್ರೇಕ್ಷಕರು ಬಹಳ ಬುದ್ಧಿವಂತರು. ಅವರನ್ನು ಒಪ್ಪಿಸಿದರೆ ಬೇರೆಯವರನ್ನು ಒಪ್ಪಿಸಬಹುದು ಎಂದು ಮಣಿರತ್ನಂ ಹೇಳುತ್ತಿದ್ದರು. ಅಂಥ ಒಂದಷ್ಟು ಪ್ರೇಕ್ಷಕರನ್ನು ಹುಟ್ಟುಹಾಕುವ ಸಣ್ಣ ಪ್ರಯತ್ನವಷ್ಟೇ' ಎಂದು ತಮ್ಮ ಮುಂದಿನ ಸಿನಿಮಾದ ಬಗ್ಗೆ ವಿವರಿಸಿದರು.

'ನಾವೆಲ್ಲ ಒಂದು ರೀತಿ ಬ್ರಿಡ್ಜ್ ನಟರು. ಎಲ್ಲ ರೀತಿಯ ಸಿನಿಮಾಗಳಲ್ಲಿಯೂ ನಟಿಸುತ್ತೇವೆ. ಹೀಗಾಗಿ ನನಗೆ ದೊಡ್ಡ ಸಿನಿಮಾ, ಸಣ್ಣ ಸಿನಿಮಾ ಎಂದಿಲ್ಲ. ನಮ್ಮಂಥ ನಟರಿಂದಲೂ ಒಂದಷ್ಟು ಪ್ರೇಕ್ಷಕರು ಸಿನಿಮಾಗೆ ಬಂದರೆ ಖುಷಿ. ಉತ್ತಮ ಸಂದೇಶ ನೀಡುವ, ಸಂವೇದನಾಶೀಲ ಚಿತ್ರಗಳ ಜೊತೆಗಿನ ಪಯಣ ಹೀಗೆ ಮುಂದುವರಿಯುತ್ತದೆ' ಎಂದು ಮಾತಿಗೆ ವಿರಾಮವಿತ್ತರು.

ತೆರೆಯಲ್ಲಿ ಮೂರು ಸಿನಿಮಾಗಳು

ಕನ್ನಡ ಚಿತ್ರರಂಗದಲ್ಲಿ ಈ ಸಲ ದಸರಾ ಹಬ್ಬದ ಅಬ್ಬರ ಕಾಣಿಸುತ್ತಿಲ್ಲ. ಸಾಲು, ಸಾಲು ರಜೆಗಳಿದ್ದರೂ ಇಂದು (ಅ.4) ಚಿತ್ರಮಂದಿರಕ್ಕೆ ಲಗ್ಗೆ ಇಡುತ್ತಿರುವುದು ಮೂರು ಸಿನಿಮಾಗಳು ಮಾತ್ರ...

ಭೈರಾದೇವಿ

ರಾಧಿಕಾ ಕುಮಾರಸ್ವಾಮಿ, ರಮೇಶ್ ಅರವಿಂದ್ ನಟನೆಯ 'ಭೈರಾದೇವಿ' ಗುರುವಾರವೇ ತೆರೆ ಕಂಡಿದೆ. ಕಾಳಿ, ಅಘೋರಿ ಕಥೆಯನ್ನು ಹೊಂದಿರುವ ಚಿತ್ರವನ್ನು ಶ್ರೀಜೈ ನಿರ್ದೇಶಿಸಿದ್ದಾರೆ. ಕನ್ನಡ, ತೆಲುಗು, ತಮಿಳು ಮೂರು ಭಾಷೆಗಳಲ್ಲಿ ಮೂಡಿಬಂದಿದೆ. ರಾಧಿಕಾ ಸಹೋದರ ರವಿರಾಜ್ ಶಮಿಕಾ ಎಂಟರ್‌ಪ್ರೈಸಸ್ ಮೂಲಕ ಈ ಚಿತ್ರವನ್ನು ನಿರ್ಮಿಸಿದ್ದಾರೆ.

'ಭೈರಾದೇವಿ' ನನ್ನ ಇಪ್ಪತ್ತು ವರ್ಷಗಳ ಸಿನಿಪಯಣದಲ್ಲೇ ವಿಭಿನ್ನವಾದ ಚಿತ್ರ. ಅಘೋರಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ನನಗೆ ಸ್ಮಶಾನ ಎಂದರೆ ಭಯ. ಈ ಚಿತ್ರದ ಚಿತ್ರೀಕರಣ ಹೆಚ್ಚಿನ ಭಾಗ ಸ್ಮಶಾನದಲ್ಲೇ ನಡೆದಿದೆ. ವಿಭಿನ್ನ ಕಥೆಯನ್ನು ಹೊಂದಿರುವ ಈ ಚಿತ್ರ ಜನರಿಗೆ ಇಷ್ಟವಾಗುತ್ತದೆ ಎಂಬ ವಿಶ್ವಾಸವಿದೆ. ಈ ಸಿನಿಮಾ ಪ್ರೇಕ್ಷಕರಿಗೆ ಇಷ್ಟ ಆದರೆ ಇನ್ನೊಂದು ಸಿನಿಮಾ ಮಾಡುತ್ತೇನೆ. ಇಷ್ಟ ಆಗಲಿಲ್ಲ ಎಂದರೆ ಚಿತ್ರರಂಗದಿಂದ ದೂರ ಆಗುತ್ತೇನೆ. ಜನ ನಮ್ಮ ಸಿನಿಮಾ ನೋಡುವುದಿಲ್ಲ ಎಂದರೆ, ಚಿತ್ರರಂಗ ತೊರೆಯುವುದು ಉತ್ತಮ' ಎಂದಿದ್ದಾರೆ ರಾಧಿಕಾ ಕುಮಾರಸ್ವಾಮಿ.

'ನಾನು ಈ ಚಿತ್ರದಲ್ಲಿ ಪೊಲೀಸ್ ಅಧಿಕಾರಿ. ಅರವಿಂದ್ ನನ್ನ ಪಾತ್ರದ ಹೆಸರು. ಯಾವುದೇ ತರಹದ ರೌಡಿಗಳನ್ನು ಮಟ್ಟಹಾಕುವ ಖಡಕ್ ಪೊಲೀಸ್ ಆಫೀಸರ್. ಆದರೆ, ಈ ಚಿತ್ರದಲ್ಲಿ ನನಗಿರುವ ವೈರಿಗಳು ಈ ರಾಜ್ಯದವರಲ್ಲ, ಈ ದೇಶದವರಲ್ಲ, ಬೇರೆ ಲೋಕದಿಂದ ಬಂದ ಒಂದು ಶಕ್ತಿಯ ವಿರುದ್ಧ ಹೋರಾಡಬೇಕು. ಈ ಚಿತ್ರ ನೋಡುವಾಗ ಆಪ್ತಮಿತ್ರ ಚಿತ್ರ ನೆನಪಾಗುತ್ತಿದೆ' ಎಂದು ನಟ ರಮೇಶ್ ಅರವಿಂದ್ ಹೇಳಿದ್ದಾರೆ.



ರಮೇಶ್ ಅರವಿಂದ್, ರಾಧಿಕಾ ಕುಮಾರಸ್ವಾಮಿ

ಗೋಪಿಲೋಲ

ಬಹುತೇಕ ಹೊಸಬರೇ ಕೂಡಿ ಸಿದ್ಧಪಡಿಸಿರುವ ಚಿತ್ರ 'ಗೋಪಿಲೋಲ'. ಸುಕೃತಿ ಚಿತ್ರಾಲಯ ಲಾಂಛನದಲ್ಲಿ ಎಸ್. ಆರ್. ಸನತ್ ಕುಮಾರ್ ನಿರ್ಮಿಸಿರುವ ಚಿತ್ರಕ್ಕೆ ಆರ್. ರವೀಂದ್ರ ನಿರ್ದೇಶನವಿದೆ. ನೈಸರ್ಗಿಕ ಕೃಷಿ, ಪ್ರೇಮದ ಕುರಿತಾದ ಕಥೆಯನ್ನು ಹೊಂದಿರುವ ಚಿತ್ರವಿದು.

'ಚಿತ್ರದ ನಿರ್ಮಾಪಕರೇ ಕಥೆ ಬರೆದಿದ್ದಾರೆ. ನೈಸರ್ಗಿಕ ಕೃಷಿಯ ಕುರಿತಾದ ಹಾಗೂ ಸುಂದರ ಪ್ರೇಮಕಥೆಯುಳ್ಳ ಚಿತ್ರ. ಒಂದೊಳ್ಳೆ ಸಂದೇಶ ಕೂಡ ಇದೆ. ಆ್ಯಕ್ಷನ್, ಲವ್, ಸಸ್ಪೆನ್ಸ್ ಹೀಗೆ ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳು ನಮ್ಮ ಚಿತ್ರದಲ್ಲಿದೆ. ಎಲ್ಲಕ್ಕಿಂತ ಹೆಚ್ಚಾಗಿ ಒಳ್ಳೆ ಕಂಟೆಂಟ್ ಇದೆ' ಎಂದಿದ್ದಾರೆ ನಿರ್ದೇಶಕರು. ಆರು ಹಾಡುಗಳಿಗೆ ಮಿಥುನ್ ಅಶೋಕನ್ ಸಂಗೀತ ಸಂಯೋಜಿಸಿದ್ದಾರೆ. ಮಂಜುನಾಥ್ ಅರಸ್ ಚಿತ್ರದ ನಾಯಕ. ಅವರಿಗೆ ನಿಮಿಷ ಜೋಡಿಯಾಗಿದ್ದಾರೆ.

ಮಿಂಚುಹುಳ

ನಟ ರಾಜ್‌ಕುಮಾರ್ ಸಹೋದರ ವರದಪ್ಪನವರ ಮೊಮ್ಮಗ ಪೃಥ್ವಿ ರಾಜ್‌ಕುಮಾರ್ ಸ್ಯಾಂಡಲ್‌ವುಡ್‌ಗೆ ಪದಾರ್ಪಣೆ ಮಾಡುತ್ತಿದ್ದಾರೆ. ಅವರ ಅಭಿನಯದ ಚೊಚ್ಚಲ ಚಿತ್ರ 'ಮಿಂಚುಹುಳು'. ಮಹೇಶ್ ಕುಮಾರ್ ಅವರ ಕಥೆ, ಚಿತ್ರಕಥೆ, ನಿರ್ದೇಶನವಿರುವ ಈ ಚಿತ್ರಕ್ಕೆ ರಾಜಗೋಪಾಲ್ ದೊಡ್ಡಹುಲ್ಲೂರು ಬಂಡವಾಳ ಹೂಡಿದ್ದಾರೆ.

'ನಗರ ಪ್ರದೇಶದಲ್ಲಿ ನಡೆಯುವ ಕಥೆ. ಜವಾಬ್ದಾರಿ ಇಲ್ಲದ ತಂದೆ ಹಾಗೂ ಮಗನ ನಡುವಿನ ಕಥೆ ಇದಾಗಿದ್ದು, ಅವರ ಬದುಕಿನ ಕಷ್ಟ, ಸವಾಲುಗಳನ್ನು ಹೇಳಿದ್ದೇವೆ. ಮಿಂಚುಹುಳುವೊಂದನ್ನು ನೋಡಿದ ಮಗನಿಗೆ ಹೊಸ ಆಲೋಚನೆ ಬರುತ್ತದೆ. ಆ ಆಲೋಚನೆ ಏನು, ಅದರಿಂದ ಬದುಕಿನಲ್ಲಿ ಏನೆಲ್ಲ ಆಗುತ್ತದೆ ಎಂಬುದು ಚಿತ್ರಕಥೆ. ಈ ಚಿತ್ರವಾಗಲು ಪುನೀತ್ ರಾಜ್‌ಕುಮಾರ್ ಅವರೇ ಕಾರಣ' ಎಂದು ನಿರ್ದೇಶಕರು ಹೇಳಿದ್ದಾರೆ.

ಭೂನಿ ಪಿಕ್ಚರ್ಸ್ ನಿರ್ಮಾಣದ ಚಿತ್ರಕ್ಕೆ ರಾಜ್ ಭಾಸ್ಕರ್ ಸಂಗೀತ, ಚಲ್ಲ ಛಾಯಾಚಿತ್ರಗ್ರಹಣ, ಅಂಜಿ ಕೆ. ವೀರ ಸಂಕಲನವಿದೆ.

ಭಾರತದ ಅಂತರಿಕ್ಷ ನಿಲ್ದಾಣ ನಿರ್ಮಾಣ, ನಿರ್ವಹಣೆಗೆ ತಯಾರಿ

ನಿಮ್ಹಾನ್ಸ್ ಸಲಹೆ ಕೋರಿದ ಇಸ್ರೊ

ಪ್ರಜಾವಾಣಿ ವಾರ್ತೆ



ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದ ಪದವೀಧರರು ಪ್ರತಿಜ್ಞೆ ಸ್ವೀಕರಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: 'ಭಾರತವು ಶೀಘ್ರದಲ್ಲಿ ಸ್ವಂತ ಅಂತರಿಕ್ಷ ನಿಲ್ದಾಣ ನಿರ್ಮಿಸಲಿದೆ. ಆದ್ದರಿಂದ ದೀರ್ಘ ಕಾಲ ಅಲ್ಲಿ ಇರಬೇಕಾದ ಗಗನಯಾನಿಗಳು ಎದುರಿಸುವ ಮಾನಸಿಕ ಒತ್ತಡ ನಿರ್ವಹಣೆ ಕುರಿತು ನಿಮ್ಹಾನ್ಸ್ ಸಲಹೆ ನೀಡಬೇಕು' ಎಂದು ಭಾರತೀಯ ಬಾಹ್ಯಾಕಾಶ ಸಂಸ್ಥೆಯ (ಇಸ್ರೊ) ಅಧ್ಯಕ್ಷಎಸ್.ಸೋಮನಾಥ್ ಮನವಿ ಮಾಡಿದರು.ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯ (ನಿಮ್ಹಾನ್ಸ್) 27ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಿ, ಮಾತನಾಡಿದ ಅವರು, 'ನಮ್ಮದೇ ಆದ ಭಾರತೀಯ ಅಂತರಿಕ್ಷ ನಿಲ್ದಾಣ ನಿರ್ಮಾಣ ವಾಗಲಿದ್ದು, ಅಲ್ಲಿ ದೀರ್ಘ ಕಾಲವಿದ್ದು ಕೆಲಸ ಮಾಡಬೇಕಾದ ಅನಿವಾರ್ಯ ಇರಲಿದೆ' ಎಂದರು.

'ಎಂಟು ದಿನಕ್ಕೆಂದು ಬಾಹ್ಯಾಕಾಶಕ್ಕೆ ತೆರಳಿದ ಅಮೆರಿಕದ ಗಗನಯಾನಿಗಳು ಎಂಟು ತಿಂಗಳಾದರೂ ಅಲ್ಲೇ ಇರಬೇಕಾದ ಪರಿಸ್ಥಿತಿ ಬಂದಿದೆ. ಇಂತಹ ಸಂದರ್ಭದಲ್ಲಿ ಎದುರಾಗ ಬಹುದಾದ ಮಾನಸಿಕ ಒತ್ತಡ ನಿರ್ವಹಣೆ ಮಾಡುವುದು ಹೇಗೆ? ಭೂಮಿಗೆ ಮರಳಿದ ಬಳಿಕ ಯಾವ ರೀತಿ ಮನಸ್ಥಿತಿ ಇರುತ್ತದೆ ಎಂಬುದರ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಿದೆ. ಇಸ್ರೊ ಈ ನಿಟ್ಟಿನಲ್ಲಿ ನಿಮ್ಹಾನ್ಸ್‌ನಿಂದ ಸಲಹೆ ಬಯಸುತ್ತದೆ' ಎಂದು ಹೇಳಿದರು.

'ಇತ್ತೀಚೆಗೆ ಕಾರ್ಯಕ್ಷೇತ್ರದಲ್ಲಿ ಮಾನಸಿಕ ಒತ್ತಡವು ಹೆಚ್ಚುತ್ತಿದ್ದು, ಇದರ ನಿರ್ವಹಣೆಯು ಸವಾಲಾಗಿ ಪರಿಣಮಿಸಿದೆ. ಕೋವಿಡ್ ಕಾಣಿಸಿ ಕೊಂಡಾಗ ಮನೆಯಿಂದಲೇ ಕಾರ್ಯ ನಿರ್ವಹಿಸಬೇಕಾದ್ದರಿಂದ ಜನರು ವಿವಿಧ ರೀತಿಯ ಮಾನಸಿಕ ಒತ್ತಡಕ್ಕೆ ಒಳಗಾಗಿದ್ದರು. ಕೋವಿಡ್ ನಿಯಂತ್ರಣದ ನಂತರ ಕಚೇರಿಗಳು ಪುನರಾರಂಭ-ವಾದ್ದರಿಂದ ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಮಾನಸಿಕ ಒತ್ತಡ ಎದುರಿಸುತ್ತಿದ್ದಾರೆ. ದೈನಂದಿನ ಜೀವನದಲ್ಲಿ ಒತ್ತಡ ನಿರ್ವಹಣೆಗೆ ಸಂಬಂಧಿಸಿದಂತೆ ಮನೋವೈದ್ಯರು ಪರಿಹಾರೋಪಾಯ ಒದಗಿಸಬೇಕಿದೆ' ಎಂದು ಹೇಳಿದರು.

ನಿಮ್ಹಾನ್ಸ್ ಉಪಾಧ್ಯಕ್ಷರೂ ಆಗಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ, 'ರಾಜ್ಯದಲ್ಲಿ ಮಾನಸಿಕ ಆರೋಗ್ಯಕ್ಕೆ ಆದ್ಯತೆ ನೀಡಲಾಗುತ್ತಿದೆ. 'ಕರ್ನಾಟಕ ಬ್ರೈನ್ ಹೆಲ್ತ್ ಇನಿಶಿಯೇಟಿವ್' ಕಾರ್ಯಕ್ರಮದ ಮೂಲಕ ನರ ವಿಜ್ಞಾನ ಸೇವೆ ಒದಗಿಸ ಲಾಗುತ್ತಿದೆ. ಜಿಲ್ಲಾ ಮಟ್ಟದಲ್ಲಿ ಮಿದುಳು ಆರೋಗ್ಯ ಚಿಕಿತ್ಸಾಲಯಗಳನ್ನು ಸ್ಥಾಪಿಸ ಲಾಗುತ್ತಿದೆ. ಕ್ಯಾಸನಹಳ್ಳಿಯಲ್ಲಿ ನಿಮ್ಹಾನ್ಸ್‌ನ ಮತ್ತೊಂದು ಘಟಕ ಸ್ಥಾಪನೆಗೆ ಕೇಂದ್ರ ಸರ್ಕಾರಕ್ಕೆ ಒತ್ತಾಯಿ ಸಲಾಗಿದೆ.ಅತ್ಯಾಧುನಿಕ ಪಾಲಿಟ್ರಾಮಾ ಕೇಂದ್ರಕ್ಕೆ ಹಣ ಮಂಜೂರು ಮಾಡುವಂತೆಯೂ ನಿಮ್ಹಾನ್ಸ್ ಅಧ್ಯಕ್ಷರಾದ ಕೇಂದ್ರ ಆರೋಗ್ಯ ಸಚಿವ ಜೆ.ಪಿ. ನಡ್ಡಾ ಅವರಿಗೆ ಮನವಿ ಮಾಡಿದ್ದೇವೆ. ಶೀಘ್ರದಲ್ಲೇ ಇದಕ್ಕೆ ಅನುಮತಿ ಸಿಗುವ ವಿಶ್ವಾಸವಿದೆ' ಎಂದರು.

ನಿಮ್ಹಾನ್ಸ್ ನಿರ್ದೇಶಕಿ ಡಾ. ಪ್ರತಿಮಾ ಮೂರ್ತಿ, 'ಆರೋಗ್ಯ ಕ್ಷೇತ್ರದ ಗಮನಾರ್ಹ ಸಾಧನೆಗೆ ವಿಶ್ವ ಆರೋಗ್ಯ ಸಂಸ್ಥೆಯಿಂದ ಪ್ರತಿಷ್ಠಿತ ನೆಲ್ಸನ್ ಮಂಡೇಲಾ ಪ್ರಶಸ್ತಿಯನ್ನು ಸಂಸ್ಥೆ ಈ ವರ್ಷ ಪಡೆದಿದೆ. ಗುಣಮಟ್ಟದ ವೈದ್ಯಕೀಯ ಸೇವೆ, ರೋಗಿಗಳ ಸುರಕ್ಷತೆ ಹಾಗೂ ಸೇವೆಯಲ್ಲಿನ ಸಮರ್ಪಣಾ ಭಾವದಿಂದಾಗಿ ಮತ್ತೊಮ್ಮೆ ಎನ್‌ಎಬಿಎಚ್ (ಆಸ್ಪತ್ರೆಗಳು ಮತ್ತು ಆರೋಗ್ಯ ಪೂರೈಕೆದಾರರ ರಾಷ್ಟ್ರೀಯ ಮಾನ್ಯತೆ ಮಂಡಳಿ) ಮಾನ್ಯತೆ ಪಡೆದಿದೆ. 'ಟೆಲಿ ಮನಸ್' ಸಹಾಯವಾಣಿಯ ಮೂಲಕ ಮಾನಸಿಕ ಸಮಸ್ಯೆಗಳಿಗೆ ಪರಿಹಾರೋಪಾಯ ಒದಗಿಸಲಾಗುತ್ತಿದೆ. ಈಗಾಗಲೇ ದೇಶದ ವಿವಿಧೆಡೆಯಿಂದ 14 ಲಕ್ಷಕ್ಕೂ ಹೆಚ್ಚು ಕರೆಗಳನ್ನು ಸ್ವೀಕರಿಸಲಾಗಿದೆ' ಎಂದು ಹೇಳಿದರು.

471 ವಿದ್ಯಾರ್ಥಿಗಳಿಗೆ ಪದವಿ

ಘಟಿಕೋತ್ಸವದಲ್ಲಿ 572 ವಿದ್ಯಾರ್ಥಿಗಳು ವಿವಿಧ ವಿಭಾಗಗಳಲ್ಲಿ ಪದವಿ ಪಡೆಯಲು ಅರ್ಹರಾಗಿದ್ದರು. ಅವರಲ್ಲಿ ಉಪಸ್ಥಿತರಿದ್ದ 471 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. 39 ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಗೆ ಪ್ರಶಸ್ತಿಗಳನ್ನು ಸ್ವೀಕರಿಸಿದರು. ಸುಮಾರು ಮೂರು ಗಂಟೆಗಳ ಅವಧಿಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಎಸ್. ಸೋಮನಾಥ್ ಹಾಗೂ ಡಾ. ಶರಣಪ್ರಕಾಶ ಪಾಟೀಲ ಅವರೇ ಪದವಿ ಪ್ರದಾನ ಮಾಡಿದರು.

'ಕೋರ್ಟ್ ಸಮಯ ಪೋಲಾಗದಿರಲಿ'

ಪ್ರಜಾವಾಣಿ ವಾರ್ತೆ

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಸಾಕ್ಷಿಗಳು ಪ್ರಾಸಿಕ್ಯೂಷನ್‌ಗೆ ವಿರುದ್ಧವಾಗಿ ನುಡಿದು, ಪ್ರತಿಕೂಲ ಸಾಕ್ಷಿಗಳಾದರು ಎಂಬ ಕಾರಣಕ್ಕೆ ಪ್ರಕರಣದ ಸಹ ಆರೋಪಿಗಳನ್ನೆಲ್ಲಾ ಖುಲಾಸೆಗೊಳಿಸಿದಾಗ, ಅಂತಹ ಪ್ರಕರಣದಲ್ಲಿ ವಿಚಾರಣೆ ವೇಳೆ ತಲೆಮರೆಸಿಕೊಂಡಿದ್ದ ಆರೋಪಿ ನಿರ್ದೋಷಿ ಆಗುತ್ತಾನೆ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

'ನನ್ನ ವಿರುದ್ಧ ಮಂಗಳೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಕೊಲೆ ಆರೋಪದ ಪ್ರಕರಣವನ್ನು ರದ್ದುಗೊಳಿಸಬೇಕು' ಎಂದು ಕೋರಿ ಕಾರ್ಕಳ ತಾಲ್ಲೂಕಿನ ಕೌಡೂರು ಗ್ರಾಮದ ವಿಶ್ವನಾಥ ಕೊರಗ ಶೆಟ್ಟಿ (50) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಅರ್ಜಿದಾರರನ್ನು ಕೊಲೆ ಆರೋಪದ ಈ ಪ್ರಕರಣದಿಂದ ಬಿಡುಗಡೆ ಮಾಡಿದೆ.

'ಈ ಪ್ರಕರಣದಲ್ಲಿ 10ನೇ ಆರೋಪಿಯಾಗಿರುವ ಅರ್ಜಿದಾರ ವಿಶ್ವನಾಥ ಕೊರಗ ಶೆಟ್ಟಿ ಅವರನ್ನು ವಿಚಾರಣೆ ವೇಳೆ ತಲೆಮರೆಸಿಕೊಂಡಿದ್ದರು ಎಂಬ ಕಾರಣಕ್ಕೆ ಸಹ ಆರೋಪಿಗಳಿಂದ ವಿಭಜಿಸಿ ಇನ್ನುಳಿದ 9 ಆರೋಪಿಗಳ ವಿಚಾರಣೆ ನಡೆಸಲಾಗಿದೆ. ಆರೋಪ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾದ ಕಾರಣ ಒಂಬತ್ತೂ ಆರೋಪಿಗಳನ್ನು ವಿಚಾರಣಾ ನ್ಯಾಯಾಲಯ ಖುಲಾಸೆಗೊಳಿಸಿದೆ. ಹೀಗಿರುವಾಗ, ವಿಶ್ವನಾಥ್ ವಿರುದ್ಧ ಹೆಚ್ಚಿನ ವಿಚಾರಣಾ ಪ್ರಕ್ರಿಯೆ ಮುಂದುವರಿಸಿದರೆ ಅದು ಕೋರ್ಟ್ ಸಮಯವನ್ನು ಪೋಲು ಮಾಡಿದಂತೆ' ಎಂಬ ಅಭಿಪ್ರಾಯವನ್ನು ನ್ಯಾಯಪೀಠ ವ್ಯಕ್ತಪಡಿಸಿದೆ.

ಅರ್ಜಿದಾರರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 143, 147, 148, 504, 120 ಬಿ, 302, 201 ಜೊತೆಗೆ 149ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗಾಗಿ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು. ಅರ್ಜಿದಾರರ ಪರ ಹೈಕೋರ್ಟ್ ವಕೀಲ ನಿತಿಶ್ ಕುಮಾರ್ ಶೆಟ್ಟಿ ವಾದ ಮಂಡಿಸಿದ್ದರು.



ಚಿತ್ರನಟಿ ಅನು ಪ್ರಭಾಕರ್ ಅವರನ್ನು ಭಾರತೀಯ ವಿದ್ಯಾ ಭವನದಲ್ಲಿ ಸನ್ಮಾನಿಸಲಾಯಿತು

ಭಾರತೀಯ ವಿದ್ಯಾಭವನದಲ್ಲಿ 'ನವರಾತ್ರಿ ಹಬ್ಬ'

ಬೆಂಗಳೂರು: 'ಭಾರತೀಯ ವಿದ್ಯಾ ಭವನವು ನಾಡಿನ ಕಲೆ ಸಂಸ್ಕೃತಿಯನ್ನು ಪಸರಿಸುವ ಮಹತ್ವದ ಕೆಲಸವನ್ನು ಮಾಡುತ್ತಿದೆ. ಪರಂಪರೆಯನ್ನು ಹೊಸ ಪೀಳಿಗೆಗೆ ಪರಿಚಯಿಸುತ್ತಿದೆ' ಎಂದು ನಟಿ ಅನು ಪ್ರಭಾಕರ್ ಶ್ಲಾಘಿಸಿದರು.

ಭಾರತೀಯ ವಿದ್ಯಾಭವನದಲ್ಲಿ ಆರಂಭವಾದ 'ನವರಾತ್ರಿ ಹಬ್ಬ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಾಯಕಿಯಾಗಿ ಚಿತ್ರರಂಗದಲ್ಲಿ 25 ವರ್ಷಗಳನ್ನು ಪೂರೈಸಿದ್ದಕ್ಕಾಗಿ ಅನು ಪ್ರಭಾಕರ್ ಅವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು.

ಗೊಂಬೆಗಳ ಪ್ರದರ್ಶನ ರೂಪಿಸಿರುವ ಅಪರ್ಣಾ ಆಚಾರ್ಯ ಮತ್ತು ಶ್ರೀನಾಥ ಆಚಾರ್ಯ ಅವರು 'ಶ್ರೀರಾಮ ಕಥಾ ದರ್ಶನ' ಎಂಬ ರಾಮಾಯಣವನ್ನು ಬಿಂಬಿಸುವ ಗೊಂಬೆಗಳ ಪ್ರದರ್ಶನ'ದ ಮಹತ್ವ ಕುರಿತು ವಿವರಿಸಿದರು.

'ರಾಮಾಯಣದ ಸ್ತ್ರೀ ಪಾತ್ರಗಳು' ಕುರಿತು ಭಾರತೀಯ ವಿದ್ಯಾಭವನದ ಅಧ್ಯಕ್ಷ ಕೆ.ಜಿ. ರಾಘವನ್ ವಿಶೇಷ ಉಪನ್ಯಾಸ ನೀಡಿದರು.

ಗೊಂಬೆ ಪ್ರದರ್ಶನ ಪ್ರತಿದಿನ ಬೆಳಿಗ್ಗೆ 11ರಿಂದ ಮಧ್ಯಾಹ್ನ 1ರವರೆಗೆ ಮತ್ತು ಮಧ್ಯಾಹ್ನ 3ರಿಂದ ಸಂಜೆ 5.30ರವರೆಗೆ ಸಾರ್ವಜನಿಕರಿಗೆ ತೆರೆದಿರುತ್ತದೆ ಎಂದು ಭಾರತೀಯ ವಿದ್ಯಾ ಭವನದ ನಿರ್ದೇಶಕ ಎಚ್.ಎನ್. ಸುರೇಶ್ ತಿಳಿಸಿದರು. ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಭಾಗವಹಿಸಿದ್ದರು.

'ಎಚ್‌ಎಎಲ್ ನೇಮಕಾತಿಯಲ್ಲಿ ಕನ್ನಡಿಗರಿಗೆ ಅನ್ಯಾಯವಾಗಿದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು:'ಎಚ್‌ಎಎಲ್ (ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್) ಇತ್ತೀಚೆಗೆ ನಡೆಸಿದ ನೇಮಕಾತಿಯಲ್ಲಿ ಎಲ್ಲ ನಿಯಮಗಳನ್ನು ಗಾಳಿಗೆ ತೂರಿ, ಕನ್ನಡಿಗರನ್ನು ಕಡೆಗಣಿಸಿದೆ' ಎಂದು ಸಾಹಿತಿಗಳು ಹಾಗೂ ಕನ್ನಡ ಪರ ಹೋರಾಟಗಾರರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕನ್ನಡ ಗೆಳೆಯರ ಬಳಗದ ನೇತೃತ್ವದಲ್ಲಿ ಎಲ್. ಹನುಮಂತಯ್ಯ, ದೊಡ್ಡರಂಗೇಗೌಡ, 'ಮುಖ್ಯಮಂತ್ರಿ' ಚಂದ್ರು, ಟಿ.ಎಸ್. ನಾಗಾಭರಣ, ಮನು ಬಳಿಗಾರ್, ರಾ.ನಂ. ಚಂದ್ರಶೇಖರ, ವ.ಚ. ಚನ್ನೇಗೌಡ, ಆರ್. ಶೇಷಶಾಸ್ತ್ರಿ ಹಾಗೂ ಎಚ್.ಟಿ.ಪೋತೆ ಜಂಟಿ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಸಂಸ್ಥಾನದ ನೆರವಿನಿಂದ ಸ್ಥಾಪನೆಯಾದ ಎಚ್‌ಎಎಲ್, ನೇಮಕಾತಿಗೆ ಸಂಬಂಧಿಸಿದಂತೆ ಸ್ಥಳೀಯರನ್ನು ಕಡೆಗಣಿಸಿದೆ. ಹೊರ ರಾಜ್ಯದ ಶೇ 90 ರಷ್ಟು ಅಭ್ಯರ್ಥಿಗಳನ್ನು ನಿಶ್ಚಿತ ಅವಧಿಯ ಹುದ್ದೆಗಳಿಗೆ ಆಯ್ಕೆ ಮಾಡಿದೆ. ಸ್ಥಳೀಯ ಕನ್ನಡಿಗರನ್ನು ಉದ್ಯೋಗ ವಂಚಿತರನ್ನಾಗಿಸಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು' ಎಂದು ಕಾರ್ಖಾನೆಯ ಮುಖ್ಯಸ್ಥರನ್ನು ಆಗ್ರಹಿಸಿದ್ದಾರೆ.

'ನೇರವಾಗಿ ಅಂತರ್ಜಾಲದ ಮೂಲಕ ಲಘು ಯುದ್ಧ ವಿಮಾನ (ಎಲ್‌ಸಿಎ) ತೇಜಸ್ ವಿಭಾಗದಲ್ಲಿ 166 ಹುದ್ದೆಗಳಿಗೆ ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಲಿಖಿತ ಪರೀಕ್ಷೆ ನಡೆಸಲಾಗಿದೆ. ಈ ಹುದ್ದೆಗಳಿಗೆ 150ಕ್ಕೂ ಹೆಚ್ಚು ಉತ್ತರ ಭಾರತೀಯರನ್ನು ಆಯ್ಕೆ ಮಾಡಲಾಗಿದೆ. ಫಿಟ್ಟರ್, ಮಷಿನಿಸ್ಟ್, ಎಲೆಕ್ಟ್ರಿಷಿಯನ್ ಹುದ್ದೆಗಳಿಗೂ ಸ್ಥಳೀಯರನ್ನು ಕಡೆಗಣಿಸಿರುವ ಈ ಆಯ್ಕೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಿ, ಹೊಸದಾಗಿ ಬೆಂಗಳೂರು ಸೇರಿದಂತೆ ಕರ್ನಾಟಕ ರಾಜ್ಯದ ಎಲ್ಲ ಜಿಲ್ಲೆಗಳ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಎಚ್‌ಎಎಲ್ ತಾಂತ್ರಿಕ ತರಬೇತಿ ಇಲಾಖೆಯ ಮೂಲಕವೇ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೊಳ್ಳಬೇಕು' ಎಂದು ಒತ್ತಾಯಿಸಿದ್ದಾರೆ.

'ಹಿಂದಿಯ ಬದಲು ಲಿಖಿತ ಪರೀಕ್ಷೆಯ ಪ್ರಶ್ನೆಪತ್ರಿಕೆಯನ್ನು ಕನ್ನಡದಲ್ಲಿ ನೀಡಬೇಕು. ಈ ಬಗ್ಗೆ ರಾಜ್ಯ ಸರ್ಕಾರ ಹಾಗೂ ಇಲ್ಲಿನ ಸಂಸದರು ಮಧ್ಯ ಪ್ರವೇಶಿಸಿ, ಕನ್ನಡಿಗರಿಗೆ ಆಗುತ್ತಿರುವ ವಂಚನೆಯನ್ನು ತಪ್ಪಿಸಬೇಕು' ಎಂದು ಆಗ್ರಹಿಸಿದ್ದಾರೆ.

ನಗರದಲ್ಲಿ ಇಂದು

ಸಿನಿಮೆಟ್ಸ್: ಪ್ರಿಯಾಂಕಾ ಉಪೇಂದ್ರ, ಅಜಯ್ ರಾವ್, ಆಯೋಜನೆ ಮತ್ತು ಸ್ಥಳ: ಜೈನ್ ವಿಶ್ವವಿದ್ಯಾಲಯ, ಲಾಲ್‌ಬಾಗ್ ರಸ್ತೆ, ಬೆಳಿಗ್ಗೆ 9.30



ಪ್ರಿಯಾಂಕ ಉಪೇಂದ್ರ

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ದಿವ್ಯಾ ಪಾಲಾಕ್ಷ, ಅತಿಥಿಗಳು: ಪೂರ್ಣಿಮಾ ರವಿ, ವೈ.ಕೆ. ಸಂಧ್ಯಾ ಶರ್ಮ, ಆಯೋಜನೆ: ರಚನಾ ಡಾನ್ಸ್ ಅಕಾಡೆಮಿ, ಸ್ಥಳ: ಸೇವಾ ಸದನ ಸಭಾಂಗಣ, ಮಲ್ಲೇಶ್ವರ, ಬೆಳಿಗ್ಗೆ 9.30

ಬಜಾಜ್ ಎಂಜಿನಿಯರಿಂಗ್ ಸ್ಕಿಲ್ಸ್ ಟ್ರೈನಿಂಗ್ ಸೆಂಟರ್‌ನ ಉದ್ಘಾಟನೆ: ಅಧ್ಯಕ್ಷತೆ: ಎಂ.ಆರ್. ದೊರೆಸ್ವಾಮಿ, ಅತಿಥಿಗಳು: ಡಾ.ಎಂ.ಸಿ. ಸುಧಾಕರ್, ರವಿ ಕಿರಣ್ ರಾಮಸಾಮಿ, ಡಿ. ಜವಾಹರ್, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ ಮೂರನೇ ಹಂತ, ಬೆಳಿಗ್ಗೆ 10

'ಸರ್ಕ್ಯೂಟ್ಸ್, ಕಂಟ್ರೋಲ್ ಕಮ್ಯುನಿಕೇಶನ್ ಆ್ಯಂಡ್ ಕಂಪ್ಯೂಟಿಂಗ್' ಅಂತರರಾಷ್ಟ್ರೀಯ ಸಮ್ಮೇಳನ: ಅತಿಥಿಗಳು: ದಿಲಿಪ್, ಕೃಷ್ಣಸ್ವಾಮಿ, ಶಂತನು ಮಹಾಪಾತ್ರ, ಅಧ್ಯಕ್ಷತೆ: ಎಂ.ಆರ್. ಸೀತಾರಾಮ್, ಉಪಸ್ಥಿತಿ: ಎಂ.ಆರ್. ರಾಮಯ್ಯ, ಪಾರ್ಶ್ವನಾಥ್ ಎಚ್.ವಿ., ಜಿ. ರಾಮಚಂದ್ರ, ಕರಿಸಿದ್ಧಪ್ಪ, ಎನ್.ವಿ.ಆರ್. ನಾಯ್ಡು, ಆಯೋಜನೆ ಮತ್ತು ಸ್ಥಳ: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಎಂ.ಎಸ್. ರಾಮಯ್ಯನಗರ, ಬೆಳಿಗ್ಗೆ 10.30

ಗಾಂಧಿ ಜಯಂತಿ: ಆಯೋಜನೆ: ಕೇಂದ್ರ ಸಂಸ್ಕೃತಿ ಇಲಾಖೆ, ಸ್ಥಳ: ನ್ಯಾಷನಲ್ ಗ್ಯಾಲರಿ ಆಫ್ ಮಾರ್ಡನ್ ಆರ್ಟ್, ಅರಮನೆ ರಸ್ತೆ, ಸಂಜೆ 4.30

ಡಾ.ಬಿ.ಟಿ. ಲಲಿತಾನಾಯಕ್ ಫೌಂಡೇಶನ್ ಉದ್ಘಾಟನೆ: ನಿಜಗುಣಾನಂದ ಸ್ವಾಮೀಜಿ, ಜಮೀರ್ ಅಹ್ಮದ್ ಖಾನ್, ಅತಿಥಿಗಳು: ಹುಲಿಕಲ್ ನಟರಾಜ್, ಮನು ಬಳಿಗಾರ್, ಎಸ್.ಎಲ್. ಉಮಾದೇವಿ, ಆಯೋಜನೆ: ಡಾ.ಬಿ. ಟಿ. ಲಲಿತಾನಾಯಕ್ ಫೌಂಡೇಶನ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ನವರಾತ್ರಿ ವಿಶೇಷ

ಶರನ್ನವರಾತ್ರಿ ಮಹೋತ್ಸವ: 'ತ್ರಿಪುರಾ ರಹಸ್ಯ' ಉಪನ್ಯಾಸ: ದಿಲೀಪ ಬೆಳ್ಳಾವೆ, ಆಯೋಜನೆ ಮತ್ತು ಸ್ಥಳ: ಅಧ್ಯಾತ್ಮ ಪ್ರಕಾಶ ಕಾರ್ಯಾಲಯ, ತ್ಯಾಗರಾಜನಗರ, ಬೆಳಿಗ್ಗೆ 10ರಿಂದ

ಆಯೋಜನೆ: ಸರ್ಕಲ್ ಮಾರಮ್ಮ ದೇವಸ್ಥಾನ: ಅಲಂಕಾರ: ಆಭರಣ ಅಲಂಕಾರ, ಮಧ್ಯಾಹ್ನ 1.30ಕ್ಕೆ ಸಾಮೂಹಿಕ ಲಲಿತಾ ಸಹಸ್ರನಾಮ ಪಾರಾಯಣ, ಕರ್ನಾಟಕ ಶಾಸ್ತ್ರೀಯ ಗಾಯನ: ರಮಾನಂದ ಮತ್ತು ತಂಡ, ಸ್ಥಳ: ಸರ್ಕಲ್ ಮಾರಮ್ಮ ದೇವಸ್ಥಾನ, ಮಲ್ಲೇಶ್ವರ, ಸಂಜೆ 6.30

ಭಜನೆ: ವಿಜಯನಗರದ ಶ್ರೀಪಾದರಾಜ ಭಜನಾ ಮಂಡಳಿ, ಆಯೋಜನೆ ಮತ್ತು ಸ್ಥಳ: ನಂಜನಗೂಡು ಸ್ವಾಮಿ ಮಠ, ಮಂತ್ರಿ ಮಾಲ್ ಮೆಟ್ರೊ ನಿಲ್ದಾಣ ಮುಂಭಾಗ, ಸಂಜೆ 5

ವಚನ ನವರಾತ್ರಿ: 'ಬಿಡಾಡಿ ಬೊಂತಾದೇವಿಯವರ ಪರಿಚಯ': ರೂಪಾ ಪ್ರಸಾದ್, ಅಧ್ಯಕ್ಷತೆ: ಎಸ್. ಪಿನಾಕಪಾಣಿ, ಆಯೋಜನೆ: ವಚನ ಜ್ಯೋತಿ ಬಳಗ, ಸ್ಥಳ: ಬಸವ ಬೆಳಕು, ಏಳನೇ ಮುಖ್ಯರಸ್ತೆ, ದೊಡ್ಡಬಸ್ತಿ ಮುಖ್ಯರಸ್ತೆ, ಕಲ್ಯಾಣ ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ, ಸಂಜೆ 5

ಮಾತಾ ಅನ್ನಪೂರ್ಣೇಶ್ವರಿ ದೇವಿಗೆ ಬಳೆ ಅಲಂಕಾರ: ಸಮೂಹ ಗಾಯನ: ಉಪಾಸನಾ ಸಂಗೀತ ಶಾಲೆ ವಿದ್ಯಾರ್ಥಿಗಳಿಂದ, ಹಾಡುಗಾರಿಕೆ: ಜಯಶ್ರೀ ಮತ್ತು ತಂಡ, ಆಯೋಜನೆ ಮತ್ತು ಸ್ಥಳ: ಶ್ರೀಮಾತಾ ಅನ್ನಪೂರ್ಣೇಶ್ವರಿ ದೇವಿ, ವಸಂತಪುರ, ಸಂಜೆ 5.30ರಿಂದ

ಆಯೋಜನೆ: ದುರ್ಗಾ ಮಹೇಶ್ವರಮ್ಮ ದೇವಾಲಯ, ಅಲಂಕಾರ: ಮೂಕಾಂಬಿಕಾ ದೇವಿ, ಭಜನೆ: ವಿ.ಎಸ್. ಕೃಷ್ಣನ್ ಮತ್ತು ತಂಡ, ಸ್ಥಳ: ದುರ್ಗಾ ಮಹೇಶ್ವರಮ್ಮ ದೇವಾಲಯ, ಕೃಷ್ಣರಾಜಪುರ, ಸಂಜೆ 6ರಿಂದ

ದಸರಾ ಮಹೋತ್ಸವ: ಸಂಗೀತ ಕಾರ್ಯಕ್ರಮ: ಗಾಯನ: ಭುವನ ಎ., ಪಿಟೀಲು: ರಾಘವೇಂದ್ರ, ಮೃದಂಗ: ಜ್ಯೋತ್ಸ್ನಾ ಹೆಬ್ಬಾರ್, ಸಮೂಹ ನೃತ್ಯ: ಸಾಧನ ಸಂಗಮ ಟ್ರಸ್ಟ್‌ನ ವಿದ್ಯಾರ್ಥಿಗಳು, ಭರತನಾಟ್ಯ ಪ್ರದರ್ಶನ: ಚಂದನಪ್ರಿಯ, ಆಯೋಜನೆ ಮತ್ತು ಸ್ಥಳ: ಲಾಸ್ಯ ವರ್ಧನ ಟ್ರಸ್ಟ್, ಮಲ್ಲೇಶ್ವರ, ಸಂಜೆ 6

ಆಯೋಜನೆ: ವರಸಿದ್ಧಿ ವಿನಾಯಕ ದೇವಾಲಯ: ಅಲಂಕಾರ: ಶ್ರೀಗಂಧ, ಸ್ಥಳ: ವರಸಿದ್ಧಿ ವಿನಾಯಕ ದೇವಾಲಯ, ಕೆನರಾ ಬ್ಯಾಂಕ್ ಕಾಲೊನಿ, ಸಂಜೆ 6.30ರಿಂದ

ಆಯೋಜನೆ: ವೆಂಕಟರಮಣ ಸ್ವಾಮಿ ದೇವಸ್ಥಾನ: ಅಲಂಕಾರ: ಮತ್ಸ್ಯಾವತಾರ ಅಲಂಕಾರ, ಶಾಸ್ತ್ರೀಯ ಗಾಯನ: ಸಂಜನಾ ಯಶವಂತ್ ಮತ್ತು ತಂಡ, ಸ್ಥಳ: ವೆಂಕಟರಮಣ ಸ್ವಾಮಿ ದೇವಸ್ಥಾನ ಕಣಿಯರ ಕಾಲೊನಿ, ಚಾಮರಾಜಪೇಟೆ, ಸಂಜೆ 6.30

ಶರನ್ನವರಾತ್ರಿ ಮತ್ತು ವಿಜಯದಶಮಿ: ದೊಡ್ಡಮ್ಮ ದೇವಿಗೆ ಲಕ್ಷ್ಮಿ ಅಲಂಕಾರ, ಆಯೋಜನೆ ಮತ್ತು ಸ್ಥಳ: ದೊಡ್ಡಮ್ಮ ದೇವಿ ಅಭಿವೃದ್ಧಿ ಸಮಿತಿ, ಚಿಕ್ಕದೇವಸಂದ್ರ, ಕೃಷ್ಣರಾಜಪುರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ

nagaradalli_indu@prajavani.co.in





‘ನಮ್ಮ ಮೆಟ್ರೊ’ ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ–ಮಾದಾವರ ನಿಲ್ದಾಣಗಳ ನಡುವೆ ರೈಲ್ವೆ ಸುರಕ್ಷತಾ ಆಯುಕ್ತರ ನೇತೃತ್ವದಲ್ಲಿ ಗುರುವಾರ ಸುರಕ್ಷತಾ ತಪಾಸಣೆ ನಡೆಯಿತು

ನಾಗಸಂದ್ರ–ಮಾದಾವರ ಮಾರ್ಗದಲ್ಲಿ ಮೆಟ್ರೊ ರೈಲು ಸಂಚಾರ ಸನ್ನಿಹಿತ

ಒಂದೇ ದಿನದಲ್ಲಿ ತಪಾಸಣೆ ಪೂರ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಮ್ಮ ಮೆಟ್ರೊ’ ಹಸಿರು ಮಾರ್ಗದ ವಿಸ್ತರಿತ ಪ್ರದೇಶ ನಾಗಸಂದ್ರ–ಮಾದಾವರ ನಿಲ್ದಾಣಗಳ ನಡುವೆ ಸುರಕ್ಷತಾ ತಪಾಸಣೆಯನ್ನು ರೈಲ್ವೆ ಸುರಕ್ಷತಾ ಆಯುಕ್ತರು ಗುರುವಾರ ಒಂದೇ ದಿನದಲ್ಲಿ ಪೂರ್ಣಗೊಳಿಸಿದ್ದಾರೆ.

ರೈಲ್ವೆ ಸುರಕ್ಷತೆ ದಕ್ಷಿಣ ವೃತ್ತದ ಆಯುಕ್ತ ಅನಂತ್ ಮಧುಕರ್ ಚೌಧರಿ, ಉಪ ಆಯುಕ್ತ ನಿತೀಶ್ ಕುಮಾರ್ ರಂಜನ್ ಮತ್ತು ತಾಂತ್ರಿಕ ತಂಡವು ಮಂಜುನಾಥ ನಗರ, ಚಿಕ್ಕಬಿದರಕಲ್ಲು (ಜಿಂದಾಲ್) ಮತ್ತು ಮಾದಾವರ ಮೆಟ್ರೊ ನಿಲ್ದಾಣಗಳ ತಪಾಸಣೆ, ಹಳಿಗಳ ತಪಾಸಣೆ, ಸಿಗ್ನಲಿಂಗ್ ಪರಿಶೀಲನೆ, ಸಾಮರ್ಥ್ಯ ಪರೀಕ್ಷೆ ಸಹಿತ ವಿವಿಧ ಪರೀಕ್ಷೆಗಳನ್ನು ನಡೆಸಿತು. ತಾಂತ್ರಿಕ ತಂಡ ಮತ್ತು ದಾಖಲೆ ಪರಿಶೀಲನೆ ತಂಡಗಳು ಬೆಳಿಗ್ಗೆಯಿಂದ ಸಂಜೆವರೆಗೆ ವಿವಿಧ ತಪಾಸಣೆಗಳನ್ನು ನಡೆಸಿದವು.

‘ಗುರುವಾರ ಮತ್ತು ಶುಕ್ರವಾರ ಪರಿಶೀಲನೆಗೆ ದಿನ ನಿಗದಿಯಾಗಿತ್ತು. ಒಂದೇ ದಿನದಲ್ಲಿ ಪರೀಕ್ಷೆಗಳನ್ನು ನಡೆಸಿದ ತಂಡವು ವಿಸ್ತರಿತ ಮಾರ್ಗದ ಗುಣಮಟ್ಟದ ಬಗ್ಗೆ ತೃಪ್ತಿ ವ್ಯಕ್ತಪಡಿಸಿದೆ. ಕೆಲವು ಸಣ್ಣ ಸಣ್ಣ ಬದಲಾವಣೆಗಳ ಬಗ್ಗೆ ಸಲಹೆಗಳನ್ನು ನೀಡಿದೆ. ಕೆಲವೇ ದಿನಗಳಲ್ಲಿ ವಾಣಿಜ್ಯ (ಸಾರ್ವಜನಿಕ) ಸಂಚಾರಕ್ಕೆ ಅನುಮತಿ ಸಿಗುವ ನಿರೀಕ್ಷೆ ಇದೆ’ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ರೈಲ್ವೆ ಸುರಕ್ಷತಾ ಆಯುಕ್ತರಿಂದ ಅನುಮತಿ ಪತ್ರ ಬಂದ ಬಳಿಕ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸೂಚಿಸಿದ ದಿನ ಮೆಟ್ರೊ ರೈಲು ಸಂಚಾರ ಆರಂಭಗೊಳ್ಳಲಿದೆ ಎಂದು ಮಾಹಿತಿ ನೀಡಿದ್ದಾರೆ.

ಹಳ್ಳಿ ಸಮಸ್ಯೆಗೆ ‘ವಿಡಿಪಿ’ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಜನರ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ‘ಹಳ್ಳಿಗಳ ಅಭಿವೃದ್ಧಿ ಯೋಜನೆ (ವಿಡಿಪಿ) ಸಿದ್ಧಪಡಿಸಿ, ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ ಎಂದು ಕೆಎಸ್‌ಎಸ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್‌ಮೆಂಟ್ ಕಾಲೇಜಿನ ಪ್ರಾಂಶುಪಾಲ ಕೆ. ರಾಮನರಸಿಂಹ ಹೇಳಿದರು.

ಕೇಂದ್ರ ಮಾನವ ಸಂಪನ್ಮೂಲ ಮತ್ತು ಅಭಿವೃದ್ಧಿ ಸಚಿವಾಲಯ, ಉನ್ನತ ಭಾರತ ಅಭಿಯಾನದ ಸಹಯೋಗದಲ್ಲಿ ಕಗ್ಗಲೀಪುರ ಗ್ರಾಮ ಪಂಚಾಯಿತಿಗೆ ಒಳಪಟ್ಟ ಉತ್ತರಿ, ಕಗ್ಗಲೀಪುರ ಹಾಗೂ ಒ.ಬಿ. ಚೂಡಹಳ್ಳಿಯ ಮನೆಗಳಲ್ಲಿ ವಿದ್ಯಾರ್ಥಿಗಳು ಸಮೀಕ್ಷೆ ನಡೆಸಿದ ನಂತರ ಅವರು ಮಾಹಿತಿ ನೀಡಿದರು.

ಹಳ್ಳಿಗಳಲ್ಲಿ ಹಲವು ಸಮಸ್ಯೆಗಳು ಇಂದಿಗೂ ಜೀವಂತವಾಗಿವೆ. ದಶಕಗಳ ಸಮಸ್ಯೆಗೆ ಪರಿಹಾರ ದೊರೆತಿಲ್ಲ. ಮೊದಲ ಹಂತದಲ್ಲಿ ದತ್ತು ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಸಮೀಕ್ಷೆ ನಡೆಸಲಾಗಿದೆ.



ಹಳ್ಳಿಗಳ ಅಭಿವೃದ್ಧಿ ಯೋಜನೆ (ವಿಡಿಪಿ) ಸಿದ್ಧಪಡಿಸಲು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿದ ಪ್ರಾಂಶುಪಾಲ ಕೆ.ರಾಮನರಸಿಂಹ ನೇತೃತ್ವದ ತಂಡ

ಭಾರತೀಯ ವಿಜ್ಞಾನ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕರಾದ ಕೆ.ಎಸ್. ಜಗದೀಶ್, ಬಿ.ಕೆ. ರಘುಪ್ರಸಾದ್ ಮಾರ್ಗದರ್ಶನದಲ್ಲಿ ಶಿಸ್ತುಬದ್ಧ, ವೈಜ್ಞಾನಿಕ ಸಮೀಕ್ಷಾ ವರದಿ ಸಿದ್ಧಪಡಿಸ ಲಾಗಿದೆ. ಪರಿಹಾರಾತ್ಮಕ ಅಂಶಗಳನ್ನು ಒಳಗೊಂಡ ಈ ವರದಿಯನ್ನು ಶೀಘ್ರ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದರು.

ಕಮ್ಮವಾರಿ ಸಂಘದ ಅಧ್ಯಕ್ಷ ಆರ್. ರಾಜಗೋಪಾಲ್ ನಾಯ್ಡು, ಕಾರ್ಯದರ್ಶಿ ಲೀಲಾ ಶಂಕರ್‌ರಾವ್, ಖಜಾಂಚಿ ಟಿ. ನೀರಜಾಕ್ಷುಲು ನಾಯ್ಡು, ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಕೆ.ವಿ.ಎ. ಬಾಲಾಜಿ, ಎಂಜಿನಿಯರ್ ವಿಜಯಲಕ್ಷ್ಮಿ ಅಕೆಲ್ಲಾ, ಕಗ್ಗಲೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಫರ್ವೀಜ್, ಸದಸ್ಯರಾದ ಅನುಪಾ, ಲಕ್ಷ್ಮೀ ನಾರಾಯಣ್, ಸಿ.ಕೆ. ವಿಶ್ವನಾಥ್ ಮತ್ತಿತರರು ಭಾಗವಹಿಸಿದ್ದರು.

ರಾಜ್ಯೋತ್ಸವ ಪ್ರಶಸ್ತಿ 8 ಸಾವಿರಕ್ಕೂ ಅಧಿಕ ಶಿಫಾರಸು

ಬೆಂಗಳೂರು: ರಾಜ್ಯೋತ್ಸವ ಪ್ರಶಸ್ತಿಗೆ ಈ ಬಾರಿ 2 ಸಾವಿರಕ್ಕೂ ಅಧಿಕ ಕಲಾವಿದರ ಪರವಾಗಿ 8 ಸಾವಿರಕ್ಕೂ ಹೆಚ್ಚು ಶಿಫಾರಸುಗಳು ಸಲ್ಲಿಕೆಯಾಗಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2024ನೇ ಸಾಲಿನ ರಾಜ್ಯೋತ್ಸವ ಪ್ರಶಸ್ತಿಗೆ ಸಾಧಕರ ಹೆಸರನ್ನು ನಾಮನಿರ್ದೇಶನ ಮಾಡಲು ಸೆಪ್ಟೆಂಬರ್ 1ರಿಂದ ಸೆ.30 ರವರೆಗೆ ಅವಕಾಶ ಕಲ್ಪಿಸಿತ್ತು. ಕರ್ನಾಟಕ ರಾಜ್ಯೋತ್ಸವದ 69ನೇ ವರ್ಷಾಚರಣೆ ಅಂಗವಾಗಿ ಈ ಬಾರಿ 69 ಸಾಧಕರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲಾಗುತ್ತಿದೆ.

ಸೇವಾ ಸಿಂಧು ಪೋರ್ಟಲ್ ಮೂಲಕ ಏಳು ಸಾವಿರಕ್ಕೂ ಅಧಿಕ ಹಾಗೂ ನೇರವಾಗಿ 800 ಅರ್ಜಿಗಳು ಸಲ್ಲಿಕೆಯಾಗಿವೆ. ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಅಧ್ಯಕ್ಷತೆಯ ಸಮಿತಿ ಪರಿಶೀಲನೆ ನಡೆಸಿ, ಸಾಧಕರನ್ನು ಆಯ್ಕೆ ಮಾಡಲಿದೆ ಎಂದು ಇಲಾಖೆ ಮೂಲಗಳು ತಿಳಿಸಿವೆ.

ಪ್ರಶಸ್ತಿಯು ತಲಾ ₹ 5 ಲಕ್ಷ ನಗದು ಹಾಗೂ 25 ಗ್ರಾಂ ಚಿನ್ನದ ಪದಕ ಒಳಗೊಂಡಿರಲಿದೆ.

ಸುಳ್ಳುಗಳನ್ನು ಹೇಳುವ ಮೂಲಕ ದೊಡ್ಡವರಾಗಲು ಯತ್ನಿಸುತ್ತಿದ್ದಾರೆ: ಅಶೋಕ

ನಾನು ಆರೋಪ ಮುಕ್ತ, ಸಿಎಂ ಆಪಾದಿತರು

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ನಾನು ಆರೋಪ ಮುಕ್ತ. ನ್ಯಾಯಾಲಯ ಮತ್ತು ಜನಪ್ರತಿನಿಧಿ ನ್ಯಾಯಾಲಯವೂ ನಿರ್ದೋಷಿ ಎಂದಿದೆ. ಆದರೆ, ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪದಿಂದ ಮುಕ್ತರಾಗಿಲ್ಲ. ಅವರು ತನಿಖೆ ಎದುರಿಸಬೇಕಾಗಿದೆ’ ಎಂದು ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

‘ನನ್ನನ್ನು ಭೂ ಕಬಳಿಕೆದಾರ ಎಂದು ಕರೆದಿರುವ ಕಾಂಗ್ರೆಸ್‌ನ ನಾಲ್ವರು ಸಚಿವರು ನೈತಿಕತೆಯ ಪ್ರಶ್ನೆ ಎತ್ತಿದ್ದಾರೆ. ಅವರು ನ್ಯಾಯಾಲಯದ ತೀರ್ಪನ್ನು ಮುಚ್ಚಿಟ್ಟು, ಸುಳ್ಳುಗಳನ್ನು ಹೇಳುವ ಮೂಲಕ ದೊಡ್ಡವರಾಗಲು ಯತ್ನಿಸುತ್ತಿದ್ದಾರೆ’ ಎಂದು ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

‘ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಅರಿಶಿನ- ಕುಂಕುಮದ ಮೂಲಕ ಭೂಮಿ ಬಂದಿದೆ. ಆದರೆ, ನಾನು ಹಣ ಕೊಟ್ಟು ಭೂಮಿ ಖರೀದಿ ಮಾಡಿದ್ದೆ. ಈ ಪ್ರಕರಣದ ಬಗ್ಗೆ ಆರೋಪ ಬಂದಾಗ ಯುಪಿಎ ಸರ್ಕಾರ ನೇಮಿಸಿದ್ದ ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಇದ್ದರು. ಅವರು ಕೂಡ ಈ ಪ್ರಕರಣವನ್ನು ತನಿಖೆಗೆ ವಹಿಸಲಿಲ್ಲ’ ಎಂದು ಅಶೋಕ ಹೇಳಿದರು.

‘ನಾನು ಆರೋಪಗಳಿಂದ ಮುಕ್ತನಾ-ಗಿದ್ದೇನೆ. ಆದರೆ ಸಿದ್ದರಾಮಯ್ಯ ಅವರ ಮುಡಾ ಹಗರಣ ತನಿಖೆಯಾಗಬೇಕಾದ ಪ್ರಕರಣ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. ತೀರ್ಪು ಬಂದ ಬಳಿಕ ಮುಖ್ಯಮಂತ್ರಿಯವರು ಭಯಗೊಂಡು ನಿವೇಶನಗಳನ್ನು ಹಿಂತಿರುಗಿಸಿದ್ದಾರೆ. ಆದರೆ, ನಾನು ಕೋರ್ಟ್ ಆದೇಶ ಬರುವುದಕ್ಕೂ ಮುನ್ನವೇ ನಿವೇಶನ ಹಿಂತಿರುಗಿಸಿದ್ದೇನೆ. ಜನಪ್ರತಿನಿಧಿ-ಗಳ ನ್ಯಾಯಾಲಯ ಕೂಡ ನನ್ನನ್ನು ಆರೋಪ ಮುಕ್ತ ಮಾಡಿದೆ. ಆದರೆ, ಸಿದ್ದರಾಮಯ್ಯ ಇನ್ನೂ ಆರೋಪ ಮುಕ್ತವಾಗಿಲ್ಲ’ ಎಂದರು. ‘ಮುನಿವೆಂಕಟಪ್ಪ ಅವರು ವಿಲ್ ತಯಾರಿಸಿ ಅವರ ಮಕ್ಕಳಿಗೆ ಆಸ್ತಿ ಕೊಟ್ಟಿದ್ದಾರೆ. ಆ ಕುಟುಂಬದಲ್ಲಿ 20 ಜನರಿದ್ದು, ನನ್ನ ಹೆಸರಿಗೆ ನೋಂದಣಿ ಆದಾಗ 20 ಜನರೂ ಸಹಿ ಹಾಕಿದ್ದಾರೆ. ಇದು ಹೇಗೆ ಬೇನಾಮಿ ಆಗುತ್ತದೆ’ ಎಂದು ಪ್ರಶ್ನಿಸಿದರು.

‘ಸುಮಾರು 1 ಎಕರೆ ಜಾಗ ಹೊರವರ್ತುಲ ರಸ್ತೆಯ ಪಕ್ಕದಲ್ಲಿದೆ. ರಸ್ತೆಗೆ ಅಗತ್ಯವಿರುವ ಭೂಮಿ ಪಡೆದು ಉಳಿದಿದ್ದನ್ನು ಡಿನೋಟಿಫೈ ಮಾಡಲು ತೀರ್ಮಾನಿಸಲಾಗಿತ್ತು ಎಂದು ಆಗ ಮುಖ್ಯಮಂತ್ರಿ ಆಗಿದ್ದ ಎಸ್.ಎಂ.ಕೃಷ್ಣ ಅವರೇ ಹೇಳಿದ್ದರು. ಈ ಭೂಮಿ ಶೇ 70 ರಷ್ಟು ಬಿಡಿಎಗೆ ಶೇ 30 ರಷ್ಟು ಮಾಲೀಕರಿಗೆ ಹಂಚಿಕೆಯಾಗಿದೆ. ಬಿಡಿಎಗೇ ಹೆಚ್ಚು ಲಾಭವಾಗಿದೆ. ಉಳಿದ ಜಮೀನು ಅಗತ್ಯವಿಲ್ಲ ಎಂದು ಸರ್ಕಾರವೇ ಮಾಲೀಕರಿಗೆ ವಾಪಸ್ ಮಾಡಿತ್ತು. ಎಲ್ಲವೂ ಕಾನೂನು ಪ್ರಕಾರವೇ ನಡೆದಿದೆ’ ಎಂದರು.

ಯತ್ನಾಳರೇ ಬೀದಿಯಲ್ಲಿ ಮಾತನಾಡುವುದು ನಿಲ್ಲಿಸಿ: ಹಾಲಪ್ಪ



ಬೆಂಗಳೂರು: ‘ಬಸನಗೌಡ ಪಾಟೀಲ ಯತ್ನಾಳರೇ ಅಧ್ಯಕ್ಷರ ವಿರುದ್ಧ ಹಾದಿ–ಬೀದಿಯಲ್ಲಿ ಮಾತನಾಡಬೇಡಿ. ನಾವೂ ರಸ್ತೆಯಲ್ಲೇ ಉತ್ತರ ನೀಡಬೇಕಾಗುತ್ತದೆ. ಹೈಕಮಾಂಡಿಗೆ ದೂರು ಕೊಡಬೇಕಾಗುತ್ತದೆ’ ಎಂದು ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಹರತಾಳು ಹಾಲಪ್ಪ ಅವರು ಹೇಳಿದರು.

‘ಬಿ.ವೈ.ವಿಜಯೇಂದ್ರ ಅವರನ್ನು ಪಕ್ಷದ ವರಿಷ್ಠರು ಅಧ್ಯಕ್ಷರನ್ನಾಗಿ ನೇಮಕ ಮಾಡಿದ್ದಾರೆ. ಅದನ್ನು ವಿರೋಧಿಸುವುದು ಎಂದರೆ, ವರಿಷ್ಠರನ್ನೇ ಪ್ರಶ್ನಿಸಿದಂತೆ. ಯಡಿಯೂರಪ್ಪ ಮಗ ಎನ್ನುವ ಒಂದೇ ಕಾರಣಕ್ಕೆ ವಿರೋಧಿಸುತ್ತಿರುವುದು ಸರಿಯಲ್ಲ’ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ಯತ್ನಾಳ ಅವರ ಜೊತೆಗಿರುವ ನಾಲ್ಕರಿಂದ– ಐವರು ನಾಯಕರು ತಮ್ಮ ಸಮಸ್ಯೆಗಳನ್ನು ಪಕ್ಷದ ಹಿರಿಯರ ಜತೆ ಕುಳಿತು ಚರ್ಚಿಸಿ ಬಗೆಹರಿಸಿಕೊಳ್ಳಬೇಕು. ಬೇಕಾಬಿಟ್ಟಿ ಮಾತನಾಡುವುದನ್ನು ನಿಲ್ಲಿಸಬೇಕು. ಪ್ರತಿನಿತ್ಯ ವಿಜಯೇಂದ್ರ ಅವರನ್ನು ಟೀಕಿಸುವುದು ಅವರಿಗೆ ಅಭ್ಯಾಸವಾಗಿದೆ’ ಎಂದರು.

‘ಎಲ್ಲರ ಸಲಹೆ ಪಡೆದು ವಿಜಯೇಂದ್ರ ಅವರನ್ನು ರಾಜ್ಯ ಅಧ್ಯಕ್ಷರನ್ನಾಗಿ ಮಾಡಲಾಗಿದೆ. ಒಂದು ಸಾವಿರ ಕೋಟಿ ಇಟ್ಟುಕೊಂಡಿದ್ದಾರೆ ಎಂದೆಲ್ಲ ಬಾಂಬ್ ಹಾಕುತ್ತಾರೆ. ಇದರಿಂದ ಪಕ್ಷದ ಕಾರ್ಯಕರ್ತರಿಗೆ ಇರಿಸುಮುರಿಸು ಆಗುತ್ತದೆ. ಕೆ.ಎಸ್. ಈಶ್ವರಪ್ಪ ಅವರ ಜೊತೆ ಖಾಸಗಿ ಕಾರ್ಯಕ್ರಮಕ್ಕೆ ಹೋಗಿ ಬಾಂಬ್ ಹಾಕಿದ್ದಾರೆ. ಪಕ್ಷದಿಂದ ಉಚ್ಚಾಟಿಸಲಾಗಿರುವ ಈಶ್ವರಪ್ಪ ಅವರನ್ನು ಮುಖ್ಯಮಂತ್ರಿ ಮಾಡುವುದಾಗಿ ಹೇಳುವುದು ಎಷ್ಟರ ಮಟ್ಟಿಗೆ ಸರಿ’ ಎಂದು ಹಾಲಪ್ಪ ಪ್ರಶ್ನಿಸಿದರು.

‘ಒಕ್ಕಲಿಗರ ಸಂಘದ ಬೈ–ಲಾಗೆ ತಿದ್ದುಪಡಿ’

ಬೆಂಗಳೂರು: ‘ಪದಾಧಿಕಾರಿಗಳ ವಿರುದ್ಧ ಪದೇಪದೇ ಅವಿಶ್ವಾಸ ನಿರ್ಣಯ ಮಂಡಿಸುವುದನ್ನು ತಪ್ಪಿಸುವ ಸಲುವಾಗಿ ಸಂಘದ ಬೈ–ಲಾಗೆ ತಿದ್ದುಪಡಿ ತರಲು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಒಕ್ಕಲಿಗರ ಸಂಘದ ಉಪಾಧ್ಯಕ್ಷ ಆರ್. ಪ್ರಕಾಶ್ ತಿಳಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನೂತನ ಪದಾಧಿಕಾರಿಗಳು ಆಯ್ಕೆಯಾದ 15 ದಿನಗಳಲ್ಲೇ ಅವಿಶ್ವಾಸ ನಿರ್ಣಯ ಮಂಡಿಸಲಾಗಿತ್ತು. ಇದರ ವಿರುದ್ಧ ನ್ಯಾಯಾಲಯದ ಮೆಟ್ಟಿಲು ಏರಲಾಗಿತ್ತು. ‘ಪದಾಧಿಕಾರಿಗಳು ಆಯ್ಕೆಯಾಗಿ ಒಂದು ವರ್ಷದವರೆಗೆ ಅವಿಶ್ವಾಸ ನಿರ್ಣಯ ಮಂಡಿಸುವಂತಿಲ್ಲ ಎಂದು ನಿಯಮಗಳಿಗೆ ತಿದ್ದುಪಡಿ ತರುವುದು ಸೂಕ್ತ ಎಂದು ಹೈಕೋರ್ಟ್ ಹೇಳಿತ್ತು’ ಎಂದರು.

ಪುಸ್ತಕ ಆಯ್ಕೆ: ಆಕ್ಷೇಪಣೆ ಸಲ್ಲಿಕೆಗೆ ಅವಕಾಶ

ಬೆಂಗಳೂರು: ಸಾರ್ವಜನಿಕ ಗ್ರಂಥಾಲಯ ಇಲಾಖೆಯು ಏಕಗವಾಕ್ಷಿ ಯೋಜನೆಯಡಿ ಆಯ್ಕೆಯಾದ 2021ನೇ ಸಾಲಿನ ಪುಸ್ತಕಗಳ ಪಟ್ಟಿ ಹಾಗೂ ಪುಸ್ತಕಗಳ ಪ್ರದರ್ಶನವನ್ನು ಶುಕ್ರವಾರ ಹಾಗೂ ಶನಿವಾರ ಹಮ್ಮಿಕೊಂಡಿದೆ.

ಬೆಂಗಳೂರಿನ ಹಂಪಿನಗರದ ನಗರ ಕೇಂದ್ರ ಗ್ರಂಥಾಲಯದಲ್ಲಿ ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ಎರಡು ದಿನಗಳು ಪುಸ್ತಕಗಳ ಪ್ರದರ್ಶನ ನಡೆಯಲಿದೆ. ಪುಸ್ತಕ ಸಲ್ಲಿಸಿದ ಲೇಖಕರು, ಪ್ರಕಾಶಕರು, ಮತ್ತು ಪುಸ್ತಕ ಮಾರಾಟಗಾರರು ಆಕ್ಷೇಪಣೆಗಳಿದ್ದಲ್ಲಿ ಇದೇ 9ರ ಸಂಜೆ 5.30ರೊಳಗೆ ಆಯುಕ್ತರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, 4ನೇ ಮಹಡಿ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560 001 ಈ ವಿಳಾಸಕ್ಕೆ ಲಿಖಿತವಾಗಿ ಮನವಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

20 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ: ಕೆನರಾ ಬ್ಯಾಂಕ್

ನ. 24ಕ್ಕೆ 2ನೇ ಆವೃತ್ತಿಯ ಮ್ಯಾರಥಾನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೋಗ್ಯಪೂರ್ಣ ಜೀವನ ಮತ್ತು ಏಕತೆಗಾಗಿ ಕೆನರಾ ಬ್ಯಾಂಕ್‌ನಿಂದ ನವೆಂಬರ್ 24ರಂದು ನಗರದಲ್ಲಿ ಎರಡನೇ ಆವೃತ್ತಿಯ ಮ್ಯಾರಥಾನ್ ಆಯೋಜಿಸಲಾಗಿದೆ. ಸಾರ್ವಜನಿಕರು ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕಿದೆ’ ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಕೋರಿದ್ದಾರೆ.

ನಗರದ ಟೌನ್‌ಹಾಲ್ ಬಳಿಯ ಬ್ಯಾಂಕ್‌ನ ಪ್ರಧಾನ ಕಚೇರಿ ಆವರಣದಲ್ಲಿ ಗುರುವಾರ ಮ್ಯಾರಥಾನ್-2024ರ ಟೀ ಶರ್ಟ್ ಅನ್ನು ಬಿಡುಗಡೆ ಮಾಡಿದ ಬಳಿಕ ಅವರು ಮಾತನಾಡಿದರು.

ಈ ಮ್ಯಾರಥಾನ್ ಸಮುದಾಯ ಆರೋಗ್ಯ, ದೈಹಿಕ ಮತ್ತು ಮಾನಸಿಕ ಸದೃಢತೆಗೆ ಪ್ರಾಮುಖ್ಯತೆ ನೀಡಲಿದೆ. ಕಳೆದ ವರ್ಷ ಆಯೋಜಿಸಿದ್ದ ಮ್ಯಾರಥಾನ್‌ನಲ್ಲಿ 10 ಸಾವಿರ ಜನರು ಪಾಲ್ಗೊಂಡಿದ್ದರು. ಈ ಬಾರಿ 20 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸುವ ನಿರೀಕ್ಷೆ ಇದೆ. ಈಗಾಗಲೇ, 15 ಸಾವಿರ ಜನರು ಹೆಸರು ನೋಂದಣಿ ಮಾಡಿಕೊಂಡಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕರಾದ ಭವೇಂದ್ರಕುಮಾರ್, ಅಶೋಕ್ ಚಂದ್ರ, ದೇಬಾಶಿಷ್ ಮುಖರ್ಜಿ, ಹರ್ದೀಪ್ ಸಿಂಗ್ ಅಹ್ಲುವಾಲಿಯಾ ಹಾಜರಿದ್ದರು.

ಗೊಂಬೆ ಪ್ರದರ್ಶನ: ನಾಡಹಬ್ಬ ದಸರಾ ಅಂಗವಾಗಿ ಬ್ಯಾಂಕ್‌ನಲ್ಲಿ ಗೊಂಬೆಗಳ ಪ್ರದರ್ಶನ ಏರ್ಪಡಿಸಲಾಗಿತ್ತು.



ಎರಡನೇ ಆವೃತ್ತಿಯ ಮ್ಯಾರಥಾನ್–2024ರ ಅಂಗವಾಗಿ ಬೆಂಗಳೂರಿನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ.ಸತ್ಯನಾರಾಯಣ ರಾಜು ಅವರು, ಮ್ಯಾರಥಾನ್ ಟೀ–ಶರ್ಟ್ ಅನ್ನು ಬಿಡುಗಡೆ ಮಾಡಿದರು. ಬ್ಯಾಂಕ್‌ನ ಹಿರಿಯ ಅಧಿಕಾರಿಗಳು ಇದ್ದರು

ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸುತ್ತೋಲೆ

ಪಿಯು ಪ್ರಾಯೋಗಿಕ ಪರೀಕ್ಷೆಗೆ ಅನ್ಯಕಾಲೇಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ವಿದ್ಯಾರ್ಥಿಗಳು ತಾವು ಕಲಿಯುತ್ತಿರುವ ಕಾಲೇಜಿನಲ್ಲೇ ಪ್ರಾಯೋಗಿಕ ಪರೀಕ್ಷೆಗೆ ಇನ್ನುಮುಂದೆ ಹಾಜರಾಗುವಂತಿಲ್ಲ.

ಈ ಕುರಿತು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಸುತ್ತೋಲೆ ಹರಡಿಸಿದೆ.

ಪ್ರಾಯೋಗಿಕ ಪರೀಕ್ಷೆಗಳನ್ನು ಇದುವರೆಗೂ ಆಯಾ ಕಾಲೇಜುಗಳಲ್ಲೇ ನಡೆಸಲಾಗುತ್ತಿತ್ತು. 2023–24ನೇ ಸಾಲಿನಿಂದ ಪ್ರಾಯೋಗಿಕ ಪರೀಕ್ಷೆ ಹಾಗೂ ಆಂತರಿಕ ಮೌಲ್ಯಮಾಪನಕ್ಕೆ ಪ್ರತ್ಯೇಕ ಅಂಕಗಳನ್ನು ನಿಗದಿ ಮಾಡಲಾಗಿದೆ.

ಭೌತ ವಿಜ್ಞಾನ, ರಸಾಯನ ವಿಜ್ಞಾನ, ವಿದ್ಯುನ್ಮಾನ ವಿಜ್ಞಾನ, ಗಣಕ ವಿಜ್ಞಾನ, ಗೃಹ ವಿಜ್ಞಾನ ಸೇರಿದಂತೆ ಪ್ರತಿ ವಿಷಯದ ಪ್ರಾಯೋಗಿಕ ಪರೀಕ್ಷೆಗೂ 30 ಅಂಕ ಹಾಗೂ ಇತರೆ ವಿಷಯಗಳಿಗೆ 20 ಅಂಕ ನಿಗದಿ ಮಾಡಲಾಗಿದೆ. ಉಳಿದ 70 ಹಾಗೂ 80 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಸಲಾಗುತ್ತಿದೆ. ಪ್ರಾಯೋಗಿಕ ಪರೀಕ್ಷೆಗಳನ್ನು ಅದೇ ಕಾಲೇಜುಗಳಲ್ಲೇ ನಡೆಸುವುದರಿಂದ ಎಲ್ಲರಿಗೂ ಗರಿಷ್ಠ ಅಂಕ ನೀಡಲಾಗುತ್ತಿದೆ. ಹಾಗಾಗಿ, ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಒಂದು ಕಾಲೇಜಿನಲ್ಲಿ ಕಲಿಯುವ ವಿದ್ಯಾರ್ಥಿಗಳು ಹಂಚಿಕೆ ಮಾಡಿದ ಇತರೆ ಕಾಲೇಜಿಗಳಿಗೆ ತೆರಳಿ ಪ್ರಾಯೋಗಿಕ ಪರೀಕ್ಷೆ ಎದುರಿಸಬೇಕು ಎಂದು ಸುತ್ತೋಲೆಯಲ್ಲಿ ವಿವರಿಸಲಾಗಿದೆ. ಪ್ರಾಯೋಗಿಕ ಪರೀಕ್ಷೆಗಳಿಗೆ ಪರೀಕ್ಷಾ ಕೇಂದ್ರಗಳಾಗಿ ಗೊತ್ತುಪಡಿಸಬಹುದಾದ ಕಾಲೇಜು ಗಳನ್ನು ಶಿಫಾರಸು ಮಾಡುವಂತೆ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಿಗೆ ಮಂಡಳಿ ಸೂಚಿಸಿದೆ.

ಉಪನ್ಯಾಸಕರ ವಿರೋಧ: ಮಂಡಳಿಯ ನಿರ್ಧಾರವನ್ನು ಕರ್ನಾಟಕ ರಾಜ್ಯ ಪದವಿಪೂರ್ವ ಕಾಲೇಜು ಉಪನ್ಯಾಸಕರ ಸಂಘ ಖಂಡಿಸಿದ್ದು, ಸುತ್ತೋಲೆಯನ್ನು ವಾಪಸ್ ಪಡೆಯುವಂತೆ ಪತ್ರ ಬರೆದಿದೆ.

‘ಮಂಡಳಿಯ ನಿರ್ಧಾರ ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾರಕವಾಗಲಿದೆ. ಗ್ರಾಮೀಣ ಭಾಗದಲ್ಲಿ ಒಂದು ಕಾಲೇಜಿಗೂ ಮತ್ತೊಂದು ಕಾಲೇಜಿಗೂ ಸಾಕಷ್ಟು ಅಂತರ ಇರುತ್ತದೆ. ಪ್ರತಿ ವಿಷಯದ ಪ್ರಾಯೋಗಿಕ ಪರೀಕ್ಷೆಗೂ ವಿದ್ಯಾರ್ಥಿಗಳನ್ನು ಕರೆದುಕೊಂಡು ಹೋಗಿ ಬರುವುದು ಕಷ್ಟವಾಗುತ್ತದೆ. ಸಾರಿಗೆ ಸಮಸ್ಯೆಯಿಂದಾಗಿ ಪರೀಕ್ಷೆಗೆ ಗೈರಾಗುವ ಸಾಧ್ಯತೆಯೂ ಇರುತ್ತದೆ. ಕಡಿಮೆ ವಿದ್ಯಾರ್ಥಿಗಳಿರುವ ಕಾಲೇಜುಗಳಲ್ಲಿ ಸುಸಜ್ಜಿತ ಪ್ರಯೋಗಾಲಯಗಳ ಕೊರತೆ ಇರಬಹುದು’ ಎಂದು ಸಂಘದ ಅಧ್ಯಕ್ಷ ಎ.ಎಚ್. ನಿಂಗೇಗೌಡ ದೂರಿದ್ದಾರೆ.

ಸುತ್ತೋಲೆಯನ್ನು ಹಿಂಪಡೆಯಲು ಒತ್ತಾಯ

ಮಂಗಳೂರು: ದ್ವಿತೀಯ ಪದವಿ ಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಪರೀಕ್ಷೆಯನ್ನು ಬೇರೆ ಕಾಲೇಜುಗಳಲ್ಲಿ ಆಯೋಜಿಸುವಂತೆ ಸೂಚಿಸಿ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಳಿ (ಕೆಎಸ್‌ಇಎಬಿ) ಮಂಗಳವಾರ ಹೊರಡಿಸಿರುವ ಸುತ್ತೋಲೆ ಯನ್ನು ಹಿಂಪಡೆಯುವಂತೆ ಕರ್ನಾಟಕ ರಾಜ್ಯ ಖಾಸಗಿ ಅನುದಾನ ರಹಿತ ಪದವಿ ಪೂರ್ವ ಕಾಲೇಜುಗಳ ಆಡಳಿತ ಮಂಡಳಿಗಳ ಸಂಘವು (ಕುಪ್ಮ) ಒತ್ತಾಯಿಸಿದೆ.

ಇಷ್ಟು ವರ್ಷ ದ್ವಿತೀಯ ಪಿ.ಯು. ವಿದ್ಯಾರ್ಥಿಗಳು ತಾವು ಕಲಿತ ಕಾಲೇಜಿ ನಲ್ಲೇ ದ್ವಿತೀಯ ಪಿ.ಯು ಪ್ರಾಯೋಗಿಕ ಪರೀಕ್ಷೆಯನ್ನೂ ಬರೆಯುತ್ತಿದ್ದರು. ಆಯಾ ಪಿ.ಯು. ಕಾಲೇಜಿನ ಉಸ್ತುವಾರಿಯಲ್ಲಿ ಬಾಹ್ಯ ಪರೀಕ್ಷಾ ವೀಕ್ಷಕರು ಪ್ರಾಯೋಗಿಕ ಪರೀಕ್ಷೆ ನಡೆಸುತ್ತಿದ್ದರು. ಯಾವುದೇ ಪೂರ್ವ ತಯಾರಿ ಇಲ್ಲದೇ, ಸಂಬಂಧಪಟ್ಟವರಿಂದ ಸಲಹೆಯನ್ನೂ ಪಡೆಯದೆ ಈಗಿನ ಪದ್ಧತಿಯನ್ನು ಬದಲಿಸಲು ಕೆಎಸ್‌ಇಎಬಿ ಹೊರಡಿಸಿರುವ ಸುತ್ತೋಲೆಯು ಅವೈಜ್ಞಾನಿಕ ಎಂದು ಕುಪ್ಮ ಆರೋಪಿಸಿದೆ.

‘ಪಿ.ಯು. ಪ್ರಾಯೋಗಿಕ ಪರೀಕ್ಷೆಗಳು ನಡೆಯುವ ಸಮಯದಲ್ಲಿ ಜೆಇಇ ಮೇನ್ ಸ್ಪರ್ಧಾತ್ಮಕ ಪರೀಕ್ಷೆಗಳು ನಡೆಯುತ್ತವೆ. ಪಿ.ಯು. ಪ್ರಾಯೋಗಿಕ ಪರೀಕ್ಷೆ ಹಾಜರಾಗುವ ವಿದ್ಯಾರ್ಥಿ ಬೇರೆ ಕಾಲೇಜುಗಳಿಗೆ ಹೋಗಿ ಬರುವುದಕ್ಕೆ ಸಮಯವೂ ವ್ಯರ್ಥವಾಗುತ್ತದೆ.

ಕಾಲೇಜಿನ ಶೈಕ್ಷಣಿಕ ವಾತಾವರಣಕ್ಕೆ ಹೊಂದಿಕೊಂಡಿರುವ ವಿದ್ಯಾರ್ಥಿಗಳು ಪಾಯೋಗಿಕ ಪರೀಕ್ಷೆಗಾಗಿ ಬೇರೆ ಕಾಲೇಜುಗಳಿಗೆ ಹೋಗಬೇಕೆಂದಾಗ ಅವರಲ್ಲಿ ಮಾನಸಿಕ ತಳಮಳವೂ ಉಂಟಾಗುತ್ತದೆ. ಕೆಲವು ಪಿ.ಯು. ಕಾಲೇಜುಗಳಲ್ಲಿ ಪ್ರಾಯೋಗಿಕ ಪರೀಕ್ಷೆ ನಡೆಸಲು ಅಗತ್ಯವಿರುವ ಮೂಲಸೌಕರ್ಯಗಳು ಇರುವುದಿಲ್ಲ. ಪ್ರಯೋಗಕ್ಕೆ ಬೇಕಾಗುವ ಉಪಕರಣಗಳ ಕೊರತೆ ಇರುತ್ತದೆ’ ಎಂದು ಕುಪ್ಮದ ಅಧ್ಯಕ್ಷ ಡಾ.ಎಂ.ಮೋಹನ ಆಳ್ವ ಹಾಗೂ ಕಾರ್ಯದರ್ಶಿ ನರೇಂದ್ರ ಎಲ್. ನಾಯಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಲಬಾರ್ ಗ್ರೂಪ್‌ನಿಂದ ವಿದ್ಯಾರ್ಥಿ ವೇತನ ಘೋಷಣೆ



‘ರಾಷ್ಟ್ರೀಯ ವಿದ್ಯಾರ್ಥಿ ವೇತನ’ ಕಾರ್ಯಕ್ರಮವನ್ನು ಕೇಂದ್ರ ಸಚಿವ ಪಿಯೂಷ್ ಗೋಯಲ್ ಅವರು ಉದ್ಘಾಟಿಸಿದರು.

ಬೆಂಗಳೂರು: ಮಲಬಾರ್ ಗೋಲ್ಡ್ ಮತ್ತು ಡೈಮಂಡ್ಸ್ ಸಮೂಹದ ಪೋಷಕ ಸಂಸ್ಥೆ ಮಲಬಾರ್ ಗ್ರೂಪ್ ಭಾರತೀಯ ವೈವಿಧ್ಯಮಯ ಕಂಪನಿಗಳಲ್ಲಿ ಒಂದಾಗಿದೆ. ಈ ಸಂಸ್ಥೆ ತನ್ನ ‘ರಾಷ್ಟ್ರೀಯ ವಿದ್ಯಾರ್ಥಿ ವೇತನ’ ಕಾರ್ಯಕ್ರಮದಡಿ 2024ನೇ ಸಾಲಿನ ವಿದ್ಯಾರ್ಥಿ ವೇತನಗಳನ್ನು ಘೋಷಿಸಿದೆ.

ಮುಂಬೈನ ಬಿಕೆಸಿಯ ಭಾರತ್ ಡೈಮಂಡ್ ಬೋರ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿ ವೇತನಗಳನ್ನು ಘೋಷಣೆ ಮಾಡಿದ ಸಂಸ್ಥೆಯಿಂದ ದೇಶಾದ್ಯಂತ ಈ ವರ್ಷ 21,000 ಕ್ಕೂ ಅಧಿಕ ಹೆಣ್ಣು ಮಕ್ಕಳಿಗೆ ₹16 ಕೋಟಿ ನೆರವು ನೀಡಲಾಗುತ್ತಿದೆ.

ಸಿಎಸ್‌ಆರ್ ಉಪಕ್ರಮದಡಿ ಮಲಬಾರ್ ನ್ಯಾಷನಲ್ ಸ್ಕಾಲರ್‌ಶಿಪ್ ಪ್ರೋಗ್ರಾಂ ಇದಾಗಿದ್ದು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಬೆಂಬಲ ನೀಡುವಂತಹ ಕಾರ್ಯಕ್ರಮವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪಿಯೂಷ್ ಗೋಯಲ್ ಅವರು ಉದ್ಘಾಟಿಸಿದರು.

ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹ್ಮದ್, ಭಾರತದ ಕಾರ್ಯಾಚರಣೆಗಳ ವ್ಯವಸ್ಥಾಪಕ ನಿರ್ದೇಶಕ ಅಶರ್. ಒ, ಉಪಾಧ್ಯಕ್ಷ ಕೆ.ಪಿ. ಅಬ್ದುಲ್ ಸಲಾಂ, ಕಾರ್ಯಕಾರಿ ನಿರ್ದೇಶಕ ನಿಶಾದ್ ಎ.ಕೆ. ಮತ್ತು ಮಹೇಂದ್ರ ಬ್ರದರ್ಸ್ ನಿರ್ದೇಶಕ ಶೌನಕ್ ಪಾರಿಖ್ ಸೇರಿದಂತೆ ಹಲವಾರು ಗಣ್ಯರು ಉಪಸ್ಥಿತರಿದ್ದರು.

ಶಿಕ್ಷಣ ಒಂದು ಶಕ್ತಿಶಾಲಿ ಸಾಧನ: ಮಲಬಾರ್ ಗ್ರೂಪ್ ಅಧ್ಯಕ್ಷ ಎಂ.ಪಿ. ಅಹ್ಮದ್ ಅವರು ಈ ಉಪಕ್ರಮದ ಬಗ್ಗೆ ಮಾತನಾಡಿ, ‘ಜಗತ್ತಿನ ಬದಲಾವಣೆಗೆ ಶಿಕ್ಷಣ ಒಂದು ಶಕ್ತಿಶಾಲಿ ಸಾಧನ’ವಾಗಿದೆ. ನಮ್ಮ ವಿದ್ಯಾರ್ಥಿ ವೇತನ ಕಾರ್ಯಕ್ರಮವು ಶಿಕ್ಷಣದಲ್ಲಿ ಅವಕಾಶಗಳನ್ನು ತೆರೆಯುತ್ತದೆ ಮತ್ತು ಜೀವನವನ್ನು ಪರಿವರ್ತಿಸುತ್ತದೆ ಎಂಬ ಮಲಬಾರ್ ಗ್ರೂಪ್‌ನ ನಂಬಿಕೆಯ ಪ್ರತಿಬಿಂಬವಾಗಿದೆ.

ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಈ ಕಾರ್ಯಕ್ರಮದ ಆರಂಭದಿಂದ ಮಲಬಾರ್ ಗ್ರೂಪ್, ತನ್ನ ಸಾಮಾಜಿಕ ಕಲ್ಯಾಣ ಚಟುವಟಿಕೆಗಳ ಮೂಲಕ ಒಟ್ಟಾರೆ ಪ್ರಗತಿಯ ಬದ್ಧತೆಯನ್ನು ಪ್ರದರ್ಶಿಸುತ್ತಾ ಬಂದಿದೆ. 1999 ರಲ್ಲಿ ಸ್ಥಾಪನೆ ಮಾಡಲಾದ ಮಲಬಾರ್ ಚಾರಿಟೇಬಲ್ ಟ್ರಸ್ಟ್ (ಎಂಸಿಟಿ) ಕಾರ್ಯಕ್ರಮಕ್ಕೊಂದು ರೂಪ ಕೊಟ್ಟಿದ್ದಲ್ಲದೇ, ಇದರ ವ್ಯಾಪ್ತಿ ವಿಸ್ತಾರ ಮಾಡಲು ಎಲ್ಲ ಕ್ರಮ ಕೈಗೊಳ್ಳುತ್ತಿದೆ.

ಪಾಕ್‌ನ ಮತ್ತೊಂದು ಕುಟುಂಬ ಬಂಧನ

ಪ್ರಜಾವಾಣಿ ವಾರ್ತೆ


ಜಿಗಣಿ ಪೊಲೀಸರು ಪೀಣ್ಯದಲ್ಲಿ ಗುರುವಾರ ಬಂಧಿಸಿದ ಪಾಕಿಸ್ತಾನ ಕುಟುಂಬದ ಮೂವರನ್ನು ಗುರುವಾರ ಆನೇಕಲ್ ನ್ಯಾಯಾಲಯಕ್ಕೆ ಕರೆತಂದರು

ಆನೇಕಲ್: ಜಿಗಣಿಯಲ್ಲಿ ಐದು ದಿನಗಳ ಹಿಂದೆ ಬಂಧಿಸಲಾದ ಪಾಕಿಸ್ತಾನ ಕುಟುಂಬ ಸದಸ್ಯರು ವಿಚಾರಣೆ ವೇಳೆ ಬಾಯ್ಬಿಟ್ಟ ಮಾಹಿತಿ ಬೆನ್ನಟ್ಟಿದ ಜಿಗಣಿ ಪೊಲೀಸರು ಗುರುವಾರ ಬೆಂಗಳೂರಿನ ಪೀಣ್ಯದಲ್ಲಿ ಒಂದೇ ಕುಟುಂಬದ ಮೂವರು ಪಾಕಿಸ್ತಾನಿಯರನ್ನು ಬಂಧಿಸಿದ್ದಾರೆ.

ಬಂಧಿತರು ಪಾಕಿಸ್ತಾನದ ಕರಾಚಿ ನಿವಾಸಿಗಳಾದ ತಾರೀಖ್ ಸಯೀದ್, ಆತನ ಪತ್ನಿ ಅನಿಲ ಸಯೀದ್ ಮತ್ತು ಮಗಳು ಇಶ್ರತ್ ಸಯೀದ್ ಎಂದು ತಿಳಿದು ಬಂದಿದೆ. ಈ ಮೂವರೊಂದಿಗೆ ಬೆಂಗಳೂರಿನಲ್ಲಿ ನೆಲಸಿದ್ದ ಪಾಕಿಸ್ತಾನದ ಒಟ್ಟು ಏಳು ಪ್ರಜೆಗಳನ್ನೂ ಬಂಧಿಸಿದಂತಾಗಿದೆ.

ಭಾನುವಾರ ರಾತ್ರಿ ಜಿಗಣಿಯ ರಾಜಾಪುರ ಬಡಾವಣೆಯಲ್ಲಿ ಬಂಧಿಸಲಾದ ರಷೀದ್, ತಮ್ಮೊಂದಿಗೆ ಭಾರತಕ್ಕೆ ಬಂದಿದ್ದ ಮತ್ತೊಂದು ಕುಟುಂಬ ಬೆಂಗಳೂರಿನ ಪೀಣ್ಯದಲ್ಲಿ ನೆಲಸಿದೆ ಎಂದು ವಿಚಾರಣೆ ವೇಳೆ ಬಾಯ್ಬಿಟ್ಟಿದ್ದ. ಈ ಸುಳಿವು ಆಧರಿಸಿ ಡಿವೈಎಸ್‌ಪಿ ಮೋಹನ್, ಜಿಗಣಿ ಠಾಣೆ ಇನ್‌ಸ್ಪೆಕ್ಟರ್ ಮಂಜುನಾಥ್ ನೇತೃತ್ವದ ತಂಡ ಪೀಣ್ಯದ ಮನೆಯೊಂದರರಲ್ಲಿ ನೆಲೆಸಿದ್ದ ಮೂವರನ್ನು ವಶಕ್ಕೆ ಪಡೆಯಿತು.

ಬಂಧಿತರನ್ನು ಜಿಗಣಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯಕೀಯ ತಪಾಸಣೆ ನಡೆಸಿ, ಆನೇಕಲ್ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆರೋಪಿಗಳನ್ನು ಹತ್ತು ದಿನ ಪೊಲೀಸ್ ಕಸ್ಟಡಿಗೆ ನೀಡಿದೆ.

ಬಾಂಗ್ಲಾದೇಶದ ಮೂಲಕ ಕೇರಳಕ್ಕೆ ಬಂದಿದ್ದ ಆರೋಪಿಗಳು ಅಲ್ಲಿಂದ ದಾವಣಗೆರೆಗೆ ಹೋಗಿ ಅಲ್ಲಿ ಒಂದು ವರ್ಷ ನೆಲೆಸಿದ್ದರು. ನಾಲ್ಕು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಪೀಣ್ಯದಲ್ಲಿ ಬಾಡಿಗೆ ಮನೆ ಪಡೆದು ವಾಸವಾಗಿದ್ದರು ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಪಾಕ್ ಪೌರತ್ವ; ಭಾರತೀಯ ಹೆಸರು

ಬಂಧಿತರು ಪಾಕಿಸ್ತಾನದ ಕರಾಚಿಯವರಾಗಿದ್ದು ಹೆಸರು ಬದಲಿಸಿಕೊಂಡು ಆಧಾರ್ ಕಾರ್ಡ್, ಡ್ರೈವಿಂಗ್ ಲೈಸನ್ಸ್, ಪಾಸ್‌ಪೋರ್ಟ್ ಪಡೆದಿದ್ದಾರೆ.

ಪೀಣ್ಯದ ಬಾಡಿಗೆ ಮನೆಯೊಂದರಲ್ಲಿ ವಾಸವಾಗಿದ್ದ ಕುಟುಂಬ ಯೂನಸ್ ಅಲ್ಗೋರ್ ಧರ್ಮಗುರು ಪರ ಪ್ರಚಾರಕ್ಕಾಗಿ ಭಾರತಕ್ಕೆ ಬಂದಿದ್ದಾರೆ ಎಂದು ತಿಳಿದು ಬಂದಿದೆ. ಕುಟುಂಬದ ಮುಖ್ಯಸ್ಥ ತಾರೀಖ್ ಸಯೀದ್ ತನ್ನ ಹೆಸರನ್ನು ಸನ್ನಿ ಚೌಹಾಣ್ ಎಂದು ಮತ್ತು ಆತನ ಪತ್ನಿ ಅನಿಲ ಸಯೀದ್, ದೀಪಾ ಚೌಹಾಣ್ ಎಂಬ ಹೆಸರಿನಲ್ಲಿ ಆಧಾರ್, ಪಾಸ್‌ಪೋರ್ಟ್ ಪಡೆದಿದ್ದಾರೆ. ಪಾಕಿಸ್ತಾನದಿಂದ ಒಟ್ಟು ಏಳು ಮಂದಿ ಬೆಂಗಳೂರಿಗೆ ಬಂದಿದ್ದು, ಎಲ್ಲ ಏಳು ಮಂದಿ ಸೆರೆ ಸಿಕ್ಕಂತಾಗಿದೆ. ಉಳಿದವರು ಅಸ್ಸಾಂ, ಒಡಿಶಾ, ಚೆನ್ನೈ, ದೆಹಲಿ ಮತ್ತು ಹೈದರಾಬಾದ್‌ನಲ್ಲಿ ನೆಲಸಿರುವ ಮಾಹಿತಿ ಇದೆ. ಅಲ್ಲಿ ಯೂನಸ್ ಅಲ್ಗೋರ್ ಧರ್ಮಗುರು ಪರ ಪ್ರಚಾರ ದಲ್ಲಿ ತೊಡಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ತುಮಕೂರು ಜಿಲ್ಲೆಯ ಬಹುತೇಕ ಕಡೆ ಭಾರಿ ಮಳೆ; ಬೆಳೆ ನಾಶ

ಕೋಡಿ ಹರಿದ ಕೆರೆ, ತುಂಬಿ ಹರಿದ ನದಿ

ಪ್ರಜಾವಾಣಿ ವಾರ್ತೆ


ಕೋಡಿ ಬಿದ್ದ ಮಧುಗಿರಿ ತಾಲ್ಲೂಕಿನ ಸಿದ್ದಾಪುರ ಕೆರೆ

ಬೆಂಗಳೂರು ಗ್ರಾಮಾಂತರ/ತುಮಕೂರು: ತುಮಕೂರು ಜಿಲ್ಲೆಯ ಬಹುತೇಕ ಕಡೆ ಬುಧವಾರ ರಾತ್ರಿಯಿಡಿ ಸುರಿದ ಉತ್ತಮ ಮಳೆಗೆ ಹೆಚ್ಚಿನ ಕೆರೆಕಟ್ಟೆಗಳು ತುಂಬಿ ಹರಿದಿವೆ. ಮಧುಗಿರಿ ತಾಲ್ಲೂಕು ಪುರವರದಲ್ಲಿ ಅತಿಹೆಚ್ಚು 7.9 ಸೆಂ.ಮೀ ಹಾಗೂ ಹೊಳವನಹಳ್ಳಿಯಲ್ಲಿ 6.8 ಸೆಂ.ಮೀ ಮಳೆಯಾಗಿದೆ.

ಹೇಮಾವತಿ ನದಿ ನೀರಿನಿಂದ ತುಂಬಿದ್ದ ಸಿದ್ಧಾಪುರ ಹಾಗೂ ಚೋಳೇನಹಳ್ಳಿ ಕೆರೆಗಳು ಸೇರಿದಂತೆ ಮಧುಗಿರಿ ತಾಲ್ಲೂಕಿನ ಹಲವು ಕೆರೆಗಳು ಬುಧವಾರ ರಾತ್ರಿ ಸುರಿದ ಮಳೆಗೆ ಕೋಡಿ ಬಿದ್ದಿವೆ. ಕೋಡಿ ಬಿದ್ದ ನೀರಿನಲ್ಲಿ ಮೀನು ಹಿಡಿಯಲು ಜನರು ತಂಡೋಪ ತಂಡವಾಗಿ ಬರುತ್ತಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೊಡ್ಡಬಳ್ಳಾಪುರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗುತ್ತಿರುವುದರಿಂದ ಕುಮದ್ವತಿ ಮತ್ತು ಜಯಮಂಗಲಿ ನದಿಗಳು ತುಂಬಿ ಹರಿಯುತ್ತಿವೆ. ಗೌರಿಬಿದನೂರು ತಾಲ್ಲೂಕಿನ ಹಂಪಸಂದ್ರ ಗ್ರಾಮದ ಬಳಿ ಕುಮುದ್ವತಿ ನದಿ ಸೇತುವೆ ಮೇಲೆ ಹರಿಯುತ್ತಿದೆ. ಹಲವು ಗ್ರಾಮಗಳ ಸಂಪರ್ಕ ಕಡಿತಗೊಂಡಿದೆ.

ಗೌರಿಬಿದನೂರಿನ ಕೆಲವೆಡೆ ಮನೆಗಳಿಗೆ ನೀರು ನುಗ್ಗಿದೆ. ಭಾರಿ ಗಾಳಿ, ಮಳೆಗೆ ಟ್ರಾನ್ಸ್‌ಫಾರ್ಮರ್ ಮತ್ತು ಮರಗಳು ರಸ್ತೆಗೆ ಉರುಳಿ ಬಿದ್ದಿವೆ.ಬಾಳೆ ಗಿಡ, ಕಟಾವಿಗೆ ಬಂದಿದ್ದ ಮೆಕ್ಕೆಜೋಳ ಸೇರಿದಂತೆ ಹಲವು ಬೆಳೆಗಳು ನೆಲಕಚ್ಚಿವೆ.

ಕೋಲಾರ ಜಿಲ್ಲೆಯಲ್ಲಿ ಬುಧವಾರ ತಡ ರಾತ್ರಿವರೆಗೆ ಧಾರಾಕಾರ ಮಳೆಯಾಗಿತ್ತು. ಗುರುವಾರ ಬೆಳಗ್ಗೆ ಎಂದಿನಂತೆ ಬಿಸಿಲ ಧಗೆ ಇತ್ತು. ಸಂಜೆಯಾಗುತ್ತಿದ್ದಂತೆ ಮತ್ತೆ ಮೋಡ ಕವಿದು ಬಿರುಸಿನ ಮಳೆ ಸುರಿಯಿತು. ಸುಮಾರು ಮುಕ್ಕಾಲು ತಾಸು ಮಳೆ ಬಂತು.

ಮಾಲೂರು ತಾಲ್ಲೂಕಿನ ಲಕ್ಕಿಸಾಗರ ಗ್ರಾಮದ ಬಳಿ ಹೊಲಗಳಿಗೆ ನೀರು ನುಗ್ಗಿ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಕಾರಿಡಾರ್‌ನ ಅವೈಜ್ಞಾನಿಕ ಕಾಮಗಾರಿಯಿಂದ ಹೊಲಗಳಿಗೆ ನೀರು ನುಗ್ಗಿದೆ ಎಂದು ರೈತರು ದೂರಿದ್ದಾರೆ.

ನೆಲಕ್ಕಚ್ಚಿದ ಭತ್ತ (ಕೊಪ್ಪಳ ವರದಿ): ಜಿಲ್ಲಾ ಕೇಂದ್ರದಲ್ಲಿ ಗುರುವಾರ ರಾತ್ರಿ ಉತ್ತಮವಾಗಿ ಮಳೆ ಸುರಿದಿದೆ. ಗಂಗಾವತಿ ತಾಲ್ಲೂಕಿನ ಕೇಸಕ್ಕಿ ಹಂಚಿನಾಳ, ಮಸಾರಿಕ್ಯಾಂಪ್, ಹಳೆಗುಳದಾಳ ಗ್ರಾಮದಲ್ಲಿ ಬುಧವಾರ ರಾತ್ರಿ ಸುರಿದ ಆಲಿಕಲ್ಲು ಮಳೆಗೆ ಭತ್ತದ ಬೆಳೆ ನೆಲಕ್ಕಚ್ಚಿದೆ. ಕೆಲ ಗ್ರಾಮಗಳಲ್ಲಿ ಮಳೆಗೆ ಮನೆಗಳು ಬಿದ್ದಿದ್ದು, 100ಕ್ಕೂ ಹೆಚ್ಚು ಎಕರೆ ಭತ್ತದ ಜಮೀನಿಗೆ ಹಾನಿಯಾಗಿದೆ. ತಾವರಗೇರಾದಲ್ಲಿಯೂ ಚೆನ್ನಾಗಿ ಮಳೆ ಬಂದಿದೆ.

ಸಿಡಿಲು ಬಡಿದು ಮಹಿಳೆ ಸಾವು (ಜಾಲಹಳ್ಳಿ, ರಾಯಚೂರು ಜಿಲ್ಲೆ): ದೇವದುರ್ಗ ತಾಲ್ಲೂಕಿನ ಎಚ್. ಸಿದ್ದಾಪುರ ಗ್ರಾಮ ಪಂಚಾಯಿತಿ ವ್ಯಾಪ್ತಿ ಯ ಅಣಜೇರದೊಡ್ಡಿಯಲ್ಲಿ ಬುಧವಾರ ರಾತ್ರಿ ಸಿಡಿಲು ಬಡಿದು ಬಸಮ್ಮ ಮುದಕಪ್ಪ ಮುರಾಳ(55) ಮೃತಪಟ್ಟಿದ್ದಾರೆ. ಮುರಾಳ ಕುಟುಂಬದವರು ಕೃಷಿ ಜಮೀನಲ್ಲಿಯೇ ಅಶ್ರಯ ಮನೆ ಕಟ್ಟಿಕೊಂಡು ವಾಸವಾಗಿದ್ದಾರೆ. ರಾತ್ರಿ ಗುಡುಗು ಸಹಿತ ಭಾರಿ ಮಳೆಯಾಗಿದೆ. ಆಗ ಸಿಡಿಲು ಬಡಿದು ಬಸಮ್ಮ ಸ್ಥಳದಲೇ ಮೃತಪಟ್ಟಿದ್ದು, ಮಗ ಗರುಡಪ್ಪ ನಾಯಕ ಅವರಿಗೂ ಸಣ್ಣ, ಪುಟ್ಟ ಗಾಯಗಳಾಗಿವೆ. ಜಾಲಹಳ್ಳಿ ಸರ್ಕಾರಿ ಸಮುದಾಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವಘಡದಲ್ಲಿ ಎಮ್ಮೆಯೂ ಮೃತಪಟ್ಟಿದೆ. ಜಾಲಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘7, 9ರಂದು ಗೃಹಲಕ್ಷ್ಮಿ ಹಣ ಜಮೆ’


ಲಕ್ಷ್ಮಿ ಹೆಬ್ಬಾಳಕರ

ಮೂಡಲಗಿ(ಬೆಳಗಾವಿ ಜಿಲ್ಲೆ): ‘ತಾಂತ್ರಿಕ ಕಾರಣಗಳಿಂದ ವಿಳಂಬವಾಗಿದ್ದ ಗೃಹ ಲಕ್ಷ್ಮಿ ಯೋಜನೆಯ ಜುಲೈ ಮತ್ತು ಆಗಸ್ಟ್ ತಿಂಗಳ ಕಂತಿನ ಹಣ ಅಕ್ಟೋಬರ್ 7 ಮತ್ತು 9ರಂದು ಫಲಾನುಭವಿಗಳ ಖಾತೆಗೆ ಜಮೆ ಆಗಲಿದೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಹೇಳಿದರು.

ತಾಲ್ಲೂಕಿನ ಕಲ್ಲೋಳಿಯಲ್ಲಿ ಗುರುವಾರ ನವರಾತ್ರಿ ಉತ್ಸವಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ‘ದಸರಾ ಹಬ್ಬದ ವೇಳೆ, ಎರಡು ಕಂತಿನ ಹಣ ನಿಮಗೆಲ್ಲ ಸಿಗಲಿದೆ. ಭರ್ಜರಿಯಾಗಿ ಹೋಳಿಗೆ ಊಟ ಮಾಡಿ. ಅದೇ ನನಗೆ ಸಂತೋಷ’ ಎಂದರು.

‘ಲಕ್ಷ್ಮಿ ಹೆಬ್ಬಾಳಕರ ತಾವು ಹಿಡಿದ ಕೆಲಸ ಮಾಡದೇ ಬಿಡುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಈಚೆಗೆ ನಡೆದ ಕಾರ್ಯಕ್ರಮದಲ್ಲಿ ಹೇಳಿದ್ದಾರೆ. ಹಾಗಾಗಿ ‘ಗೃಹಲಕ್ಷ್ಮಿ’ ಯೋಜನೆ ಬಗ್ಗೆ ಯಾರೂ ಆತಂಕ ಪಡಬೇಕಿಲ್ಲ. ಪಟ್ಟು ಹಿಡಿದು ಈ ಯೋಜನೆ ಆರಂಭಿಸಿದ್ದೇನೆ. ಇದನ್ನು ಸಮರ್ಪಕವಾಗಿ ಜಾರಿಗೊಳಿಸುತ್ತಿದ್ದೇನೆ’ ಎಂದು ತಿಳಿಸಿದರು.

ಗ್ರಾ.ಪಂ. ಸೇವೆ ಇಂದಿನಿಂದ ಬಂದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಬಲವರ್ಧನೆ ಮತ್ತು ಪಂಚಾಯಿತಿ ಅಧಿಕಾರಿಗಳು ಹಾಗೂ ನೌಕರರ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಗ್ರಾಮ ಪಂಚಾಯಿತಿಗಳ ಅಧಿಕಾರಿಗಳು, ನೌಕರರು ಮತ್ತು ಸದಸ್ಯರು ಜೊತೆಗೂಡಿ ಶುಕ್ರವಾರದಿಂದ ಅನಿರ್ದಿಷ್ಟಾವಧಿ ಧರಣಿ ನಡೆಸಲಿದ್ದಾರೆ. ಇದರಿಂದಾಗಿ ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳು ಸ್ತಬ್ಧವಾಗಲಿವೆ.

ಪಿಡಿಒ, ಕಾರ್ಯದರ್ಶಿಗಳು, ಕರ ವಸೂಲಿಗಾರರು, ಗುಮಾಸ್ತರು ಮತ್ತು ಡಾಟಾ ಎಂಟ್ರಿ ಆಪರೇಟರ್‌ಗಳು, ನೀರಗಂಟಿಗಳು, ಜವಾನರು, ಸ್ವಚ್ಛತಾ ಕೆಲಸಗಾರರು, ದ್ವಿತೀಯ ದರ್ಜೆ ಸಹಾಯಕರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಗೆಜೆಟೆಡ್ ಅಧಿಕಾರಿಗಳು ಮತ್ತು ಗ್ರಾ. ಪಂ. ಸದಸ್ಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ನಡೆಯುವ ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ. ರಾಜ್ಯದ ವಿವಿಧ ಜಿಲ್ಲೆಗಳ ಗ್ರಾ.ಪಂ. ಅಧಿಕಾರಿಗಳು, ನೌಕರರು ಮತ್ತು ಸದಸ್ಯರು ಗುರುವಾರವೇ ರಾಜ್ಯ ರಾಜಧಾನಿಯತ್ತ ಹೊರಟಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಎಲ್ಲ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ನೇತೃತ್ವದಲ್ಲಿ ಹೋರಾಟ ನಡೆಯಲಿದೆ. ಪಿಡಿಒ ಹುದ್ದೆಗಳನ್ನು ‘ಬಿ’ ಗುಂಪಿನ ಹುದ್ದೆಗಳಾಗಿ ಉನ್ನತೀಕರಿಸುವುದು, ಜ್ಯೇಷ್ಠತಾ ಪಟ್ಟಿ ಅಂತಿಮಗೊಳಿಸುವುದು, ವಿವಿಧ ವೃಂದಗಳ ನೌಕರರಿಗೆ ಸಕಾಲಕ್ಕೆ ಬಡ್ತಿ ನೀಡುವುದು, ಕಾರ್ಮಿಕರ ರಾಜ್ಯ ವಿಮೆ ಮತ್ತು ಭವಿಷ್ಯ ನಿಧಿ ನೀಡುವುದು, ನೇರ ನೇಮಕಾತಿಯಲ್ಲಿ ಆದ್ಯತೆ ನೀಡುವುದು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳ ಹುದ್ದೆಗಳಲ್ಲಿ ಪಂಚಾಯತ್ ರಾಜ್ ಇಲಾಖೆಯ ಗೆಜೆಟೆಡ್ ಅಧಿಕಾರಿಗಳಿಗೆ ಮೀಸಲು ನೀಡಬೇಕೆಂಬ ಬೇಡಿಕೆಗಳನ್ನು ಅಧಿಕಾರಿಗಳು, ನೌಕರರು ಮುಂದಿಟ್ಟಿದ್ದಾರೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯ್ದೆಯಲ್ಲಿರುವ ಜವಾಬ್ದಾರಿ ನಕ್ಷೆಯಂತೆ ಗ್ರಾಮ ಪಂಚಾಯಿತಿಗಳಿಗೆ ಅಧಿಕಾರ ನೀಡುವುದು,ಕರ್ನಾಟಕ ಅಭಿವೃದ್ಧಿ ಸಭೆಗಳ ಬಲವರ್ಧನೆ ಮಾಡುವುದು, ಸ್ಥಾಯಿ ಸಮಿತಿಗಳಿಗೆ ಹೆಚ್ಚಿನ ಅಧಿಕಾರ ನೀಡುವುದು, ಗ್ರಾಮ ಪಂಚಾಯಿತಿಗಳ ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಸದಸ್ಯರನ್ನು ರಾಜ್ಯ ಶಿಷ್ಟಾಚಾರದ ವ್ಯಾಪ್ತಿಗೆ ತರುವುದು, ಕೇರಳ ಮಾದರಿಯಲ್ಲಿ ವೇತನ ಪಾವತಿ ಸೇರಿದಂತೆ ಹಲವು ಬೇಡಿಕೆಗಳನ್ನು ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟ ಮಂಡಿಸಿದೆ.

‘ನಮ್ಮ ಬೇಡಿಕೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸದೇ ಇರುವುದರಿಂದ ಅನಿರ್ದಿಷ್ಟಾವಧಿ ಧರಣಿ ಆರಂಭಿಸುತ್ತಿದ್ದೇವೆ. ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಶುಕ್ರವಾರದಿಂದ ಯಾವುದೇ ಸೇವೆ ದೊರಕುವುದಿಲ್ಲ. 40,000ಕ್ಕೂ ಹೆಚ್ಚು ಮಂದಿ ಹೋರಾಟದಲ್ಲಿ ಭಾಗವಹಿಸಲಿದ್ದಾರೆ’ ಎಂದು ರಾಜ್ಯ ಪಿಡಿಒ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರೂ ಆಗಿರುವ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳು ಮತ್ತು ನೌಕರರ ಎಲ್ಲ ವೃಂದ ಸಂಘಗಳು ಹಾಗೂ ಗ್ರಾಮ ಪಂಚಾಯಿತಿ ಸದಸ್ಯರ ಒಕ್ಕೂಟದ ಅಧ್ಯಕ್ಷ ರಾಜು ವಾರದ ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

ಜಾತಿಗಣತಿ ಬಹಿರಂಗಕ್ಕೆ ಸಚಿವರು, ಶಾಸಕರ ಪಟ್ಟು

ಬೆಂಗಳೂರು: ರಾಜ್ಯ ಹಿಂದುಳಿದ ವರ್ಗಗಳ ಆಯೋಗ ನಡೆಸಿದ್ದ ‘ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ’ (ಜಾತಿ ಗಣತಿ) ವರದಿಯನ್ನು ಅಂಗೀಕರಿಸಿ, ಬಹಿರಂಗ ಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸಲು ಹಿಂದುಳಿದ ಸಮುದಾಯದ ಸಚಿವರು, ಕಾಂಗ್ರೆಸ್ ಶಾಸಕರು ನಿರ್ಧರಿಸಿದ್ದಾರೆ.

ನಗರದ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಗುರುವಾರ ಸಭೆ ಸೇರಿದ ಸಮುದಾಯದ ಪ್ರಮುಖರು, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಅವಧಿಯಲ್ಲಿ ನಡೆದ ಸಮೀಕ್ಷೆ, ಜಯಪ್ರಕಾಶ ಹೆಗ್ಡೆ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಸಲ್ಲಿಕೆಯಾದ ಆ ಸಮೀಕ್ಷೆಯ ವರದಿಯನ್ನು ಅಂಗೀಕರಿಸುವಂತೆ ರಾಜ್ಯ ಸರ್ಕಾರದ ಮೇಲೆ ಒತ್ತಡ ಹೇರುವ ನಿಟ್ಟಿನಲ್ಲಿ ಮುಂದಿನ ನಡೆಯ ಬಗ್ಗೆ ಚರ್ಚೆ ನಡೆಸಿದರು. ಅಲ್ಲದೆ, ಮುಂಬರುವ ಜಿ.ಪಂ, ತಾ.ಪಂ ಚುನಾವಣೆಯಲ್ಲಿ ಹಿಂದುಳಿದ ಸಮುದಾಯಕ್ಕೆ ಮೀಸಲಾತಿ ಕಲ್ಪಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಲು ಕೂಡಾ ಸಭೆ ತೀರ್ಮಾನಿಸಿದೆ.

ಸಭೆ ಬಳಿಕ ಮಾತನಾಡಿದ ಮಾಜಿ ಸಚಿವ ಎಚ್.ಎಂ. ರೇವಣ್ಣ, ‘ಮುಡಾ ಪ್ರಕರಣಕ್ಕೂ ನಮ್ಮ ಸಭೆಗೂ ಯಾವುದೇ ಸಂಬಂಧ ಇಲ್ಲ. ಜಾತಿಗಣತಿ ವರದಿ ಅಂಗೀಕರಿಸಿ, ಬಿಡುಗಡೆ ಮಾಡುವಂತೆ ಸರ್ಕಾರಕ್ಕೆ ಒತ್ತಾಯಿಸಲು ನಾವು ನಿರ್ಣಯ ತೆಗೆದುಕೊಂಡಿದ್ದೇವೆ. ಇದೇ 7ರಂದು ಭೇಟಿಗೆ ಮುಖ್ಯಮಂತ್ರಿ ಸಮಯ ನೀಡಿದ್ದಾರೆ. ಅಂದು ಅವರನ್ನು ಭೇಟಿ ಮಾಡಿ ಜಾತಿ ಗಣತಿ ವರದಿಯನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವಂತೆ ಮನವಿ ಮಾಡುತ್ತೇವೆ’ ಎಂದರು.

ಸಚಿವರಾದ ಸಂತೋಷ್ ಲಾಡ್, ಬೈರತಿ ಸುರೇಶ್, ವಿಧಾನ ಪರಿಷತ್ ಸದಸ್ಯೆ ಉಮಾಶ್ರೀ ಸಭೆಯಲ್ಲಿ ಇದ್ದರು.

‘ಮುಂದಿನ ದಿನಗಳಲ್ಲಿ ಈ ವರದಿಯನ್ನು ಸಚಿವ ಸಂಪುಟದ ಮುಂದೆ ಇಟ್ಟು, ಶಿಫಾರಸ್ಸುಗಳ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗುವುದು’ ಎಂದು ಇತ್ತೀಚೆಗೆ ಮುಖ್ಯಮಂತ್ರಿ ಹೇಳಿದ್ದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಆದರ್ಶ ಗೃಹಸ್ಥನಾಗಿರುವುದು ಆದರ್ಶ ಸನ್ಯಾಸಿಯಾಗಿರುವುದಕ್ಕಿಂತಲೂ ಕಷ್ಟಕರ.

-ಸ್ವಾಮಿ ವಿವೇಕಾನಂದ

ಬೃಹತ್ ಯೋಜನೆ ಹೆಸರಿನಲ್ಲಿ ಬಿಬಿಎಂಪಿ ಮೇಲೆ ಹೊರೆ ಹೇರಿಕೆ ಸಲ್ಲ

ಬೆಂಗಳೂರು ಅಭಿವೃದ್ಧಿ ಖಾತೆಯನ್ನೂ ಹೊಂದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ರಾಜ್ಯ ರಾಜಧಾನಿಯಲ್ಲಿ ಬೃಹತ್ ಯೋಜನೆಗಳನ್ನು ಅನುಷ್ಠಾನಗೊಳಿಸುವ ಉತ್ಸಾಹದಲ್ಲಿದ್ದಾರೆ. 'ಬ್ರ್ಯಾಂಡ್ ಬೆಂಗಳೂರು' ಎಂಬ ಪರಿಕಲ್ಪನೆಯ ಅಡಿಯಲ್ಲಿ ಸುರಂಗ ಮಾರ್ಗಗಳು, ಎಲಿವೇಟೆಡ್ ಕಾರಿಡಾರ್‌ಗಳು ಮತ್ತು ಸ್ಕೈಡೆಕ್ ನಿರ್ಮಾಣಕ್ಕೆ ಮುಂದಾಗಿದ್ದಾರೆ. ಇಂತಹ ಬೃಹತ್ ಯೋಜನೆಗಳಿಗೆ ₹59,000 ಕೋಟಿಯಷ್ಟು ವೆಚ್ಚ ಮಾಡುವ ಪ್ರಸ್ತಾವ ಬಿಬಿಎಂಪಿ ಮುಂದಿದೆ. ಅದರಲ್ಲಿ ₹39,000 ಕೋಟಿಯಷ್ಟು ಬೃಹತ್ ಮೊತ್ತವನ್ನು ದೇಶಿ ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಒಪ್ಪಿಗೆ ಕೋರಿ ರಾಜ್ಯ ಸರ್ಕಾರಕ್ಕೆ ಪಾಲಿಕೆಯ ಮುಖ್ಯ ಆಯುಕ್ತರು ಪತ್ರ ಬರೆದಿದ್ದಾರೆ. ಬಿಬಿಎಂಪಿಯ 2024–25ರ ಬಜೆಟ್ ಗಾತ್ರವೇ ₹12,371 ಕೋಟಿ. ಬಜೆಟ್ ಗಾತ್ರದ ಐದರಷ್ಟು ಮೊತ್ತವನ್ನು ವ್ಯಯಿಸಬೇಕಾದಂತಹ ಯೋಜನೆಗಳನ್ನು ಸಾಲ ಪಡೆದು ಕೈಗೆತ್ತಿಕೊಳ್ಳುವುದು ಅತ್ಯಂತ ಅಪಾಯಕಾರಿ ನಡೆ. ಇದರಿಂದ ಸ್ಥಳೀಯ ಸಂಸ್ಥೆಯು ಆರ್ಥಿಕ ವಿಪತ್ತಿಗೆ ಸಿಲುಕುವ ಸಾಧ್ಯತೆಯೇ ಹೆಚ್ಚು. ಬಿಬಿಎಂಪಿಯು ಈಗಾಗಲೇ ಅನುಷ್ಠಾನಗೊಂಡಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಗುತ್ತಿಗೆದಾರರಿಗೆ ಸುಮಾರು ₹6,000 ಕೋಟಿಯಷ್ಟು ಬಿಲ್ ಬಾಕಿ ಉಳಿಸಿಕೊಂಡಿದೆ. ಜನಸಮೂಹದ ನೈಜ ಅಗತ್ಯಗಳನ್ನು ಅರಿಯದೆ ಮತ್ತು ತಜ್ಞರ ಅಭಿಪ್ರಾಯ ಆಲಿಸದೆ ಕೆಲವೇ ವ್ಯಕ್ತಿಗಳ ಅಭಿಪ್ರಾಯ, ಆಕಾಂಕ್ಷೆಯನ್ನು ಆಧರಿಸಿ ಹತ್ತಾರು ಸಾವಿರ ಕೋಟಿ ರೂಪಾಯಿಗಳ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದು ಸಮಂಜಸವಲ್ಲ. ಬೃಹತ್ ಯೋಜನೆಗಳ ಅಗತ್ಯ, ಅವು ಉಂಟುಮಾಡಬಹುದಾದ ದೀರ್ಘಕಾಲೀನ ಪರಿಣಾಮಗಳ ಬಗ್ಗೆ ವಿಸ್ತೃತವಾದ ಅಧ್ಯಯನ ನಡೆಸಿದ ಬಳಿಕ ನಿರ್ಧಾರಕ್ಕೆ ಬರುವುದು ಉತ್ತಮ.




ಸಾಲ ಮಾಡಿ ಆಡಂಬರದ ಯೋಜನೆಗಳನ್ನು ಕೈಗೊಳ್ಳುವ ಪ್ರಸ್ತಾವವನ್ನು ಜನಹಿತದ ದೃಷ್ಟಿಯಿಂದ ಮರುಪರಿಶೀಲನೆಗೆ ಒಳಪಡಿಸುವುದು ಸೂಕ್ತ

ಬೆಂಗಳೂರಿನ ಆಚೆಗೆ ಹೂಡಿಕೆದಾರರನ್ನು ಸೆಳೆಯಲು ರಾಜ್ಯ ಸರ್ಕಾರವು 'ಬಿಯಾಂಡ್ ಬೆಂಗಳೂರು' ಘೋಷಣೆಯಡಿ ಪ್ರಯತ್ನಗಳನ್ನು ನಡೆಸಿದೆ. ರಾಜ್ಯ ಸರ್ಕಾರವು ಬೆಂಗಳೂರಿನ ಮೂಲಸೌಕರ್ಯ ಅಭಿವೃದ್ಧಿಗಷ್ಟೇ ಒತ್ತು ನೀಡುವುದನ್ನು ಬಿಟ್ಟು, ಇತರ ನಗರಗಳು ಮತ್ತು ಜಿಲ್ಲಾ ಕೇಂದ್ರಗಳ ಅಭಿವೃದ್ಧಿಗೂ ಆದ್ಯತೆ ನೀಡಬೇಕು. ಆ ಮೂಲಕ ಅಭಿವೃದ್ಧಿಯ ವಿಕೇಂದ್ರೀಕರಣಕ್ಕೆ ಒತ್ತು, ಬೆಂಗಳೂರಿನತ್ತ ವಲಸೆ ತಡೆ ಹಾಗೂ ಸುಸ್ಥಿರ ಅಭಿವೃದ್ಧಿಗೆ ಉತ್ತೇಜನ ನೀಡಬೇಕು. ಮೂಲ ಸಮಸ್ಯೆಗಳ ಪರಿಹಾರ ಕಂಡುಕೊಳ್ಳದೆ ಬೃಹತ್ ಯೋಜನೆಗಳ ಅನುಷ್ಠಾನಕ್ಕೆ ಕೈ ಹಾಕುವುದು ಆದ್ಯತೆಯನ್ನೇ ಅದಲು-ಬದಲು ಮಾಡಿದಂತೆ. ರಸ್ತೆಗಳ ಗುಂಡಿ ಮುಚ್ಚುವುದು, ರಸ್ತೆಗಳ ಮರು ಡಾಂಬರೀಕರಣ, ದುರಸ್ತಿ, ಸುರಕ್ಷಿತ ಪಾದಚಾರಿ ಮಾರ್ಗಗಳ ನಿರ್ಮಾಣದಂತಹ ಕೆಲಸಗಳಿಗೆ ಆದ್ಯತೆ ನೀಡಬೇಕಾದ ತುರ್ತು ಇದೆ. ಬೆಂಗಳೂರು ನಗರದಲ್ಲಿ ದಿನದಿಂದ ದಿನಕ್ಕೆ ಸಂಚಾರ ದಟ್ಟಣೆ ಹೆಚ್ಚುತ್ತಲೇ ಇದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಬಸ್ ಸಂಚಾರ ಜಾಲದ ಬಲವರ್ಧನೆ, ಮೆಟ್ರೊ ರೈಲು ಮಾರ್ಗದ ವಿಸ್ತರಣೆ, ಕೊನೆಯ ತಾಣದವರೆಗೆ ನಿರಂತರ ಸಾರಿಗೆ ಸೌಲಭ್ಯ ಕಲ್ಪಿಸಿ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಗಟ್ಟಿಗೊಳಿಸಬೇಕಿದೆ. ಸಾರ್ವಜನಿಕ ಸಾರಿಗೆಯನ್ನು ಬಳಸುವವರಿಗೆ ಉತ್ತೇಜನಗಳನ್ನು ನೀಡುವ ಮೂಲಕ ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆ ಮಾಡುವುದರತ್ತ ಗಮನಹರಿಸಿದರೆ ಸಂಚಾರ ದಟ್ಟಣೆ ತುಸುವಾದರೂ ತಗ್ಗೀತು. ಹೊಸ ಯೋಜನೆಗಳನ್ನು ಕೈಗೆತ್ತಿಕೊಳ್ಳುವ ಬದಲಿಗೆ ವರ್ಷಗಳಿಂದ ಕುಂಟುತ್ತಾ ಸಾಗಿರುವ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸುವುದು ಸರ್ಕಾರ ಮತ್ತು ಬಿಬಿಎಂಪಿಯ ಆದ್ಯತೆಯಾಗಬೇಕು.

ಸ್ಕೈಡೆಕ್ ಯೋಜನೆಯು ಆಡಂಬರ ಪ್ರದರ್ಶನದ ಯೋಜನೆ ಎಂಬ ಟೀಕೆಯಲ್ಲಿ ಹುರುಳಿದೆ. ಅದಕ್ಕೆ ದುಬಾರಿ ವೆಚ್ಚದ ಮೂಲಸೌಕರ್ಯದ ಅಗತ್ಯ. ಆದರೆ, ಅದರಿಂದ ಜನಸಾಮಾನ್ಯರಿಗೆ ಹೆಚ್ಚಿನ ಪ್ರಯೋಜನ ಸಿಗುವುದಿಲ್ಲ. ಇಂತಹ ಯೋಜನೆಗಳು ತುರ್ತು ಅಗತ್ಯದ ಕೆಲಸಗಳಿಗೆ ಒದಗಿಸಬೇಕಾದ ಆರ್ಥಿಕ ಸಂಪನ್ಮೂಲವನ್ನು ತಮ್ಮತ್ತ ಸೆಳೆದುಕೊಳ್ಳುತ್ತವೆ. ಬೆಂಗಳೂರು ನಗರಕ್ಕೆ ಇಂತಹ ದುಬಾರಿ ವೆಚ್ಚದ ಯೋಜನೆಗಳ ಅಗತ್ಯ ನಿಜಕ್ಕೂ ಇದೆಯೇ? ಅಭಿವೃದ್ಧಿಯ ಪ್ರದರ್ಶನದ ಕಾರಣಕ್ಕಾಗಿ ಹಣ ಪೋಲಾಗುವುದು ತರವಲ್ಲ. ಬೆಂಗಳೂರಿನ ಜನರು ಎದುರಿಸುತ್ತಿರುವ ನಿಜವಾದ ಸಮಸ್ಯೆಗಳನ್ನು ಅರಿತು, ಅವುಗಳಿಗೆ ಪರಿಹಾರ ಒದಗಿಸುವುದಕ್ಕೆ ರಾಜ್ಯ ಸರ್ಕಾರ ಮತ್ತು ಬಿಬಿಎಂಪಿ ದೃಢ ಹೆಜ್ಜೆ ಇಡಬೇಕು. ನಗರದ ಅಭಿವೃದ್ಧಿ ಮತ್ತು ಜನರ ಜೀವನಮಟ್ಟ ಸುಧಾರಣೆಗೆ ಮೂಲಸೌಕರ್ಯಗಳ ಹೆಚ್ಚಳ ಅಗತ್ಯ. ಆದರೆ, ಸಾಲ ಮಾಡಿ ಆಡಂಬರದ ಯೋಜನೆಗಳನ್ನು ಕೈಗೊಳ್ಳುವ ಪ್ರಸ್ತಾವವನ್ನು ಮರುಪರಿಶೀಲನೆಗೆ ಒಳಪಡಿಸುವುದು ಜನಹಿತದ ದೃಷ್ಟಿಯಿಂದ ಸೂಕ್ತ.

ಈ ಪ್ರದೇಶದಲ್ಲಿ ಸಮತೋಲನ ಸಾಧಿಸುವುದೆಂದರೆ ಹಗ್ಗದ ಮೇಲಿನ ನಡಿಗೆಯೇ ಸರಿ

ಮಧ್ಯಪ್ರಾಚ್ಯ: ವರ, ಶಾಪ ಮತ್ತು ಕದನ



ಸೀಮೋಲ್ಲಂಘನೆ

ಸುಧೀಂದ್ರ ಬುಧ್ಯ

ಮೊನ್ನೆ ಅಕ್ಟೋಬರ್ 1ರಂದು ಇಸ್ರೇಲ್ ಮೇಲೆ ಇರಾನ್ ಭಾಗದಿಂದ ಕ್ಷಿಪಣಿಗಳ ದಾಳಿ ನಡೆಯಿತು. ಇಸ್ರೇಲಿನ ಕ್ಷಿಪಣಿ ರಕ್ಷಣಾ ವ್ಯವಸ್ಥೆ ಬಹುಪಾಲು ಕ್ಷಿಪಣಿಗಳನ್ನು ಹೊಡೆದುರುಳಿಸಿತು. ಮಧ್ಯಪ್ರಾಚ್ಯದ ರಣಾಂಗಣದಲ್ಲಿ ಇಂತಹ ಕ್ಷಿಪಣಿಗಳ ಅಬ್ಬರ ಹೊಸದೇನೂ ಅಲ್ಲ. ಅಲ್ಲಿನ ಆಗಸದಲ್ಲಿ ಕ್ಷಿಪಣಿಗಳು ಬೆಂಕಿಯುಗುಳುತ್ತಾ ಮಿಂಚಿ ಮರೆಯಾಗದಿದ್ದರೆ, ಆಗಾಗ ಬಾಂಬುಗಳ ಸಿಡಿತದ ಸದ್ದು ಕೇಳದಿದ್ದರೆ ಅಲ್ಲಿನ ಜನ ಅಚ್ಚರಿಗೊಳ್ಳುತ್ತಾರೆ. ಇದು ಕನಸಲ್ಲ ತಾನೇ ಎಂದು ಮೈ ಚಿವುಟಿ ನೋಡಿಕೊಳ್ಳಬಹುದು. ಅಷ್ಟರಮಟ್ಟಿಗೆ ಅಲ್ಲಿ ಯುದ್ಧದ ವಾತಾವರಣ ಸಾಮಾನ್ಯ.

ವರ್ಷದ ಕೆಳಗೆ, ಅಂದರೆ 2023ರ ಅಕ್ಟೋಬರ್ 7ರಂದು ಇಸ್ರೇಲ್ ಮೇಲೆ ಬಹುದೊಡ್ಡ ಭಯೋತ್ಪಾದಕ ದಾಳಿ ನಡೆಯಿತು. ಇತ್ತೀಚಿನ ವರ್ಷಗಳಲ್ಲಿ ಅಷ್ಟು ದೊಡ್ಡ ಪ್ರಮಾಣದ ದಾಳಿಗೆ ಇಸ್ರೇಲ್ ಒಳಗಾಗಿರಲಿಲ್ಲ. ಆ ಕಾರಣದಿಂದಲೇ ಅದು ಮೈಮರೆತಿತ್ತೋ ಅಥವಾ ತನ್ನ ವೈರಿಗಳನ್ನು ಮಟ್ಟಹಾಕಲು ಕಾರಣವೊಂದು ಸಿಗಲಿ ಎಂದು ಮೈಮರೆತಂತೆ ನಟಿಸಿತೋ, ಅಂತೂ ಆ ದಿನ ಇಸ್ರೇಲ್ ಗಡಿಯೊಳಗೆ ನುಗ್ಗಿದ ಹಮಾಸ್ ಕಾಲಾಳುಗಳು ಪೈಶಾಚಿಕ ಕೃತ್ಯ ನಡೆಸಿದರು. ಇಸ್ರೇಲ್ ಪ್ರತಿದಾಳಿಗೆ ಮುಂದಾಯಿತು. ಹಮಾಸ್ ನಿರ್ಮೂಲನೆಗೆ ಶಂಖನಾದ ಮಾಡಿತು. ಗಾಜಾಪಟ್ಟಿಯಲ್ಲಿ ಉಸಿರುಗಟ್ಟಿದ ವಾತಾವರಣ ನಿರ್ಮಾಣವಾಯಿತು.

ಆದರೆ ಅದು ಅಷ್ಟಕ್ಕೇ ಮುಗಿಯಲಿಲ್ಲ. ಇಸ್ರೇಲ್ ಮತ್ತು ಹಮಾಸ್ ನಡುವೆ ಆರಂಭವಾದ ಸಂಘರ್ಷ ವಿಸ್ತರಿಸುತ್ತಾ ಹೋಯಿತು. ಲೆಬನಾನ್ ಭಾಗದಿಂದ ಹಿಜ್ಬುಲ್ಲಾ, ಯೆಮನ್ ಕಡೆಯಿಂದ ಹೌತಿ, ಸಿರಿಯಾ ಮತ್ತು ಇರಾಕ್ ಭಾಗದಿಂದ ಶಿಯಾ ಉಗ್ರರು ಇಸ್ರೇಲ್ ಮೇಲೆ ದಾಳಿ ನಡೆಸಿದರು. ಇಸ್ರೇಲ್ ಪಡೆ ಈ ಎಲ್ಲ ದಾಳಿಗಳನ್ನು ಎದುರಿಸಿ ಪ್ರತಿದಾಳಿ ನಡೆಸಿತು. ಈ ದಾಳಿಗಳ ಹಿಂದೆ ಇರಾನ್ ಇದೆ, ಈ ಉಗ್ರ ಸಂಘಟನೆಗಳಿಗೆ ಆರ್ಥಿಕ ನೆರವು ಮತ್ತು ಶಸ್ತ್ರಾಸ್ತ್ರ ಪೂರೈಕೆಯಾಗುತ್ತಿರುವುದು ಇರಾನಿನಿಂದ ಎಂಬುದನ್ನು ಇಸ್ರೇಲ್, ಜಗತ್ತಿಗೆ ತಿಳಿಸುವ ಪ್ರಯತ್ನ ಮಾಡಿತು.

ಈ ವರ್ಷದ ಏಪ್ರಿಲ್ 13ರಂದು ಇಸ್ರೇಲಿನ ಮೇಲೆ ಇರಾನ್ ನೇರವಾಗಿ ಕ್ಷಿಪಣಿ ದಾಳಿ ನಡೆಸಿತು. ಆಗ ಇಸ್ರೇಲ್ ಮತ್ತು ಇರಾನ್ ನಡುವೆ ನೇರ ಯುದ್ಧ ಘಟಿಸಬಹುದು ಎಂದು ಅಂದಾಜಿಸಲಾಗಿತ್ತು. ಆದರೆ ಅಮೆರಿಕದ ಅಧ್ಯಕ್ಷ ಬೈಡನ್ ಅವರು, ಪ್ರತಿದಾಳಿ ಬರೀ ಸಾಂಕೇತಿಕವಾಗಿರಲಿ, ದೊಡ್ಡಮಟ್ಟದ ಸಂಘರ್ಷಕ್ಕೆ ಕಾರಣವಾಗುವುದು ಬೇಡ ಎಂದು ಇಸ್ರೇಲ್ ಪ್ರಧಾನಿ ನೆತನ್ಯಾಹು ಅವರನ್ನು ತಡೆದರು. ಆಗ ಬೈಡನ್ ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿ ಅಭ್ಯರ್ಥಿಯಾಗಿ ಕಣದಲ್ಲಿದ್ದರು ಎನ್ನುವುದನ್ನು ನೆನಪು ಮಾಡಿಕೊಳ್ಳಬೇಕು.

ಆದರೆ ಹಿಜ್ಬುಲ್ಲಾ ಉಗ್ರರ ಬೆನ್ನು ಹತ್ತುವುದನ್ನು ಇಸ್ರೇಲ್ ಬಿಡಲಿಲ್ಲ. ಸರಣಿ ಪೇಜರ್ ಸ್ಫೋಟಗಳು ಲೆಬನಾನ್‌ನಲ್ಲಿ ನಡೆದವು. ಹಿಜ್ಬುಲ್ಲಾ ನಾಯಕ ಹಸನ್ ನಸ್ರಲ್ಲಾ ಹತ್ಯೆಯಾಯಿತು. ಇದೀಗ ಅದಕ್ಕೆ ಪ್ರತೀಕಾರ ಎಂಬಂತೆ ಇಸ್ರೇಲ್ ಮೇಲೆ ಕ್ಷಿಪಣಿಗಳ ದಾಳಿ ನಡೆದಿದೆ. ಈ ದಾಳಿಯನ್ನು ಇರಾನಿನ 'ಇಸ್ಲಾಮಿಕ್ ಕ್ರಾಂತಿ ರಕ್ಷಣಾ ಪಡೆ' (ಐಆರ್‌ಜಿಸಿ) ನಡೆಸಿದೆ ಎನ್ನಲಾಗುತ್ತಿದೆ. ಈ ದಾಳಿಗೆ ಇರಾನ್ ಬೆಲೆ ತೆರಲಿದೆ ಎಂದು ಇಸ್ರೇಲ್ ಪ್ರತೀಕಾರದ ಮಾತನ್ನಾಡಿದೆ.

ಹಾಗಾದರೆ, ಈ ಕ್ಷಿಪಣಿ ದಾಳಿ ಇರಾನ್ ಮತ್ತು ಇಸ್ರೇಲ್ ನಡುವಿನ ನೇರ ಯುದ್ಧಕ್ಕೆ ದಾರಿ ಮಾಡಿಕೊಡಬಹುದೇ? ಇಸ್ರೇಲ್ ಮುಂದಿನ ನಡೆ ಏನಿರಬಹುದು ಎಂದು ಅರ್ಥ ಮಾಡಿಕೊಳ್ಳಬೇಕಾದರೆ, ನೆತನ್ಯಾಹು ಅವರು ಇತ್ತೀಚೆಗೆ ವಿಶ್ವಸಂಸ್ಥೆಯ ಅಧಿವೇಶನದಲ್ಲಿ ಮಾಡಿದ ಭಾಷಣವನ್ನು ಗಮನಿಸಬೇಕು.

ಸಾಮಾನ್ಯವಾಗಿ ನೆತನ್ಯಾಹು ಆಕ್ರಮಣಕಾರಿಯಾಗಿಯೇ ಮಾತನಾಡುತ್ತಾರೆ. ಹತ್ತು ವರ್ಷಗಳ ಹಿಂದೆ ಇರಾನ್ ಅಣ್ವಸ್ತ್ರ ಯೋಜನೆಯ ಕುರಿತು ಅವರು ವಿಶ್ವಸಂಸ್ಥೆಯ ವೇದಿಕೆಯಲ್ಲಿ ನಕ್ಷೆಗಳನ್ನು ಹಿಡಿದು ಮಾತನಾಡಿದ್ದರು. ಈ ಬಾರಿ ಅವರು ಮತ್ತೊಮ್ಮೆ ನಕ್ಷೆಗಳನ್ನು ಬಳಸಿ ಭಾಷಣ ಮಾಡಿದರು. ಒಂದು ಕೈಯಲ್ಲಿ ಇರಾನ್, ಇರಾಕ್, ಸಿರಿಯಾ, ಲೆಬನಾನ್ ಮತ್ತು ಯೆಮನ್‌ಗಳನ್ನು ಕಪ್ಪುವರ್ಣದಲ್ಲಿ ಚಿತ್ರಿಸಿ ಅದನ್ನು 'ಶಾಪ' ಎಂದು ಕರೆದ ನಕ್ಷೆಯಿತ್ತು, ಮತ್ತೊಂದು ಕೈಯಲ್ಲಿ ಮಧ್ಯಪ್ರಾಚ್ಯದ ಇತರ ಅರಬ್ ರಾಷ್ಟ್ರಗಳು ಮತ್ತು ಭಾರತವನ್ನು ಹಸಿರುವರ್ಣದಲ್ಲಿ ಚಿತ್ರಿಸಿ 'ವರ' ಎಂದು ಕರೆದ ನಕ್ಷೆಯಿತ್ತು.

ಇರಾನಿನ ನಿರಂತರ ಆಕ್ರಮಣಶೀಲತೆಯು ಇಸ್ರೇಲ್ ಪಾಲಿಗೆ ಶಾಪವಾಗಿದ್ದರೆ, ಅರಬ್ ಮತ್ತು ಯಹೂದಿಯರ ನಡುವಿನ ಐತಿಹಾಸಿಕ ಸಾಮರಸ್ಯ ವರವಾಗಿ ಪರಿಣಮಿಸಿದೆ ಎಂದು ನೆತನ್ಯಾಹು ಹೇಳಿದರು.

ಮುಖ್ಯವಾಗಿ ಅವರು ಇರಾನಿನ ಅಣ್ವಸ್ತ್ರ ಯೋಜನೆ ಕುರಿತು ಮಾತನಾಡಿದರು. ಇರಾನನ್ನು ಓಲೈಸುವ ಕೆಲಸವನ್ನು ಜಗತ್ತು ಮಾಡುತ್ತಿದೆ. ಇರಾನಿನ ಆಂತರಿಕ ದಮನನೀತಿಯನ್ನು ಕಂಡೂ ಜಗತ್ತು ಕುರುಡಾಗಿದೆ.



ಇನ್ನಾದರೂ ಜಗತ್ತು ಎಚ್ಚರಗೊಳ್ಳಬೇಕು. ದುಷ್ಟ ಆಡಳಿತದ ವಿರುದ್ಧ ಸಿಡಿದೇಳುತ್ತಿರುವ ಇರಾನಿನ ಜನರನ್ನು ಬೆಂಬಲಿಸಬೇಕು. ಇರಾನ್ ಅಣ್ವಸ್ತ್ರ ಹೊಂದುವುದನ್ನು ತಡೆಯಬೇಕು ಎಂಬುದು ನೆತನ್ಯಾಹು ಅವರ ಮಾತಿನ ಇಂಗಿತವಾಗಿತ್ತು.

ಈ ಎಲ್ಲವನ್ನೂ ಒಟ್ಟಾಗಿ ನೋಡಿದರೆ, ಇಸ್ರೇಲ್ ಇಡಬಹುದಾದ ಹೆಜ್ಜೆಯ ಕುರಿತು ಒಂದಷ್ಟು ಸುಳಿವು ಸಿಗಬಹುದು. ಇರಾನ್ ಅಣ್ವಸ್ತ್ರ ಹೊಂದುವುದು ಇಸ್ರೇಲಿಗೆ ಬೇಕಿಲ್ಲ. ಇರಾನ್ ಅಣ್ವಸ್ತ್ರ ರಾಷ್ಟ್ರವಾದರೆ ಅದು ತನಗೂ ಅಪಾಯ ಎನ್ನುವುದು ಅಮೆರಿಕಕ್ಕೂ ತಿಳಿದಿದೆ. ಆದರೆ ಮಧ್ಯಪ್ರಾಚ್ಯದಲ್ಲಿ ಸಮತೋಲನ ಸಾಧಿಸುವ ಹಗ್ಗದ ಮೇಲಿನ ನಡಿಗೆಯ ಭಾಗವಾಗಿ ಅಮೆರಿಕ ಇರಾನನ್ನು ನೇರಾನೇರ ಎದುರುಹಾಕಿಕೊಳ್ಳುತ್ತಿಲ್ಲ. ಒಬಾಮ ಅವರ ಅವಧಿಯಲ್ಲಿ ಇರಾನ್ ಜೊತೆಗೆ ಪರಮಾಣು ಒಪ್ಪಂದ ಏರ್ಪಟ್ಟಿತು. ಆದರೆ ಇರಾನ್ ಅಣ್ವಸ್ತ್ರ ಹೊಂದುವ ತನ್ನ ಪ್ರಯತ್ನವನ್ನು ಬಿಡಲಿಲ್ಲ.

ಟ್ರಂಪ್ ಅಧ್ಯಕ್ಷರಾದಾಗ ಇರಾನ್ ಜೊತೆಗಿನ ಪರಮಾಣು ಒಪ್ಪಂದವನ್ನು ಅನೂರ್ಜಿತಗೊಳಿಸಿ, ಇರಾನನ್ನು ಏಕಾಂಗಿಯಾಗಿಸಲು ಇತರ ಅರಬ್ ರಾಷ್ಟ್ರಗಳನ್ನು ಇಸ್ರೇಲ್ ಜೊತೆ ಜೋಡಿಸುವ ಪ್ರಯತ್ನಕ್ಕೆ ಕೈ ಹಾಕಿದರು. ಆದರೆ ಇರಾನ್ ಅಣ್ವಸ್ತ್ರ ಹೊಂದುವ ತನ್ನ ಪ್ರಯತ್ನವನ್ನು ಮುಂದುವರಿಸಿತು.

ಆ ಪ್ರಯತ್ನ ಎಷ್ಟರಮಟ್ಟಿಗೆ ಸಾಗಿದೆ ಎಂದರೆ, ಅಮೆರಿಕದ ವಿದೇಶಾಂಗ ಸಚಿವ ಬ್ಲಿಂಕನ್ 'ಪರಮಾಣು ಬಾಂಬಿಗೆ ಬಳಸಲು ಯೋಗ್ಯವಾದ ಯುರೇನಿಯಂ ಅನ್ನು ಒಂದೆರಡು ವಾರಗಳಲ್ಲಿ ಉತ್ಪಾದಿಸುವ ಸಾಮರ್ಥ್ಯವನ್ನು ಇರಾನ್ ಹೊಂದಿದೆ' ಎಂಬ ಹೇಳಿಕೆಯನ್ನು ಇತ್ತೀಚೆಗೆ ನೀಡಿದ್ದರು. ರಷ್ಯಾ, ಚೀನಾ ಅಥವಾ ಉತ್ತರ ಕೊರಿಯಾದ ಸಹಾಯ ದೊರೆತರೆ, ಇರಾನ್ ಅಣ್ವಸ್ತ್ರ ರಾಷ್ಟ್ರವಾಗಲು ಹೆಚ್ಚು ಸಮಯ ಬೇಕಿಲ್ಲ ಎಂಬುದು ಅಮೆರಿಕಕ್ಕೂ ಇದೀಗ ಅರ್ಥವಾಗಿದೆ.

ಒಂದೊಮ್ಮೆ, ಇರಾನ್ ಮತ್ತು ಇಸ್ರೇಲ್ ನಡುವಿನ ಸಂಘರ್ಷ ತಾರಕಕ್ಕೇರಿ ಯುದ್ಧದ ರೂಪ ಪಡೆದರೆ, ಆ ಸಂದರ್ಭವನ್ನು ಬಳಸಿ ಇರಾನ್ ಅಣ್ವಸ್ತ್ರ ಯೋಜನೆಯನ್ನು ಇಸ್ರೇಲ್ ಮತ್ತು ಅಮೆರಿಕ ಜೊತೆಗೂಡಿ ವಿಫಲಗೊಳಿಸಬಹುದು. ಇದು ಇರಾನಿಗೂ ತಿಳಿದಿದೆ. ಹಾಗಾಗಿ ಇಸ್ರೇಲ್ ಮೇಲೆ ನೇರ ಯುದ್ಧ ಸಾರಿ ತನ್ನ ಇಷ್ಟು ವರ್ಷಗಳ ಶ್ರಮವನ್ನು ಕೈಚೆಲ್ಲುವ ಮೂರ್ಖತನವನ್ನು ಇರಾನ್ ಮಾಡಲಾರದು. ಉಗ್ರ ಸಂಘಟನೆಗಳಿಗೆ ಬಲ ತುಂಬಿ ಇಸ್ರೇಲನ್ನು ಪರೋಕ್ಷವಾಗಿ ಕಾಡುವ ಪ್ರಯತ್ನವನ್ನು ಅದು ಮುಂದುವರಿಸಬಹುದು.

ಆಗ ಇರಾನಿನ ಜನರನ್ನು ಆಡಳಿತದ ವಿರುದ್ಧ ಎಬ್ಬಿಸುವ, ಆ ಮೂಲಕ ಆಂತರಿಕ ಕ್ರಾಂತಿಯನ್ನು ಉತ್ತೇಜಿಸುವ ಪ್ರಯತ್ನಕ್ಕೆ ಇಸ್ರೇಲ್ ಕೈ ಹಾಕಬಹುದು. ಇಲ್ಲವೇ ಇರಾನ್ ಒಂದು ಸಣ್ಣ ತಪ್ಪು ಹೆಜ್ಜೆ ಇಟ್ಟರೂ ಅದನ್ನೇ ಅವಕಾಶವನ್ನಾಗಿ ಬಳಸಿ, ಇರಾನ್ ಮೇಲೆ ಯುದ್ಧ ಸಾರಿ ಅಣ್ವಸ್ತ್ರ ಹೊಂದುವ ಅದರ ಬಯಕೆಯನ್ನು ಚಿವುಟಿ ಹಾಕಬಹುದು. ಇದಕ್ಕೆ ಅಮೆರಿಕದ ಪೂರ್ಣ ಸಹಕಾರ ಬೇಕು.

ಒಟ್ಟಿನಲ್ಲಿ, ಅತ್ತ ರಷ್ಯಾ ಮತ್ತು ಉಕ್ರೇನ್ ನಡುವಿನ ಕದನ, ಇತ್ತ ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಮುಂದಿನ ದಿನಗಳಲ್ಲಿ ಯಾವ ರೂಪ ಪಡೆದೀತು ಎಂಬುದಕ್ಕೆ ಉತ್ತರ, ಅಮೆರಿಕದ ಅಧ್ಯಕ್ಷೀಯ ಚುನಾವಣೆಯಲ್ಲಿದೆ ಎಂಬುದಂತೂ ಸತ್ಯ.

ಚುರುಮುರಿ



ಕನಸಲ್ಲಿ ಗಾಂಧಿ!

• ಬಿ.ಎನ್.ಮಲ್ಲೇಶ್

ದಿನಪತ್ರಿಕೆ ಕಾರ್ಯಾಲಯಕ್ಕೆ ಕೋಲೂರಿಕೊಂಡು ಬಂದ ವೃದ್ಧರೊಬ್ಬರು ಪತ್ರಕರ್ತ ತೆಪರೇಸಿ ಮುಂದೆ ನಿಂತು 'ಒಂದು ಜಾಹೀರಾತು ಹಾಕಿಸಬೇಕಿತ್ತು' ಎಂದರು.

'ಏನು ನಿಮ್ಮ ಹೆಸರು?' ತೆಪರೇಸಿ ತಲೆಯೆತ್ತದೆ ಕೇಳಿದ.

'ಗಾಂಧಿ' ವೃದ್ಧರು ಹೇಳಿದರು.

'ಯಾವ ಗಾಂಧಿ? ನಮ್ಮಲ್ಲಿ ಬಹಳ ಜನ ಗಾಂಧಿಗಳಿದ್ದಾರೆ'.

'ನನ್ನನ್ನು ಮಹಾತ್ಮ ಗಾಂಧಿ ಅಂತ ಕರೀತಾರೆ'.

ಶಾಕ್! ತೆಪರೇಸಿ ತಕ್ಷಣ ತಲೆ ಎತ್ತಿ ನೋಡಿದ.

'ನೀವಾ? ಮೊನ್ನೆ ಗಾಂಧಿ ಜಯಂತಿ ಆಯ್ತಲ್ಲ, ಮತ್ತೇನು? ವರ್ಷಕ್ಕೆ ಒಮ್ಮೆ ಮಾತ್ರ ನಾವು ನಿಮ್ಮನ್ನು ನೆನಪು ಮಾಡ್ಕೊಳ್ಳೋದು'.

'ಪರವಾಗಿಲ್ಲ, ನನ್ನ ಕನ್ನಡಕ ಕಳೆದಿದೆ, ಒಂದು ಜಾಹೀರಾತು ಹಾಕಿ'.

'ಕನ್ನಡಕಕ್ಕೆ ಜಾಹೀರಾತಾ? ಅದೇನು ಬೆಳ್ಳಿ ಬಂಗಾರವಾ? ಸಿಕ್ಕರೂ ಯಾರೂ ತಂದುಕೊಡಲ್ಲ'.

'ಅದಿಲ್ಲದೆ ನನಗೆ ಏನೂ ಕಾಣಿಸಲ್ಲ'.

'ಒಳ್ಳೇದಾಯ್ತು, ನೀವು ನೋಡಬಾರದ್ದನ್ನೆಲ್ಲ ನೋಡೋದು ತಪ್ಪಿತು'.

'ನಾನು ಪತ್ರಿಕೆ ಓದುವುದು, ಟಿ.ವಿ ನೋಡುವುದು ಬೇಡವೆ?'

'ಬೇಡ, ನಿಮ್ಮ ತಲೆ ಕೆಡುತ್ತೆ'.

'ಹೌದೆ? ರಾಮ ರಾಮ'.

'ರಾಮ ಎನ್ನಬೇಡಿ, ರಾಜಕೀಯ ಆಗುತ್ತೆ'.

'ಈ ರಾಜಕೀಯ ಅಂದ್ರೇನು?'

'ಅಧಿಕಾರ, ದುಡ್ಡಿಗಾಗಿ ಮಾಡಬಾರದ್ದನ್ನ ಮಾಡೋದು'.

'ಮತ್ತೆ ಸತ್ಯ, ಅಹಿಂಸೆ, ಸತ್ಯಾಗ್ರಹ ಇವೆಲ್ಲ?'

'ಅವೆಲ್ಲ ನಿಮ್ಮ ಜೊತೆಗೇ ಹೋದವಲ್ಲ?'

'ಹೋಗಲಿ ಬಿಡಿ, ಇವತ್ತಿನ ಸುದ್ದಿ ಏನು?'

'ಕೇಳಬೇಡಿ ಅಂದೆನಲ್ಲ?'

'ಪರವಾಗಿಲ್ಲ ಹೇಳಿ, ಕೇಳಿ ಹೋಗುತ್ತೇನೆ'.

'ನಿಮ್ಮ ಕರ್ಮ ಕೇಳಿ... ಮುಡಾ, ಲೋಕಾಯುಕ್ತ, ಇ.ಡಿ, ಸಿಬಿಐ, ಎಫ್‌ಐಆರ್, ಮನಿಲಾಂಡ್ರಿಂಗ್, ಸೈಟು, ಕೋರ್ಟು, ಯೂ ಟರ್ನ್, ಆತ್ಮಸಾಕ್ಷಿ, ಸಾಕ್ಷ್ಯನಾಶ, ಜೈಲು, ಬೇಲು, ಬಕೆಟ್ಟು, ಟವೆಲ್ಲು... ಸಾಕಾ, ಬೇಕಾ?'

'ಸಾಕು ಸಾಕು, ನಾನಿನ್ನು ಬರುತ್ತೇನೆ'.

'ಮತ್ತೆ ಕನ್ನಡಕ?'

'ಬೇಡ'.

ದಿನದ ಟ್ವೀಟ್

ಮತದಾರ ಪ್ರಜ್ಞೆ ಜಾಗೃತಗೊಳ್ಳಲಿ

ಈ ದಿಟ್ಟ ನಡೆಯು ಬರೀ ಭರವಸೆಗಳ ಬದಲಾಗಿ ಸ್ಪಷ್ಟವಾದ ಪರಿಹಾರಗಳನ್ನು ಒದಗಿಸಬೇಕಾದ ತುರ್ತು ಅಗತ್ಯವನ್ನು ಒತ್ತಿ ಹೇಳುತ್ತದೆ. ಅಭ್ಯರ್ಥಿಗಳು ಈ ಸವಾಲನ್ನು ಸ್ವೀಕರಿಸಿ ಗಂಭೀರ ಸಮಸ್ಯೆಯನ್ನು ಪರಿಹರಿಸುವ ಮೂಲಕ, ಸಮುದಾಯಕ್ಕೆ ಶುದ್ಧ ಕುಡಿಯುವ ನೀರನ್ನು ಪೂರೈಸುವರೇ?

(ಹರಿಯಾಣದ ಚರಖೀ ದಾದರಿ ವಿಧಾನಸಭಾ ಕ್ಷೇತ್ರದ ಸಮಸ್‌ಪುರ ಗ್ರಾಮಸ್ಥರು, ತಮ್ಮ ಮತ ಬಯಸುತ್ತಿರುವ ರಾಜಕೀಯ ಪಕ್ಷಗಳು ತಮ್ಮ ಊರಿಗೆ ಪೂರೈಕೆಯಾಗುತ್ತಿರುವ ಅಶುದ್ಧ ಕುಡಿಯುವ ನೀರನ್ನು ಒಮ್ಮೆ ಬಂದು ಕುಡಿದು ತೋರಿಸಬೇಕು ಎಂದು ಸವಾಲು ಹಾಕಿರುವುದಕ್ಕೆ ಪ್ರತಿಕ್ರಿಯೆ) **ಕೆ.ವಿ.ಕೃಷ್ಣನ್**

ಕಿಡಿನುಡಿ

ಇದು ಹರಿಯಾಣದ ಅಶೋಕ್ ತನ್ವರ್ ಅವರ ಕತೆ: ಮಧ್ಯಾಹ್ನ 1.45: ನಲ್ವಾ ಎಂಬಲ್ಲಿ ಬಿಜೆಪಿ ಅಭ್ಯರ್ಥಿ ರಣಧೀರ್ ಪನಿಹಾರ್ ಪರ ಪ್ರಚಾರ. 3.10: ಮಹೇಂದ್ರಗಢದಲ್ಲಿ ನಡೆದ ರಾಹುಲ್ ಗಾಂಧಿ ಅವರ ರ‍್ಯಾಲಿಯಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆ. ಹಿಂದಿನ ಐದು ವರ್ಷಗಳ ಅವರ ರಾಜಕೀಯ ಪಯಣ– ಕಾಂಗ್ರೆಸ್–ಟಿಎಂಸಿ–ಎಎಪಿ–ಬಿಜೆಪಿ–ಕಾಂಗ್ರೆಸ್. ಚೀನಾ ಉತ್ಪನ್ನಗಳು ಸಹ ಅಶೋಕ್ ತನ್ವರ್ ಅವರು ಒಂದು ಪಕ್ಷದಲ್ಲಿ ಬಾಳುವುದಕ್ಕಿಂತಲೂ ಹೆಚ್ಚು ಕಾಲ ಬಾಳಿಕೆ ಬರುತ್ತವೆ.

ಗಣೇಶ್, ಎಂಜಿನಿಯರ್

25 ವರ್ಷಗಳ ಹಿಂದೆ

ಸೋಮವಾರ, 4-10-1999

● **ಚುನಾವಣಾ ಹಿಂಸೆಗೆ 41 ಬಲಿ ಶೇ 56 ಮತದಾನ**

ನವದೆಹಲಿ, ಅ. 3 (ಪಿಟಿಐ, ಯುಎನ್‌ಐ)– ಹತ್ತು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶದಲ್ಲಿನ ಒಟ್ಟು 118 ಲೋಕಸಭಾ ಕ್ಷೇತ್ರಗಳಲ್ಲಿ ಇಂದು ನಡೆದ ಕೊನೆಯ ಸುತ್ತಿನ ಮತದಾನದಲ್ಲಿ ವ್ಯಾಪಕ ಹಿಂಸಾಕೃತ್ಯಗಳು ನಡೆದು ಒಟ್ಟು 41 ಜನರು ಸತ್ತಿದ್ದಾರೆ. ಇಂದು ಒಟ್ಟಾರೆ ಸರಾಸರಿ ಶೇಕಡ 56ರಷ್ಟು ಮತದಾನವಾಗಿದೆ.

ಮೃತರು ಮಣಿಪುರ, ತ್ರಿಪುರಾ, ಅಸ್ಸಾಂ, ಬಿಹಾರ ಹಾಗೂ ಉತ್ತರ ಪ್ರದೇಶಕ್ಕೆ ಸೇರಿದವರು. ಈ ರಾಜ್ಯಗಳಲ್ಲಿ ಹಲವರು ಗಾಯಗೊಂಡಿದ್ದಾರೆ.

ಇಂದು ಸತ್ತಿರುವವರೂ ಸೇರಿದಂತೆ ಚುನಾವಣೆಯ ಸಂಬಂಧ ದೇಶದಲ್ಲಿ ಸತ್ತವರ ಸಂಖ್ಯೆ ನೂರನ್ನು ದಾಟಿತು. ಮೊದಲ ಹಂತದ ಚುನಾವಣೆಯಲ್ಲಿ 6, ಎರಡನೇ ಹಂತದಲ್ಲಿ ಒಬ್ಬರು, ಮೂರನೇ ಹಂತದಲ್ಲಿ 8 ಹಾಗೂ ನಾಲ್ಕನೇ ಹಂತದ ಚುನಾವಣೆ ಸಮಯದಲ್ಲಿ 8 ಜನ ಸತ್ತಿದ್ದರು.

● **ಬೆಂಗಳೂರಿನಲ್ಲಿ ಗುಂಪು ಘರ್ಷಣೆ, ಕಲ್ಲು ತೂರಾಟ, ಲಾಠಿ ಪ್ರಹಾರ**

ಬೆಂಗಳೂರು, ಅ. 3– ಗುಂಪು ಘರ್ಷಣೆ, ನಕಲಿ ಮತದಾನ, ಕಲ್ಲು ತೂರಾಟ, ವಾಹನಗಳ ಜಖಂ ಮತ್ತಿತರ ಸಣ್ಣಪುಟ್ಟ ಘಟನೆಗಳ ನಡುವೆ ಇಂದು ನಗರದಲ್ಲಿ ನಡೆದ ನಾಲ್ಕು ವಿಧಾನಸಭಾ ಕ್ಷೇತ್ರಗಳ ಚುನಾವಣೆಯಲ್ಲಿ ಶೇಕಡ 52ರಷ್ಟು ಮತದಾನ ನಡೆದಿದೆ.

ಹನುಮಂತ ನಗರದಲ್ಲಿ ಗುಂಪು ಚದುರಿಸಲು ಪೊಲೀಸರು ಲಘು ಲಾಠಿ ಪ್ರಹಾರ ನಡೆಸಿದ್ದು, ಚುನಾವಣಾ ನೀತಿಸಂಹಿತೆ ಉಲ್ಲಂಘಿಸಿದ್ದಕ್ಕಾಗಿ ಮಾಜಿ ಮುಖ್ಯಮಂತ್ರಿ ದಿವಂಗತ ಗುಂಡೂರಾವ್ ಅವರ ಪತ್ನಿ ವರಲಕ್ಷ್ಮಿ ಅವರ ಕಾರನ್ನು ಪೊಲೀಸರು ವಶಕ್ಕೆ ತೆಗೆದುಕೊಂಡರು. ವಿವಿಧ ಘಟನೆಗಳ ಸಂಬಂಧ ನಗರದ ಪೊಲೀಸರು ಒಟ್ಟು 61 ಜನರನ್ನು ಬಂಧಿಸಿದ್ದರು.

50 ವರ್ಷಗಳ ಹಿಂದೆ

ಶುಕ್ರವಾರ, 4-10-1974

● **ಕಳ್ಳಸಾಗಣೆ ನಿಗ್ರಹಕ್ಕೆ ರಾಜ್ಯದಲ್ಲಿ ವರಿಷ್ಠ ಸಮಿತಿ**

ಬೆಂಗಳೂರು, ಅ. 3– ರಾಜ್ಯದಲ್ಲಿ ಆರಂಭವಾಗಿರುವ ಕಳ್ಳಸಾಗಾಣಿಕೆ ನಿಗ್ರಹ ಕಾರ್ಯಕ್ರಮವನ್ನು ಹೆಚ್ಚು ಪರಿಣಾಮಕಾರಿ ಹಾಗೂ ಸಂಘಟಿತ ರೀತಿಯಲ್ಲಿ ಜಾರಿಗೆ ತರಲು ಸರ್ಕಾರಿ ಮಟ್ಟದಲ್ಲಿ ವರಿಷ್ಠ ಸಮಿತಿಯೊಂದು ರಚಿತವಾಗಿದೆ.

ಮುಖ್ಯ ಕಾರ್ಯದರ್ಶಿ ಜಿ.ವಿ.ಕೆ.ರಾವ್ ಅವರ ನೇತೃತ್ವದ ಈ ಸಮಿತಿಯಲ್ಲಿ ಒಳಾಡಳಿತ ಇಲಾಖೆ ಕಮಿಷನರ್, ಐ.ಜಿ.ಪಿ ಮೊದಲಾದವರು ಇದ್ದಾರೆ.

● **ಡೇರಿ ಹಾಲು ಬೆಲೆ ಮತ್ತೊಮ್ಮೆ ಏರಿಕೆ**

ಬೆಂಗಳೂರು, ಅ. 3– ಬೆಂಗಳೂರು ಡೇರಿಯ ಹಾಲು ಮತ್ತು ಮೊಸರಿಗೆ, ಅ. 5ರಿಂದ ಲೀಟರ್ ಒಂದಕ್ಕೆ ಹತ್ತು ಪೈಸೆ ಹೆಚ್ಚು ಬೆಲೆ. (1.70 ರಿಂದ 1.80 ರೂ.)

ಹಸುಗಳ ತಿಂಡಿ ಮತ್ತು ಮೇವಿನ ಬೆಲೆ ಹಾಗೂ ಪಶು ಸಂಗೋಪನಾ ವೆಚ್ಚ ಅಧಿಕವಾಗಿರುವುದರಿಂದ ಹಾಲು ಉತ್ಪಾದಕರಿಗೆ ಹತ್ತು ಪೈಸೆ ಹೆಚ್ಚು ದರ ಕೊಡಲು ತೀರ್ಮಾನಿಸಿರುವುದರಿಂದ, ಬೆಲೆ ಹೆಚ್ಚಿಸಬೇಕಾಗಿದೆ ಎಂದು ಡೇರಿಯ ಜನರಲ್ ಮ್ಯಾನೇಜರ್ ತಿಳಿಸಿದ್ದಾರೆ.

ಸಂಗತ

ವಿ.ವಿ.ಗಳಲ್ಲಿ ಸಂಶೋಧನೆ: ನಿಂತ ನೀರು?

ಗುಣಮಟ್ಟದ ಕೊರತೆ, ಶೀರ್ಷಿಕೆಗಳ ಪುನರಾವರ್ತನೆ, ನಕಲು ಪ್ರವೃತ್ತಿಯಿಂದ ವಿಶ್ವವಿದ್ಯಾಲಯಗಳಲ್ಲಿನ ಸಂಶೋಧನೆಯು ಉತ್ಕೃಷ್ಟತೆಯನ್ನು ಕಳೆದುಕೊಳ್ಳುತ್ತಿದೆ

• ರಾಜಕುಮಾರ ಕುಲಕರ್ಣಿ

ಕಾಲೇಜೊಂದರ ಅನುಮತಿಯ ನವೀಕರಣದ ಪರಿವೀಕ್ಷಣೆಗೆಂದು ಇತ್ತೀಚೆಗೆ ತೆರಳಿದ್ದ ಪ್ರಾಧ್ಯಾಪಕರು ಅಲ್ಲಿನ ಸಂಶೋಧನಾ ಬೆಳವಣಿಗೆಯನ್ನು ನೋಡಿ ದಂಗಾದರು. ಒಂದು ವಿಭಾಗದ ಮೂವರು ಪ್ರಾಧ್ಯಾಪಕರ ದಾಖಲೆಗಳನ್ನು ಪ್ರತ್ಯೇಕವಾಗಿ ಪರಿಶೀಲಿಸಿದಾಗ, ಒಂದು ವರ್ಷದ ಅವಧಿಯಲ್ಲಿ ಆ ವಿಭಾಗಕ್ಕೆ ಸಂಬಂಧಿಸಿದ ವಿಷಯದಲ್ಲಿ ಒಂಬತ್ತು ಸಂಶೋಧನಾ ಲೇಖನಗಳು ಪ್ರಕಟವಾಗಿರುವುದು ತಿಳಿದುಬಂತು. ಅವುಗಳನ್ನೆಲ್ಲ ಒಟ್ಟಿಗೆ ಸೇರಿಸಿ ನೋಡಿದಾಗ, ಪ್ರಕಟವಾದ ಲೇಖನಗಳ ಸಂಖ್ಯೆ ಮೂರು ಮಾತ್ರ ಎನ್ನುವ ಸತ್ಯ ಬಹಿರಂಗಗೊಂಡಿತು. ಅಂದರೆ, ಪ್ರತಿ ಪ್ರಾಧ್ಯಾಪಕ ತನ್ನ ಲೇಖನದಲ್ಲಿ ಉಳಿದ ಇಬ್ಬರು ಪ್ರಾಧ್ಯಾಪಕರ ಹೆಸರನ್ನು ಸಹ ಲೇಖಕರೆಂದು ಸೇರಿಸಿದ್ದು ಕಂಡುಬಂತು. ಮೂವರೂ ಪ್ರಾಧ್ಯಾಪಕರು ಲೇಖನಗಳನ್ನು ಪ್ರತ್ಯೇಕವಾಗಿ ತೋರಿಸಿದ್ದರಿಂದ, ಮೂರು ಲೇಖನಗಳ ಸಂಖ್ಯೆ ಒಂಬತ್ತಾಗಿ ತ್ರಿಗುಣಗೊಂಡಿತ್ತು. ಬೋಧಕರು ತಮ್ಮ ಶೈಕ್ಷಣಿಕ ಸಾಧನೆಯ ಉತ್ಕೃಷ್ಟತೆಯ ಪ್ರದರ್ಶನಕ್ಕಾಗಿ ಕೊಡು-ಕೊಳ್ಳುವಿಕೆಯ ಈ ಮಾರ್ಗವನ್ನು ಅನುಸರಿಸುತ್ತಿದ್ದಾರೆ.

ಬೋಧಕರು ಸಂಶೋಧನಾ ಲೇಖನಗಳ ಸಂಖ್ಯೆಯನ್ನು ಹೆಚ್ಚಿಸಿಕೊಳ್ಳಲು ಸಂಶೋಧನಾ ವಿದ್ಯಾರ್ಥಿಗಳನ್ನು ಅವಲಂಬಿಸಿರುವ ಇನ್ನೊಂದು ವಿಧಾನ ಚಾಲ್ತಿಯಲ್ಲಿದೆ. ವಿಶ್ವವಿದ್ಯಾಲಯ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕರು ತಮ್ಮ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡುತ್ತಿರುವ ವಿದ್ಯಾರ್ಥಿಗಳ ಮೇಲೆ ಸಂಶೋಧನಾ ಲೇಖನಗಳನ್ನು ಪ್ರಕಟಿಸುವಂತೆ ಒತ್ತಡ ತರುವ ಪ್ರವೃತ್ತಿ ಹೆಚ್ಚುತ್ತಿದೆ. ಅವರು ತಮ್ಮ ಸಂಶೋಧನಾ ಲೇಖನದಲ್ಲಿ ಮಾರ್ಗದರ್ಶಕರ ಹೆಸರನ್ನು ಪ್ರಥಮ ಇಲ್ಲವೇ ಸಹಲೇಖಕ ಎಂದು ನಮೂದಿಸುವುದೇ ಇಂತಹದ್ದೊಂದು ಹುನ್ನಾರಕ್ಕೆ ಕಾರಣ.

ಈ ನಡುವೆ ಉಚಿತವಾಗಿ ದೊರೆಯುವ ಸಂಶೋಧನಾ ಲೇಖನಗಳಿಗೆ ವಿದ್ಯಾರ್ಥಿಗಳು ಮತ್ತು ಬೋಧಕರಿಂದ ಬೇಡಿಕೆ ಹೆಚ್ಚುತ್ತಿದೆ. ವಿಶ್ವವಿದ್ಯಾಲಯದ ಗ್ರಂಥಾಲಯದಲ್ಲಿ ಸಹಾಯಕ ಗ್ರಂಥಪಾಲಕರಾಗಿ ಸೇವೆ ಸಲ್ಲಿಸುತ್ತಿರುವ ನನ್ನ ಸ್ನೇಹಿತರೊಬ್ಬರಿಗೆ ಇತ್ತೀಚೆಗೆ ಸಂಶೋಧನಾ ವಿದ್ಯಾರ್ಥಿಯೊಬ್ಬನಿಂದ ನಿರ್ದಿಷ್ಟ ಲೇಖನಕ್ಕೆ ಬೇಡಿಕೆ ಬಂತು. ವಿವಿಧ ಜಾಲತಾಣಗಳನ್ನು ಪರಿಶೀಲಿಸಿದಾಗ, ಲೇಖನ ಪಡೆಯಲು ನಿರ್ದಿಷ್ಟ ಶುಲ್ಕ ಪಾವತಿಸುವುದು ಕಡ್ಡಾಯವೆಂದು ತಿಳಿದುಬಂತು. ಆದರೆ ಆತ ಉಚಿತವಾಗಿ ದೊರೆಯುವ ಬೇರೆ ಲೇಖನ ಓದಿದರಾಯಿತು ಎಂದು ಪ್ರತಿಕ್ರಿಯಿಸಿದ. ಸಂಶೋಧನೆಯ ವೇಳೆ ನಿರ್ದಿಷ್ಟ ಲೇಖನಕ್ಕೆ ಬದಲಾಗಿ ಪರ್ಯಾಯ ಲೇಖನ ಎನ್ನುವ ಅನುಕೂಲಸಿಂಧು ನಿಲುವಿನಿಂದ ಸಂಶೋಧನೆಯಲ್ಲಿ ಉತ್ಕೃಷ್ಟತೆಯನ್ನು ಸಾಧಿಸುವುದಾದರೂ ಹೇಗೆ ಎನ್ನುವುದು ನನ್ನ ಸ್ನೇಹಿತರ ಆತಂಕವಾಗಿತ್ತು. ವಿದ್ಯಾರ್ಥಿಗಳು ಮಾತ್ರವಲ್ಲ ಆಕರ್ಷಕ ಸಂಬಳ ಪಡೆಯುವ ಬೋಧಕರು ಕೂಡ ಉಚಿತವಾಗಿ ಸಿಗುವ ಮಾಹಿತಿಗಾಗಿ ಬೇಡಿಕೆ ಸಲ್ಲಿಸುತ್ತಿರುವುದು ವಿಪರ್ಯಾಸದ ಸಂಗತಿ.

ವಾಮಮಾರ್ಗದ ಮೂಲಕ ಓದುಗರಿಗೆ ಮಾಹಿತಿ ತಲುಪಿಸಲು ಇಂದು ಅನೇಕ ಜಾಲತಾಣಗಳಿರುವುದು ಇಂತಹ ಬೇಡಿಕೆಗೆ ಕಾರಣ. ಸಾಮಾನ್ಯ ಮಾಹಿತಿ ಮಾತ್ರವಲ್ಲದೆ, ಸಂಶೋಧನಾ ಲೇಖನಗಳು ಕೂಡ ಓದುಗರಿಗೆ ಉಚಿತವಾಗಿ ಲಭ್ಯವಾಗುತ್ತಿವೆ. ಪ್ರಕಾಶಕರ ಅನುಮತಿ ಇಲ್ಲದೆ ಸಂಶೋಧನಾ ಲೇಖನಗಳನ್ನು ಉಚಿತವಾಗಿ ಒದಗಿಸುವ ಜಾಲತಾಣಗಳನ್ನು ಪತ್ತೆಹಚ್ಚುವಲ್ಲಿ ಗ್ರಂಥಪಾಲಕರ ಪಾತ್ರ ಪ್ರಮುಖವಾಗಿದೆ. ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಯಾವುದೇ ಮಾರ್ಗದಿಂದಾದರೂ ಸರಿ ಗ್ರಂಥಪಾಲಕ ತಮಗೆ ಬೇಕಾದ ಲೇಖನವನ್ನು ಉಚಿತವಾಗಿ ಒದಗಿಸಬೇಕೆಂದು ಅಪೇಕ್ಷಿಸುತ್ತಾರೆ. ತಮ್ಮ ವೃತ್ತಿಯ ಅಸ್ತಿತ್ವಕ್ಕಾಗಿ ಗ್ರಂಥಪಾಲಕರು ಇಂತಹ ಕಾರ್ಯಕ್ಕೆ ಮುಂದಾಗುತ್ತಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಸಂಶೋಧನಾ ನಿಯತಕಾಲಿಕಗಳ ಪೇಪರ್ ಮಾದರಿಯ ಪ್ರಕಟಣೆ ಸಂಖ್ಯಾತ್ಮಕವಾಗಿ ಕ್ಷೀಣಿಸುತ್ತಿದೆ. ಹೆಚ್ಚಿನ ಪ್ರಕಾಶಕರು ವಿದ್ಯುನ್ಮಾನ (ಎಲೆಕ್ಟ್ರಾನಿಕ್) ಮಾದರಿಯಲ್ಲಿ ಪ್ರಕಟಿಸಲು ಒಲವು ತೋರುತ್ತಿದ್ದಾರೆ. ಕಾಗದ ಮತ್ತು ಮುದ್ರಣ ಸಾಮಗ್ರಿಗಳ ಅಧಿಕ ಬೆಲೆ ಈ ಮಾರ್ಪಾಡಿಗೆ ಕಾರಣ. ಶಿಕ್ಷಕರು, ವಿದ್ಯಾರ್ಥಿಗಳು ಸಂಶೋಧನಾ ಲೇಖನಗಳನ್ನು ಶುಲ್ಕ ಪಾವತಿಸಿ ಪಡೆಯಲು ಸಿದ್ಧರಿಲ್ಲದಿರುವುದು, ಕೆಲವು ಜಾಲತಾಣಗಳು ಸಂಶೋಧನಾ ಲೇಖನಗಳನ್ನು ಉಚಿತವಾಗಿ ಒದಗಿಸುತ್ತಿರುವುದು ಪ್ರಕಾಶಕರ ಆರ್ಥಿಕ ಸಮಸ್ಯೆಯನ್ನು ಉಲ್ಬಣಗೊಳಿಸಿದೆ.



ವಿಶ್ವವಿದ್ಯಾಲಯ ಧನಸಹಾಯ ಆಯೋಗ, ರಾಷ್ಟ್ರೀಯ ವೈದ್ಯಕೀಯ ಆಯೋಗ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿಯಂತಹ ಉನ್ನತ ಶಿಕ್ಷಣ ಸಮಿತಿಗಳು ಬೋಧಕರು ಸಂಶೋಧನಾ ಲೇಖನ ಪ್ರಕಟಿಸುವುದನ್ನು ಕಡ್ಡಾಯಗೊಳಿಸಿವೆ. ವೇತನ ಬಡ್ತಿ ಮತ್ತು ಹುದ್ದೆಯ ಬಡ್ತಿಗೆ ಇದನ್ನು ಪರಿಗಣಿಸುವುದರಿಂದ ಹೆಚ್ಚಿನ ಶಿಕ್ಷಕರು ಇದನ್ನೊಂದು ಅನಿವಾರ್ಯ ನಿಯಮವೆನ್ನುವಂತೆ ಪಾಲಿಸುತ್ತಾರೆಯೇ ವಿನಾ ಸ್ವಯಂ ಆಸಕ್ತಿಯಿಂದ ಸಂಶೋಧನೆಯಲ್ಲಿ ತೊಡಗಿಕೊಳ್ಳುವುದು ವಿರಳ. ದೀರ್ಘಕಾಲ ಅಧ್ಯಯನದಲ್ಲಿ ತೊಡಗಿಸಿಕೊಳ್ಳಲು ಸಿದ್ಧರಿಲ್ಲದ ಸಂಶೋಧಕರಲ್ಲಿ ನಕಲು ಮಾಡುವ ಪ್ರವೃತ್ತಿ ಬೆಳೆಯುತ್ತಿದೆ. ನಕಲನ್ನು ಪತ್ತೆಹಚ್ಚಲು ತಂತ್ರಾಂಶಗಳು ಬಳಕೆಯಲ್ಲಿ ಇವೆಯಾದರೂ ಅದೇ ತಂತ್ರಾಂಶಗಳ ಸಹಾಯದಿಂದ ನಕಲು ಕಡಿಮೆ ಪ್ರಮಾಣದಲ್ಲಿ ಗೋಚರವಾಗುವಂತೆ ಮಾಡಲು ಕೂಡ ಸಾಧ್ಯವಿದೆ ಎಂದು ಸಂಶೋಧಕರು ಬಲ್ಲರು.

ಗುಣಮಟ್ಟದ ಸಂಶೋಧನೆಗಾಗಿ ಶಿಕ್ಷಕರು, ವಿದ್ಯಾರ್ಥಿಗಳು ಮಾತ್ರವಲ್ಲದೆ ಗ್ರಂಥಪಾಲಕರು ಹಾಗೂ ಜಾಲತಾಣ ನಿರ್ವಾಹಕರ ಮನೋಭಾವದಲ್ಲೂ ಬದಲಾವಣೆ ಆಗಬೇಕಾದದ್ದು ಸದ್ಯದ ಅಗತ್ಯ.

ವಾಚಕರ ವಾಣಿ

ರಾಜಕೀಯಕ್ಕೆ ಬರಲಿ ಹೊಸತನ

ರಾಜಕೀಯ ಪಕ್ಷಗಳಲ್ಲಿ ವಂಶಾಡಳಿತವು ಪ್ರಜಾತಂತ್ರ ಮೌಲ್ಯಗಳಿಗೆ ವ್ಯತಿರಿಕ್ತವಾದುದು ಎಂದು ಪ್ರತಿಪಾದಿಸಿರುವ ಸಂಪಾದಕೀಯ (ಪ್ರ.ವಾ., ಅ. 3) ರಾಜಕಾರಣಿಗಳ ಕಣ್ತೆರೆಸಬೇಕಿದೆ. ತನ್ನ ನಂತರ ತನ್ನ ಮಕ್ಕಳು, ಮೊಮ್ಮಕ್ಕಳು ಸಹ ಅಧಿಕಾರದ ಗದ್ದುಗೆ ಹಿಡಿಯಬೇಕು ಎಂಬ ಕೆಲವರ ದುರಾಸೆ ಕಂಡು ಜನರಿಗೆ ವಾಕರಿಗೆ ಬರುವಂತಾಗಿದೆ. ಕಾಂಗ್ರೆಸ್ ಪಕ್ಷದ ಉನ್ನತ ನಾಯಕರು ಈ ಸಂಬಂಧದ ಆರೋಪಕ್ಕೆ ಒಳಗಾಗಿದ್ದರು. ಈ ಚಾಳಿಯನ್ನು ಈಗ ಎಲ್ಲೆಡೆಯೂ ಕಾಣಬಹುದು. ಪ್ರಾದೇಶಿಕ ಪಕ್ಷಗಳಲ್ಲಿ ಈ ಪಿಡುಗು ಉಲ್ಬಣಿಸಿದೆ. ಜನರಿಗೆ ಇಷ್ಟವಿಲ್ಲದಿದ್ದರೂ ಇದನ್ನು ಸಹಿಸಿಕೊಳ್ಳುವ ಅನಿವಾರ್ಯ ಬಂದೊದಗಿದೆ. ಹೊಸ ನಾಯಕತ್ವ, ಹೊಸ ಆಲೋಚನೆ, ಹೊಸ ನೀರು ಹೀಗೆ ಹೊಸತನ ತುಂಬಿದ ಸಮಾಜ ಹಾಗೂ ಪಾರದರ್ಶಕ ಮೌಲ್ಯಾಧಾರಿತ ಆಡಳಿತವು ದೇಶದ ಪ್ರಗತಿಗೆ ಅಗತ್ಯ.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ರಾಜ್ಯ ಶಿಕ್ಷಣ ನೀತಿಯಲ್ಲೇ ಐಚ್ಛಿಕ ಕನ್ನಡಕ್ಕೆ ಕುತ್ತು?

ರಾಜ್ಯದ ಪದವಿ ಶಿಕ್ಷಣ ಕ್ರಮದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಗೆ (ಎನ್‌ಇಪಿ) ಬದಲಾಗಿ ರಾಜ್ಯ ಶಿಕ್ಷಣ ನೀತಿಯನ್ನು (ಎಸ್‌ಇಪಿ) ಪ್ರಸಕ್ತ ವರ್ಷದಿಂದ ಅಳವಡಿಸಿಕೊಳ್ಳಲಾಗಿದೆ. ಇದರಲ್ಲಿ 'ನಾನ್ ಎನ್‌ಇಪಿ' ಸೆಮಿಸ್ಟರ್ ಹಾಗೂ ಎನ್‌ಇಪಿ ಸೆಮಿಸ್ಟರ್ ಶಿಕ್ಷಣ ಪದ್ಧತಿಯಲ್ಲಿ ಪ್ರಥಮ ವರ್ಷದ ಐಚ್ಛಿಕ ಕನ್ನಡದ ಆರು ಗಂಟೆಗಳಿದ್ದ ಬೋಧನಾ ಕಾರ್ಯಭಾರ ಅವಧಿಯನ್ನು ಕೆಲವು ವಿಶ್ವವಿದ್ಯಾಲಯಗಳು ಎಸ್‌ಇಪಿ ಸೆಮಿಸ್ಟರ್‌ನಲ್ಲಿ ಐದು ಗಂಟೆಗಳ ಅವಧಿಗೆ ಇಳಿಸುತ್ತಿರುವುದು ವಿಷಾದನೀಯ. ಬಹುತೇಕ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರ ಬೇಡಿಕೆಯಂತೆ, ಐಚ್ಛಿಕ ಕನ್ನಡ ವಿಷಯವನ್ನು ಪರಿಣಾಮಕಾರಿಯಾಗಿ ಅಭ್ಯಾಸ ಮಾಡಲು ಅನುಕೂಲವಾಗುವ ರೀತಿ, ಹಿಂದೆ ಇದ್ದ ಆರು ಗಂಟೆಗಳ ಬೋಧನಾ ಅವಧಿಯನ್ನು ಮುಂದುವರಿಸುವುದು ಅತ್ಯಗತ್ಯ.

ಸಂಪತ್ ಬೆಟ್ಟಗೆರೆ, ಮೂಡಿಗೆರೆ

ಪ್ರಬುದ್ಧ ಚರ್ಚೆ: ಪಾಶ್ಚಿಮಾತ್ಯರ ಮಾದರಿ

ವಿಭಿನ್ನ ಚಿಂತನೆ, ವಿಭಿನ್ನ ಪಕ್ಷಗಳಿಗೆ ಸೇರಿದವರಾದರೂ ಡೊನಾಲ್ಡ್ ಟ್ರಂಪ್ ಮತ್ತು ಕಮಲಾ ಹ್ಯಾರಿಸ್ ಅವರ ನಡುವಣ ಟೆಲಿವಿಷನ್ ಚರ್ಚೆಯು ಅನುಕರಣೀಯವಾಗಿರುತ್ತದೆ. ಒಬ್ಬರು ಸಂಪೂರ್ಣವಾಗಿ ಮಾತನಾಡಿದ ನಂತರ ಇನ್ನೊಬ್ಬರು ತಮ್ಮ ವಾದ ಮಂಡಿಸುವುದನ್ನು ನೋಡುವುದು ಖುಷಿ ಕೊಡುತ್ತದೆ. ನಮ್ಮಲ್ಲಿ ರಾಜಕೀಯ ಮುಖಂಡರು ಅಥವಾ ಕಾರ್ಯಕರ್ತರು ಟಿ.ವಿ. ಚರ್ಚೆಯಲ್ಲಿ ಕಿರುಚಾಡುವುದೇ ಮಹಾನ್ ಸಾಧನೆ ಎಂಬಂತೆ ನಡೆದುಕೊಳ್ಳುತ್ತಾರೆ. ಸಭ್ಯತೆಯ ಸಂವಾದವನ್ನು ನಮ್ಮ ರಾಜಕಾರಣಿಗಳು ಪಶ್ಚಿಮದಿಂದ ಏಕೆ ಕಲಿಯಬಾರದು?

ಗುರು ಜಗಳೂರು, ಹರಿಹರ

ಮೌಲಿಕವಲ್ಲದ ಸಾಧನೆಗೆ ಪ್ರಶಸ್ತಿ?

ಮಿಥುನ್ ಚಕ್ರವರ್ತಿ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಸಂದಿರುವುದರ ಸಂದರ್ಭದಲ್ಲಿ ಪ್ರಕಟವಾದ 'ಫುಟ್‌ಪಾತ್‌ನಿಂದ ಫಾಲ್ಕೆ ಗರಿಯವರೆಗೆ' ಲೇಖನ (ಪ್ರ.ವಾ., ಅ. 1) ಓದಿದ ಬಳಿಕ 'ಆ ಪ್ರಶಸ್ತಿಗೆ ಅವರು ಅರ್ಹರೆ?' ಎಂಬ ಪ್ರಶ್ನೆ ಮೂಡಿತು. 1969ರಿಂದ 2023ರವರೆಗಿನ ದಾದಾಭಾಯಿ ಫಾಲ್ಕೆ ಪ್ರಶಸ್ತಿ ವಿಜೇತರ ಪಟ್ಟಿಯನ್ನು ಗಮನಿಸಿದ್ದೇನೆ. ಭಾರತೀಯ ಚಿತ್ರರಂಗಕ್ಕೆ ಗಮನಾರ್ಹ ಕೊಡುಗೆ ನೀಡಿರಬೇಕು. ಅದು ಜೀವಮಾನಸಾಧನೆಗಾಗಿ ಕೊಡಲ್ಪಡುತ್ತದೆ. ಭಾರತೀಯ ಚಿತ್ರರಂಗದ ಅಭಿವೃದ್ಧಿಗೆ ಆ ವ್ಯಕ್ತಿಯ ಕೊಡುಗೆಯನ್ನು ಆಯ್ಕೆ ಸಮಿತಿಯು ಪರಿಶೀಲಿಸಬೇಕು.

ವಿ.ಶಾಂತಾರಾಂ ನಟರಷ್ಟೇ ಅಲ್ಲದೆ ಚಲನಚಿತ್ರ ನಿರ್ಮಾಣದಲ್ಲಿ ಗಣನೀಯ ಸಾಧನೆ ಮಾಡಿದ್ದವರು. ಎಲ್.ವಿ.ಪ್ರಸಾದ್, ಡಿ. ರಾಮಾನಾಯ್ಡು ಉಲ್ಲೇಖನೀಯ ಕೆಲಸ ಮಾಡಿದ್ದರು. ಬರೀ ನಟರಾದರೆ ಸಾಲದು- ಪೃಥ್ವಿರಾಜ್ ಕಪೂರ್, ಎನ್.ಟಿ.ರಾಮರಾವ್, ಅಕ್ಕಿನೇನಿ ನಾಗೇಶ್ವರ ರಾವ್ ಚಲನಚಿತ್ರೋದ್ಯಮಕ್ಕೆ ಸ್ಥಿರತೆ ತಂದುಕೊಟ್ಟವರು.

ಈ ದೃಷ್ಟಿಯಿಂದ ಮಿಥುನ್ ಚಕ್ರವರ್ತಿಯವರ ಸಾಧನೆ ಅಷ್ಟೇನೂ ಮೌಲಿಕ ಅಲ್ಲ. 2021ರಿಂದ ಈಚೆಗೆ ಅವರು ತೆಗೆದುಕೊಂಡ ನಿಲುವುಗಳಿಗಾಗಿ ಪದ್ಮಭೂಷಣದ ನಂತರ ಈ ಪ್ರಶಸ್ತಿಯನ್ನು ನೀಡಲಾಗಿದೆಯೇ? ಮಿಥುನ್ ದಾ ಟಿ.ವಿ. ಚಾನೆಲ್‌ವೊಂದಕ್ಕೆ ನೀಡಿದ ಸಂದರ್ಶನದಲ್ಲಿ 'ನನಗೆ ಈ ಸುದ್ದಿಯನ್ನು ಜೀರ್ಣಿಸಿಕೊಳ್ಳಲಾಗುತ್ತಿಲ್ಲ' ಎಂದಿದ್ದಾರೆ. ಫಾಲ್ಕೆ ಪ್ರಶಸ್ತಿಯನ್ನು ಬಂಗಾಳಿ ನಟಿ ಸುಚಿತ್ರಾ ಸೇನ್ ನಿರಾಕರಿಸಿದ್ದರಂತೆ. ಆದರೆ ಇವರು ಸ್ವೀಕರಿಸಲಿದ್ದಾರೆ.

ಎಚ್.ಎಸ್.ಮಂಜುನಾಥ, ಗೌರಿಬಿದನೂರು

ಚಾಲಕ, ನಿರ್ವಾಹಕರ ಮೇಲೆ ಹಲ್ಲೆ ಸಲ್ಲ

ಸಾರ್ವಜನಿಕ ಕರ್ತವ್ಯ ನಿರ್ವಹಿಸುವ ಸಾರಿಗೆ ಸಿಬ್ಬಂದಿಯ ಪ್ರಾಣಕ್ಕೆ ಇತ್ತೀಚೆಗೆ ರಕ್ಷಣೆ ಇಲ್ಲದಂತಾಗಿದೆ. ಇದಕ್ಕೆ ತಾಜಾ ಉದಾಹರಣೆ, ಬೆಂಗಳೂರು ಮಹಾನಗರ ಸಾರಿಗೆ ನಿಗಮದ (ಬಿಎಂಟಿಸಿ) ನಿರ್ವಾಹಕರ ಮೇಲೆ ನಡೆದಿರುವ ಹಲ್ಲೆ. ಇದು ಖಂಡನೀಯ.

'ಬಾಗಿಲ ಬಳಿ ನಿಲ್ಲಬೇಡಿ, ಒಳಗೆ ಬನ್ನಿ' ಎಂದು ಹೇಳಿದ್ದಕ್ಕೇ ಜಾರ್ಖಂಡ್ ಮೂಲದ ಯುವಕನೊಬ್ಬ ನಿರ್ವಾಹಕರಿಗೆ ಮೂರು ಬಾರಿ ಚಾಕುವಿನಿಂದ ಇರಿದಿದ್ದಾನೆ. ಬಿಎಂಟಿಸಿ ಹಾಗೂ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಇಂತಹ ಸಣ್ಣ ವಿಷಯಗಳಿಗಾಗಿ ದಿನನಿತ್ಯ ಕೆಲವು ಕಿಡಿಗೇಡಿಗಳಿಂದ ಹಲ್ಲೆ, ದೌರ್ಜನ್ಯ ನಡೆಯುತ್ತಲೇ ಇರುತ್ತದೆ. 'ಬೇಗ ಬೇಗ ಹತ್ತಿ ಇಳಿಯಿರಿ', 'ಚಿಲ್ಲರೆ ಕೊಟ್ಟು ಚೀಟಿ ಪಡೆಯಿರಿ', 'ಹೆಣ್ಣುಮಕ್ಕಳ ಹಾಗೂ ಹಿರಿಯ ನಾಗರಿಕರ ಆಸನಗಳನ್ನು ಬಿಟ್ಟುಕೊಡಿ', 'ಗುರುತಿನ ಚೀಟಿ ತೋರಿಸಿ', 'ತನಿಖಾ ಸ್ಥಳ ಬರುವ ಮೊದಲೇ ಚೀಟಿ ಪಡೆಯಿರಿ', 'ನಿಲ್ದಾಣವಿಲ್ಲದ ಕಡೆಗಳಲ್ಲಿ ನಿಲ್ಲಿಸಲು ಹೇಳಬೇಡಿ' ಎಂಬಂತಹ ಹೇಳಿಕೆಗಳಿಗೆ ಪ್ರಯಾಣಿಕರು ನಿರ್ವಾಹಕರ ವಿರುದ್ಧ ಜಗಳಕ್ಕೆ ಬೀಳುತ್ತಾರೆ. ಹಲ್ಲೆ ಕೂಡ ಮಾಡುತ್ತಾರೆ. ಇದಕ್ಕೆ ಮುಖ್ಯ ಕಾರಣ ಪ್ರಯಾಣಿಕರಿಗೆ ಇರುವ ಕಾನೂನು ಅರಿವಿನ ಕೊರತೆ. ಚಾಲಕರು, ನಿರ್ವಾಹಕರು ತಪ್ಪು ಮಾಡಿದ್ದರೆ ವಾಹನದೊಳಗೆ ನಮೂದಿಸಿರುವ ಮೇಲಧಿಕಾರಿಗಳ ಸಂಪರ್ಕ ಸಂಖ್ಯೆಗೆ ಕರೆ ಮಾಡಿ ದೂರು ಕೊಡಬಹುದು. ಎಲ್ಲಾ ಪ್ರಮುಖ ನಿಲ್ದಾಣಗಳಲ್ಲಿ ಅಧಿಕಾರಿಗಳು ಇರುತ್ತಾರೆ. ಅಲ್ಲಿಯೂ ಹೇಳಿ ಸಮಸ್ಯೆ ಬಗೆಹರಿಸಿಕೊಳ್ಳಬಹುದು. ಅದನ್ನು ಬಿಟ್ಟು ಬಡಪಾಯಿ ಚಾಲಕ, ನಿರ್ವಾಹಕರ ಮೇಲೆ ಹಲ್ಲೆ, ದೌರ್ಜನ್ಯ ನಡೆಸಿ ಅವರ ಕುಟುಂಬಗಳು ತೊಂದರೆಗೆ ಈಡಾಗುವಂತೆ ಮಾಡುವುದು ಯಾವ ನ್ಯಾಯ?

ಗಣಪತಿ ಗೋ. ಚಲವಾದಿ, ದೇವರಗೆಣ್ಣೂರ, ಬಬಲೇಶ್ವರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸತ್ಯ, ಅರ್ಧ ಸತ್ಯಗಳ ಮಧ್ಯೆ ಜಾತಿ ಗಣತಿ ಚರ್ಚೆ

ಈ ದೇಶದ 'ಅಭಿಪ್ರಾಯ ರೂಪಿಸುವ ವರ್ಗ'ದಲ್ಲಿ ಹೆಚ್ಚಿನವರು ಪ್ರಬಲ ಜಾತಿಗೆ ಸೇರಿದವರೇ ಆಗಿದ್ದಾರೆ. ಜಾತಿ ಗಣತಿಯನ್ನು 'ಸೈದ್ಧಾಂತಿಕ'ವಾಗಿ ವಿರೋಧಿಸಲು ಮಂಡಿಸುವ ಈ 'ಅಭಿಪ್ರಾಯ ರೂಪಿಸುವ ವರ್ಗ'ದ ವಾದವು ಹಲವು ಅರ್ಧ ಸತ್ಯಗಳಿಂದ ಕೂಡಿದೆ. 10 ಅರ್ಧ ಸತ್ಯಗಳ ಪಟ್ಟಿ ಇಲ್ಲಿದೆ

• ಯೋಗೇಂದ್ರ ಯಾದವ್

ಹಂಗೆರಿಯ ಸಮಾಜಶಾಸ್ತ್ರಜ್ಞ ಕಾರ್ಲ್ ಮ್ಯಾನ್‌ಹೈಮನ್ ಅವರು 'ಸಿದ್ಧಾಂತ' ಎನ್ನುವ ಆಲೋಚನಾ ಕ್ರಮವನ್ನು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸುತ್ತಾರೆ. ಅವರ ಪ್ರಕಾರ 'ಸಿದ್ಧಾಂತ' ಎಂದರೆ, ಹುಸಿ ನಂಬಿಕೆಗಳು ಅಥವಾ ಅದೊಂದು ಭ್ರಮೆ. ಈ ಹುಸಿ ನಂಬಿಕೆಗಳು, ಈ ಭ್ರಮೆಗಳು ಸಮಾಜದ ನಿಜ ಸ್ವರೂಪವನ್ನು ಮಸುಕು ಮಾಡಿ ಬಿಡುತ್ತವೆ ಎಂದು ಅವರು ಅಭಿಪ್ರಾಯಪಡುತ್ತಾರೆ. ಮ್ಯಾನ್‌ಹೈಮನ್ ಅವರ ಈ ಅರ್ಥ ವಿವರಣೆಯು ಸೀಮಿತ ವ್ಯಾಪ್ತಿಯಲ್ಲಿ ಮಾತ್ರ ಚರ್ಚೆಯಾಗಿದೆ. ಇವರ ಈ ವ್ಯಾಖ್ಯಾನಕ್ಕೆ ಉದಾಹರಣೆವೊಂದನ್ನು ಹುಡುಕುತ್ತಿದ್ದೀರಿ ಎಂದಾದರೆ, ನಮ್ಮ ದೇಶದಲ್ಲಿ ಜಾತಿ ಗಣತಿಯ ಕುರಿತು ನಡೆಯುತ್ತಿರುವ ಚರ್ಚೆಯು ಹೆಚ್ಚು ಸೂಕ್ತವಾಗಬಲ್ಲದು.



ಉದಾರವಾದಿ 'ಸಿದ್ಧಾಂತ'ದ, ಪ್ರಗತಿಪರವಾಗಿ ಚಿಂತಿಸುವ ಸಾಕ್ಷರ ಭಾರತೀಯರು ಜಾತಿ ಗಣತಿ ಕುರಿತಾಗಿ ಚರ್ಚಿಸುವುದನ್ನು ಕಂಡರೆ, ನನಗೆ ಆಶ್ಚರ್ಯವಾಗುತ್ತದೆ. ಹುಟ್ಟು ಎನ್ನುವುದೊಂದು ಆಕಸ್ಮಿಕವಷ್ಟೆ ಎಂದು ಜನರು ನಂಬುತ್ತಾರೆ. ಹೀಗೆ ಹೇಳುವಾಗ, ಅವರಲ್ಲಿನ ಅಜ್ಞಾನ, ಅವರ ಪೂರ್ವಗ್ರಹಗಳು ಹಾಗೂ ಅವರ ದುರಹಂಕಾರದ ಕುರಿತು ನನಗೆ ಸಿಟ್ಟು ಬರುತ್ತದೆ. ಹುಟ್ಟಿನ ಕುರಿತು ಈ ರೀತಿಯಾಗಿ ಮಾತನಾಡುವ ಈ ದೇಶದ 'ಅಭಿಪ್ರಾಯ ರೂಪಿಸುವ ವರ್ಗ'ದಲ್ಲಿ ಹೆಚ್ಚಿನವರು ಪ್ರಬಲ ಜಾತಿಗೆ ಸೇರಿದವರೇ ಆಗಿದ್ದಾರೆ. ಜಾತಿ ಗಣತಿಯನ್ನು ಈ ರೀತಿ 'ಸೈದ್ಧಾಂತಿಕ'ವಾಗಿ ವಿರೋಧಿಸಲು ಮಂಡಿಸುವ ಈ 'ಅಭಿಪ್ರಾಯ ರೂಪಿಸುವ ವರ್ಗ'ದ ವಾದವು ಹಲವು ಅರ್ಧ ಸತ್ಯಗಳಿಂದ ಕೂಡಿದೆ. ಹಾಗಾದರೆ, ಯಾವುವು ಆ ಅರ್ಧ ಸತ್ಯಗಳು?



ಇಲ್ಲಿದೆ 10 ಅರ್ಧ ಸತ್ಯಗಳ ಪಟ್ಟಿ...

1. 1931ರ ನಂತರ ದೇಶದಲ್ಲಿ ಜಾತಿ ಗಣತಿ ನಡೆದೇ ಇಲ್ಲ

ನಿಜ, 1931ರ ನಂತರ ನಡೆದ ಎಲ್ಲ ಗಣತಿಯ ವೇಳೆ, ಪ್ರತಿಯೊಬ್ಬರಲ್ಲಿಯೂ ಅವರ ಜಾತಿಯ ಕುರಿತು ಪ್ರಶ್ನೆಗಳನ್ನು ಕೇಳಿಲ್ಲ. ಆದರೆ, ಇಲ್ಲೊಂದು ತಪ್ಪು ಗ್ರಹಿಕೆ ಇದೆ. ವಾಸ್ತವವಾಗಿ, ಸ್ವತಂತ್ರ ಭಾರತದಲ್ಲಿ 10 ವರ್ಷಗಳಿಗೊಮ್ಮೆ ನಡೆಯುವ ಗಣತಿಯ ವೇಳೆ ಜನರಲ್ಲಿ ಜಾತಿ ಕುರಿತ ಪ್ರಶ್ನೆಗಳನ್ನು ಕೇಳಲಾಗಿದೆ. 'ನೀವು ಪರಿಶಿಷ್ಟ ಜಾತಿಗೆ ಸೇರಿದ್ದೀರೋ ಅಥವಾ ಪರಿಶಿಷ್ಟ ಪಂಗಡಕ್ಕೆ ಸೇರಿದ್ದೀರೋ ಎಂದು ಕೇಳಲಾಗಿದೆ. ಇಷ್ಟೇ ಅಲ್ಲ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಶೈಕ್ಷಣಿಕ ಹಾಗೂ ಆರ್ಥಿಕ ಸೂಚ್ಯಂಕವನ್ನು ಬಿಡುಗಡೆ ಮಾಡಲಾಗುತ್ತದೆ. ಈ ಸೂಚ್ಯಂಕದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡದ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಈ ಸೂಚ್ಯಂಕದ ತಯಾರಿಕೆಯ ಕಾರಣಕ್ಕಾಗಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸೇರಿದ ಜನರಲ್ಲಿ ಗಣತಿಯ ವೇಳೆಯಲ್ಲಿಯೇ ಜಾತಿ ಕುರಿತು ಪ್ರಶ್ನಿಸಲಾಗುತ್ತದೆ.

2. ಜಾತಿ ಗಣತಿ ಎನ್ನುವುದು ರಾಹುಲ್ ಗಾಂಧಿ ಅವರ ಆವಿಷ್ಕಾರ

ನಿಜ, ಕಾಂಗ್ರೆಸ್ ಪಕ್ಷವು ತೀರಾ ಇತ್ತೀಚೆಗೆ ಜಾತಿ ಗಣತಿ ಕುರಿತು ತನ್ನ ಇಚ್ಛಾಶಕ್ತಿಯನ್ನು ತೋರಿಸುತ್ತಿದೆ. ಇದು ರಾಹುಲ್ ಗಾಂಧಿ ಅವರ ಕಾರಣಕ್ಕಾಗಿಯೇ ಆಗುತ್ತಿದೆ. ಆದರೆ, ಜಾತಿ ಗಣತಿ ನಡೆಯಬೇಕು ಎನ್ನುವ ಆಗ್ರಹವು ದೇಶಕ್ಕೆ ಹೊಸತೇನಲ್ಲ. ಅಟಲ್ ಬಿಹಾರಿ ವಾಜಪೇಯಿ ಅವರ ಆಡಳಿತದ ಅವಧಿಯಲ್ಲಿ ಸಾಮಾಜಿಕ ನ್ಯಾಯ ಸಚಿವಾಲಯ, ರಿಜಿಸ್ಟ್ರಾರ್ ಜನರಲ್ ಹಾಗೂ ಗಣತಿ ಆಯೋಗವು ಜಾತಿ ಗಣತಿ ನಡೆಸಬೇಕು ಎಂದು ಶಿಫಾರಸು ಮಾಡಿದ್ದವು. ಈ ಬಗ್ಗೆ 2010ರಲ್ಲಿ ಲೋಕಸಭೆಯಲ್ಲಿ ವಿಸ್ತೃತವಾದ ಚರ್ಚೆಯೂ ನಡೆದಿತ್ತು ಮತ್ತು ಬಿಜೆಪಿಯು ಈ ಬಗ್ಗೆ ತನ್ನ ಸಹಮತವನ್ನೂ ನೀಡಿತ್ತು. ಆ ಕಾರಣ, ಜಾತಿ ಗಣತಿ ನಡೆಸುವ ಸಂಬಂಧ ಲೋಕಸಭೆಯಲ್ಲಿ ಸರ್ವಾನುಮತದಿಂದ ಒಪ್ಪಿಗೆಯೂ ದೊರೆತಿತ್ತು. ಮುಂಬರುವ ಗಣತಿಯ ವೇಳೆ 'ಇತರ ಹಿಂದುಳಿದ ಜಾತಿ' (ಒಬಿಸಿ) ಕಾಲಂ ಅನ್ನು ಸೇರಿಸುವುದಾಗಿ 2018ರಲ್ಲಿ ಅಂದಿನ ಗೃಹ ಸಚಿವ ರಾಜನಾಥ ಸಿಂಗ್ ಭರವಸೆ ನೀಡಿದ್ದರು. ಒಬಿಸಿ ಕಾಲಂ ಅನ್ನು ಗಣತಿಯಲ್ಲಿ ಸೇರಿಸುವಂತೆ ಸಾಮಾಜಿಕ ನ್ಯಾಯದ ಕುರಿತ ಸಂಸದೀಯ ಸಮಿತಿ, ರಾಷ್ಟ್ರೀಯ ಹಿಂದುಳಿದ ವರ್ಗಗಳ ಆಯೋಗ ಶಿಫಾರಸು ಮಾಡಿದ್ದವು. ಬಿಹಾರದ ಎನ್‌ಡಿಎ ಸರ್ಕಾರವೂ ಸೇರಿದಂತೆ ಕೆಲವು ರಾಜ್ಯ ಸರ್ಕಾರಗಳೂ ಇದರ ಪರವಾಗಿದ್ದವು.

3. ಜಾತಿ ಗಣತಿ ನಡೆಸುವುದು ಸುದೀರ್ಘವಾದ ಪ್ರಕ್ರಿಯೆ. ಇದರಿಂದ ಗಣತಿ ಕಾರ್ಯ ವಿಳಂಬವಾಗುತ್ತದೆ

ನಿಜ, ಗಣತಿಯ ವೇಳೆ ಕೇಳಲಾಗುವ ಪ್ರಶ್ನೋತ್ತರ ಮಾದರಿಯನ್ನೇ ಜಾತಿ ಗಣತಿ ವೇಳೆಯೂ ಬಳಸಲು ಸಾಧ್ಯವಿಲ್ಲ. ಪ್ರಶ್ನಾವಳಿಗಳಲ್ಲಿ ಹಲವು ಬದಲಾವಣೆಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಇದೊಂದು ಶ್ರಮದಾಯಕ ಕೆಲಸವೇನಲ್ಲ. ಗಣತಿಯ ವೇಳೆ ಕೇಳುವ ಪ್ರಶ್ನೋತ್ತರ ಮಾದರಿಯ ಕಾಲಂ 8ಕ್ಕೆ ಕೆಲವು ತಿದ್ದುಪಡಿಗಳನ್ನು ಮಾಡಬೇಕಾಗುತ್ತದೆ. ಅದೇನೆಂದರೆ: 'ಜಾತಿ: 8(a) ಕಾಲಂನಲ್ಲಿ 'ವ್ಯಕ್ತಿಯು ಯಾವ ಸಾಮಾಜಿಕ ಗುಂಪಿಗೆ ಸೇರಿದ್ದಾರೆ' ಎಂದು 8(b) ಕಾಲಂನಲ್ಲಿ 'ಎಸ್‌ಸಿ/ಎಸ್‌ಟಿ/ಒಬಿಸಿ/ಸಾಮಾನ್ಯ ವರ್ಗ' ಎಂದೂ ನಮೂದಿಸಬೇಕಾಗುತ್ತದೆ. ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿಯನ್ನೇನೂ ತರಬೇಕಾಗಿಲ್ಲ.

4. ದೇಶದಲ್ಲಿರುವ ಎಲ್ಲ ಜಾತಿಗಳ ಸಿದ್ಧಪಟ್ಟಿ ನಮ್ಮ ಬಳಿ ಇಲ್ಲ. ಆದ್ದರಿಂದ ಜಾತಿ ಗಣತಿಯು ಅಸಾಧ್ಯ ಕಾರ್ಯವಾಗಲಿದೆ

ನಿಜ, ಸಾಮಾನ್ಯ ವರ್ಗದ (General group) ಎಲ್ಲ ಜಾತಿ, ಉಪ ಜಾತಿಗಳ ಕುರಿತ ಅಧಿಕೃತ ಪಟ್ಟಿ ದೇಶದಲ್ಲಿ ಇಲ್ಲ. ಆದರೆ, ದೇಶದ ಜನಸಂಖ್ಯೆಯಲ್ಲಿ ನಾಲ್ಕನೇ ಮೂರರಷ್ಟು ಭಾಗ ಇರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಇತರ ಹಿಂದುಳಿದ ವರ್ಗಗಳ ಪಟ್ಟಿಯು ನಮ್ಮ ಬಳಿ ಈಗಾಗಲೇ ಇದೆ. ಜಾತಿ ಗಣತಿಯ ವೇಳೆ ಸಾಮಾನ್ಯ ವರ್ಗದ ಜನರ ಜಾತಿಯನ್ನು ಮೊದಲು ನಮೂದು ಮಾಡಿಕೊಳ್ಳುವುದು. ಗಣತಿ ಪ್ರಕ್ರಿಯೆ ಪೂರ್ಣಗೊಂಡ ಬಳಿಕ, ಅವುಗಳನ್ನು ವರ್ಗೀಕರಿಸಬಹುದು. ಹೀಗೆಯೇ, ಭಾಷೆ ಹಾಗೂ ಧರ್ಮದ ಕುರಿತು ವಿವರವನ್ನು ಗಣತಿಯ ಬಳಿಕ ವರ್ಗೀಕರಿಸಲಾಗುತ್ತದೆ. ಶೂನ್ಯದಿಂದ ಏನನ್ನೂ ಆರಂಭಿಸಬೇಕಾಗಿಲ್ಲ. 1931ರ ಗಣತಿಯು ನಮ್ಮ ಬಳಿ ಇದೆ. ಜೊತೆಗೆ ಭಾರತೀಯ ಮಾನವಶಾಸ್ತ್ರ ಸರ್ವೇಕ್ಷಣೆ ಪ್ರಕಟಿಸಿರುವ, ಭಾರತೀಯರ ಜಾತಿ ಹಾಗೂ ಆದಿವಾಸಿಗಳ ವಿವರವುಳ್ಳ 90 ಸಂಪುಟದ ಎನ್‌ಸೈಕ್ಲೋಪೀಡಿಯಾ ಕೂಡ ನಮ್ಮ ಬಳಿ ಇದೆ.

ಒಳ ಮೀಸಲಿನ ಒಡಲಾಳ

5. ಜಾತಿ ಗಣತಿ ಎಂದರೆ, ದೇಶದ ಪ್ರತಿಯೊಬ್ಬರ ಜಾತಿಯನ್ನು ನಮೂದಿಸುವುದು

ನಿಜ, ಜಾತಿ ಗಣತಿಯಿಂದ ಜನರ ಜಾತಿವಾರು ಮಾಹಿತಿಯು ತಿಳಿಯುತ್ತದೆ. ಇದು ಜಾತಿ ಗಣತಿಯಿಂದ ದೊರೆಯುವ ಪ್ರಾಥಮಿಕ ಮಾಹಿತಿಯಷ್ಟೆ. ಆದರೆ, ಈ ಗಣತಿಯಿಂದ ಪ್ರತೀ ಸಮುದಾಯದ ಸಾಮಾಜಿಕ, ಆರ್ಥಿಕ ಹಾಗೂ ಶೈಕ್ಷಣಿಕ ವಿವರಗಳು ಬಹಿರಂಗಗೊಳ್ಳುತ್ತವೆ. ಇವು ಜಾತಿ ಗಣತಿಯಿಂದ ದೊರೆಯುವ ಗಮನಾರ್ಹ ವಿವರಗಳಾಗಿವೆ. ಜಾತಿವಾರು ಲಿಂಗಾನುಪಾತ, ಶೈಕ್ಷಣಿಕ ಮಟ್ಟ, ಉದ್ಯೋಗ, ಆಸ್ತಿ, ನೀರು ಹಾಗೂ ವಿದ್ಯುತ್ ಸಂಪರ್ಕ ಹಾಗೂ ಅಡುಗೆ ಅನಿಲ ಸಿಲಿಂಡರ್ ಕುರಿತ ಮಾಹಿತಿ ಜಾತಿ ಗಣತಿಯಿಂದ ತಿಳಿಯುತ್ತದೆ. ಇಂಥದ್ದೇ ಜಾತಿವಾರು ವಿವರಗಳನ್ನು ಆಧಾರವಾಗಿಟ್ಟುಕೊಂಡೇ ಸರ್ಕಾರವು ನೀತಿ ರೂಪಿಸಬೇಕು ಎಂದು ಸುಪ್ರೀಂ ಕೋರ್ಟ್ ಕೂಡ ಹೇಳುತ್ತದೆ.

6. ಹಿಂದೂಯೇತರ ಸಮುದಾಯದವರನ್ನು ಜಾತಿ ಗಣತಿಯಿಂದ ಹೊರಗಿಡಲಾಗುತ್ತದೆ. ಪ್ರತಿಯೊಬ್ಬರೂ ಒಂದು ಜಾತಿಯನ್ನು ಸೇರಿಕೊಳ್ಳುವಂತೆ ಒತ್ತಾಯಿಸಿದಂತಾಗುತ್ತದೆ

ಈ ವಾದವಂತೂ ಸಂಪೂರ್ಣ ಸುಳ್ಳಿನಿಂದ ಕೂಡಿದೆ. ಪ್ರತಿಯೊಂದು ಧರ್ಮದಲ್ಲಿಯೂ ಜಾತಿಗಳಿವೆ. ಅದು ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್, ಸಿಖ್ ಹೀಗೆ... ಯಾವುದೇ ಧರ್ಮವಿದ್ದರೂ ಇವುಗಳಲ್ಲಿ ಜಾತಿಗಳಿವೆ. ಬಿಹಾರ ಸರ್ಕಾರ ನಡೆಸಿದ ಜಾತಿ ಗಣತಿಯಲ್ಲಿ ಇಸ್ಲಾಂ ಧರ್ಮದಲ್ಲಿನ ಹಲವಾರು ಜಾತಿಗಳನ್ನು ನಮೂದಿಸಲಾಗಿದೆ. ಬೇರೆ ರಾಜ್ಯಗಳಲ್ಲಿ ನಡೆದ ಗಣತಿಯಲ್ಲಿಯೂ ಈ ವಿವರಗಳು ಇವೆ. ಗಣತಿಯ ವೇಳೆ ಜಾತಿಯ ಕುರಿತ ಮಾಹಿತಿಯನ್ನು ಕೇಳಲಾಗುತ್ತದೆ. ಆ ಮೂಲಕ ಎಲ್ಲ ಧರ್ಮಗಳಲ್ಲಿ ಇರುವ ಎಲ್ಲ ಜಾತಿಗಳ ವಿವರಗಳೂ ದಾಖಲಾಗುವಂತಾಗುತ್ತವೆ. ಗಣತಿಯ ವೇಳೆ ಧರ್ಮದ ಕುರಿತು ಪ್ರಶ್ನೆ ಕೇಳಿದಾಗ, 'ನನಗೆ ಧರ್ಮವಿಲ್ಲ' ಎಂದು ಹೇಳಲು ಹೇಗೆ ಸಾಧ್ಯವಿಲ್ಲವೋ, ಜಾತಿಯ ಕುರಿತ ಪ್ರಶ್ನೆಗೂ 'ನನಗೆ ಜಾತಿಯಿಲ್ಲ' ಎಂದು ಹೇಳಲು ಸಾಧ್ಯವಿಲ್ಲ.

7. ಈಗಿರುವ ಮೀಸಲಾತಿಯನ್ನು ಹೆಚ್ಚಿಸುವ ಸಲುವಾಗಿ ಜಾತಿ ಗಣತಿ ಬೇಕು ಎನ್ನಲಾಗುತ್ತಿದೆ

ನಿಜ, ಜಾತಿ ಗಣತಿ ಬೇಡ ಎನ್ನುವವರ ಮನಸ್ಸಿನಲ್ಲಿ ಇದೇ ವಿಚಾರವೇ ಇದೆ. ಈ ಅಭಿಪ್ರಾಯ ಇಟ್ಟುಕೊಳ್ಳುವುದರಲ್ಲಿ ತಪ್ಪೇನೂ ಇಲ್ಲ. ಆದರೆ, ಈ ಅಭಿಪ್ರಾಯಕ್ಕೆ ಬರುವಾಗ, ಹಲವು ವಿಷಯಗಳನ್ನು ವಿಚಾರ ಮಾಡಬೇಕಾಗುತ್ತದೆ. ಒಂದು ವೇಳೆ, ಒಂದು ನಿರ್ದಿಷ್ಟ ಜಾತಿಯ ಜನಸಂಖ್ಯೆಗೆ ಅನುಗುಣವಾಗಿ ದೇಶದ ಸಂಪನ್ಮೂಲ ಮತ್ತು ಅವಕಾಶವು ಆ ಜಾತಿಯವರಿಗೆ ಸಿಗುತ್ತಿಲ್ಲ ಎಂದು ಜಾತಿ ಗಣತಿಯಿಂದ ತಿಳಿದುಬಂದರೆ ಜನರ ಮೀಸಲಾತಿ ಏರಿಕೆ ವಿರೋಧಿ ಆಲೋಚನೆಯನ್ನು ತಪ್ಪು ಎಂದು ಹೇಳಬೇಕಾಗುತ್ತದೆ.

8. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಒಬಿಸಿ ಸಮುದಾಯಗಳಿಗೆ ಮಾತ್ರವೇ ಜಾತಿ ಗಣತಿ ಬೇಕಾಗಿದೆ ವಿನಾ ಸಾಮಾನ್ಯ ವರ್ಗದವರಿಗಲ್ಲ

ನಿಜ, ದೇಶದ ಸಂಪನ್ಮೂಲಗಳು, ಆಸ್ತಿ ಹಾಗೂ ಅವಕಾಶಗಳಲ್ಲಿ ಯಾರಿಗೆ ಪಾಲು ದೊರೆತಿಲ್ಲ, ಯಾರಿಗೆ ಅನ್ಯಾಯವಾಗಿದೆ ಎಂದು ತಿಳಿಯಲು ಜಾತಿ ಗಣತಿ ಮುಖ್ಯವಾಗುತ್ತದೆ. ಆದರೆ, 'ಸಾಮಾನ್ಯ'ರಿಗೆ ದೊರೆಯುತ್ತಿರುವ ಸೌಲಭ್ಯಗಳನ್ನು ದಾಖಲಿಸದೇ, ಈ ರೀತಿಯ ಸಮೀಕ್ಷೆ ನಡೆಸದೆಯೇ ವ್ಯವಸ್ಥೆಯಲ್ಲಿನ ಅನನುಕೂಲಗಳನ್ನು ಪತ್ತೆ ಮಾಡಲು ಸಾಧ್ಯವಿಲ್ಲ. ಹಿಂದೂ ಧರ್ಮದ ಪ್ರಬಲ ಜಾತಿಯವರಿಗೆ ದೊರೆಯುತ್ತಿರುವ ಸೌಲಭ್ಯಗಳನ್ನು ಬಹಿರಂಗ ಮಾಡದೆಯೇ, ಸಾಮಾಜಿಕ ನ್ಯಾಯ ಒದಗಿಸಲು ಸಾಧ್ಯವಿಲ್ಲ. ಸಾಮಾಜಿಕ ನ್ಯಾಯ ಎನ್ನುವುದು ಸಾಂವಿಧಾನಿಕ ಹಕ್ಕು.

ಮೀಸಲಾತಿ ಏರಿಕೆಗಾಗಿ ಮಾತ್ರವೇ ಜಾತಿ ಗಣತಿ ಬೇಕಾಗಿರುವುದಲ್ಲ. ಇನ್ನೂ ಹಲವು ಕಾರಣಗಳಿವೆ: ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಒಬಿಸಿ ಮೀಸಲಾತಿಯಲ್ಲಿ ಒಳಮೀಸಲಾತಿ ನೀಡಬೇಕೇ? ಒಬಿಸಿ ಮೀಸಲಾತಿಯ ಪ್ರಯೋಜನ ಪಡೆದುಕೊಳ್ಳುತ್ತಿರುವ ಕೆಲವು ಜಾತಿಗಳನ್ನು ಒಬಿಸಿ ಮೀಸಲಾತಿ ವ್ಯಾಪ್ತಿಯಿಂದ ಹೊರಗಿಡಬೇಕೇ? ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದಲ್ಲಿ 'ಕೆನೆಪದರ'ವನ್ನು ರೂಪಿಸಬೇಕೇ? ಒಬಿಸಿಗಳಿಗೆ ಕೆನೆಪದರವನ್ನು ಹೇಗೆ ರೂಪಿಸಬೇಕು? ಪ್ರಬಲ ಜಾತಿಯಲ್ಲಿ ಬಡತನವು ಯಾವ ಮಟ್ಟದಲ್ಲಿದೆ? ಸಾಮಾಜಿಕ ಅಸಮಾನತೆಗಳನ್ನು ಜಾತಿಯ ಮೂಲಕ ಅರ್ಥ ಮಾಡಿಕೊಳ್ಳುವುದು ತೀರಾ ಸವಕಲು ಪ್ರಕ್ರಿಯೆಯೇ? ಈ ಎಲ್ಲ ಪ್ರಶ್ನೆಗಳಿಗೆ ಉತ್ತರ ಸಿಗಬೇಕು ಎನ್ನುವುದಾದರೆ ಮೀಸಲಾತಿ ಪರ ಇರುವವರು ಅಥವಾ ಮೀಸಲಾತಿಯ ವಿರೋಧವಿರುವವರು ಎಲ್ಲರೂ ಜಾತಿ ಗಣತಿ ನಡೆಯಬೇಕು ಎಂದು ಆಗ್ರಹಿಸಬೇಕು.

9. ಜಾತಿ ಗಣತಿಯು ಜಾತಿ ರಾಜಕಾರಣಕ್ಕೆ ರಹದಾರಿ ಒದಗಿಸುತ್ತದೆ ಮತ್ತು ಜಾತಿಗಳ ನಡುವಿನ ಕಲಹಕ್ಕೆ ಕಾರಣವಾಗುತ್ತದೆ

ನಿಜ, ಜಾತಿ ಗಣತಿಯಿಂದಾಗಿ ಸಮಾಜದಲ್ಲಿ ಜಾತಿ ರಾಜಕಾರಣ ಹಾಗೂ ಕಲಹ ಎರಡೂ ಗಟ್ಟಿಗೊಳ್ಳುತ್ತವೆ. ಆದರೆ, ಒಂದನ್ನು ಮರೆಯಬಾರದು. ದೇಶದ ಜನಸಂಖ್ಯೆಯ ನಾಲ್ಕನೇ ಮೂರರಷ್ಟು ಭಾಗದ ಜನರ ಜಾತಿ ವಿವರವು ಒಂದಲ್ಲ ಒಂದು ರೂಪದಲ್ಲಿ ಈಗಾಗಲೇ ದಾಖಲಾಗಿದೆ. ಇನ್ನುಳಿದ ನಾಲ್ಕನೇ ಒಂದು ಭಾಗದಷ್ಟು ಜನರು ಹೇಗೂ ವಧು–ವರರ ಜಾಹೀರಾತು ಹಾಕುತ್ತಾರಲ್ಲ. ಆ ಮೂಲಕ ಜಾತಿ ವಿವರ ತಿಳಿದುಬಿಡುತ್ತದೆ. ಯಾರು ಯಾವ ಜಾತಿ ಎನ್ನುವ ಕುರಿತು ಸ್ಥಳೀಯ ರಾಜಕಾರಣಿಗಳಿಗೆ ಗೊತ್ತಿಲ್ಲದಿರುವ, ಅವರು ಬಳಸಿಕೊಳ್ಳದಿರುವ ಯಾವ ಮಾಹಿತಿಯನ್ನೂ ಜಾತಿ ಗಣತಿಯು ಬಹಿರಂಗ ಪಡಿಸುವುದಿಲ್ಲ. ಗಣತಿ ವೇಳೆ ಧರ್ಮ ಹಾಗೂ ಭಾಷೆಯ ಕುರಿತು ಪ್ರಶ್ನೆ ಕೇಳಿದಾಗ ಸಾಮಾಜಿಕ ಕಲಹ ಏರ್ಪಡುವುದಿಲ್ಲ ಎಂದಾದ ಮೇಲೆ, ಜಾತಿ ಕುರಿತು ಪ್ರಶ್ನೆ ಕೇಳಿದರೆ ಕಲಹ ಉಂಟಾಗುತ್ತದೆ ಎಂದು ನಾವು ಕಲ್ಪಿಸಿಕೊಳ್ಳಬಾರದು.

10. 10 ವರ್ಷಕ್ಕೊಮ್ಮೆ ನಡೆಯುವ ಗಣತಿಯ ವೇಳೆಯೇ 'ಜಾತಿ' ಕಾಲಂ ಅನ್ನು ಸೇರಿಸಬಹುದು

ನಿಜ, ಜಾತಿ ಗಣತಿಯ ಕುರಿತು ಸಾಮಾನ್ಯವಾಗಿ ಎಲ್ಲರಿಗೂ ಇರುವ ಸೀಮಿತ ತಿಳಿವಳಿಕೆಯಿದು. ಯಾರು ಎಷ್ಟು ಆಸ್ತಿ ಹೊಂದಿದ್ದಾರೆ, ಯಾರಿಗೆ ಎಷ್ಟು ಸೌಲಭ್ಯ ದೊರೆಯುತ್ತಿದೆ, ಸಂಪನ್ಮೂಲಗಳ ಹಂಚಿಕೆ ಯಾವ ರೀತಿಯಲ್ಲಿ ನಡೆಯುತ್ತಿದೆ, ಅವಕಾಶಗಳು ಸಮಾನವಾಗಿದೆಯೇ, ಯಾವ ಜಾತಿಯವರ ಪ್ರಾತಿನಿಧ್ಯ ಎಷ್ಟು ಎಂಬ ಜಾತಿವಾರು ವಿವರಗಳು ಇರುವ ಒಂದು ಸಮಗ್ರ ಭಂಡಾರದ ಅಗತ್ಯ ಇದೆ.

ಗಣತಿ ಸ್ವರೂಪವನ್ನೇ ಹೋಲುವ ಹಲವು ಸಮೀಕ್ಷೆಗಳು ಜಾತಿಯ ಕುರಿತು ಮಾಹಿತಿಗಳನ್ನು ಕಲೆ ಹಾಕುತ್ತವೆ. ಆದರೆ ಅವು ಸೀಮಿತವಾದ ಅಥವಾ ಸ್ಥೂಲ ವ್ಯಾಪ್ತಿಯನ್ನಷ್ಟೇ ಹೊಂದಿವೆ. ಉದಾಹರಣೆಗೆ: ಆರ್ಥಿಕ ಗಣತಿ, ಕೃಷಿ ಗಣತಿ, ಉನ್ನತ ಶಿಕ್ಷಣದಲ್ಲಿ ಪ್ರಾತಿನಿಧ್ಯವನ್ನು ವಿವರಿಸುವ ಅಖಿಲ ಭಾರತ ಸಮೀಕ್ಷೆ, ಮನೆ ಬಳಕೆ ಮತ್ತು ವೆಚ್ಚ ಸಮೀಕ್ಷೆ, ಎನ್‌ಎಸ್‌ಎಸ್‌ಒ ಸಂಸ್ಥೆಯು ಕಾಲ ಕಾಲಕ್ಕೆ ನಡೆಸುವ ಕಾರ್ಮಿಕ ವರ್ಗದ ಕುರಿತ ಸಮೀಕ್ಷೆ ಹಾಗೂ ನೋಂದಾಯಿತ ಕಂಪನಿಗಳಲ್ಲಿ ಇರುವ ನಿರ್ದೇಶಕರ ಪಟ್ಟಿ, ಇದರೊಂದಿಗೆ ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗದಲ್ಲಿರುವ ನೌಕರರ ಪಟ್ಟಿ... ಹೀಗೆ ಹಲವು ಗಣತಿ ಹಾಗೂ ಸಮೀಕ್ಷೆಗಳಲ್ಲಿ ಜಾತಿ ಕುರಿತು ಮಾಹಿತಿಗಳನ್ನು ಕೇಳಲಾಗುತ್ತದೆ.

ಲೇಖಕ: ಸ್ವರಾಜ್ ಇಂಡಿಯಾ ಸದಸ್ಯ
ಕನ್ನಡ ಅನುವಾದ: ಸುಕೃತ ಎಸ್.

ಸಿನಿ ಬಿಟ್ಸ್

ನಿಮಿತ್ತ ಮಾತ್ರ ಎನ್ನುತ್ತಿರುವ ಪೂರ್ಣಚಂದ್ರ



ಪೂರ್ಣಚಂದ್ರ
ಸಂಗೀತ
ಅರವಿಂದ್

'ಆರ್ಕೆಸ್ಟ್ರಾ ಮೈಸೂರು' ಸೇರಿದಂತೆ ಸಾಕಷ್ಟು ಚಿತ್ರಗಳ ಮೂಲಕ ಭರವಸೆ ಮೂಡಿಸಿರುವ ನಟ ಪೂರ್ಣಚಂದ್ರ ಮೈಸೂರು ಮುಖ್ಯಭೂಮಿಕೆಯಲ್ಲಿರುವ 'ನಿಮಿತ್ತ ಮಾತ್ರ' ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

ಪ್ಯಾರಾಸೈಕಾಲಜಿಕಲ್ ಥ್ರಿಲ್ಲರ್ ಕಥೆ ಹೊಂದಿರುವ ಚಿತ್ರವನ್ನು ರೋಶನ್ ಡಿಸೋಜಾ ಬರೆದು ನಿರ್ದೇಶಿಸಿದ್ದಾರೆ. 'ಬೆಂಗಳೂರು ಮತ್ತು ಮಂಗಳೂರು ಹಿನ್ನೆಲೆಯಲ್ಲಿ ಕಥೆ ನಡೆಯುತ್ತದೆ. 15 ವರ್ಷಗಳ ಹಿಂದೆ ಮಂಗಳೂರಿನಲ್ಲಿ ನಡೆದ ಭಯಾನಕ ಘಟನೆಯೇ ಈ ಕಥೆಗೆ ಆಧಾರ. ತನ್ನ ತಂದೆಯಿಂದ ದೂರವಾದ ಪತ್ರಕರ್ತನೊಬ್ಬ ಈ ಪ್ರಕರಣ ಪರಿಹರಿಸಲು ಹೊರಡುತ್ತಾನೆ. ಅವನಿಗೆ ಸತ್ಯ ಗೊತ್ತಾಗುತ್ತದೆಯಾ? ಅಪರಾಧಿಯನ್ನು ಪತ್ತೆ ಮಾಡುತ್ತಾನೆಯೇ ಎಂಬಿತ್ಯಾದಿ ವಿಷಯಗಳೊಂದಿಗೆ ಕಥೆ ಸಾಗುತ್ತದೆ' ಎಂದರು ನಿರ್ದೇಶಕರು.

ಸಂಗೀತ ರಾಜೀವ್, ಅರವಿಂದ ಕುಪ್ಲಿಕರ್ ಮುಖ್ಯ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಸಂಗೀತ ರಾಜೀವ್ ಅವರು ನಟನೆಯ ಜೊತೆಗೆ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡಿದ್ದಾರೆ. ❖

ಸಂಬಂಧಗಳ ಕಥೆ ಹೇಳುವ ಪ್ರಾಪ್ತಿ



ಗೌರಿ ಸಾಗರ್

ಬಹುತೇಕ ಹೊಸಬರಿಂದಲೇ ಕೂಡಿರುವ 'ಪ್ರಾಪ್ತಿ' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ, ನಿರ್ದೇಶಕ ಸಾಯಿಪ್ರಕಾಶ್ ಟ್ರೇಲರ್ ಬಿಡುಗಡೆ ಮಾಡಿ ತಂಡಕ್ಕೆ ಶುಭ ಹಾರೈಸಿದರು.

'ನಾವು ಪಡೆದುಕೊಂಡು ಬಂದಿರುವುದು ನಮಗೆ ಪ್ರಾಪ್ತಿಯಾಗುತ್ತದೆ. ದೇವರಿಂದ ನಾವು ಪಡೆಯುವುದಕ್ಕೆ ಪ್ರಾಪ್ತಿ ಎಂಬ ಅರ್ಥವಿದೆ. ಚಿತ್ರದ ಶೀರ್ಷಿಕೆಯೇ ಭಿನ್ನವಾಗಿದೆ. ಈ ಚಿತ್ರದ ನಿರ್ಮಾಪಕರು ತಮಿಳು ಭಾಷೆಯವರಾಗಿದ್ದರೂ ಕನ್ನಡದ ಮೇಲಿನ ಅಭಿಮಾನದಿಂದ ಬಂಡವಾಳ ಹೂಡಿದ್ದಾರೆ. ನಿರ್ಮಾಪಕರು ಎಲ್ಲಿಂದ ಬಂದರು ಎಂಬುದು ಮುಖ್ಯವಾಗಿರುವುದಿಲ್ಲ. ಯಾವ ಭಾಷೆಯ ಚಿತ್ರ ಮಾಡಿದ್ದಾರೆಂದು ನೋಡಬೇಕು. ಇಂತಹವರ ಅವಶ್ಯಕತೆ ಉದ್ಯಮಕ್ಕೆ ಇದೆ' ಎಂದರು ಸಾಯಿಪ್ರಕಾಶ್.

ಊಟಿ ಮೂಲದ ಡಾ.ಎಸ್.ಮಹೇಶ್ ಬಾಬು ಈ ಚಿತ್ರವನ್ನು ನಿರ್ಮಿಸಿ, ನಿರ್ದೇಶಿಸಿದ್ದಾರೆ. ಈ ಹಿಂದೆ ಖಳನಟರಾಗಿ ಕಾಣಿಸಿಕೊಂಡಿದ್ದ ಜಯಸೂರ್ಯ ಚಿತ್ರದ ನಾಯಕ. ಖ್ಯಾತ ಗಾಯಕಿ ಮಂಜುಳಾ ಗುರುರಾಜ್ ಅವರ ಸೊಸೆ ಗೌರಿ ಸಾಗರ್ ಈ ಚಿತ್ರದ ಮೂಲಕ ನಾಯಕಿಯಾಗುತ್ತಿದ್ದಾರೆ.

'ಇವತ್ತಿನ ಕಾಲಮಾನದಲ್ಲಿ ನಡೆಯುತ್ತಿರುವ ಮೂರು ಅಂಶಗಳನ್ನು ಬಳಸಿಕೊಂಡು ಚಿತ್ರಕಥೆ ಸಾಗುತ್ತದೆ. ಅನೈತಿಕ ಸಂಬಂಧಗಳು, ಪರಸ್ಪರ ಆಕರ್ಷಣೆ ಚಿತ್ರದ ಕಥಾವಸ್ತು. ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನ ಚಿತ್ರ' ಎಂದು ಮಾಹಿತಿ ನೀಡಿದರು ನಿರ್ದೇಶಕರು. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿನ ಶುಕ್ಲ ದ್ವಿತೀಯ ಗಂ. 29-31 ನಕ್ಷತ್ರ: ಚಿತ್ತಾ ಗಂ. 18-38 ಯೋಗ: ವೈಧೃತಿ ಗಂ. 29-21 ಕರಣ: ಬಾಲವ ಗಂ. 16-16, ಕನ್ಯಾ ಮಾಸದ 17 ನೇ ದಿನ, ಮಳೆನಕ್ಷತ್ರ: ಹಸ್ತ 3.
ರಾಹುಕಾಲ: ಬೆಳಿಗ್ಗೆ 10-30 – 12-00
ಸೂರ್ಯೋದಯ: 06-23 ಸೂರ್ಯಾಸ್ತ: 06-15
ಮುಸ್ಲಿಂ ದಿನಾಂಕ: 30 ರಬಿಉಲ್ಲಾವಲ್, ದಿನ ವಿಶೇಷ: ನವರಾತ್ರಿಯ ಎರಡನೇ ದಿನ,
ಅದೃಷ್ಟ ಸಂಖ್ಯೆ: 2, 10

ಮೇಷ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಇರುವ ಅವಕಾಶಗಳನ್ನು ಮುಂದುವರಿಸಿಕೊಳ್ಳುವುದು ನಿಮ್ಮ ಬುದ್ಧಿವಂತಿಕೆಯನ್ನು ಪ್ರದರ್ಶಿಸುತ್ತದೆ. ಆತ್ಮವಂಚನೆ ಮಾಡಿಕೊಳ್ಳಬೇಡಿ.

ವೃಷಭ: ದುರಾಚಾರ, ದುರ್ಬುದ್ಧಿ ಹೊಂದಿರುವ ಜನರಿಂದ ದೂರವಿರುವ ಬಗ್ಗೆ ಪ್ರಯತ್ನವಿರಲಿ. ಬದುಕನ್ನು ಪಾರಮಾರ್ಥಿಕವಾಗಿ ನಡೆಸುವ ಬಗ್ಗೆ ನಿಮ್ಮ ಯೋಚನೆಗಳಿರಲಿ. ಅನುಭವದಿಂದ ಆತ್ಮಾಭಿಮಾನ ವೃದ್ಧಿಯಾಗಲಿದೆ.

ಮಿಥುನ: ಬೆಳೆದ ವಸ್ತುಗಳ ಮಾರಾಟದಿಂದ ಆರ್ಥಿಕ ಅನುಕೂಲವಾಗಿ ನಿಮ್ಮ ಮೇಲಿದ್ದ ಸಾಲದ ಹೊರೆಯು ಕಡಿಮೆಯಾಗಲಿದೆ. ಅನಾಥ ಹುಡುಗನೊಬ್ಬನ ವಿದ್ಯಾಭ್ಯಾಸಕ್ಕೆ ಸಹಾಯ ಮಾಡುವ ಯೋಚನೆಯನ್ನು ಮಾಡುವಿರಿ.

ಕರ್ಕಾಟಕ: ವಿರೋಧಿಗಳು ರಾಜಿಯಾಗಲು ಬರುವಂತಹ ಸನ್ನಿವೇಶಗಳು ನಡೆಯಬಹುದು. ಸಣ್ಣ ಉದ್ಯಮಿಗಳಿಗೆ ಹೆಚ್ಚು ವ್ಯಾಪಾರವಿರುವುದು, ಕೆಲಸಗಾರರ ಸಹಕಾರ ಸಿಗುವುದು. ಪಿತ್ರಾರ್ಜಿತ ಆಸ್ತಿ ಕೈಸೇರಲಿದೆ.

ಸಿಂಹ: ಆಶ್ಚರ್ಯಕರ ಮತ್ತು ಸಂಭ್ರಮಿಸುವಂತಹ ಘಟನೆ ನಿಮ್ಮ ಬದುಕಲ್ಲಿ ಈ ದಿನ ನಡೆಯುವುದು. ಯಾವುದೇ ಕಠಿಣ ಪರಿಸ್ಥಿತಿಯಲ್ಲಿಯೂ ವಿಚಲಿತಗೊಳ್ಳದೆ ಕೆಲಸವನ್ನು ನೆರವೇರಿಸಿ. ಪತ್ನಿಯ ಆರೋಗ್ಯವು ಸುಧಾರಿಸುವುದು.

ಕನ್ಯಾ: ನಿಮ್ಮ ಯೋಜನೆಗಳು ಹಾಗೂ ಅವುಗಳ ಬೆಳವಣಿಗೆಗಳ ಬಗ್ಗೆ ಸಂಬಂಧಪಟ್ಟವರಲ್ಲಿ ದಿನವಿಡೀ ಚರ್ಚಿಸಿದರೂ ತೀರ್ಮಾನಕ್ಕೆ ಬರುವುದು ಕಷ್ಟಕರ. ಮನೋಲ್ಲಾಸಕ್ಕಾಗಿ ದೂರದ ಪ್ರಯಾಣದ ಸಾಧ್ಯತೆಗಳು ಹೆಚ್ಚಿರುವುದು.

ತುಲಾ: ಸಮೀಪವರ್ತಿಗಳ ಸಲಹೆ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿನ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಎಲ್ಲರೊಂದಿಗೆ ವಿಷಯ ವಿನಿಮಯದಿಂದ ನಿಮ್ಮ ಎಲ್ಲಾ ಗೊಂದಲಗಳಿಗೆ ಉತ್ತರ ಸಿಗಲಿದೆ.

ವೃಶ್ಚಿಕ: ಇಂದು ಮೇಲಧಿಕಾರಿಯಿಂದಲೋ, ಗುರು-ಹಿರಿಯರಿಂದಲೋ ಉತ್ತಮವಾದ ಪ್ರಶಂಸೆಯ ಮಾತುಗಳು ಕೇಳಿಬರಲಿದೆ. ಶ್ರೀ ಮಹಾವಿಷ್ಣುವನ್ನು ಸ್ತುತಿಸಿದಲ್ಲಿ ಮನೆಯಲ್ಲಿ ಆರೋಗ್ಯ, ಐಶ್ವರ್ಯಗಳ ವೃದ್ಧಿಯಾಗುವುದು.

ಧನು: ಸೋದರರೊಡನೆ ಅಥವಾ ದಾಯಾದಿಗಳೊಡನೆ ಇದ್ದ ಕಲಹಗಳು ಈ ದಿನಾಂತ್ಯದಲ್ಲಿ ನಿರ್ಮೂಲವಾಗಲಿದೆ. ನಿಮ್ಮ ಅತಿಯಾದ ಖರ್ಚು ವೆಚ್ಚಗಳು ಈ ದಿನ ತಗ್ಗುವುದು. ಮಕ್ಕಳ ತುಂಟತನದ ಬಗ್ಗೆ ಗಮನವಿರಲಿ.

ಮಕರ: ನೀವು ಎಲ್ಲರೊಂದಿಗೆ ಮುಕ್ತವಾಗಿ ಬೆರೆಯುವುದನ್ನು ಜನ ಬಳಕೆ ಮಾಡಿಕೊಳ್ಳುವುದನ್ನು ಅಭ್ಯಾಸ ಮಾಡಿಕೊಳ್ಳಿರಿ. ಬ್ಯಾಂಕ್ ಅಧಿಕಾರಿಗಳಿಗೆ ಉದ್ಯೋಗದಲ್ಲಿ ಬದಲಾವಣೆಯಾಗುವಂತಹ ಸಂಭವವಿರುವುದು.

ಕುಂಭ: ಕೊಡುವ ಹಣ ಕೊಡುವ ಬಗ್ಗೆ, ತೆಗೆದುಕೊಳ್ಳುವ ಹಣ ತೆಗೆದುಕೊಳ್ಳುವ ಬಗ್ಗೆ ಲೆಕ್ಕಾಚಾರ ಸರಿಯಾಗಿ ಇಟ್ಟುಕೊಳ್ಳಿರಿ. ಆಲಸ್ಯದಿಂದಾಗಿ ಯಾವುದೇ ಕೆಲಸಗಳನ್ನು ಸಹ ಮುಂದೂಡದೆ ಪೂರ್ಣಗೊಳಿಸಲು ಪ್ರಯತ್ನಿಸಿ.

ಮೀನ: ನೆರೆಹೊರೆಯವರೊಂದಿಗೆ ಮತ್ತು ಸಹೋದರಿಯರೊಂದಿಗೆ ಸೌಹಾರ್ದದಿಂದ ವರ್ತಿಸಿ. ಬಹಳ ದಿನಗಳಿಂದ ಇದ್ದ ಆಸ್ಪತ್ರೆ ಅಲೆದಾಟಗಳು ಕೊನೆಗೊಳ್ಳುವುದು. ಉದ್ಯೋಗದಲ್ಲಿ ಅನಿಶ್ಚಿತತೆ ದೂರಾಗುವುದು.

ದೇವರ ಮಕ್ಕಳು!

ನುಡಿ ಬೆಳಗು



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ — 37

ಕಾಡಲ್ಲಿ ಒಂದು ಗಿಡ ಇತ್ತು. ಅದರಲ್ಲಿ ಒಂದು ಪಕ್ಷಿ ಗೂಡು ಕಟ್ಟಿತ್ತು. ಅದರಲ್ಲಿ ಎರಡು ಪುಟ್ಟಪುಟ್ಟ ಮರಿಗಳಿದ್ದವು. 3–4 ತಿಂಗಳ ಮರಿಗಳು ಅವು. ಒಂದು ದಿನ ತಾಯಿ ಪಕ್ಷಿ ಆಹಾರ ತರಲು ಹೊರಗೆ ಹೋಗಿತ್ತು. ಅದು ವಾಪಸು ಬರೋದ್ರೊಳಗೆ ಒಬ್ಬ ಮನುಷ್ಯ ಆ ಪಕ್ಷಿ ಗೂಡನ್ನು ಎಳೆದಿದ್ದ. ಗೂಡು ಹರಿದಿತ್ತು. ಮರಿಗಳು ಕೆಳಕ್ಕೆ ಬಿದ್ದು ವಿಲಿವಿಲಿ ಒದ್ದಾಡಿ ಸತ್ತು ಹೋದವು. ತಾಯಿ ಪಕ್ಷಿ ವಾಪಸು ಬಂದಾಗ ಗೂಡು ಹರಿದಿದ್ದು, ಮರಿ ಪಕ್ಷಿಗಳು ಸತ್ತಿದ್ದು ನೋಡಿತು. ಎರಡು ಹನಿ ಕಣ್ಣೀರು ಹಾಕಿತು. ಸ್ವಲ್ಪ ಹೊತ್ತು ಸುಮ್ಮನೆ ಕುಳಿತಿತ್ತು. ನಂತರ ಗೂಡು ಸೇರಿತು. ಕತ್ತಲಾತು. ಮತ್ತೆ ಬೆಳಗಾತು.

ಬೆಳಿಗ್ಗೆ ಆ ಪಕ್ಷಿ ಗಿಡದಲ್ಲಿ ಕುಳಿತು ಸಂತೋಷದಿಂದ ಹಾಡು ಹಾಡುತ್ತಿತ್ತು. ಆಗ ಹತ್ತಿರದಲ್ಲಿಯೇ ಇದ್ದ ಆಶ್ರಮದ ಸಂತನೊಬ್ಬ ಬಂದು ಪಕ್ಷಿಗೆ 'ನಿನ್ನೆ ನಿನ್ನ ಎರಡು ಪುಟ್ಟ ಮರಿಗಳು ಕೆಳಕ್ಕೆ ಬಿದ್ದು ಸತ್ತು ಹೋಗ್ಯಾವ, ನೀನು ಇವತ್ತು ಸಂತೋಷದಿಂದ ಹಾಡಾಕತ್ತೀಯಲ್ಲ, ನಿನಗ ದುಃಖ ಆಗಿಲ್ಲೇನು' ಎಂದು ಕೇಳಿದ. ಆವಾಗ ಪಕ್ಷಿ, 'ಹಿಂದಿನದನ್ನು ನೆನೆಸಿಕೊಂಡು ಅಳಾಕ ನಾವೇನು ಮನುಷ್ಯರು ಅಂದಕೊಂಡಿಯೇನು? ನಾವು ಹಾಂಗೆಲ್ಲ ಅಳಲ್ಲ' ಅಂತು. 'ನಿನ್ನೆ ಸತ್ತೋದವು ನಿನ್ನದೇ ಮಕ್ಕಳಲ್ಲೇನು?' ಎಂದು ಕೇಳಿದ ಸಂತ. 'ಅವು ನನ್ನ ಮಕ್ಕಳಲ್ಲ. ದೇವರ ಮಕ್ಕಳು. ಈಗ ನಿಮ್ಮ ವಿಷ್ಯಾನೇ ತಗೊಳೋಣ. ನಿಮ್ಮ ಹೆಣ್ಣುಮಗಳೊಬ್ಬಳು ಬಜಾರದಾಗ ಕೆಲಸ ಐತಿ ಅಂತ ಹೋಗುವಾಗ ಮಕ್ಕಳನ್ನು ನೋಡಿಕೊಳ್ಳಾಕ ಅಂತ ಬಾಜು ಮನ್ಯಾಗ ಬಿಟ್ಟು ಹೋಗಿರ್ತಾಳ. ಅವ್ರೂ ನೋಡಿಕೊಳ್ಳತಾರ. ತನ್ನ ಕೆಲಸ ಮುಗಿಸಿ ಬಂದು ತಾಯಿ ತನ್ನ ಮಕ್ಕಳನ್ನು ತಾನು ಕರಕೊಂಡು ಹೋಗ್ತಾಳ. ಹಾಂಗಾ ದೇವರು ಎಲ್ಲೋ ಹೋಗುವಾಗ ತನ್ನ ಮಕ್ಕಳನ್ನು ನನ್ನ ಗೂಡಿನಲ್ಲಿ ಬಿಟ್ಟು ಹೋಗಿದ್ದ. ಎರಡು ತಿಂಗಳು ನಾನು ಜೋಪಾನ ಮಾಡಿದ್ದೆ. ಈಗ ಆತ ತನ್ನ ಮಕ್ಕಳನ್ನು ತಾನು ಕರಕೊಂಡು ಹೋಗ್ಯಾನ. ನಾನ್ಯಾಕ ಅಳಬೇಕು' ಅಂತಾ ಕೇಳ್ತು. ಪಕ್ಷಿಯ ಜ್ಞಾನ ನೋಡಿ. ಅದರಿಂದ ಮನುಷ್ಯ ಕಲಿಯುವುದು ಬಹಳ ಇದೆ.

ಮಕ್ಕಳು ದೂರವಾದಾಗ ಮನಸ್ಸಿಗೆ ಕಷ್ಟ ಆಗತ್ತೈತಿ. ಆದರೆ, ಇವು ದೇವರ ಮಕ್ಕಳು, ತನ್ನ ಮಕ್ಕಳನ್ನು ನನ್ನ ಮನ್ಯಾಗ ಆಡಾಕ ಅಂತ ಬಿಟ್ಟಿದ್ದ. ಈಗ ಅವರನ್ನು ಕರಕೊಂಡು ಹೋಗ್ಯಾನ ಅಂತ ತಿಳಕೊಂಡರ ಮನಸ್ಸಿಗೆ ಕೊಂಚ ಸಮಾಧಾನ ಆಗ್ತದ. ದೇವರ ಮಕ್ಕಳೊಂದಿಗೆ ಆಡಿ ಸಂತೋಷಪಟ್ಟೆ ಎಂದು ನಾವು ಅಂದಕೋಬೇಕು.


ಖಲೀಲ್ ಗಿಬ್ರಾನ್ ಅಂತಾ ಒಬ್ಬ ತತ್ವಶಾಸ್ತ್ರಜ್ಞ ಇದ್ದ. ಆತ ಹೇಳ್ತಾನ, 'ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ. ನಿಮ್ಮ ಮೂಲಕ ಬಂದವರು ಅಷ್ಟೆ. ನಿಮ್ಮಿಂದ ಬಂದವರಲ್ಲ' ಎಂದು. ಸುಮ್ಮನೆ ಹಾಂಗೆ ಒಂದು ಕೊಳಲನ್ನು ಇಡರಿ. ಅದರಿಂದ ಸ್ವರಗಳು ಬರ್ತಾವೇನು? ಹಿಂದೆ ನುಡಿಸುವವ ಇದ್ದರ ಕೊಳಲಿನ ಮುಖಾಂತರ ಸ್ವರಗಳು ಬರ್ತಾವ. ಹಾಂಗೇ ಇದು. ನಾವು ಕೊಳಲು ಅಷ್ಟೆ. ಹಿಂದೆ ಭಗವಂತ ನುಡಿಸಿದಾಗ ಸ್ವರಗಳು ಬರ್ತಾವ. ಅವನು ನುಡಿಸಿದಾಗ ಬರುವ ಸ್ವರಗಳೇ ನಮ್ಮ ಮಕ್ಕಳು. ಇದನ್ನು ತಿಳಕೋಬೇಕು. ಸತ್ಯವನ್ನು ಅರಿತುಕೊಳ್ಳಬೇಕು. ❖

ಪದಬಂಧ 5822

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮಾನವುಳ್ಳವನು ಇಟ್ಟಿರುವ ಒತ್ತೆ! (4)
3.ವಿದ್ಯೆಯನ್ನು ಕಲಿಯಲು ಬಯಸುವವನು (3)
4.ಗಮನವಿಟ್ಟು ನೋಡಿ! ಸುಲಭವಲ್ಲದುದು ಕಾಣುತ್ತದೆ! (3)
5.ಕಾರನ್ನೇರಿದ ಚಾರನ ಕೆಲಸವೆಲ್ಲಾಬೇಕಾಬಿಟ್ಟಿ! (4)
7.ಕೊನೆಗೆ ಉಚಿತ ಎಂದರೂ ಅನುಗುಣವಾದದ್ದು! (4)
9.ಇಂಪಾದ ಧ್ವನಿ (3)
11.ಕರ ಕೊನೆಗಿಟ್ಟಾಗಿನ ಮಿಶ್ರಣ (3)
12.ರಿಕ್ಷಾ ಹತ್ತಿದಾಗ ಕಾಣಿಸಿದ ಆಕಾಶ (4)
14.ಹರಿಯನ್ನು ನೆನೆಯುತ್ತಾ ನಡೆಸಿದ ದೋಣಿ (4)
15.ಬೆಳೆಯ ಪ್ರಮಾಣವನ್ನು ಗುರುತಿಸುವುದು (3)
16.ದಾಸ್ತಾನು ಕೋಣೆಯಿದು (3)
17.ಎಳೆತನದಿಂದಲೇ ಮೊಳೆತ ಸ್ನೇಹ (4)

ಮೇಲಿಂದ ಕೆಳಕ್ಕೆ
2.ನರನು ನೋಡುತ್ತಿರುವ ಪಟ್ಟಣ (3)
3.ನಯವಾಗಿ ತೋರುವ ನಮ್ರತೆ (3)
6.ಚಾಕಚಕ್ಯತೆಯಿಂದ ಕೆಲಸ ಮಾಡುವ ಆಳು (3)
8.ಚೀಲ ತರುವಾಗ ಹಾಕಿದ ಬಾಗಿಲಿನ ಕೊಂಡಿ (3)
10.ಸ್ವಾಗತ ಕೋರುತ್ತಾ ತನಗೆ ತಾನು ಮಾತಾಡಿಕೊಳ್ಳುವುದು (3)
11.ಪ್ರಯಾಣಿಸುವವನು ಇಲ್ಲಿದ್ದಾನೆ (3)
13.ಪಣ ಒಡ್ಡಿರುವ ಜೈನ ಸನ್ಯಾಸಿ (3)
14.ಹೆಣ್ಣಿಗೆ ಬೇಕಾದ ಬಾಚಣಿಕೆ (3)



5821ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಕೊನರು 4.ಅನರ್ಥ 5.ಚತುರ 6.ಮುನಿ 8.ಸವಡು 10.ಲವ 12.ಮದುವೆ 14.ಗರ 16. ಕಾಯಕ 18.ಬರ 20.ರಾಸಭ 22.ಉಗುರು 23.ನಗರ

ಮೇಲಿಂದ ಕೆಳಕ್ಕೆ:
1.ಕೊತವಾಲ 2.ರುಸುಮು 3.ಮಂಚ 4.ಅರಸ 7.ನಿರ್ನಾಮ 9.ವನ್ಯಮೃಗ 11.ವಜ್ರಕಾಯ 13.ವೆಣಬ 15.ರತ್ನಾಕರ 17.ಕರಾರು 19.ರದನ 21.ಭತ್ಯ

ಸುಡೊಕು 6207

		6			8	5		1
	5		2	1				
1		2			5			8
6		9				8		
			5	4	6		1	
3		5				2		7
		4				1		2
	2		1	5				9
9		1			2	7		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6206 ಸುಡೊಕು

8	3	7	1	9	2	5	6	4
6	1	5	7	3	4	8	2	9
2	9	4	5	6	8	1	3	7
7	6	8	9	5	3	2	4	1
5	2	3	6	4	1	7	9	8
9	4	1	8	2	7	3	5	6
3	7	2	4	8	6	9	1	5
1	5	6	2	7	9	4	8	3
4	8	9	3	1	5	6	7	2

ಶೇ 1.5ರಷ್ಟು ವಾಹನಗಳಲ್ಲಿ ಮಾತ್ರ ಸುರಕ್ಷತಾ ಬಟನ್ ಅಳವಡಿಕೆ ● ಅನ್ಯ ರಾಜ್ಯಗಳಿಗಿಂತ ನಮ್ಮಲ್ಲಿ ದುಬಾರಿ

5.94 ಲಕ್ಷ ವಾಹನಗಳಿಗಿಲ್ಲ ಪ್ಯಾನಿಕ್ ಬಟನ್

● ಖಲೀಲಅಹ್ಮದ ಶೇಖ

ಬೆಂಗಳೂರು: ಸಾರಿಗೆ ಇಲಾಖೆಯಲ್ಲಿ ನೋಂದಣಿಯಾಗಿರುವ 6.04 ಲಕ್ಷ ಸಾರ್ವಜನಿಕ ಸೇವಾ ವಾಹನಗಳ ಪೈಕಿ 5.94 ಲಕ್ಷ ವಾಹನಗಳಲ್ಲಿ ತುರ್ತು ಸಂದರ್ಭದ ಬಟನ್ (ಪ್ಯಾನಿಕ್ ಬಟನ್) ವೆಹಿಕಲ್ ಲೋಕೇಶನ್ ಟ್ರ್ಯಾಕಿಂಗ್ (ವಿಎಲ್‌ಟಿ) ಉಪಕರಣ ಇನ್ನೂ ಅಳವಡಿಕೆಯಾಗಿಲ್ಲ.

ನಿರ್ಭಯಾ ಯೋಜನೆ ಅಡಿಯಲ್ಲಿ ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಶಾಲಾ ವಾಹನ, ಖಾಸಗಿ ಸೇವಾ ವಾಹನ, ಮ್ಯಾಕ್ಸಿ ಕ್ಯಾಬ್, ಮೋಟಾರ್ ಕ್ಯಾಬ್ ಸೇರಿದಂತೆ ಎಲ್ಲ ಸಾರ್ವಜನಿಕ ಸೇವಾ ವಾಹನಗಳಿಗೆ ವಿಎಲ್‌ಟಿ ಉಪಕರಣ ಮತ್ತು ಪ್ಯಾನಿಕ್ ಬಟನ್ ಅಳವಡಿಸಿಕೊಳ್ಳಲು ಸಾರಿಗೆ ಇಲಾಖೆ ನವೆಂಬರ್ 30ರವರೆಗೆ ಗಡುವು ನೀಡಿದೆ. ಈ ಅವಧಿಯಲ್ಲಿ ಬಟನ್ ಅಳವಡಿಸಿಕೊಳ್ಳದಿದ್ದರೆ ಕಾನೂನು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದೆ.

ಈ ಹಿಂದಿನ ನಿಯಮದ ಪ್ರಕಾರ, ಇಂತಹ ವಾಹನಗಳಿಗೆ ಕೆಲವು ನಗರಗಳಲ್ಲಿ ಮಾತ್ರ ಪ್ಯಾನಿಕ್ ಬಟನ್ ಕಡ್ಡಾಯಗೊಳಿಸಲಾಗಿತ್ತು. ಈಗ ದೇಶದ್ಯಾದಂತ ಕಡ್ಡಾಯಗೊಳಿಸಲಾಗಿದೆ.

ಅಂಕಿ ಅಂಶಗಳು

6,04,863
ರಾಜ್ಯದಲ್ಲಿರುವ ಒಟ್ಟು ಸಾರ್ವಜನಿಕ ಸೇವಾ ವಾಹನಗಳ ಸಂಖ್ಯೆ

10,517
ಪ್ಯಾನಿಕ್ ಬಟನ್, ವಿಎಲ್‌ಟಿ ಉಪಕರಣ ಅಳವಡಿಸಿಕೊಂಡಿರುವ ವಾಹನಗಳು

ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಕೆಗೆ ಸಂಬಂಧಿಸಿದಂತೆ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ ಆದೇಶ ಹೊರಡಿಸಿದೆ. ಜೊತೆಗೆ, ಯಾವ ರೀತಿ ಜಾರಿಗೊಳಿಸಬೇಕು ಎಂಬ ಮಾರ್ಗಸೂಚಿಯನ್ನೂ ನೀಡಿದೆ. ಇದೇ ಮಾರ್ಗಸೂಚಿ ಅನ್ವಯ ರಾಜ್ಯದಲ್ಲಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಸಲು ಸಾರಿಗೆ ಇಲಾಖೆಯು ವಾಹನ ಮಾಲೀಕರಿಗೆ ಆದೇಶ ನೀಡಿದೆ.

ಕಾಂಟ್ರ್ಯಾಕ್ಟ್ ಕ್ಯಾರೇಜ್ ವಾಹನ, ಶಾಲಾ ವಾಹನ, ಖಾಸಗಿ ಸೇವಾ ವಾಹನ, ಮ್ಯಾಕ್ಸಿಕ್ಯಾಬ್, ಮೋಟಾರ್ ಕ್ಯಾಬ್ ಮತ್ತು ರಾಷ್ಟ್ರೀಯ ರಹದಾರಿ (ಪರ್ಮಿಟ್) ಹೊಂದಿರುವ ಸರಕು ಸಾಗಣೆ ವಾಹನಗಳಿಗೆ ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಅಳವಡಿಸುವುದು ಕಡ್ಡಾಯವಾಗಿದೆ.

'ಗಡುವಿನೊಳಗೆ ಅಳವಡಿಕೆ ಕಡ್ಡಾಯ'

'ನಿಗದಿತ ಅವಧಿಯೊಳಗೆ ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಸಿಕೊಳ್ಳದಿದ್ದರೆ, ವಾಹನ ಸದೃಢ ಪ್ರಮಾಣಪತ್ರ (ಎಫ್‌.ಸಿ) ಸಿಗುವುದಿಲ್ಲ. ಇತರೆ ಸೌಲಭ್ಯಗಳಿಂದಲೂ ವಂಚಿತವಾಗಬೇಕಾಗುತ್ತದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

'ರಾಜ್ಯದಲ್ಲಿ ಸೆಪ್ಟೆಂಬರ್ 30ವರೆಗೆ 10,517 ವಾಹನಗಳಲ್ಲಿ ಮಾತ್ರ ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಸಲಾಗಿದೆ. ಉಳಿದ ವಾಹನಗಳಲ್ಲಿ ಈ ನಿಯಮವನ್ನು ಪಾಲಿಸದಿದ್ದರೆ ಕಾನೂನಿನಡಿ ಕ್ರಮ ಕೈಗೊಳ್ಳಲಾಗುವುದು' ಎಂದು ಸಾರಿಗೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ವಿಎಲ್‌ಟಿ ಹಾಗೂ ಪ್ಯಾನಿಕ್ ಬಟನ್ ಅಳವಡಿಕೆ ಕಡ್ಡಾಯಗೊಳಿಸಿರುವುದು ಸ್ವಾಗತಾರ್ಹ. ಆದರೆ ಬೇರೆ ರಾಜ್ಯಗಳಲ್ಲಿ ಈ ಉಪಕರಣಗಳನ್ನು ಅಳವಡಿಸಿಕೊ-ಳ್ಳಲು ₹ 6 ಸಾವಿರದಿಂದ ₹7 ಸಾವಿರ ದರ ನಿಗದಿಪಡಿಸಿವೆ. ಆದರೆ, ನಮ್ಮ ರಾಜ್ಯದಲ್ಲಿ ₹ 11 ಸಾವಿರದಿಂದ ₹ 12 ಸಾವಿರದವರೆಗೆ ದರ ನಿಗದಿಪಡಿಸಲಾ-ಗಿದೆ' ಎಂದು ಕರ್ನಾಟಕ ರಾಜ್ಯ ಖಾಸಗಿ ಸಾರಿಗೆ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಸ್. ನಟರಾಜ್ ಶರ್ಮಾ ದೂರಿದರು.

'ಸರಕು ಸಾಗಣೆ ವಾಹನಗಳಲ್ಲಿಯೂ ಈ ಉಪಕರಣಗಳನ್ನು ಅಳವಡಿಕೆಗೆ ಕಡ್ಡಾಯಗೊಳಿಸಿರುವುದು ಸರಿಯಲ್ಲ' ಎಂದರು.

ಏನಿದು ವಿಎಲ್‌ಟಿ-ಪ್ಯಾನಿಕ್ ಬಟನ್

'ಸಾರ್ವಜನಿಕ ಸೇವಾ ವಾಹನಗಳಲ್ಲಿ ಪ್ರಯಾಣದ ಸಂದರ್ಭದಲ್ಲಿ ಯಾವುದಾದರೂ ತುರ್ತು ಸಂದರ್ಭದಲ್ಲಿ, ದಾಳಿಗಳು ನಡೆದರೆ ಹಾಗೂ ಇತರ ಅಹಿತಕರ ಘಟನೆಗಳು ನಡೆದಾಗ ಪ್ರಯಾಣಿಕರ ರಕ್ಷಣೆ ಒದಗಿಸಲು ವಿಎಲ್‌ಟಿ ಮತ್ತು ಪ್ಯಾನಿಕ್ ಬಟನ್ ಸಹಾಯಕ್ಕೆ ಬರಲಿವೆ' ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

'ವಾಹನ ಹಾದುಹೋಗುವ ಮಾರ್ಗ ಪರಿಶೀಲಿಸಲು, ಸದ್ಯ ಯಲ್ಲಿ ವಾಹನದ ಸ್ಥಳವನ್ನು ಗುರುತಿಸಲು ವಿಎಲ್‌ಟಿ ನೆರವಾಗಲಿದೆ' ಎಂದರು.

ಗಣಪತಿ ಚೌಕಿಗೆ ಕಲ್ಲು: ಬಂಧನ

ವಿಜಯಪುರ: ನಗರದ ಮಾರುಕಟ್ಟೆ ಪ್ರದೇಶದಲ್ಲಿ ಇರುವ ಪ್ರಸಿದ್ಧ ಗಣಪತಿ ಚೌಕಿಗೆ ಕಲ್ಲೆಸೆದು, ಗಾಜು ಪುಡಿ ಮಾಡಿದ ಆರೋಪದ ಮೇಲೆ ವಿಜಯಪುರದ ಸೊಹೇಲ್ ಮುನ್ನಾ ಜಮಾದಾರ (21) ಎಂಬುವವನನ್ನು ಪೊಲೀಸರು ಬಂಧಿಸಿದ್ದಾರೆ.

ಬುಧವಾರ ರಾತ್ರಿ ಗಣಪತಿ ಚೌಕಿಗೆ ಕಲ್ಲೆಸೆದು, ಗಾಜುಗಳನ್ನು ಪುಡಿ ಮಾಡಲಾಗಿದೆ ಎಂಬ ವಿಷಯ ಹರಡಿ ಗುರುವಾರ ಬೆಳಿಗ್ಗೆ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರು.ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿತ್ತು.

'ಆರೋಪಿಯನ್ನು ಗಾಂಧಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಇನ್ನೊಬ್ಬ ಆರೋಪಿ ತಲೆ ಮರೆಸಿಕೊಂಡಿದ್ದು, ಆತನ ಬಂಧನಕ್ಕೆ ಕಾರ್ಯಾಚರಣೆ ನಡೆದಿದೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಋಷಿಕೇಶ ಸೋನಾವಣೆ ತಿಳಿಸಿದ್ದಾರೆ.

63 ಹೊಸ ಕೀಟ ಪ್ರಭೇದ ಕಂಡು ಹಿಡಿದ ಎನ್‌ಬಿಎಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದಲ್ಲಿರುವ ಭಾರತೀಯ ಕೃಷಿ ಸಂಶೋಧನಾ ಪರಿಷತ್ (ಐಸಿಎಆರ್)- ರಾಷ್ಟ್ರೀಯ ಕೃಷಿ ಕೀಟ ಸಂಪನ್ಮೂಲ ಸಂಸ್ಥೆಯ (ಎನ್‌ಬಿಎಐಆರ್) ವಿಜ್ಞಾನಿಗಳು 2023-24ನೇ ಸಾಲಿನಲ್ಲಿ 63 ಹೊಸ ಕೀಟ ಪ್ರಭೇದಗಳನ್ನು ಕಂಡು ಹಿಡಿದಿದ್ದಾರೆ ಎಂದು ಸಂಸ್ಥೆಯ ನಿರ್ದೇಶಕ ಎಸ್.ಎನ್. ಸುಶೀಲ್ ತಿಳಿಸಿದರು.

'ಕೃಷಿಗೆ ಸಂಬಂಧಿಸಿದ ಈ ಕೀಟಗಳು ಪತ್ತೆಯಾಗಿರುವುದರಿಂದ ಕೀಟಗಳ ಬಗ್ಗೆ ವೈಜ್ಞಾನಿಕ ತಿಳಿವಳಿಕೆ ಇನ್ನಷ್ಟು ಹೆಚ್ಚಿದೆ' ಎಂದು ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕೃಷಿಗೆ ಪೂರಕವಾದ ಮತ್ತು ಕೆಲವು ಅಪಾಯಕಾರಿ ಕೀಟಗಳು ಪತ್ತೆಯಾಗಿವೆ. ಕ್ಯಾಸಾವ ಮೀಲಿಬಗ್‌ನಂಥ ಅಪಾಯಕಾರಿ ಕೀಟಗಳನ್ನು ನಿಯಂತ್ರಿಸಲು ಪ್ಯಾರಾಸಿಟಾಯ್ಡ್ ಅನಾಗೈರಸ್ ಲೋಪೆಜಿಯನ್ನು ಎನ್‌ಬಿಎಐಆರ್ ಪರಿಚಯಿಸಿದೆ. ಮರಗೆಣಸು ಕೃಷಿಯ ಮೇಲೆ ಪರಿಣಾಮ ಬೀರುತ್ತಿದ್ದ ಕೆಸವ ಮಿಲಿಬಗ್ ಕೀಟವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿದ್ದೇವೆ. ಜೀನ್ ಸೈಲೆನ್ಸಿಂಗ್ ತಂತ್ರಜ್ಞಾನ ಪರಿಚಯಿಸುವ ಮೂಲಕ ಹತ್ತಿಯನ್ನು ಬಾಧಿಸುವ ಬಿಳಿ ನೊಣಗಳನ್ನು ನಿಯಂತ್ರಿಸಲಾಗಿದೆ. ಇದರಿಂದ ಶೇ 85ಕ್ಕೂ ಅಧಿಕ ನೊಣಗಳು ಸತ್ತು ಹೋಗಿವೆ' ಎಂದರು.



ಎಸ್‌.ಎನ್‌. ಸುಶೀಲ್

ಐದು ಪೇಟೆಂಟ್: ಎನ್‌ಬಿಎಐಆರ್ 2023–24ನೇ ಸಾಲಿನಲ್ಲಿ 5 ಪೇಟೆಂಟ್ ಪಡೆದಿದೆ. ಈ ಮೂಲಕ ಸಂಸ್ಥೆಯು ಈವರೆಗೆ ಪಡೆದಿರುವ ಒಟ್ಟು ಪೇಟೆಂಟ್ ಸಂಖ್ಯೆ 10ಕ್ಕೆ ಏರಿದೆ ಎಂದರು.

ಹೊಲೊಟ್ರಿಚಿಯಾ ಕಾನ್ಸಾಂಗ್ಯೂನಿಯಾ ನಿರ್ವಹಣೆಯ ವಿಧಾನ ಮತ್ತು ಸಾಧನಕ್ಕೆ 2023ರ ಮಾರ್ಚ್‌ನಲ್ಲಿ ಪೇಟೆಂಟ್ ಸಿಕ್ಕಿದೆ. 'ಪ್ರೊಟೋಕಾಲ್ ಫಾರ್ ಆಲ್ಕೋಹಾಲ್ ಫ್ರಿ ಪ್ಲೈವುಡ್ ಲೇಸ್ಡ್ ಮೆಲನ್ ಫ್ಲೈ ಅಟ್ರಾಕ್ಟಂಟ್'ಗೆ ಅದೇ ವರ್ಷ ಮೇ ತಿಂಗಳಲ್ಲಿ ಪೇಟೆಂಟ್ ಪಡೆಯಲಾಯಿತು. ಮಾವಿನ ಹಣ್ಣು ಬಾಧಿಸುವ ನೊಣಗಳನ್ನು ನಿಯಂತ್ರಿಸುವ ಬಲೆಯ ದಕ್ಷತೆ ಹೆಚ್ಚಿಸುವ ಸಂಯೋಜನೆ 'ಡೋರ್ಸಾ ಲೂರ್' ಬಗ್ಗೆ ನವೆಂಬರ್‌ನಲ್ಲಿ ಪೇಟೆಂಟ್ ಸಿಕ್ಕಿದೆ. ಕೀಟ ನಿರ್ವಹಣೆಗಾಗಿ ನ್ಯಾನೊ ಎಮಲ್ಷನ್ ಸಂಯೋಜನೆಗೆ ಈ ವರ್ಷ ಮಾರ್ಚ್‌ನಲ್ಲಿ ಹಾಗೂ ಮರಗಳ ಮೇಲಿನ ಗೆದ್ದಲಿನ ಸಮ ಸ್ಯೆಗೆ ಗಿಡಮೂಲಿಕೆ ಆಧಾರಿತ ನಿವಾರಕಕ್ಕೆ ಏಪ್ರಿಲ್‌ನಲ್ಲಿ ಪೇಟೆಂಟ್ ಪಡೆಯಲಾಯಿತು ಎಂದರು.

ಇದರ ಜೊತೆಗೆ ಸೂಕ್ಷ್ಮಜೀವಿಯ ಕೀಟನಾಶಕ, ಫೆರೊಮೋನ್‌ಗಳು ಮತ್ತು ಕೀಟನಾಶಕ ಸೂತ್ರ ಒಳಗೊಂಡಂತೆ 47 ತಂತ್ರಜ್ಞಾನಗಳನ್ನು ವಾಣಿಜ್ಯೀಕರಣಗೊ-ಳಿಸಿದೆ. ಅವುಗಳ ವ್ಯಾಪಕ ಬಳಕೆಯನ್ನು ಉತ್ತೇಜಿಸಲು 112 ಪರವಾನಗಿ ಒಪ್ಪಂದಗಳಿಗೆ ಸಹಿ ಹಾಕಿದೆ ಎಂದರು.

ಸಾಮಾಜಿಕ ಜವಾಬ್ದಾರಿಯ ಬದ್ಧತೆಯ ಭಾಗವಾಗಿ, ಸಂಸ್ಥೆಯು 'ಸ್ವಚ್ಛತಾ ಹಿ ಸೇವಾ-2024' ಕಾರ್ಯ-ಕ್ರಮವನ್ನು ಸಕ್ರಿಯವಾಗಿ ಕೈಗೊಂಡಿದೆ. ಸೆ.15 ರಿಂದ ಅ.1ರವರೆಗೆ ಅಭಿಯಾನ ಹಮ್ಮಿಕೊಳ್ಳಲಾಗಿದೆ ಎಂದರು. ಎನ್‌ಬಿ-ಎಐಆರ್‌ನ ವಿವಿಧ ವಿಭಾಗಗಳ ಮುಖ್ಯಸ್ಥರಾದ ಟಿ. ವೆಂಕಟೇಶನ್, ಕೆ. ಸುಬಾಹರನ್, ಶ್ರೀದೇವಿ, ಸಾಗರ್, ಗ್ರೇಸಿ, ದೀಪಾ ಭಗತ್ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಸ್ವಾಮೀಜಿಗೆ ಬೆದರಿಕೆ ಪ್ರಕರಣ: ಮತ್ತಿಬ್ಬರ ಸೆರೆ

ಬೆಂಗಳೂರು: ತಿಪಟೂರಿನ ಮಠವೊಂದರ ಸ್ವಾಮೀಜಿಗೆ ಬೆದರಿಕೆ ಹಾಕಿ, ₹6 ಕೋಟಿಗೆ ಬೇಡಿಕೆ ಇಟ್ಟಿದ್ದ ಪ್ರಕರಣದಲ್ಲಿ ಮತ್ತಿಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ಗಗನ್ ಹಾಗೂ ಸೂರ್ಯನಾರಾಯಣ್ ಬಂಧಿತರು. ಈ ಹಿಂದೆ ವಿಜಯಪುರದ ವಿದ್ಯಾ ಬಿರಾದರ್ ಪಾಟೀಲ ಅವರನ್ನು ಬಂಧಿಸಲಾಗಿತ್ತು. ವಿದ್ಯಾ ಅವರ ವಿಚಾರಣೆ ವೇಳೆ ನೀಡಿದ ಮಾಹಿತಿ ಆಧರಿಸಿ, ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ಮೂರಕ್ಕೇರಿದೆ.

'ಈ ಪ್ರಕರಣದಲ್ಲಿ ಇನ್ನೂ ಒಬ್ಬ ಮಹಿಳಾ ಆರೋಪಿ ಭಾಗಿಯಾಗಿದ್ದು, ಅವರ ಪತ್ತೆಗೆ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಆಗಸ್ಟ್ 31ರಂದು ಸ್ವಾಮೀಜಿ ಅವರಿಗೆ ಕರೆ ಮಾಡಿದ್ದ ವಿದ್ಯಾ ಬಿರಾದರ್ ಪಾಟೀಲ ಅವರು, ತಾನು ರಾಜ್ಯ ಮಾಹಿತಿ ಹಕ್ಕು ಆಯೋಗದ ಅಧ್ಯಕ್ಷೆ ಮತ್ತು ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಅವರ ಸಹೋದರಿ ಎಂಬುದಾಗಿ ಪರಿಚಯ ಮಾಡಿಕೊಂಡಿದ್ದರು. ಡಿ.ಜಿ.ಪಲ್ಲವಿ ಹಾಗೂ ಸೂರ್ಯನಾರಾಯಣ ಎಂಬುವರ ನಿಮಗೆ ಸಂಬಂಧಿಸಿದ ವಿಡಿಯೊ ಹಾಗೂ ಫೋಟೊ ಇಟ್ಟುಕೊಂಡಿದ್ದಾರೆ. ಅವುಗಳ ಹಣ ಕೊಡದಿದ್ದರೆ ಬಹಿರಂಗ ಮಾಡುವುದಾಗಿ ಬೆದರಿಸಿದ್ದರು. ಅಲ್ಲದೇ ಹಣಕ್ಕಾಗಿ ಬೇಡಿಕೆ ಇಟ್ಟಿದ್ದರು. ಸ್ವಾಮೀಜಿ ನೀಡಿದ್ದ ದೂರು ಆಧರಿಸಿ ತನಿಖೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.

'ಇಬ್ಬರು ಆರೋಪಿಗಳ ಮೊಬೈಲ್ ಫೋನ್ ವಶಕ್ಕೆ ಪಡೆಯಲಾಗಿದೆ. ಅವುಗಳನ್ನು ಸೈಬರ್ ತಜ್ಞರು ಪರಿಶೀಲನೆ ನಡೆ-ಸುತ್ತಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಮಿಲಿಟರಿ ನರ್ಸಿಂಗ್ ಸರ್ವಿಸ್ ಸ್ಥಾಪನಾ ದಿನಾಚರಣೆ



ಬೆಂಗಳೂರು: ನಗರದ ಬೆಂಗಳೂರು ಕಮಾಂಡ್ ಹಾಸ್ಪಿಟಲ್ ಏರ್ ಫೋರ್ಸ್‌ನ (ಸಿಎಚ್‌ಎಫ್) ಮಿಲಿಟರಿ ನರ್ಸಿಂಗ್ ಸೇವೆಯ (ಎಂಎನ್‌ಎಸ್) ಅಧಿಕಾರಿಗಳು 99ನೇ ಸ್ಥಾಪನಾ ದಿನವನ್ನು ಮಂಗಳವಾರ ಆಚರಿಸಿದರು.

ಸಶಸ್ತ್ರ ಪಡೆಗಳ ಪ್ರಮುಖ ಭಾಗವಾಗಿ ಮಿಲಿಟರಿ ನರ್ಸಿಂಗ್ ಸೇವೆಯನ್ನು 1926ರಲ್ಲಿ ಸ್ಥಾಪಿಸಲಾಗಿತ್ತು. ಅದರ ನೆನಪಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮಕ್ಕೆ ಏರ್ ಮಾರ್ಷಲ್ ನಾಗೇಂದ್ರ ಕಪೂರ್ ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಬೆಂಗಳೂರಿನ ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಪುಷ್ಪಾರ್ಚನೆ ಕಾರ್ಯಕ್ರಮ ನಡೆಯಿತು. ಸಿಎಚ್‌ಎಫ್ ಪ್ರಾಂಶುಪಾಲರಾದ ಬ್ರಿಗೇಡಿಯರ್ ಆರ್. ವಿಜಯರಾಣಿ, ಮಿಲಿಟರಿ ನರ್ಸಿಂಗ್ ಸೇವೆಯ ಮಾಜಿ ಹೆಚ್ಚುವರಿ ನಿರ್ದೇಶಕ ಮೇಜರ್ ಜನರಲ್ ಎಲಿಜಬೆತ್ ಜಾನ್ (ನಿವೃತ್ತ) ಅವರು ವೀರ ಯೋಧರಿಗೆ ನಮನ ಸಲ್ಲಿಸಿದರು.

ಸಾರಿಗೆ ಸಚಿವ ರಾಮಲಿಂಗಾರೆಡ್ಡಿಯವರಿಂದ ಉದ್ಘಾಟನೆ

'ಸ್ಮಾರ್ಟ್ ತಂಗುದಾಣ'ಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ಆರ್. ವೃತ್ತದ ನೃಪತುಂಗ ರಸ್ತೆಯಲ್ಲಿ ನಿರ್ಮಿಸಿರುವ 'ಸ್ಮಾರ್ಟ್ ತಂಗುದಾಣ'ವನ್ನು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ಬುಧವಾರ ಉದ್ಘಾಟಿಸಿದರು.

ಸೇಪಿಯನ್ಸ್ ಇಂಡಿಯಾ ಎಂಬ ಬಹುರಾಷ್ಟ್ರೀಯ ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕಾ ನಿಧಿ (ಸಿಎಸ್‌ಆರ್) ಅಡಿಯಲ್ಲಿ ಶಿಲ್ಪಾ ಫೌಂಡೇಷನ್ ಸಹಯೋಗದಲ್ಲಿ ನಿರ್ಮಿಸಿರುವ ಅತ್ಯಾಧುನಿಕ ಹಾಗೂ ಸುಸಜ್ಜಿತ 'ಸ್ಮಾರ್ಟ್ ತಂಗುದಾಣ'ವನ್ನು ರಾಮಲಿಂಗಾರೆಡ್ಡಿ ಅವರ ಮೂಲಕ ಬಿಬಿಎಂಪಿಗೆ ಹಸ್ತಾಂತರಿಸಲಾಯಿತು.

ನಂತರ ಮಾತನಾಡಿದ ಸಚಿವರು, 'ಸೇಪಿಯನ್ಸ್ ಹಾಗೂ ಶಿಲ್ಪಾ ಫೌಂಡೇಷನ್ ನಿರ್ಮಿಸಿರುವ ಸ್ಮಾರ್ಟ್ ತಂಗುದಾಣವು ಹಲವಾರು ಸೌಲಭ್ಯಗಳಿಂದ ಕೂಡಿದ್ದು, ಪ್ರಯಾಣಿಕರಿಗೆ ಅನುಕೂಲವಾಗಲಿದೆ. ಇಲ್ಲಿ ಚಾರ್ಜಿಂಗ್ ಪಾಯಿಂಟ್, ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮಷಿನ್ ಸೇರಿದಂತೆ ಹಲವಾರು ಸೌಲಭ್ಯಗಳನ್ನು ಒಳಗೊಂಡಿದೆ. ಇದನ್ನು ಸಾರ್ವಜನಿಕರು ಉತ್ತಮ ರೀತಿಯಲ್ಲಿ ಬಳಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

'ಈ ತಂಗುದಾಣವು ಇತರೆ ತಂಗುದಾಣಗಳಿಗಿಂತ ವಿಭಿನ್ನವಾಗಿದ್ದು, ಮಹಿಳೆಯ ಸುರಕ್ಷತೆಗೆ ಹೆಚ್ಚು ಆದ್ಯತೆ ನೀಡಿದೆ. ಮಹಿಳೆಯರು ತುರ್ತು ಸಂದರ್ಭದಲ್ಲಿ ಇಲ್ಲಿರುವ ಪ್ಯಾನಿಕ್ ಬಟನ್ ಒತ್ತಿದರೆ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ರವಾನೆಯಾಗಲಿದೆ. ಕೆಲವೇ ನಿಮಿಷಗಳಲ್ಲಿ ಪೊಲೀಸ್ ಸಿಬ್ಬಂದಿ ಸ್ಥಳಕ್ಕೆ ಬರುತ್ತಾರೆ. ಸಿಸಿಟಿವಿ ಕ್ಯಾಮೆರಾ ಅಳವಡಿಸಿರುವುದರಿಂದ ಅಪರಾಧ ಚಟುವಟಿಕೆಗಳನ್ನು ತಡೆಗಟ್ಟಲು ಇದು ಸಹಕಾರಿ ಆಗಲಿದೆ. ಇಂತಹ ಯೋಜನೆಗಳು ನಗರದಾದ್ಯಂತ ವಿಸ್ತರಣೆಯಾಗಲಿ' ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸೇಪಿಯನ್ಸ್ ಸಂಸ್ಥೆಯ ಸುರಜೀತ್ ಬಸು, ರಾಜೇಶ್ ಕೆಂಕೆರೆ, ಸುಶೀಲ್ ಮಹಲ, ಗಿರೀಶ್ ಕುಮಾರ್, ಶಿಲ್ಪಾ ಫೌಂಡೇಷನ್ ಸಂಸ್ಥಾಪಕರಾದ ಅಚ್ಯುತ್ ಗೌಡ ಉಪಸ್ಥಿತರಿದ್ದರು.



ಸ್ಮಾರ್ಟ್ ಬಸ್ ತಂಗುದಾಣವನ್ನು ರಾಮಲಿಂಗಾರೆಡ್ಡಿ ಅವರು ಉದ್ಘಾಟನೆಗೊಳಿಸಿದರು. ಸೇಪಿಯನ್ಸ್ ಕಂಪನಿಯ ಸುರಜೀತ್ ಬಸು, ರಾಜೇಶ್ ಕೆಂಕೆರೆ, ಸುಶೀಲ್ ಮಹಲ, ಗಿರೀಶ್ ಕುಮಾರ್, ಶಿಲ್ಪಾ ಫೌಂಡೇಷನ್ ಸಂಸ್ಥಾಪಕ ಅಚ್ಯುತ್ ಗೌಡ ಉಪಸ್ಥಿತರಿದ್ದರು

ಕೆಆರ್‌ಐಡಿಎಲ್: ಪಾರದರ್ಶಕ ಪ್ರಕ್ರಿಯೆಗೆ ಆ್ಯಪ್

ಬೆಂಗಳೂರು: ವಿವಿಧ ಕಾಮಗಾರಿಗಳ ಪ್ರಗತಿಯೂ ಸೇರಿದಂತೆ ಕೆಆರ್‌ಐಡಿಎಲ್ (ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮ) ನಿರ್ವಹಿಸುವ ಎಲ್ಲ ಪ್ರಕ್ರಿಯೆಗಳನ್ನು ಪಾರದರ್ಶಕವಾಗಿ ನಡೆಸಲು 'ಗಾಂಧಿ ಸಾಕ್ಷಿ ಕಾಯಕ- 2.0' (ವರ್ಕ್ ಮಾನಿಟರಿಂಗ್ ಸಿಸ್ಟಂ) ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದರು.

ಈ ತಂತ್ರಾಂಶವನ್ನು ಬುಧವಾರ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಕೆಆರ್‌ಐಡಿಎಲ್ ನಿರ್ವಹಿಸುವ ಕಾಮಗಾರಿಗಳ ಸಂಪೂರ್ಣ ಮಾಹಿತಿಗಳು, ಕಾಮಗಾರಿಗಳನ್ನು ವಹಿಸುವ ಇಲಾಖೆಗಳಿಂದ ಬಿಡುಗಡೆಯಾಗುವ ಅನುದಾನದ ಸ್ವೀಕೃತಿ ಹಾಗೂ ಬಳಕೆ, ಲೆಕ್ಕಪತ್ರಗಳ ನಿರ್ವಹಣೆ ಮುಂತಾದ ವಿವಿಧ ಅಂಶಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಈ ತಂತ್ರಾಂಶದಿಂದ ಸಾಧ್ಯವಾಗಲಿದೆ' ಎಂದರು. 'ಕೆಆರ್‌ಐಡಿಎಲ್ ವಹಿವಾಟನ್ನು ಪಾರದರ್ಶಕಗೊಳಿಸುವ ಉದ್ದೇಶದಿಂದ ಇ-ಆಡಳಿತ ಇಲಾಖೆಯ ಮೂಲಕ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ' ಎಂದರು.

ಪ್ರಜಾವಾಣಿ ನವವರ್ಣ

ಹಸಿರು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಶುಕ್ರವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541



ಶಕ್ತಿ ಲೇಡೀಸ್ ಗ್ರೂಪ್



ಚೈತ್ರ, ಕವಿತಾ, ಸುಜಾತ



ಅಂಜನಾ



ಕುಸುಮಾಂಜಲಿ



ಮಾಸ್ಟರ್ ಪಿಯು ಕಾಲೇಜು



ಅನನ್ಯಾ ಸುರೇಶ್



ಪ್ರತೀಕ್ಷಾ



ಸಂಧ್ಯಾ ಶಮಿಕಾ



ಸಿಂಧು, ಶರ್ವ



ಗಾನ ರಿದ್ಧಿ ಅಪಾರ್ಟ್‌ಮೆಂಟ್



ಜಿ ಜೆ ಎಸ್ ಶಿಕ್ಷಕಿಯರು





T&P ವಿಭಾಗ, KPTCL, ಕಾವೇರಿ ಭವನ



ಮಾರಿಕಾಂಬಾ ಟೆಂಪಲ್ ಫ್ರೆಂಡ್ಸ್ ಕ್ಲಬ್



ಕೆ ಎಲ್ ಇ ಶಾಲೆ

ಇಂದಿನ ಅಧಿದೇವತೆ

ಬ್ರಹ್ಮಚಾರಿಣಿ





ನಿಸರ್ಗ ಲೇಔಟ್ ಲೇಡೀಸ್ ಗ್ರೂಪ್



ರಾಧಾ & ಸ್ನೇಹಿತರು



ಶ್ವೇತಾ, ಅನುಷ್ಕಾ



ಆರ್ ಇ ಎಸ್ ಶಾಲೆ

ಬಿಳಿ ಬಣ್ಣದ ನೈವೇದ್ಯ



ಇಂದಿನ ಬಣ್ಣ - ಹಸಿರು



ಪತಂಜಲಿ ಯೋಗ ಸಮಿತಿ



ಕರ್ನಾಟಕ ಬ್ಯಾಂಕ್ ವಸತಿ ಕ್ವಾರ್ಟರ್ಸ್



ಪ್ರಜ್ಞಾ ಮತ್ತು ಸ್ನೇಹಿತರು



ಎಸ್ ಎನ್ ಶಾಲಾ ಶಿಕ್ಷಕಿಯರು



ಯಶಸ್ವಿನಿ ಗೌಡ



ಕಲ್ಪನಾ ಮತ್ತು ಸ್ನೇಹಿತರು



ಕವಿತಾ ಮತ್ತು ಸ್ನೇಹಿತರು

ಮಹಾನಗರಗಳಲ್ಲಿ ಮಾಲಿನ್ಯ ಹೆಚ್ಚಳ: ರಾಜ್ಯಕ್ಕೆ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ದಕ್ಷಿಣ ಭಾರತದ ಇತರ ನಗರಗಳಿಗೆ ಹೋಲಿಸಿದರೆ ಕರ್ನಾಟಕದ ಮಹಾನಗರಗಳಲ್ಲಿ ಮಾಲಿನ್ಯ ಪ್ರಮಾಣ ಹೆಚ್ಚಾಗಿದೆ ಎಂಬ ಗ್ರೀನ್‌ಪೀಸ್ ಸಂಸ್ಥೆ ವರದಿ ನೀಡಿದ್ದರಿಂದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠ ನೋಟಿಸ್ ನೀಡಿದೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡ ಪೀಠದ ಮುಖ್ಯಸ್ಥ ನ್ಯಾ. ಪ್ರಕಾಶ್ ಶ್ರೀವಾಸ್ತವ, ನ್ಯಾಯಮೂರ್ತಿಗಳಾದ ಅರುಣ್ ಕುಮಾರ್ ತ್ಯಾಗಿ ಹಾಗೂ ಡಾ.ಸೆಂಥಿಲ್‌ವೇಲ್ ಅವರನ್ನೊಳಗೊಂಡ ಪೀಠವು ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ತೆಲಂಗಾಣ, ಆಂಧ್ರ ಪ್ರದೇಶ, ಕೇರಳ ಹಾಗೂ ತಮಿಳುನಾಡು ಮಾಲಿನ್ಯ ನಿಯಂತ್ರಣ ಮಂಡಳಿಗಳನ್ನು ಪ್ರತಿವಾದಿಗಳನ್ನಾಗಿ ಮಾಡಿದೆ.

ಗ್ರೀನ್‌ಪೀಸ್ ಸಂಸ್ಥೆಯು ಹೈದರಾಬಾದ್, ಚೆನ್ನೈ, ಕೊಚ್ಚಿ, ಮಂಗಳೂರು, ಅಮರಾವತಿ, ವಿಜಯವಾಡ, ವಿಶಾಖ ಪಟ್ಟಣ, ಬೆಂಗಳೂರು, ಮೈಸೂರು ಹಾಗೂ ಪುದುಚೆರಿ ನಗರಗಳಲ್ಲಿ ಮಾಲಿನ್ಯ ಪ್ರಮಾಣದ ಅಧ್ಯಯನ ನಡೆಸಿತ್ತು. 'ವಿಶ್ವ ಆರೋಗ್ಯ ಸಂಸ್ಥೆಯ ಮಾನದಂಡಗಳಿಗಿಂತ ಬೆಂಗಳೂರು, ಮೈಸೂರು ಹಾಗೂ ಮಂಗಳೂರು ನಗರಗಳಲ್ಲಿ ಮಾಲಿನ್ಯ ಪ್ರಮಾಣ ಐದಾರು ಪಟ್ಟು ಹೆಚ್ಚು ಇದೆ. ಇದರಿಂದಾಗಿ, ಜನರ ಆರೋಗ್ಯ ಮೇಲೆ ದುಷ್ಪರಿಣಾಮ ಉಂಟಾಗುತ್ತಿದೆ' ಎಂದು ವರದಿ ಬೆಳಕು ಚೆಲ್ಲಿತ್ತು. ಈ ಪ್ರಕರಣದಲ್ಲಿ ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆ 1981 ಹಾಗೂ ಪರಿಸರ ಸಂರಕ್ಷಣಾ ಕಾಯ್ದೆ 1986ರ ನಿಯಮ ಉಲ್ಲಂಘನೆಯಾಗಿದೆ ಎಂದು ಪೀಠ ಅಭಿಪ್ರಾಯಪಟ್ಟಿದೆ.

ಕಾಂಗೊ: ದೋಣಿ ಮಗುಚಿ 78 ಸಾವು

ಗೋಮಾ (ಕಾಂಗೊ) (ಎಪಿ): ಕಾಂಗೊದ ಪೂರ್ವ ಭಾಗದಲ್ಲಿರುವ ಲೇಕ್ ಕಿವುನಲ್ಲಿ ದೋಣಿ ಮಗುಚಿದ ಪರಿಣಾಮ ಗುರುವಾರ 78 ಜನರು ಮೃತಪಟ್ಟಿದ್ದಾರೆ.

ದೋಣಿಯಲ್ಲಿ 278 ಪ್ರಯಾಣಿಕರಿದ್ದರು. ದೋಣಿಯಲ್ಲಿ ಅದರ ಸಾಮರ್ಥ್ಯಕ್ಕೂ ಅಧಿಕ ಜನರು ಇದ್ದರು ಎಂದು ಸೌತ್ ಕಿವು ಪ್ರಾಂತ್ಯದ ಗವರ್ನರ್ ಜೀನ್-ಜಾಕ್ವೆಸ್ ಪುರುಸಿ ತಿಳಿಸಿದ್ದಾರೆ. 10 ಜನರು ಪಾರಾಗಿದ್ದು, ಅವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಕನಿಷ್ಠ 50 ಮೃತದೇಹಗಳನ್ನು ಹೊರತೆಗೆಯಲಾಗಿದ್ದು, ರಕ್ಷಣಾ ಕಾರ್ಯ ಮುಂದುವರಿದಿದೆ. ಸಾವಿನ ಸಂಖ್ಯೆ ಹೆಚ್ಚಾಗಬಹುದು ಎಂದೂ ಹೇಳಿದ್ದಾರೆ.

ಕಿಟುಕು ಬಂದರಿನ ಹಡಗುಕಟ್ಟೆಯಿಂದ ಕೆಲವೇ ಮೀಟರ್‌ಗಳ ಅಂತರದಲ್ಲಿದ್ದಾಗ ದೋಣಿ ಮಗುಚಿ ಅವಘಡ ಸಂಭವಿಸಿದೆ ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ. ದೋಣಿಯು ನಾರ್ತ್ ಕಿವು ಪ್ರಾಂತ್ಯದ ಗೋಮಾ ನಗರದಿಂದ ಸೌತ್ ಕಿವು ಪ್ರಾಂತ್ಯದ ಮಿನೊನಾ ನಗರಕ್ಕೆ ತೆರಳುತ್ತಿತ್ತು.

ನಕಲಿ ದಾಖಲೆ ಸೃಷ್ಟಿಸಿ ಕೋಟ್ಯಂತರ ರೂಪಾಯಿ ವಂಚನೆ ಆರೋಪ

ಸಹಾಯಕ ಪ್ರಾಧ್ಯಾಪಕನ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಜ್ಯೋತಿ ನಿವಾಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಚಿರಾಗ್ ಎಸ್. ಅವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೋಟ್ಯಂತರ ರೂಪಾಯಿ ವಂಚನೆ ಮಾಡಿದ್ದಾರೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಗುರುವಾರ ಪ್ರತಿಭಟನೆ ನಡೆಸಿದರು.

ಸಹಾಯಕ ಪ್ರಾಧ್ಯಾಪಕ ಚಿರಾಗ್ ಅವರು ಎವಿಎಸ್ ಎಂಟರ್‌ಪ್ರೈಸಸ್ ಸಂಸ್ಥೆಯ ಹೆಸರಲ್ಲಿ ಕಾನೂನು ಬಾಹಿರವಾಗಿ ಬಿಬಿಎಂಪಿಯಿಂದ ಗುತ್ತಿಗೆ ಪಡೆದುಕೊಂಡಿದ್ದರು. ಯಾವುದೇ ಕೆಲಸ ನಿರ್ವಹಿಸದೇ ಬಿಬಿಎಂಪಿಗೆ ನಕಲಿ ದಾಖಲೆಗಳನ್ನು ನೀಡಿ ಹಣ ಪಡೆದಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಬೊಮ್ಮನಹಳ್ಳಿ ವಲಯದಲ್ಲಿ 2020–21ರಲ್ಲಿ ₹ 24.64 ಲಕ್ಷ, ಆರ್.ಆರ್ ನಗರ ವಲಯದಲ್ಲಿ ಕೋವಿಡ್ ಚಿಕಿತ್ಸೆಗೆ ವೈದ್ಯರನ್ನು ನಿಯೋಜಿಸಿರುವುದಾಗಿ ತಿಳಿಸಿ ₹ 33.12 ಕೋಟಿಯ ಬಿಲ್‌ಗಳನ್ನು ನೀಡಿ ಹಣ ಪಡೆದು ವಂಚಿಸಿದ್ದಾರೆ. ಯಲಹಂಕ ವಲಯದಲ್ಲಿ 2021ರಲ್ಲಿ ನಿಯಂತ್ರಣ ಕೊಠಡಿ ನಿರ್ವಹಣೆ ಮಾಡಿರುವುದಾಗಿ ನಕಲಿ ದಾಖಲೆ ನೀಡಿ ₹ 11.09 ಲಕ್ಷ ಪಡೆದಿದ್ದಾರೆ. ಪೂರ್ವ ವಲಯದಲ್ಲಿ ಕೋವಿಡ್ ನಿಯಂತ್ರಣ, ನಿರ್ವಹಣೆ ಸಂದರ್ಭದಲ್ಲಿ ಪರೀಕ್ಷಾ ಮಾದರಿಗಳ ಸಂಗ್ರಹಕಾರರು, ಕಂಪ್ಯೂಟರ್ ನಿರ್ವಾಹಕರ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಕೆಲಸ ನಿರ್ವಹಿಸಿರುವುದಾಗಿ ಬಿಂಬಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಅವರ ಕುಟುಂಬ ಸದಸ್ಯರ ಖಾತೆಗೆ ಸುಮಾರು ₹ 35.04 ಲಕ್ಷ ವರ್ಗಾವಣೆ ಮಾಡಿಸಿಕೊಂಡು ವಂಚಿಸಿದ್ದಾರೆ ಎಂದು ಪ್ರತಿಭಟನಕಾರರು ದೂರಿದರು.

ಪೌರಕಾರ್ಮಿಕರ ಅವಲಂಬಿತರು ಮತ್ತು ನಿರುದ್ಯೋಗಿಗಳಿಗೆ ಮೀಸಲಾಗಿದ್ದ ಈ ಗುತ್ತಿಗೆಗಳನ್ನು ಪಡೆದು ವಂಚಿಸಿರುವ ಚಿರಾಗ್ ಅವರನ್ನು ಕೂಡಲೇ ಬಂಧಿಸಬೇಕು ಎಂದು ಆಗ್ರಹಿಸಿದರು.

ಪೌರ ಕಾರ್ಮಿಕರ ಅವಲಂಬಿತರ ಒಕ್ಕೂಟದ ಅಧ್ಯಕ್ಷ ಮೋಹನ್ ಕೆ., ರಾಜ್ಯ ಘಟಕದ ಅಧ್ಯಕ್ಷ ಎಂ.ಸಿ. ಶ್ರೀನಿವಾಸ್, ಪ್ರಧಾನ ಕಾರ್ಯದರ್ಶಿ ಸಿ.ದಾಸ್, ಮಾದಿಗ ದಂಡೋರ ಮಾದಿಗ ಮೀಸಲಾತಿ ಹೋರಾಟ ಜನಜಾಗೃತಿ ಸಮಿತಿಯ ಅಧ್ಯಕ್ಷ ಸೂರ್ಯಚಂದ್ರ ಮಂಜಣ್ಣ, ಜೈಭೀಮ್ ನೀಲಿ ಸೇನೆಯ ಜಿಲ್ಲಾ ಘಟಕದ ಅಧ್ಯಕ್ಷ ತ್ಯಾಗರಾಜು, ಸುವರ್ಣ ಕರ್ನಾಟಕ ರಾಜ್ಯದಲಿತ ಕ್ರಿಯಾ ಸಮಿತಿ ಅಧ್ಯಕ್ಷ ಜಿ. ವೇಲು, ದಲಿತ ಸಫಾಯಿ ಕರ್ಮಚಾರಿ ಸಂಘದ ಅಧ್ಯಕ್ಷ ಚಂದ್ರು, ದಲಿತ ಪರ ಹೋರಾಟಗಾರ ವಿಜಯ್ ಕುಮಾರ್, ದಲಿತ ಸಂರಕ್ಷಣೆ ವೇದಿಕೆ ಅಧ್ಯಕ್ಷ ರಾಬರ್ಟ್, ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ ಅಧ್ಯಕ್ಷ ಎ.ಅಮೃತ್ ರಾಜ್, ಭೀಮಪುತ್ರಿ ಬ್ರಿಗೇಡ್ ಸಂಸ್ಥಾಪಕಿ ರೇವತಿ, ಮಾದಿಗ ನಿರುದ್ಯೋಗಿಗಳ ಹೋರಾಟ ಸಮಿತಿ ಅಧ್ಯಕ್ಷ ಹರೀಶ್, ದ್ರಾವಿಡ ಸ್ವಾಭಿಮಾನ ಸೇನೆ ಅಧ್ಯಕ್ಷ ಜೈಭೀಮ್ ಪರ್ತಿಬಾನ್, ಭ್ರಷ್ಟಾಚಾರ ನಿರ್ಮೂಲನೆ ವೇದಿಕೆ ಅಧ್ಯಕ್ಷ ಜೋಸೆಫ್, ಕಾರ್ಮಿಕ ಹಕ್ಕುಗಳ ಸಂರಕ್ಷಣಾ ಸಮಿತಿ ಅಧ್ಯಕ್ಷ ಎನ್. ಓಬಳೇಶ್, ಅನಿಕೇತನ ಕನ್ನಡ ಬಳಗ ಅಧ್ಯಕ್ಷ ಹೇಮರಾಜು ಭಾಗವಹಿಸಿದ್ದರು.



ಕೋರಮಂಗಲದ ಜ್ಯೋತಿ ನಿವಾಸ್ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಚಿರಾಗ್ ಎಸ್. ಅವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಪೌರಕಾರ್ಮಿಕರ ಅವಲಂಬಿತರಿಗೆ ಸಿಗಬೇಕಿದ್ದ ಸೌಲಭ್ಯಗಳನ್ನು ವಂಚಿಸಿದ್ದಾರೆ ಎಂದು ಆರೋಪಿಸಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಗುರುವಾರ ಪ್ರತಿಭಟನೆ ನಡೆಸಿದರು

RmKV: ವಿಶಿಷ್ಟ ರೇಷ್ಮೆ ಸೀರೆ ಬಿಡುಗಡೆ

ವಿಶ್ವದಲ್ಲಿ 4000ಕ್ಕೂ ಅಧಿಕ ರೇಷ್ಮೆ ಸೀರೆ ತಯಾರಿಸಿದ ದಾಖಲೆ

ದೆಹಲಿ: ಗುಂಡಿಕ್ಕಿ ವೈದ್ಯನ ಹತ್ಯೆ

ನವದೆಹಲಿ(ಪಿಟಿಐ): ಆಗ್ನೇಯ ದೆಹಲಿಯ ಕಾಲಿಂದಿ ಕುಂಜ್ ಪ್ರದೇಶದಲ್ಲಿರುವ ನರ್ಸಿಂಗ್ ಹೋಮ್‌ವೊಂದರಲ್ಲಿ ಗುರುವಾರ ವೈದ್ಯರೊಬ್ಬರನ್ನು ಗುಂಡಿಕ್ಕಿ ಹತ್ಯೆ ಮಾಡಲಾಗಿದೆ. ಕೊಲೆ ಆರೋಪದಡಿ, ಪೊಲೀಸರು 16 ವರ್ಷದ ಬಾಲಕನೊಬ್ಬನನ್ನು ವಶಕ್ಕೆ ಪಡೆದಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ರಾತ್ರಿ 1ರ ಸುಮಾರಿಗೆ, ಬಂಧಿತನಾಗಿರುವ ಬಾಲಕ ಪ್ರಾಥಮಿಕ ಚಿಕಿತ್ಸೆಗಾಗಿ ಈ ಪ್ರದೇಶದಲ್ಲಿರುವ ನಿಮಾ ಆಸ್ಪತ್ರೆಗೆ ಬಂದಿದ್ದಾನೆ. ಆತನೊಂದಿಗೆ ಮತ್ತೊಬ್ಬ ಬಾಲಕನೂ ಇದ್ದ. ಚಿಕಿತ್ಸೆ ಪಡೆದ ನಂತರ, ಯುನಾನಿ ವೈದ್ಯ ಜಾವೇದ್ ಅಖ್ತರ್ ಎಂಬುವವರನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದಾನೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

ವೈದ್ಯನ ಹತ್ಯೆ ಮಾಡಿದ್ದಲ್ಲದೇ, ಸಾಮಾಜಿಕ ಜಾಲತಾಣದಲ್ಲಿ 'ಕೊನೆಗೂ 2024ರಲ್ಲಿ ಕೊಲೆ ಮಾಡಿದೆ' ಎಂಬುದಾಗಿ ಬಾಲಕ ತನ್ನ ಚಿತ್ರದೊಂದಿಗೆ ಬರೆದುಕೊಂಡಿದ್ದಾನೆ.

'ಅದೇ ಪ್ರದೇಶದಲ್ಲಿ ವಾಸಿಸುತ್ತಿರುವ ಇಬ್ಬರು ಬಾಲಕರು ಈ ಕೊಲೆ ಮಾಡಿದ್ದಾರೆ. ಇದು, ವೈದ್ಯನನ್ನು ಗುರಿಯಾಗಿಸಿ ಮಾಡಿರುವ ಕೃತ್ಯವಾಗಿದೆ' ಎಂದು ಜಂಟಿ ಪೊಲೀಸ್ ಕಮಿಷನರ್ (ದಕ್ಷಿಣ ವಲಯ) ಎಸ್.ಕೆ.ಜೈನ್ ಹೇಳಿದ್ದಾರೆ.

'ಬಾಲಕ ಗುಂಡು ಹೊಡೆದು ವೈದ್ಯನ ಹತ್ಯೆ ಮಾಡಿರುವ ದೃಶ್ಯಗಳು ಸಿ.ಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ. ಪ್ರಕರಣಕ್ಕೆ ಸಂಬಂಧಿಸಿ ಆಸ್ಪತ್ರೆಯ ನರ್ಸ್ ಹಾಗೂ ಆಕೆ ಪತಿಯನ್ನು ವಿಚಾರಣೆಗೆ ಒಳಪಡಿಸಲಾಗಿದೆ. ಮತ್ತೊಬ್ಬ ಆರೋಪಿ ಬಂಧನಕ್ಕೆ ಶೋಧ ನಡೆದಿದೆ' ಎಂದು ತಿಳಿಸಿದ್ದಾರೆ.



ಪದವಿ ಪ್ರದಾನ ನಗರದ ಇಂಡಿಯಾ ಕ್ಯಾಂಪಸ್ ಕ್ರುಸೇಡ್ ಫಾರ್ ಕ್ರೈಸ್ಟ್‌ನಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಬೆಂಗಳೂರು ಸ್ಪೀಚ್ ಆ್ಯಂಡ್ ಹಿಯರಿಂಗ್ ಟ್ರಸ್ಟ್‌ನ ಭಾಗವಾಗಿರುವ ಡಾ.ಎಸ್‌ಆರ್ ಚಂದ್ರಶೇಖರ್ ಇನ್‌ಸ್ಟಿಟ್ಯೂಟ್ ಆಫ್ ಸ್ಪೀಚ್ ಆ್ಯಂಡ್ ಹಿಯರಿಂಗ್‌ನ 47ನೇ ಸಂಸ್ಥಾಪಕರ ದಿನಾಚರಣೆ, ಡಾ.ಎಸ್‌ಆರ್ ಸಿ. ಸ್ಮಾರಕ ಪ್ರಶಸ್ತಿ ಪ್ರದಾನ ಹಾಗೂ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಅಮೆರಿಕದ ವಾಸವಿ ಪೀಠದ ಸ್ವಾಮಿ ಸಚ್ಚಿದಾನಂದ ಸರಸ್ವತಿ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕ ರಾಮಕೃಷ್ಣ ರೆಡ್ಡಿ, ಟ್ರಸ್ಟ್‌ನ ಅಧ್ಯಕ್ಷ ವಿ.ವಿ. ಕೃಷ್ಣರೆಡ್ಡಿ ಉಪಸ್ಥಿತರಿದ್ದರು

ಮುನಿರತ್ನ ಪ್ರಕರಣ : ಸಂತ್ರಸ್ತೆ ಕರೆದೊಯ್ದು ಸ್ಥಳ ಮಹಜರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿನಗರ ಕ್ಷೇತ್ರದ ಶಾಸಕ ಮುನಿರತ್ನ ಅವರ ವಿರುದ್ಧ ದಾಖಲಾಗಿದ್ದ ಅತ್ಯಾಚಾರ ಪ್ರಕರಣದ ಸಂಬಂಧ ಹಲವು ಮಾಹಿತಿ ಕಲೆ ಹಾಕಿರುವ ಸಿಐಡಿಯ ವಿಶೇಷ ತನಿಖಾ ದಳವು (ಎಸ್‌ಐಟಿ), ಗುರುವಾರ ವಿವಿಧ ಸ್ಥಳದಲ್ಲಿ ಮಹಜರು ನಡೆಸಿತು.

ಮುನಿರತ್ನ ಅತ್ಯಾಚಾರ ನಡೆಸಿದ್ದರು ಎನ್ನಲಾದ ಜೆ.ಪಿ. ಪಾರ್ಕ್ ಬಳಿಯ ಗೋದಾಮಿಗೆ ಎಸ್‌ಐಟಿ ಅಧಿಕಾರಿಗಳು, ಸಂತ್ರಸ್ತೆಯನ್ನು ಕರೆದೊಯ್ದು ಮಹಜರು ನಡೆಸಿದರು. ಜತೆಗೆ, ಹನಿಟ್ರ್ಯಾಪ್ ಪ್ರಕರಣಕ್ಕೆ ಸಂಬಂಧಿಸಿದಂತೆ ಬಾಡಿಗೆ ಮನೆಯೊಂದರಲ್ಲಿ ಮಹಜರು ನಡೆಸಿ, ಸಾಕ್ಷ್ಯಾಧಾರ ಕಲೆ ಹಾಕಿದರು.

'ಮಹಜರು ನಡೆಸಿ, ಸಂತ್ರಸ್ತೆಯ ಹೇಳಿಕೆಯನ್ನೂ ದಾಖಲು ಮಾಡಿಕೊಳ್ಳಲಾಗಿದೆ. ಸಂತ್ರಸ್ತೆಯ ಮೊಬೈಲ್ ಅನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್)ರವಾನೆ ಮಾಡಲಾಗಿದೆ. ಮುನಿರತ್ನ ಅವರ ಆಪ್ತ ಸಹಾಯಕನ ವಿಚಾರಣೆ ನಡೆಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಕಾರಿನಲ್ಲಿ ವ್ಯಕ್ತಿ ಶವ ಪತ್ತೆ

ಬಿಡದಿ: ಬೆಂಗಳೂರು-ಮೈಸೂರು ಹೆದ್ದಾರಿಯಲ್ಲಿ ಗುರುವಾರ ಮುಂಜಾನೆ ಕಾರಿನಲ್ಲಿ ವ್ಯಕ್ತಿಯ ಶವ ಪತ್ತೆಯಾಗಿದೆ.

ರೈಲ್ವೆ ನಿಲ್ದಾಣ ಬಳಿಯ ಸುಭಾಷ್ ನರ್ಸಿಂಗ್ ಕಾಲೇಜ್ ಸಮೀಪ ಹೆದ್ದಾರಿಯ ಪಕ್ಕದಲ್ಲಿ ಅನುಮಾನಾಸ್ಪದವಾಗಿ ಕಾರು ನಿಲ್ಲಿಸಲಾಗಿತ್ತು. ಈ ಬಗ್ಗೆ ದಾರಿಹೋಕರು ಬಿಡದಿ ಠಾಣೆಗೆ ಕರೆ ಮಾಡಿ ಮಾಹಿತಿ ನೀಡಿದರು.

ಸ್ಥಳಕ್ಕೆ ಬಂದ ಪೊಲೀಸರು ಪರಿಶೀಲಿಸಿದಾಗ ಕಾರಿನ ಹಿಂಬದಿ ಸೀಟಿನಲ್ಲಿ ಶವ ಪತ್ತೆಯಾಗಿದೆ. ಕಾರಿನ ಗಾಜನ್ನು ಒಡೆದು ಕಾರಿನಲ್ಲಿದ್ದ ದಾಖಲೆಗಳನ್ನು ಪರಿಶೀಲಿಸಿದಾಗ ಮೃತ ವ್ಯಕ್ತಿಯನ್ನು ಬೆಂಗಳೂರಿನ ಡಿ.ಜೆ ಹಳ್ಳಿ ನಿವಾಸಿ ಮುಜಾಹಿದ್ (29) ಎಂದು ಗುರುತಿಸಲಾಗಿದೆ.



ಮುಜಾಹಿದ್

ಕಾರು ಚಾಲಕನಾಗಿದ್ದ ಮುಜಾಹಿದ್ ವಿಷ ಸೇವಿಸಿ ಮೃತಪಟ್ಟಿರಬಹುದು ಎಂದು ಶಂಕಿಸಲಾಗಿದೆ. ಮೃತನ ಸಂಬಂಧಿಕರಿಗೆ ವಿಷಯ ತಿಳಿಸಲಾಗಿದೆ. ಬಿಡದಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮನಗರ ಜಿಲ್ಲಾ ಎಸ್‌ಪಿ ಕಾರ್ತಿಕ್ ರೆಡ್ಡಿ, ಹೆಚ್ಚುವರಿ ಎಸ್‌ಪಿ ಸುರೇಶ್, ಡಿವೈಎಸ್‌ಪಿ ದಿನಕರ್, ಬಿಡದಿ ಠಾಣೆ ವೃತ್ತ ನಿರೀಕ್ಷಕ ಶಂಕರ್ ನಾಯಕ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಬೆರಳಚ್ಚು ತಜ್ಞರು, ಶ್ವಾನದಳ ಹಾಗೂ ಎಫ್‌ಎಸ್‌ಎಲ್ ತಂಡ ಭೇಟಿ ನೀಡಿತ್ತು.

ಸಿಸಿಟಿವಿ ಧ್ವಂಸ, ವ್ಯಕ್ತಿ ಮೇಲೆ ಹಲ್ಲೆ: ಮೂವರ ಸೆರೆ

ಬೆಂಗಳೂರು: ಗೋದಾಮಿನ ಎದುರು ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಧ್ವಂಸಗೊಳಿಸಿ, ವ್ಯಕ್ತಿಯ ಹಲ್ಲೆ ನಡೆಸಿ ಕೊಲೆ ಬೆದರಿಕೆ ಹಾಕಿದ್ದ ಆರೋಪದ ಅಡಿ ಮೂವರು ಆರೋಪಿಗಳನ್ನು ಡಿ.ಜೆ. ಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸೈಯದ್ ಸಾತ್, ಉಸ್ಮಾನ್ ಖಾನ್ ಹಾಗೂ ಸಲ್ಮಾನ್ ಬಂಧಿತರು. ಚಿನ್ಮಯಿ ಲೇಔಟ್‌ನ ಅರುಣ್‌ಕುಮಾರ್ ಅವರು ನೀಡಿದ ದೂರು ಆಧರಿಸಿ ಕಾರ್ಯಾಚರಣೆ ನಡೆಸಿ ಮೂವರು ಆರೋಪಿಗಳನ್ನು ಬಂಧಿಸಲಾಯಿತು. ಹಲ್ಲೆ ಪ್ರಕರಣದಲ್ಲಿ ಇನ್ನೂ ಕೆಲವರು ಭಾಗಿಯಾಗಿದ್ದು, ಅವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಅಪರಾಧ ಸುದ್ದಿ

'ಸೆ.30ರಂದು ಶಾಂಪೂರದ ಮುನಿವೀರಪ್ಪ ಲೇಔಟ್‌ನ ಪಟೇಲಪ್ಪ ಆವರಣದಲ್ಲಿದ್ದ ಗೋದಾಮಿಗೆ ಐವರು ಆರೋಪಿಗಳು ನುಗ್ಗಿ ನಿಲುಗಡೆ ಮಾಡಿದ್ದ ಬೈಕ್ ಅನ್ನು ಕಳವು ಮಾಡಲು ಯತ್ನಿಸಿದ್ದರು. ಕೃತ್ಯ ಎಸಗುತ್ತಿದ್ದುದ್ದನ್ನು ಕಂಡ ಅರುಣ್‌ಕುಮಾರ್ ಅವರು ಆರೋಪಿಗಳನ್ನು ಪ್ರಶ್ನಿಸಿದ್ದರು. ಆಗ ಆರೋಪಿಗಳು ಬೈಕಿಗೆ ಬೆಂಕಿ ಹಾಕುವುದಾಗಿ ಬೆದರಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅಲ್ಲದೇ ಗೋದಾಮಿನ ಬಳಿ ಬಿಬಿಎಂಪಿಯವರು ಅಳವಡಿಸಿದ್ದ ಸಿಸಿಟಿವಿ ಕ್ಯಾಮೆರಾಗಳನ್ನು ಒಡೆದು ಹಾಕಿದ್ದರು. ಅರುಣ್‌ಕುಮಾರ್ ಮೇಲೆಯೂ ಹಲ್ಲೆ ನಡೆಸಿದ್ದರು' ಎಂದು ಪೊಲೀಸರು ತಿಳಿಸಿದರು.

ಟಾಟಾ ಎಲೆಕ್ಟ್ರಾನಿಕ್ಸ್‌ನಲ್ಲಿ ಉತ್ಪಾದನೆ ಆರಂಭ

ನವದೆಹಲಿ (ಪಿಟಿಐ): ಅಗ್ನಿ ಅವಘಡ ಸಂಭವಿಸಿದ್ದ ತಮಿಳುನಾಡಿನ ಹೊಸೂರು ಬಳಿಯ ಟಾಟಾ ಎಲೆಕ್ಟ್ರಾನಿಕ್ಸ್ ಘಟಕದಲ್ಲಿ ಗುರುವಾರ ಉತ್ಪಾದನಾ ಕಾರ್ಯಾಚರಣೆಯು ಭಾಗಶಃ ಆರಂಭಗೊಂಡಿದೆ.

'ಸೆಪ್ಟೆಂಬರ್ 28ರಂದು ಈ ಘಟಕದಲ್ಲಿ ಅಗ್ನಿ ಅವಘಡ ಸಂಭವಿಸಿತ್ತು. ಇದರಿಂದ ಉತ್ಪಾದನಾ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗಿತ್ತು. ಪೂರ್ಣ ಕಾರ್ಯಾಚರಣೆ ಆರಂಭಿಸಲು ಶ್ರಮಿಸುತ್ತಿದ್ದೇವೆ' ಎಂದು ಟಾಟಾ ಎಲೆಕ್ಟ್ರಾನಿಕ್ಸ್ ಕಂಪನಿ ತಿಳಿಸಿದೆ.

ಸಿಬ್ಬಂದಿಗೆ ಪೂರ್ಣ ವೇತನ ನೀಡಲಾಗುವುದು. ಅವರ ಸುರಕ್ಷತೆಗೆ ಒತ್ತು ನೀಡಲಾಗಿದೆ. ಅವಘಡಕ್ಕೆ ಕಾರಣ ಪತ್ತೆ ಹಚ್ಚಲಾಗುತ್ತಿದೆ.

ನೆಟ್‌ಬಾಲ್: ಕರ್ನಾಟಕ ಸೆಮಿಗೆ

ಬೆಂಗಳೂರು: ಸಾಂಘಿಕ ಪ್ರದರ್ಶನ ನೀಡಿದ ಕರ್ನಾಟಕ ತಂಡವು ಇಲ್ಲಿ ನಡೆಯುತ್ತಿರುವ ಸೀನಿಯರ್ ಮಿಶ್ರ ನೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಕ್ವಾರ್ಟರ್‌ಫೈನಲ್‌ನಲ್ಲಿ 39-19ರಿಂದ ದೆಹಲಿ ತಂಡವನ್ನು ಸುಲಭವಾಗಿ ಮಣಿಸಿ ನಾಲ್ಕರ ಘಟ್ಟಕ್ಕೆ ಲಗ್ಗೆ ಹಾಕಿತು.

ಕೋರಮಂಗಲದ ಒಳಾಂಗಣ ಕ್ರೀಡಾಂಗಣದಲ್ಲಿ ಕೂಟದ ಮೂರನೇ ದಿನವಾದ ಗುರುವಾರ 16ರ ಘಟ್ಟದ ಪಂದ್ಯದಲ್ಲಿ ಕರ್ನಾಟಕ ತಂಡವು 19-5ರಿಂದ ರಾಜಸ್ಥಾನ ತಂಡವನ್ನು ಸೋಲಿಸಿತ್ತು. ಇತರ ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರಖಂಡ 26-17ರಿಂದ ಅಸ್ಸಾಂ ತಂಡವನ್ನು; ಛತ್ತೀಸ್‌ಗಢ 36-22ರಿಂದ ತೆಲಂಗಾಣ ತಂಡವನ್ನು; ಹರಿಯಾಣ 20-17ರಿಂದ ಪುದುಚೇರಿ ತಂಡವನ್ನು ಮಣಿಸಿ ಸೆಮಿಫೈನಲ್ ಪ್ರವೇಶಿಸಿದವು.

ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ ಉತ್ತರಖಂಡ 11-09ರಿಂದ ಆಂಧ್ರಪ್ರದೇಶ ತಂಡವನ್ನು; ಛತ್ತೀಸ್‌ಗಢ 17-9ರಿಂದ ತಮಿಳುನಾಡು ತಂಡವನ್ನು; ಪುದುಚೇರಿ 17-15ರಿಂದ ಮಧ್ಯಪ್ರದೇಶ ತಂಡವನ್ನು; ಹರಿಯಾಣ 13-8ರಿಂದ ಬಿಹಾರ ತಂಡವನ್ನು; ದೆಹಲಿ 15-9ರಿಂದ ಗೋವಾ ತಂಡವನ್ನು; ತೆಲಂಗಾಣ 21-12ರಿಂದ ಉ.ಪ್ರದೇಶ ತಂಡವನ್ನು; ಅಸ್ಸಾಂ 17-11ರಿಂದ ಜಮ್ಮು ಕಾಶ್ಮೀರ ತಂಡವನ್ನು ಮಣಿಸಿದ್ದವು.



ಕ್ವಾರ್ಟರ್ ಫೈನಲ್‌ನಲ್ಲಿ ಕರ್ನಾಟಕ ಮತ್ತು ದೆಹಲಿ ತಂಡದ ಆಟಗಾರರ ಮಧ್ಯೆ ಚೆಂಡಿಗಾಗಿ ಪೈಪೋಟಿ

ಸೆಮಿಫೈನಲ್ ಇಂದು

ಕರ್ನಾಟಕ–ಉತ್ತರಖಂಡ (ಬೆಳಿಗ್ಗೆ 9)
ಛತ್ತೀಸಗಢ–ಹರಿಯಾಣ (ಬೆಳಿಗ್ಗೆ 10)

ಮೈಸೂರು ರೇಸ್

ದಿ ಲೀಡರ್ ಗೆಲ್ಲುವ ನಿರೀಕ್ಷೆ

ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್ ಮೈಸೂರು 2000 ಗಿನ್ನೀಸ್ ಶುಕ್ರವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ದಿ ಲೀಡರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2 ಗಂಟೆಗೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ;

1ನೇ ರೇಸ್: ಎಪ್ಸಮ್ ಡೌನ್ 4, ಅಮೇಜಿಂಗ್ ಲಕ್ 12, ಕೋಡ್ ಆಫ್ ಹಾನರ್ 1
2ನೇ ರೇಸ್: ಫಿನಿಕ್ಸ್ ಸಪ್ರೈರ್ಸ್ 4, ಒನ್ಲಿ ಎ ಸ್ಟಾರ್ 5, ಪೆಟ್ಟೀಸ್ ಚಾಯ್ಸರ್ 1
3ನೇ ರೇಸ್: ಆಬ್ಸೊಲ್ಯೂಟ್ ಕೆಟ್ರಿನ 3, ಎನ್.ಆರ್.ಐ ವಿಕ್ಟರಿ 4, ಶೆರ್ಪಾ 2
4ನೇ ರೇಸ್: ಆರ್ಟ್ ಗ್ಯಾಲರಿ 6, ಇಲ್ ವೊಲೊ 12, ಸೇಂಟ್ ಎಮಿಲಿಯನ್ 8
5ನೇ ರೇಸ್: ದಿ ಲೀಡರ್ 6, ಜಾನ್ ವಿಕ್ 4, ಆಭೂಷಣ್ 1
6ನೇ ರೇಸ್: ಆರೆಲ್ 1, ಫಾರೆಸ್ಟ್ ವ್ಯೂ 3, ಸ್ಕೈ ಸ್ಟಾರ್ಮ್ 8
7ನೇ ರೇಸ್: ಡಾಲ್‌ಹೌಸಿ 6, ಗೋಲ್ಡ್ ಕ್ರೆಸ್ಟ್ 2, ರೆಡ್ ಹಿಲ್ಸ್ 7

ಉತ್ತಮ ಬೆಟ್: ಆರೆಲ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7



ಪ್ರಜಾವಾಣಿ ನವವರ್ಣ

ಹಸಿರು ಬಣ್ಣದ ದಿರಿಸನ್ನು ಧರಿಸಿ ತೆಗೆಸಿಕೊಂಡ ಭಾವಚಿತ್ರಗಳನ್ನು ಶುಕ್ರವಾರ ಮಧ್ಯಾಹ್ನ 2 ಗಂಟೆಯೊಳಗೆ ಕಳುಹಿಸಿ. ಹೆಸರು, ವಿಳಾಸವೂ ಇರಲಿ...

7338018541


ಬೆನಕ ಕಲಾ ಸಂಘ


ಸಖಿ ಗೆಳತಿಯರ ಗುಂಪು


ಸವಿತಾ ಮತ್ತು ಸ್ನೇಹಿತರು


ಶೇಷಾದ್ರಿಪುರಂ ಲಾ ಕಾಲೇಜು


ಲೇಖನಾ


ಗೆಳತಿಯರು ಬಳಗ


ಮಂಜುಳಾ & ಗ್ರೂಪ್


ಹಂಸಕುಮಾರಿ ಮತ್ತು ಸ್ನೇಹಿತರು


HSR ಗೆಳತಿಯರ ಗುಂಪು


ಜನಪದ ಸಂಶೋಧನ ಕೇಂದ್ರ


ಸರ್ಕಾರಿ ಪ್ರೌಢಶಾಲೆ


ನಳಿನಾ ಮತ್ತು ಸ್ನೇಹಿತರು


ಸೌಮ್ಯ ವಾಲಿ


ಆಟ್ರಿಯಾ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ



ಶೋಭಾ ಮತ್ತು ಗೆಳತಿಯರು


ಶೋಬಾ & ಫ್ರೆಂಡ್ಸ್


SMV ಲೇಔಟ್


ದೀಪಿಕಾ ವಿನಯ್

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	25,796
ಇಂದಿನ ಅಂತ್ಯ	25,250
▼	546
ದಿನದ ಕನಿಷ್ಠ	25,230

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹210
ಗುಡ್ ಲಾಟ್	₹200

(ಪ್ರತಿ ಕೆ.ಜಿಗೆ)

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹550
12 ಕ್ಕೆ	₹75
ಮೈಸೂರು	
100ಕ್ಕೆ	₹555

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹288-526
ದ್ವಿತಳಿ (ಬಿ.ವಿ)	₹335-705

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1520 (1530)
ಸೋಯಾ (ರಿಫೈನ್ಡ್)	₹1280 (1275)
ಸೂರ್ಯಕಾಂತಿ (ರಿಫೈನ್ಡ್)	₹1280 (1275)
ಪಾಮೋಲಿನ್	₹1275 (1270)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-28500
ಹೊಸತು	30500-31500
ಹಳತು	41000-48000
ಚಿತ್ರದುರ್ಗ	
ಅಪಿ	48619-49059
ಬೆಟ್ಟೆ	32629-33079
ಕೆಂಪುಗೋಟು	27409-27810
ರಾಶಿ	48139-48569
ಸಾಗರ	
ಬಿಳಿಗೋಟು	21589-24700
ಚಾಲಿ	29509-32900
ಕೋಕ	10199-24200
ರಾಶಿ	35299-48509
ಸಿಪ್ಪೆಗೋಟು	15509-16725
ಕುಮಟ	
ಹಳೆಚಾಲಿ	34199-38499
ಹೊಸಚಾಲಿ	28669-34499
ಚಿಪ್ಪು	18209-26969
ಕೋಕ	5500-24769
ಶಿವಮೊಗ್ಗ	
ರಾಶಿ	30009-49009
ಸರಕು	52069-74550
ಬೆಟ್ಟೆ	41599-54699
ಗೊರಬಲು	16250-34269
ಸಿದ್ದಾಪುರ	
ಬಿಳಿಗೋಟು	24899-28599
ಚಾಲಿ	31009-34099
ಕೋಕ	20099-25699
ಕೆಂಪುಗೋಟು	22489-22489
ರಾಶಿ	41099-45899
ತಟ್ಟಿಬೆಟ್ಟೆ	26609-32099
ಶಿರಸಿ	
ಬೆಟ್ಟೆ	31098-37829
ಬಿಳಿಗೋಟು	20299-30088
ಚಾಲಿ	32438-36108
ಕೆಂಪುಗೋಟು	18100-20169
ರಾಶಿ	40299-44249
ಯಲ್ಲಾಪುರ	
ಬಿಳಿಗೋಟು	14899-28210
ಚಾಲಿ	28899-34770
ಕೋಕ	6899-16109
ಕೆಂಪುಗೋಟು	18099-20899
ರಾಶಿ	39169-54699
ತಟ್ಟಿಬೆಟ್ಟೆ	25020-38869

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ದಾವಣಗೆರೆ	₹9450-9450
ಹಿರಿಯೂರು	₹7908-7908
ತಿಪಟೂರು	₹16500-18000
ತುರುವೇಕೆರೆ	₹16000-16500

1 ಕೋಟಿ ಅಭ್ಯರ್ಥಿಗಳಿಗೆ ವೃತ್ತಿ ತರಬೇತಿ: ಡಿ.2ರಿಂದ ಪ್ರಾಯೋಗಿಕ ಜಾರಿ

ಯುವಜನರಿಗೆ ಇಂಟರ್ನ್‌ಶಿಪ್

ನವದೆಹಲಿ (ಪಿಟಿಐ): ವಿವಿಧ ವೃತ್ತಿಗಳಿಗೆ ಸಂಬಂಧಿಸಿದಂತೆ ಯುವಜನರಿಗೆ ತರಬೇತಿಯ ಅವಕಾಶ ಒದಗಿಸುವ ಬಗ್ಗೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಿದ್ದ 'ಪಿಎಂ ಇಂಟರ್ನ್‌ಶಿಪ್ ಯೋಜನೆ'ಗೆ ಡಿಸೆಂಬರ್ 2ರಿಂದ ಚಾಲನೆ ನೀಡಲು ಕೇಂದ್ರ ಸರ್ಕಾರ ಸಿದ್ಧತೆ ನಡೆಸಿದೆ.



ಮುಂದಿನ ಐದು ವರ್ಷದ ಅವಧಿಯಲ್ಲಿ ದೇಶದ ಒಂದು ಕೋಟಿ ಯುವಜನರಿಗೆ ಪ್ರಮುಖ 500 ಕಂಪನಿಗಳಲ್ಲಿ ಉದ್ಯೋಗದ ಬಗ್ಗೆ ತರಬೇತಿ ನೀಡಲು ಯೋಜನೆಯಡಿ ಗುರಿ ಹೊಂದಲಾಗಿದೆ. ಆಯ್ಕೆಯಾದ ಅಭ್ಯರ್ಥಿಗಳಿಗೆ ವಾರ್ಷಿಕ ₹66 ಸಾವಿರ ಭತ್ಯೆ ಸಿಗಲಿದೆ. '2024-25ನೇ ಆರ್ಥಿಕ ವರ್ಷದಲ್ಲಿ ಸರ್ಕಾರವು ಪ್ರಾಯೋಗಿಕವಾಗಿ ಈ ಯೋಜನೆಯನ್ನು ಅನುಷ್ಠಾನ ಗೊಳಿಸಲಿದೆ. 1.25 ಲಕ್ಷ ಯುವಜನರಿಗೆ ತರಬೇತಿ ನೀಡಲಾಗುವುದು. ಇದಕ್ಕಾಗಿ ₹800 ಕೋಟಿ ಮೀಸಲಿಡಲಾಗಿದೆ' ಎಂದು ಗುರುವಾರ ಸರ್ಕಾರದ ಮೂಲಗಳು ತಿಳಿಸಿವೆ.

ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದಿಂದ ಅಭಿವೃದ್ಧಿಪಡಿಸಿರುವ ಪೋರ್ಟಲ್ ಮೂಲಕ ಯೋಜನೆಯು ಅನುಷ್ಠಾನಗೊಳ್ಳಲಿದೆ. ಪೋರ್ಟಲ್ ಮೂಲಕ ಅಭ್ಯರ್ಥಿಗಳು ಅಕ್ಟೋಬರ್ ಎರಡನೇ ವಾರದಿಂದ ಹೆಸರು ನೋಂದಣಿ ಮಾಡಿಕೊಳ್ಳಬಹುದಾಗಿದೆ ಎಂದು ಹೇಳಿವೆ.

ಸರ್ಕಾರದ ಜೊತೆಗಿನ ಪಾಲುದಾರ ಕಂಪನಿಗಳು ತರಬೇತಿ ನೀಡುತ್ತವೆ. ಕಳೆದ ಮೂರು ವರ್ಷದ ಅವಧಿಯಲ್ಲಿ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನಿಧಿ (ಸಿಎಸ್‌ಆರ್) ಹಂಚಿಕೆ ಮಾಡಿರುವ ಆಧಾರದ ಮೇಲೆ ಈ ಕಂಪನಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ವಿವರಿಸಿವೆ.

ಸ್ವಯಂಪ್ರೇರಿತವಾಗಿ ಯೋಜನೆಯಡಿ ಪಾಲ್ಗೊಳ್ಳುವ ಕಂಪನಿಗಳು 12 ತಿಂಗಳು ತರಬೇತಿ ನೀಡಬೇಕಿದೆ. ಸಚಿವಾಲಯದ ಒಪ್ಪಿಗೆ ಮೇರೆಗೆ ಇತರೆ ಕಂಪನಿ, ಬ್ಯಾಂಕ್ ಹಾಗೂ ಹಣಕಾಸು ಸಂಸ್ಥೆಗಳು ಕೂಡ ಯೋಜನೆಯಡಿ ಭಾಗವಹಿಸಲು ಅವಕಾಶವಿದೆ.



ವಿವಿಧ ವಲಯಗಳ ಆಧಾರದ ಮೇಲೆ ಕಂಪನಿಗಳನ್ನು ಗುರುತಿಸಿ ಆಯ್ಕೆ ಮಾಡಲಾಗುತ್ತದೆ. ಕಂಪನಿಗಳು ಇಂಟರ್ನ್‌ಶಿಪ್ ಬಗೆಗಿನ ಮಾಹಿತಿ, ಸ್ಥಳದ ವಿವರ, ತರಬೇತಿಯ ಸ್ವರೂಪ, ವಿದ್ಯಾರ್ಹತೆ ಸೇರಿ ಇತರೆ ಮಾಹಿತಿಯನ್ನು ಪೋರ್ಟಲ್‌ನಲ್ಲಿ ಪ್ರಕಟಿಸುವ ಸಾಧ್ಯತೆಯಿದೆ. ಅಭ್ಯರ್ಥಿಗಳು ತಮಗೆ ಆಸಕ್ತಿ ಇರುವ ವಲಯವನ್ನು ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಯಾರು ಅರ್ಹ

21 ವರ್ಷದಿಂದ 24 ವರ್ಷದ ಒಳಗಿನ ಯುವಜನರು ಅರ್ಹರಾಗಿದ್ದಾರೆ. ಆನ್‌ಲೈನ್ ಅಥವಾ ದೂರಶಿಕ್ಷಣದ ಮೂಲಕ ಶಿಕ್ಷಣ ಪಡೆದವರು ಕೂಡ ಅರ್ಜಿ ಸಲ್ಲಿಸಲು ಅರ್ಹತೆ ಹೊಂದಿದ್ದಾರೆ.

ವಿದ್ಯಾರ್ಹತೆ ಏನು?

ಎಸ್‌ಎಸ್‌ಎಲ್‌ಸಿ, ಪಿಯುಸಿ ಉತ್ತೀರ್ಣದ ಜೊತೆಗೆ ಐಟಿಐ, ಡಿಪ್ಲೊಮಾ ಕೋರ್ಸ್ ಪ್ರಮಾಣ ಪತ್ರ ಪಡೆದವರು ಹಾಗೂ ಬಿಎ, ಬಿಎಸ್‌ಸಿ, ಬಿಕಾಂ, ಬಿಸಿಎ, ಬಿಬಿಎ ಮತ್ತು ಬಿ.ಫಾರ್ಮಾ ಪದವಿ ಪಡೆದವರು ಅರ್ಜಿ ಸಲ್ಲಿಸಬಹುದಾಗಿದೆ.

₹5 ಸಾವಿರ ಮಾಸಿಕ ಭತ್ಯೆ

ಆಯ್ಕೆಯಾದ ಅಭ್ಯರ್ಥಿಗೆ ಮಾಸಿಕ ₹5 ಸಾವಿರ ಭತ್ಯೆ ಸಿಗಲಿದೆ. ಸರ್ಕಾರವು ₹4,500 ಭರಿಸಿದರೆ, ಕಂಪನಿಯು ಸಿಎಸ್‌ಆರ್ ನಿಧಿಯಡಿ ₹500 ಇಂಟರ್ನ್‌ಶಿಪ್ ಭತ್ಯೆ ಪಾವತಿಸಲಿದೆ. ಇದರೊಟ್ಟಿಗೆ ಸರ್ಕಾರದಿಂದ ಒಂದು ಬಾರಿ ಪ್ರತಿ ಅಭ್ಯರ್ಥಿಗೆ ₹6,000 ಧನಸಹಾಯ ನೀಡಲಾಗುತ್ತದೆ. ಕಂಪನಿಗಳು ಸಿಎಸ್‌ಆರ್ ನಿಧಿಯಿಂದ ತರಬೇತಿ ವೆಚ್ಚವನ್ನು ಭರಿಸಲಿದೆ.

ವಿಮಾ ಸೌಲಭ್ಯ

ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಪಿಎಂ ಜೀವನ್ ಜ್ಯೋತಿ ಬಿಮಾ ಯೋಜನೆ ಮತ್ತು ಪಿಎಂ ಸುರಕ್ಷಾ ಬಿಮಾ ಯೋಜನೆಯಡಿ ವಿಮಾ ಸೌಲಭ್ಯ ಕಲ್ಪಿಸಲಾಗುತ್ತದೆ. ಸರ್ಕಾರವೇ ಈ ವಿಮಾ ಪ್ರೀಮಿಯಂ ಮೊತ್ತವನ್ನು ಪಾವತಿಸಲಿದೆ.

ಸುದ್ದಿ 2 ನಿಮಿಷ

ಪಿಎನ್‌ಬಿ ಸಾಲ ನೀಡಿಕೆ ಶೇ 13ರಷ್ಟು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಪಂಜಾಬ್ ನ್ಯಾಷನಲ್ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ₹10.64 ಲಕ್ಷ ಕೋಟಿ ಸಾಲ ನೀಡಿದೆ. ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕಕ್ಕೆ ಹೋಲಿಸಿದರೆ ಸಾಲ ನೀಡಿಕೆಯಲ್ಲಿ ಶೇ 13ರಷ್ಟು ಏರಿಕೆಯಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್‌ನ ಠೇವಣಿ ಸಂಗ್ರಹದಲ್ಲಿಯೂ ಏರಿಕೆಯಾಗಿದೆ. ಒಟ್ಟು ₹14.59 ಲಕ್ಷ ಕೋಟಿ ಠೇವಣಿ ಸಂಗ್ರಹಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ₹13.09 ಲಕ್ಷ ಕೋಟಿ ಠೇವಣಿ ಸಂಗ್ರಹಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಶೇ 11.41ರಷ್ಟು ಹೆಚ್ಚಳವಾಗಿದೆ ಎಂದು ಬ್ಯಾಂಕ್, ಗುರುವಾರ ಷೇರುಪೇಟೆಗೆ ಮಾಹಿತಿ ನೀಡಿದೆ.

ಕಳೆದ ವರ್ಷದ ಸೆಪ್ಟೆಂಬರ್ ಅಂತ್ಯಕ್ಕೆ ಬ್ಯಾಂಕ್ ₹22.51 ಲಕ್ಷ ಕೋಟಿ ವ್ಯವಹಾರ ನಡೆಸಿತ್ತು. ಈ ಬಾರಿ ₹25.23 ಲಕ್ಷ ಕೋಟಿ ವ್ಯವಹಾರ ನಡೆಸಿದೆ. ಒಟ್ಟಾರೆ ಶೇ 12ರಷ್ಟು ಏರಿಕೆಯಾಗಿದೆ ಎಂದು ವಿವರಿಸಿದೆ.

ಯೆಸ್ ಬ್ಯಾಂಕ್ ವರದಿ: ಖಾಸಗಿ ವಲಯದ ಯೆಸ್ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹2.36 ಲಕ್ಷ ಕೋಟಿ ಸಾಲ ನೀಡಿದೆ. ಒಟ್ಟಾರೆ ಸಾಲ ನೀಡಿಕೆಯಲ್ಲಿ ಶೇ 13ರಷ್ಟು ಏರಿಕೆಯಾಗಿದೆ. ಠೇವಣಿ ಸಂಗ್ರಹದಲ್ಲಿ ಶೇ 18ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹2.77 ಲಕ್ಷ ಕೋಟಿ ಸಂಗ್ರಹಿಸಲಾಗಿದೆ ಎಂದು ತಿಳಿಸಿದೆ.

ಗ್ರಾಹಕರಿಂದ ಠೇವಣಿ ಸಂಗ್ರಹಿಸುವ ಬ್ಯಾಂಕ್‌ಗಳ ನಗದು ರಕ್ಷಣೆ ಅನುಪಾತ (ಎಲ್‌ಸಿಆರ್) ಶೇ 100ರಷ್ಟು ಇರಬೇಕಿದೆ. ಬ್ಯಾಂಕ್‌ನ ಎಲ್‌ಸಿಆರ್ ಪ್ರಮಾಣ ಶೇ 131.9ರಷ್ಟಿದೆ ಎಂದು ತಿಳಿಸಿದೆ.

ಬೆಂಗಳೂರು: ಚಿನ್ನದ ದರ ₹80 ಸಾವಿರ ಸನಿಹಕ್ಕೆ

ನವದೆಹಲಿ (ಪಿಟಿಐ): ಹಬ್ಬದ ಋತುವಿನ ಅಂಗವಾಗಿ ದೇಶೀಯ ಆಭರಣ ತಯಾರಕರು ಮತ್ತು ಗ್ರಾಹಕರಿಂದ ಹೆಚ್ಚಿದ ಬೇಡಿಕೆಯಿಂದಾಗಿ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆಯು ಗುರುವಾರ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರ ₹200 ಏರಿಕೆಯಾಗಿ, ₹78,300ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹665 ಹೆಚ್ಚಳವಾಗಿ ₹93,165ಕ್ಕೆ ಮುಟ್ಟಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಬೆಂಗಳೂರಿನಲ್ಲಿ 10 ಗ್ರಾಂ ಚಿನ್ನದ ದರ ₹79,870 ಮತ್ತು ಬೆಳ್ಳಿ ಧಾರಣೆ ಕೆ.ಜಿಗೆ ₹97,100 ಇದೆ.

ಮಧ್ಯಪ್ರಾಚ್ಯ ಬಿಕ್ಕಟ್ಟಿನಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯತ್ತ ಚಿತ್ತ ನೆಟ್ಟಿರುವುದರಿಂದ ಹಳದಿ ಲೋಹದ ಬೆಲೆಯಲ್ಲಿ ಏರಿಕೆಯಾಗಿದೆ ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

14ರಂದು ಹುಂಡೈ ಐಪಿಒ ಆರಂಭ

ನವದೆಹಲಿ (ಪಿಟಿಐ): ಹುಂಡೈ ಮೋಟರ್ಸ್ ಇಂಡಿಯಾ ಕಂಪನಿಯ ಆರಂಭಿಕ ಸಾರ್ವಜನಿಕ ಕೊಡುಗೆಯು (ಐಪಿಒ) ಅಕ್ಟೋಬರ್ 14ರಂದು ಸಾರ್ವಜನಿಕರಿಗೆ ಮುಕ್ತವಾಗಿರಲಿದೆ ಎಂದು ಗುರುವಾರ ಮೂಲಗಳು ತಿಳಿಸಿವೆ.

ಕಂಪನಿಯು ಒಟ್ಟು ₹25 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಲು ನಿರ್ಧರಿಸಿದೆ. ಭಾರತೀಯ ಜೀವ ವಿಮಾ ನಿಗಮವು (ಎಲ್‌ಐಸಿ) ಐಪಿಒ ಮೂಲಕ ₹21 ಸಾವಿರ ಕೋಟಿ ಬಂಡವಾಳ ಸಂಗ್ರಹಿಸಿತ್ತು. ಎಲ್‌ಐಸಿ ಬಳಿಕ ಹುಂಡೈ ಕಂಪನಿಯು ಅತಿಹೆಚ್ಚು ಬಂಡವಾಳ ಸಂಗ್ರಹಿಸುತ್ತಿದೆ.

ಮಧ್ಯಪ್ರಾಚ್ಯ ಬಿಕ್ಕಟ್ಟು ಷೇರುಪೇಟೆ ಕುಸಿತ

ಮುಂಬೈ (ಪಿಟಿಐ): ಮಧ್ಯಪ್ರಾಚ್ಯದಲ್ಲಿ ತಲೆದೋರಿರುವ ಸಂಘರ್ಷವು ದೇಶದ ಷೇರುಪೇಟೆ ಮೇಲೂ ಪರಿಣಾಮ ಬೀರಿದ್ದು, ಗುರುವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಶೇ 2ರಷ್ಟು ಕುಸಿತ ಕಂಡಿವೆ. ಇದರಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹9.78 ಲಕ್ಷ ಕೋಟಿ ಕರಗಿದೆ.

ರಿಲಯನ್ಸ್ ಇಂಡಸ್ಟ್ರಿಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯ ಕುಸಿತ ಕೂಡ ಷೇರುಪೇಟೆಯಲ್ಲಿ ನಕಾರಾತ್ಮಕ ವಹಿವಾಟಿಗೆ ಕಾರಣವಾಯಿತು ಎಂದು ಮಾರುಕಟ್ಟೆ ತಜ್ಞರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,769 ಅಂಶ ಕುಸಿತ ಕಂಡು (ಶೇ 2.10ರಷ್ಟು) 82,497 ಅಂಶಗಳಲ್ಲಿ ಮುಕ್ತಾಯಗೊಂಡಿತು. ವಹಿವಾಟಿನ ಒಂದು ಹಂತದಲ್ಲಿ 1,832 ಅಂಶ ಇಳಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 546 ಅಂಶ ಇಳಿಕೆ ಕಂಡು (ಶೇ 2.12ರಷ್ಟು) 25,250 ಅಂಶಗಳಲ್ಲಿ ಸ್ಥಿರಗೊಂಡಿತು.

ವಿದೇಶಿ ಬಂಡವಾಳದ ಹೊರಹರಿವು ಹೆಚ್ಚಳ ಮತ್ತು ಕಚ್ಚಾ ತೈಲದ ಬೆಲೆ ಏರಿಕೆಯಿಂದಾಗಿ ಷೇರುಪೇಟೆ ಕುಸಿತದ ಹಾದಿ ಹಿಡಿದಿದೆ.

ಸೆನ್ಸೆಕ್ಸ್ ಗುಚ್ಛದಲ್ಲಿನ ಎಲ್ ಆ್ಯಂಡ್ ಟಿ, ರಿಲಯನ್ಸ್ ಇಂಡಸ್ಟ್ರಿಸ್, ಎಕ್ಸಿಸ್ ಬ್ಯಾಂಕ್, ಏಷ್ಯನ್ ಪೇಂಟ್ಸ್, ಟಾಟಾ ಮೋಟರ್ಸ್, ಬಜಾಜ್ ಫೈನಾನ್ಸ್, ಮಾರುತಿ, ಬಜಾಜ್ ಫಿನ್‌ಸರ್ವ್, ಕೋಟಕ್ ಮಹೀಂದ್ರ ಬ್ಯಾಂಕ್, ಟೈಟನ್, ಅದಾನಿ ಪೋರ್ಟ್ಸ್ ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್‌ನ ಷೇರಿನ ಮೌಲ್ಯದಲ್ಲಿ ಇಳಿಕೆಯಾಗಿದೆ.

ಜೆಎಸ್‌ಡಬ್ಲ್ಯು ಸ್ಟೀಲ್ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಶೇ 2.38ರಷ್ಟು ಏರಿಕೆಯಾಗಿದೆ. ಪ್ರತಿ ಬ್ಯಾರೆಲ್‌ಗೆ 75.66 ಡಾಲರ್‌ಗೆ ತಲುಪಿದೆ.

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹3000-3500
ಮಧ್ಯಮ	₹2500-3000
ಸಣ್ಣ	₹1000-2000

ವಿನಿಮಯ ದರ

$ ಡಾಲರ್	83.96
£ ಪೌಂಡ್	110.16
€ ಯುರೊ	92.70
¥ ಯೆನ್ (100ಕ್ಕೆ)	57

ರೂಪಾಯಿ ಮೌಲ್ಯ 14 ಪೈಸೆ ಇಳಿಕೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ಗುರುವಾರ ರೂಪಾಯಿ ಮೌಲ್ಯವು 14 ಪೈಸೆಯಷ್ಟು ಕುಸಿದಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ವಹಿವಾಟಿನ ಅಂತ್ಯಕ್ಕೆ ₹83.96ಕ್ಕೆ ತಲುಪಿದೆ.



ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ತೀವ್ರಗೊಂಡಿದ್ದು, ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗಿದೆ. ಇದರಿಂದ ದೇಶೀಯ ಷೇರುಪೇಟೆ ಇಳಿಕೆ ಕಂಡಿದೆ. ಹಾಗಾಗಿ, ರೂಪಾಯಿ ಮೌಲ್ಯದಲ್ಲೂ ಕುಸಿತವಾಗಿದೆ.

'ಅಮೆರಿಕದ ಕರೆನ್ಸಿಯು ಮೌಲ್ಯವರ್ಧನೆಗೊಂಡಿದೆ. ಚೀನಾದ ಷೇರುಪೇಟೆ ಏರಿಕೆ ಕಂಡಿದ್ದರಿಂದ ವಿದೇಶಿ ಬಂಡವಾಳದ ಹೊರ ಹರಿವು ಹೆಚ್ಚಿದೆ. ಇದರಿಂದ ರೂಪಾಯಿ ಮೌಲ್ಯ ಇಳಿಕೆಯ ಹಾದಿ ಹಿಡಿದಿದೆ' ಎಂದು ವಿದೇಶಿ ವಿನಿಮಯದಾರರು ತಿಳಿಸಿದ್ದಾರೆ.

ದೇಶದ ಷೇರುಪೇಟೆಯಲ್ಲಿ ಮಂಗಳವಾರದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹5,579 ಕೋಟಿ ಮೌಲ್ಯದ ಷೇರು ಮಾರಾಟ ಮಾಡಿದ್ದಾರೆ.

ಐ.ಟಿ ಉದ್ಯೋಗ ನೇಮಕಾತಿ ಚೇತರಿಕೆ

ಮುಂಬೈ (ಪಿಟಿಐ): ಸೆಪ್ಟೆಂಬರ್‌ನಲ್ಲಿ ಕಚೇರಿ ಅಥವಾ ಆಡಳಿತ ವಿಭಾಗದಲ್ಲಿನ ಉದ್ಯೋಗದ (ವೈಟ್ ಕಾಲರ್) ನೇಮಕಾತಿಯಲ್ಲಿ ಶೇ 6ರಷ್ಟು ಏರಿಕೆಯಾಗಿದೆ. ಐ.ಟಿ ವಲಯದಲ್ಲಿನ ನೇಮಕಾತಿಯು ಚೇತರಿಕೆ ಕಂಡಿದೆ ಎಂದು ನೌಕರಿ ಡಾಟ್ ಕಾಂ ವರದಿ ಗುರುವಾರ ತಿಳಿಸಿದೆ.

ಒಟ್ಟು ನೇಮಕಾತಿ ಪೈಕಿ ಐ.ಟಿ ವಲಯದಲ್ಲಿ ಶೇ 18ರಷ್ಟು ಹೆಚ್ಚಳವಾಗಿದೆ. ಯೂನಿಕಾರ್ನ್ ಮತ್ತು ಬಹುರಾಷ್ಟ್ರೀಯ ಕಂಪನಿಗಳಲ್ಲಿ ನೇಮಕಾತಿಯು ಕ್ರಮವಾಗಿ ಶೇ 16 ಮತ್ತು ಶೇ 14ರಷ್ಟು ಏರಿಕೆಯಾಗಿದೆ. ಎಫ್‌ಎಂಸಿಜಿ ಶೇ 23 ಮತ್ತು ತೈಲ ಮತ್ತು ಅನಿಲ ವಲಯದಲ್ಲಿ ಶೇ 13ರಷ್ಟು ಬೆಳವಣಿಗೆಯಾಗಿದೆ ಎಂದು ವಿವರಿಸಿದೆ.

'ಆವಿಷ್ಕಾರ ಆಧಾರಿತ ಕೈಗಾರಿಕೆಗೆ ಒತ್ತು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಮೆರಿಕ ಕಂಪನಿಗಳ ನೆರವಿನಿಂದ ರಾಜ್ಯದಲ್ಲಿ ಆವಿಷ್ಕಾರ ಆಧಾರಿತ ಕೈಗಾರಿಕಾ ಬೆಳವಣಿಗೆಗೆ ವೇಗ ದೊರೆಯಲಿದೆ. ಆಧುನಿಕ ತಂತ್ರಜ್ಞಾನ ಕ್ಷೇತ್ರದಲ್ಲಿ ಉದ್ಯೋಗದ ಅವಕಾಶಗಳೂ ಹೆಚ್ಚಲಿವೆ' ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.



ಎಂ.ಬಿ. ಪಾಟೀಲ

ಬೆಂಗಳೂರಿನಲ್ಲಿ ನಡೆಯುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಪಾಲ್ಗೊಳ್ಳುವಂತೆ ಅಮೆರಿಕ ಕಂಪನಿಗಳಿಗೆ ಅಧಿಕೃತ ಆಹ್ವಾನ ನೀಡಿದ ನಂತರ ಅವರು ಮಾತನಾಡಿದರು.

'ಬಂಡವಾಳ ಹೂಡಿಕೆ ಹಾಗೂ ಉದ್ಯಮ ವಿಸ್ತರಣೆ ಕುರಿತು ಅಪ್ಲೈಡ್ ಮೆಟೀರಿಯಲ್ಸ್ ಇಂಡಿಯಾ, ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ, ಫಾರ್ಫ್ಯಾಕ್ಟರ್ ಹಾಗೂ ತೈಕೊಂಡ್‌ನ ಪ್ರಮುಖರ ಜತೆ ಮಾತುಕತೆ ನಡೆಸಲಾಗಿದೆ. ರಾಜ್ಯದಲ್ಲಿ ಸಂಶೋಧನಾ ಕೇಂದ್ರಗಳ ಸ್ಥಾಪನೆ, ಆರೋಗ್ಯ ಕ್ಷೇತ್ರದ ಪಾಲುದಾರಿಕೆ, ಬಂಡವಾಳ ಹೂಡಿಕೆ ಮತ್ತು ಉದ್ಯಮ ವಿಸ್ತರಣೆಯ ಭರವಸೆ ದೊರೆತಿದೆ' ಎಂದರು.

'ಅಪ್ಲೈಡ್ ಮೆಟೀರಿಯಲ್ಸ್ ಇಂಡಿಯಾದ ಕಂಟ್ರಿ ಪ್ರೆಸಿಡೆಂಟ್ ಸತೀಶ್ ಕುಪ್ಪುರಾವ್ ಅವರ ಜತೆ ಹೊಸ ಸಂಶೋಧನೆ ಹಾಗೂ ಅಭಿವೃದ್ಧಿ ಕೇಂದ್ರ ಸ್ಥಾಪನೆಯ ಸಾಧ್ಯತೆಗಳ ಬಗ್ಗೆ ಚರ್ಚಿಸಲಾಗಿದೆ. ಸೆಮಿಕಂಡಕ್ಟರ್, ನ್ಯಾನೊ ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದ ಸಾಮರ್ಥ್ಯ ಹೆಚ್ಚಲಿದೆ. ಕರ್ನಾಟಕದ ನಾವೀನ್ಯ ಮತ್ತು ಉದ್ಯಮಶೀಲತಾ ವ್ಯವಸ್ಥೆ ಬಲಪಡಿಸಲು ಸ್ಟ್ಯಾನ್‌ಫೋರ್ಡ್ ವಿಶ್ವವಿದ್ಯಾಲಯ ನೆರವಾಗಲಿದೆ' ಎಂದು ಹೇಳಿದರು.

ಬೈರೂತ್ ಮೇಲೆ ಇಸ್ರೇಲ್ ದಾಳಿ: 9 ಸಾವು

ಬೈರೂತ್ (ಎಪಿ): ಬೈರೂತ್‌ನ ಕೇಂದ್ರ ಭಾಗದಲ್ಲಿ ಇರುವ ಅಪಾರ್ಟ್‌ಮೆಂಟ್ ಕಟ್ಟಡವೊಂದರ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಹಿಜ್ಬುಲ್ಲಾ ಬಂಡುಕೋರ ಸಂಘಟನೆಯ ಜೊತೆ ನಂಟು ಹೊಂದಿದ್ದ 9 ಮಂದಿ ಹತರಾಗಿದ್ದಾರೆ.

ಹಿಜ್ಬುಲ್ಲಾ ಸಂಘಟನೆಯು ಬಲಿಷ್ಠವಾಗಿರುವ ಪ್ರದೇಶಗಳ ಮೇಲೆ ಇಸ್ರೇಲ್ ಪಡೆಗಳು ಸೆಪ್ಟೆಂಬರ್ ತಿಂಗಳ ಕೊನೆಯ ವಾರದಿಂದ ದಾಳಿ ನಡೆಸುತ್ತಿವೆ. ಆದರೆ, ನಗರದ ಕೇಂದ್ರ ಭಾಗದ ಮೇಲೆ ಇಸ್ರೇಲ್ ದಾಳಿ ನಡೆಸಿದ್ದು ಅಪರೂಪ.

ಬುಧವಾರ ರಾತ್ರಿ ನಡೆದ ಈ ದಾಳಿಗೆ ಮೊದಲು ಯಾವುದೇ ಎಚ್ಚರಿಕೆಯ ಸಂದೇಶ ನೀಡಿರಲಿಲ್ಲ. ವಿಶ್ವಸಂಸ್ಥೆಯ ಮುಖ್ಯ ಕಚೇರಿ, ಪ್ರಧಾನಿಯವರ ಕಚೇರಿ ಹಾಗೂ ಸಂಸತ್ತಿನ ಸನಿಹದಲ್ಲೇ ಇರುವ ಕಟ್ಟಡದ ಮೇಲೆ ಈ ದಾಳಿ ನಡೆದಿದೆ. ತನ್ನ 9 ಮಂದಿ ಕಾರ್ಯಕರ್ತರು ದಾಳಿಗೆ ಬಲಿಯಾಗಿದ್ದಾರೆ ಎಂದು ಹಿಜ್ಬುಲ್ಲಾ ಸಂಘಟನೆಯ ನಾಗರಿಕ ರಕ್ಷಣಾ ವಿಭಾಗ ಹೇಳಿದೆ.

ನಾಲ್ಕು ಮಂದಿ ಅರೆವೈದ್ಯಕೀಯ ಸಿಬ್ಬಂದಿಗೆ ಗಾಯಗಳಾಗಿವೆ ಎಂದು ಲೆಬನಾನ್‌ನ ರೆಡ್‌ಕ್ರಾಸ್ ಸಂಸ್ಥೆ ಹೇಳಿದೆ. ಲೆಬನಾನ್‌ನ ಸೈನಿಕನೊಬ್ಬ ದಾಳಿಗೆ ಬಲಿಯಾಗಿದ್ದಾನೆ.

ಇನ್ನೊಂದು ಬೆಳವಣಿಗೆಯಲ್ಲಿ ಇಸ್ರೇಲ್ ಮಿಲಿಟರಿಯು ಲೆಬನಾನ್‌ನ ದಕ್ಷಿಣ ಭಾಗದಲ್ಲಿ ಇರುವ ಗ್ರಾಮಗಳು ಹಾಗೂ ಪಟ್ಟಣಗಳ ಜನರಿಗೆ ಸ್ಥಳಾಂತರಗೊಳ್ಳುವಂತೆ ಸೂಚಿಸಿದೆ. ಈ ಗ್ರಾಮಗಳು ಹಾಗೂ ಪಟ್ಟಣಗಳು ವಿಶ್ವಸಂಸ್ಥೆ ಗುರುತಿಸಿರುವ ಬಫರ್ ವಲಯದ ಉತ್ತರಕ್ಕಿವೆ. ಮಿಲಿಟರಿಯ ಈ ಸೂಚನೆಯು, ಇಸ್ರೇಲ್‌ನ ಕಾರ್ಯಾಚರಣೆಯು ಇನ್ನಷ್ಟು ವಿಸ್ತರಿಸಬಹುದು ಎಂಬ ಸುಳಿವನ್ನು ನೀಡಿದೆ. ಇಸ್ರೇಲ್ ಸೇನೆಯು ಇದುವರೆಗೆ ಗಡಿ ಪ್ರದೇಶಕ್ಕೆ ಸನಿಹದಲ್ಲಿ ಇರುವ ಸ್ಥಳಗಳಲ್ಲಿ ಮಾತ್ರ ಕಾರ್ಯಾಚರಣೆ ನಡೆಸುತ್ತಿತ್ತು.

ಇರಾನ್ ಬೆಂಬಲಿಯ ಹುಥಿ ಬಂಡುಕೋರರು ತಾವು ಇಸ್ರೇಲ್ ಗುರಿಯಾಗಿಸಿಕೊಂಡು ಡ್ರೋನ್ ದಾಳಿ ನಡೆಸಿರುವುದಾಗಿ ಹೇಳಿದ್ದಾರೆ. ಒಂದು ಡ್ರೋನ್‌ಅನ್ನು ಹೊಡೆದುರುಳಿಸಲಾಗಿದೆ, ಇನ್ನೊಂದು ಡ್ರೋನ್ ಮೆಡಿಟರೇನಿಯನ್ ಸಮುದ್ರದಲ್ಲಿ ಬಿದ್ದಿದೆ ಎಂದು ಇಸ್ರೇಲ್ ಮಿಲಿಟರಿ ಹೇಳಿದೆ.



ಬೈರೂತ್‌ನ ದಕ್ಷಿಣ ಭಾಗದ ಮೇಲೆ ಇಸ್ರೇಲ್ ಗುರುವಾರ ದಾಳಿ ನಡೆಸಿದೆ —ಎಎಫ್‌ಪಿ ಚಿತ್ರ

ಇರಾನ್ ಮೇಲೆ ದಾಳಿ ಬಗ್ಗೆ ಚರ್ಚೆ: ಬೈಡನ್

ವಾಷಿಂಗ್ಟನ್ (ಎಎಫ್‌ಪಿ): ಇರಾನ್ ತೈಲ ಘಟಕಗಳ ಮೇಲೆ ಇಸ್ರೇಲ್ ದಾಳಿ ನಡೆಸುವ ಸಾಧ್ಯತೆಗಳ ಬಗ್ಗೆ ಚರ್ಚೆ ನಡೆಸುತ್ತಿರುವುದಾಗಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಹೇಳಿದ್ದಾರೆ.

ಇಸ್ರೇಲ್ ಮೇಲೆ ಇರಾನ್ ನಡೆಸಿದ ಕ್ಷಿಪಣಿ ದಾಳಿಗೆ ಪ್ರತೀಕಾರವಾಗಿ ದಾಳಿ ನಡೆಸಲು ಇಸ್ರೇಲ್ ಮುಂದಾಗಿದೆ. ಅಧ್ಯಕ್ಷ ಬೈಡನ್ ಅವರ ಹೇಳಿಕೆ ಪ್ರಸಾರವಾದ ಕೆಲವೇ ಹೊತ್ತಿನಲ್ಲಿ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಶೇಕಡ 5ರಷ್ಟು ಏರಿಕೆ ಕಂಡುಬಂದಿದೆ.

ಶ್ವೇತಭವನದಲ್ಲಿ ಸುದ್ದಿಗಾರರ ಜೊತೆ ಮಾತನಾಡುವ ಸಂದರ್ಭದಲ್ಲಿ ಬೈಡನ್ ಈ ಮಾತು ಹೇಳಿದ್ದಾರೆ. ಇರಾನ್ ವಿರುದ್ಧ ಪ್ರತಿದಾಳಿ ನಡೆಸಲು ಇಸ್ರೇಲ್‌ಗೆ ಅವಕಾಶ ನೀಡಲಾಗುತ್ತದೆಯೇ ಎಂಬ ಪ್ರಶ್ನೆಗೆ ಬೈಡನ್ ಅವರು, 'ನಾವು ಅವಕಾಶ ಕೊಡುವಂಥದ್ದು ಇಲ್ಲ, ನಾವು ಇಸ್ರೇಲ್‌ಗೆ ಸಲಹೆ ನೀಡುತ್ತೇವೆ. ಗುರುವಾರ ಏನೂ ಆಗುವುದಿಲ್ಲ' ಎಂದು ಉತ್ತರಿಸಿದ್ದಾರೆ.

ಇರಾನ್‌ನ ಅಣ್ವಸ್ತ್ರ ಯೋಜನೆಗಳ ಸ್ಥಳಗಳ ಮೇಲೆ ಇಸ್ರೇಲ್ ದಾಳಿ ನಡೆಸುವುದನ್ನು ಅಮೆರಿಕ ಬೆಂಬಲಿಸುವುದಿಲ್ಲ ಎಂದು ಬೈಡನ್ ಅವರು ಬುಧವಾರ ಹೇಳಿದ್ದರು.

ಹಮಾಸ್ ನಾಯಕ ಹತ

ಜೆರುಸಲೇಂ (ಎಪಿ): ಹಮಾಸ್ ಬಂಡುಕೋರ ಸಂಘಟನೆಯ ಹಿರಿಯ ನಾಯಕರೊಬ್ಬರನ್ನು ಮೂರು ತಿಂಗಳ ಹಿಂದೆ ಗಾಜಾ ಪಟ್ಟಿಯಲ್ಲಿ ಹತ್ಯೆ ಮಾಡಿರುವುದಾಗಿ ಇಸ್ರೇಲ್ ಗುರುವಾರ ಹೇಳಿದೆ. ಭೂಗತ ಸ್ಥಳವೊಂದರ ಮೇಲೆ ನಡೆಸಿದ ದಾಳಿಯಲ್ಲಿ ರಾವ್ಹಿ ಮುಶ್ತಾಹಾ ಅವರು ಮೃತಪಟ್ಟಿದ್ದಾರೆ. ಹಮಾಸ್ ಸಂಘಟನೆಯ ಪ್ರಮುಖ ನಾಯಕ ಯಾಹ್ಯಾ ಸಿನ್ವರ್ ಅವರ ಆಪ್ತ ಮುಶ್ತಾಹಾ. ಯಾಹ್ಯಾ ಅವರು ಗಾಜಾದಲ್ಲಿ ಅಡಗಿದ್ದಾರೆ ಎನ್ನಲಾಗಿದೆ.

ಸುಸ್ಥಿರ ಕೃಷಿ: ₹1 ಲಕ್ಷ ಕೋಟಿ ವೆಚ್ಚಕ್ಕೆ ಒಪ್ಪಿಗೆ

ನವದೆಹಲಿ (ಪಿಟಿಐ): ಪಿಎಂ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಹಾಗೂ ಕೃಷೋನ್ನತಿ ಯೋಜನೆಯಡಿ ₹1 ಲಕ್ಷ ಕೋಟಿ ವೆಚ್ಚ ಮಾಡಲು ಗುರುವಾರ ನಡೆದ ಕೇಂದ್ರ ಸಚಿವ ಸಂಪುಟ ಸಭೆಯು ಒಪ್ಪಿಗೆ ನೀಡಿದೆ. ಸುಸ್ಥಿರ ಕೃಷಿಗೆ ಉತ್ತೇಜನ ಹಾಗೂ ದೇಶದ ಆಹಾರ ಭದ್ರತೆಗೆ ಒತ್ತು ನೀಡುವುದು ಈ ಯೋಜನೆಗಳ ಉದ್ದೇಶವಾಗಿದೆ.

ಎಣ್ಣೆಕಾಳು ಉತ್ಪಾದನೆಗೆ ಒತ್ತು: ರಾಷ್ಟ್ರೀಯ ಖಾದ್ಯ ತೈಲಗಳು ಮತ್ತು ಎಣ್ಣೆಕಾಳುಗಳ ಮಿಷನ್‌ನಡಿ ₹10,103 ಕೋಟಿ ವೆಚ್ಚ ಮಾಡುವುದಕ್ಕೂ ಸಂಪುಟ ಒಪ್ಪಿಗೆ ಸೂಚಿಸಿದೆ.

ದೇಶೀಯ ಬೇಡಿಕೆಗೆ ಅನುಗುಣವಾಗಿ ಸರ್ಕಾರವು ಶೇ 50ರಷ್ಟಕ್ಕೂ ಹೆಚ್ಚು ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತದೆ. ಮುಂದಿನ 7 ವರ್ಷದಲ್ಲಿ ದೇಶೀಯವಾಗಿ ಖಾದ್ಯ ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಈ ಮಿಷನ್ ರೂಪಿಸಲಾಗಿದೆ. ದೇಶದಲ್ಲಿ 2022-23ರಲ್ಲಿ 39 ದಶಲಕ್ಷ ಟನ್ ಎಣ್ಣೆಕಾಳುಗಳ ಉತ್ಪಾದನೆಯಾಗಿದೆ. 2030-31ರ ವೇಳೆಗೆ 69.7 ದಶಲಕ್ಷ ಟನ್ ಉತ್ಪಾದಿಸುವ ಗುರಿ ಹೊಂದಲಾಗಿದೆ ಎಂದು ಕೇಂದ್ರ ತಿಳಿಸಿದೆ.

ಅಮೆರಿಕದ ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗ ಶಿಫಾರಸು

'ಭಾರತಕ್ಕೆ ಧಾರ್ಮಿಕ ಸ್ವಾತಂತ್ರ್ಯ ಉಲ್ಲಂಘನೆ ಹಣೆಪಟ್ಟಿ'

ಪ್ರಜಾವಾಣಿ ವಾರ್ತೆ/ಪಿಟಿಐ

ಬೆಂಗಳೂರು/ನವದೆಹಲಿ: 'ಭಾರತಕ್ಕೆ 'ಧಾರ್ಮಿಕ ಸ್ವಾತಂತ್ರ್ಯವು ತೀವ್ರ ಉಲ್ಲಂಘನೆಯಾಗುತ್ತಿರುವ ದೇಶ' ಎಂಬ ಹಣೆಪಟ್ಟಿ ಕಟ್ಟಿ' ಎಂದು ಅಮೆರಿಕದ ಅಂತರ ರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಆಯೋಗವು (ಯುಎಸ್‌ಸಿಐಆರ್‌ಎಫ್) ಅಮೆರಿಕ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ಆಯೋಗವು ತನ್ನ ವಾರ್ಷಿಕ ವರದಿಯಲ್ಲಿ ಈ ಶಿಫಾರಸು ಮಾಡಿದ್ದು, 'ವಿಭಜನಕಾರಿ ರಾಷ್ಟ್ರೀಯತೆ ನೀತಿ, ಸರ್ಕಾರಿ ಅಧಿಕಾರಿಗಳು ಹಾಗೂ ರಾಜ ಕಾರಣಿಗಳ ದ್ವೇಷ ಭಾಷಣಗಳು ಹೆಚ್ಚಾಗುತ್ತಿರುವ ಕಾರಣ ಭಾರತದಲ್ಲಿನ ಧಾರ್ಮಿಕ ಸ್ವಾತಂತ್ರ್ಯವು ದಿನೇ ದಿನೇ ಕ್ಷೀಣಿಸುತ್ತಿದೆ. ಕೋಮು ಸಂಘರ್ಷಗಳನ್ನು ಬಿಜೆಪಿ ನೇತೃತ್ವದ ಭಾರತ ಸರ್ಕಾರವು ಸೂಕ್ತ ರೀತಿಯಲ್ಲಿ ನಿರ್ವಹಿಸುತ್ತಿಲ್ಲ. ಇದು ಅಂತರರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಕಾಯ್ದೆಯ (ಐಆರ್‌ಎಫ್‌ಎ) ಉಲ್ಲಂಘನೆ' ಎಂದಿದೆ.

'ದೇಶದಲ್ಲಿನ ಅಲ್ಪಸಂಖ್ಯಾತರಾದ ಮುಸ್ಲಿಮರು, ಕ್ರಿಶ್ಚಿಯನ್ನರು, ದಲಿತರು, ಜೈನರು, ಸಿಖ್ಖರು, ಯಹೂದಿಗಳು ಹಾಗೂ ಆದಿವಾಸಿಗಳ ಮೇಲೆ ಭಾರತ ಸರ್ಕಾರವು ವ್ಯವಸ್ಥಿತವಾದ ದಾಳಿ ನಡೆಸುತ್ತಿದೆ' ಎಂದು ವರದಿಯಲ್ಲಿ ಹೇಳ ಲಾಗಿದೆ. ಆದರೆ, ಅಮೆರಿಕ ವಿದೇಶಾಂಗ ಸಚಿವಾಲಯ ಈ ವರದಿಯನ್ನು ತಡೆಹಿಡಿದಿದೆ.

ಅಲ್ಪಸಂಖ್ಯಾತರ ಮೇಲೆ 2023ರಲ್ಲಿ ದೇಶದಲ್ಲಿ ನಡೆದ ಹಲವು ಹಿಂಸಾತ್ಮಕ ದಾಳಿಗಳ ಕುರಿತು ವರದಿಯಲ್ಲಿ ಉಲ್ಲೇಖಿಸಲಾಗಿದೆ. 'ಕಾನೂನುಬಾಹಿರ ಚಟುವಟಿಕೆ ತಡೆ ಕಾಯ್ದೆ (ಯುಎಪಿಎ), ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ), ಮತಾಂತರ ನಿಷೇಧ ಕಾಯ್ದೆ, ಗೋ ಹತ್ಯೆ ನಿಷೇಧ ಕಾನೂನುಗಳನ್ನು ಬಳಸಿಕೊಂಡು ಅಲ್ಪಸಂಖ್ಯಾತರು ಹಾಗೂ ಅವರಹಕ್ಕುಗಳಕುರಿತುಹೋರಾಡುವವರನ್ನು ಬಂಧಿಸಲಾಗುತ್ತಿದೆ' ಎಂದು ಹೇಳಿದೆ.

ಮನಮೋಹನ್ ಸಿಂಗ್ ಅವರ ನೇತೃತ್ವದ ಸರ್ಕಾರದಿಂದ ಆರಂಭಗೊಂಡು, ಈಗಿನವರೆಗೂ ಯುಎಸ್‌ಸಿಐಆರ್‌ಎಫ್ ಅಧಿಕಾರಿಗಳಿಗೆ ಭಾರತ ಪ್ರವೇಶವನ್ನು ನಿರಾಕರಿಸಲಾಗಿದೆ.

ಮುಖ್ಯಾಂಶಗಳು

- ಮಣಿಪುರದಲ್ಲಿ ನಡೆಯುತ್ತಿರುವ ಜನಾಂಗೀಯ ಸಂಘರ್ಷ ಉಲ್ಲೇಖ
- ಹರಿಯಾಣದ ನೂಹ್ ಜಿಲ್ಲೆಯಲ್ಲಿ ನಡೆದ ಕೋಮು ಸಂಘರ್ಷ ಪ್ರಸ್ತಾಪ
- ಮತಾಂತರ ಬಣ್ಣಿಸಲು 'ಲವ್ ಜಿಹಾದ್' ಎಂಬ ಪದ ಬಳಕೆ ಕುರಿತು ಉಲ್ಲೇಖ

ಅಮೆರಿಕ ಸರ್ಕಾರಕ್ಕೆ ಆಯೋಗದ ಶಿಫಾರಸು

- ಧಾರ್ಮಿಕ ಸ್ವಾತಂತ್ರ್ಯಕ್ಕೆ ಧಕ್ಕೆ ಒಡ್ಡುವ ಮೂಲಕ ಹಿಂಸೆಗೆ ಕಾರಣರಾಗುವ ವ್ಯಕ್ತಿಯ ಮೇಲೆ ಹಣಕಾಸು ಸೇರಿದಂತೆ ಹಲವು ನಿರ್ಬಂಧ ಹೇರಿ. ಅಂಥ ವ್ಯಕ್ತಿಗೆ ಅಮೆರಿಕ ಪ್ರವೇಶವನ್ನು ನಿರ್ಬಂಧಿಸಿ
- ದ್ವಿಪಕ್ಷೀಯ ಒಪ್ಪಂದಗಳನ್ನು ರಚಿಸಿಕೊಳ್ಳುವಾಗ ಆ ದೇಶದ ಧಾರ್ಮಿಕ ಸ್ವಾತಂತ್ರ್ಯದ ಆದ್ಯತೆಗಳನ್ನೂ ಪರಾಮರ್ಶಿಸಿ
- 'ಭಯೋತ್ಪಾದನೆಗೆ ಹಣಕಾಸಿನ ನೆರವು ತಡೆ'ಗೆ ಸಂಬಂಧಿಸಿದ ಅಂತರರಾಷ್ಟ್ರೀಯ ಮಟ್ಟದ ಕೆಲವು ಶಿಫಾರಸುಗಳನ್ನು ಭಾರತವು ದೇಶದಲ್ಲಿನ ಅಲ್ಪಸಂಖ್ಯಾತರನ್ನು ಹಾಗೂ ಅವರ ಹಕ್ಕುಗಳನ್ನು ಪ್ರತಿಪಾದಿಸುವವರನ್ನು ಬಂಧಿಸುವುದಕ್ಕೆ ಬಳಸುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಿ
- ಭಾರತವು ತನ್ನ ಧಾರ್ಮಿಕ ಸ್ವಾತಂತ್ರ್ಯದ ಸ್ಥಿತಿಯನ್ನು ಸುಧಾರಿಸಿಕೊಂಡರಷ್ಟೇ ಆ ದೇಶಕ್ಕೆ ಆರ್ಥಿಕ ನೆರವು ಹಾಗೂ ಶಸ್ತ್ರಾಸ್ತ್ರ ಪೂರೈಕೆ ಮಾಡಿ

> ರಾಜಕೀಯ ಅಜೆಂಡಾ ಇಟ್ಟುಕೊಂಡಿರುವ ಪಕ್ಷಪಾತಿ ಧೋರಣೆಯುಳ್ಳ ಆಯೋಗ ಇದಾಗಿದೆ. ಅಮೆರಿಕದಲ್ಲಿರುವ ಮಾನವ ಹಕ್ಕುಗಳ ಉಲ್ಲಂಘನೆಯ ವಿಚಾರಗಳ ಬಗ್ಗೆ ಗಮನಹರಿಸಿ' ಎಂದು ಭಾರತದ ವಿದೇಶಾಂಗ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ವರದಿಗೆ ಪ್ರತಿಕ್ರಿಯಿಸಿದ್ದಾರೆ. ಭಾರತವು ಈ ವರದಿಯನ್ನು ತಳ್ಳಿಹಾಕಿದೆ.

ಚಾಮುಂಡಿ ಬೆಟ್ಟದಲ್ಲಿ ದಸರಾ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ನೀಡಿದ ಪ್ರೊ.ಹಂಪನಾ

‘ಕೆಡವುವುದು ಸುಲಭ, ಕಟ್ಟುವುದು ಕಷ್ಟ’

● ಕೆ.ನರಸಿಂಹಮೂರ್ತಿ

ಮೈಸೂರು: ರಾಜ್ಯದಲ್ಲಿ ತುಂಬಿರುವ ನದಿ, ಜಲಾಶಯಗಳು ಮೂಡಿಸಿರುವ ಸಮೃದ್ಧಿ–ಸಂತಸದ ಭಾವದೊಂದಿಗೆ, ನಗರದ ಚಾಮುಂಡಿ ಬೆಟ್ಟದಲ್ಲಿ ಗುರುವಾರ ಉದ್ಘಾಟನೆಗೊಂಡ ನಾಡಹಬ್ಬ ದಸರಾ ಉತ್ಸವವು, ಚುನಾಯಿತ ಸರ್ಕಾರವನ್ನು ಉಳಿಸಬೇಕೆಂಬ ಚಿಂತನೆಯೊಂದಿಗೆ, ಪ್ರಸ್ತುತ ರಾಜ್ಯದಲ್ಲಿ ನಡೆಯುತ್ತಿರುವ ರಾಜಕೀಯ ಘಟನೆಗಳ ಕುರಿತ ಚರ್ಚೆಗೆ ವೇದಿಕೆ ಸಾಕ್ಷಿಯಾಯಿತು.

‘ನಾಡಿನಲ್ಲಿ ಮತ್ತಷ್ಟು ಮಳೆ-ಬೆಳೆಯಾಗಲಿ’ ಎಂಬ ಸದಾಶಯದೊಂದಿಗೆ, ಯುದ್ಧ, ಮಹಿಳಾ ಅಸಮಾನತೆ ಮತ್ತು ನಿರುದ್ಯೋಗದ ವಿರುದ್ಧ ದಿಟ್ಟ ನಿಲುವನ್ನೂ ದಾಖಲಿಸುವ ಮೂಲಕ ಉತ್ಸವಕ್ಕೆ ವಿಧ್ಯುಕ್ತ ಚಾಲನೆ ದೊರಕಿತು.

ಅಗಲಿದ ತಮ್ಮ ಪತ್ನಿ ಪ್ರೊ.ಕಮಲಾ ಅವರನ್ನು ಭಾವುಕರಾಗಿ ಸ್ಮರಿಸಿ, ತಮಗೆ ದೊರೆತ ಉತ್ಸವ ಉದ್ಘಾಟನೆಯ ಗೌರವವನ್ನು ಅವರಿಗೇ ಅರ್ಪಿಸಿ, ಉತ್ಸವಕ್ಕೆ ಚಾಲನೆ ನೀಡಿದ 88ರ ಹಸನ್ಮುಖಿ ಪ್ರೊ.ಹಂ.ಪ.ನಾಗರಾಜಯ್ಯ, ‘ಕೆಡವುವುದು ಸುಲಭ, ಕಟ್ಟುವುದು ಕಷ್ಟ. ಮೊದಲೇ ದೊಡ್ಡ ಹೊರೆಗಳಿಂದ ಬಳಲಿ ಬಸವಳಿದಿರುವ ಶ್ರೀಸಾಮಾನ್ಯರ ಹೆಗಲಿಗೆ ಮತ್ತೆ ಮತ್ತೆ ನಡೆಯುವ ಚುನಾವಣೆಗಳು ಇನ್ನಷ್ಟು ಭಾರ ಹೇರಿದರೆ ಕುಸಿಯುತ್ತಾರಷ್ಟೆ. ಯಾವ ಪಕ್ಷವೂ ಶಾಶ್ವತವಾಗಿ ಅಧಿಕಾರದಲ್ಲಿ ಇರುವುದು ಅಸಾಧ್ಯ’ ಎಂದು ಹೇಳಿದರು.

ಸಂಸ್ಕೃತದ ಭಾಸ ಕವಿಯ ನಾಟಕದ ‘ಚಕ್ರಾರ ಪಂಕ್ತಿರಿವ ಗಚ್ಛತಿ ಭಾಗ್ಯ ಪಂಕ್ತಿಃ’ (ಅದೃಷ್ಟದ ರೇಖೆಗಳು ಬಂಡಿಯ ಗಾಲಿಯ ಅರಗಳಂತೆ ನಿರಂತರವಾಗಿ ಚಲಿಸುತ್ತಿರುತ್ತವೆ) ಮಾತನ್ನು ಉಲ್ಲೇಖಿಸಿ, ‘ಸೋತ ಪಕ್ಷವು ಮತ್ತೆ ಅಧಿಕಾರಕ್ಕೆ ಬರಲು. ಜನಮನವನ್ನು ತಮ್ಮ ಪರವಾಗಿ ಒಲಿಸಿಕೊಳ್ಳಲು ಐದು ವರ್ಷದಲ್ಲಿ ಸಜ್ಜಾಗಬಹುದು’ ಎಂದರು.

ಚಾಮುಂಡೇಶ್ವರಿ ದೇವಿಯನ್ನು ‘ಲೋಕಮಾತೆ’ ಎಂದು ಕರೆದು, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರನ್ನು ನೆನೆದು ಮಾತನಾಡಿ, ‘ಇಸ್ರೇಲ್-ಪ್ಯಾಲೆಸ್ಟೀನ್, ರಷ್ಯಾ-ಉಕ್ರೇನ್ ಯುದ್ಧ, ಅಮಾಯಕರ ಮಾರಣಹೋಮ ನಿಲ್ಲಲಿ, ಅದಕ್ಕಾಗಿ ರಾಷ್ಟ್ರ ನಾಯಕರು ಜೀವಪರ ಧೋರಣೆ ತಳೆಯಲು ಚಾಮುಂಡಿ ಪ್ರೇರಣೆ ನೀಡಲಿ, ಹೆಣ್ಣು ಭ್ರೂಣ ಹತ್ಯೆ ತಡೆಯಲು ತಾಯಿತಂದೆಯರಿಗೆ ಸದ್ಬುದ್ಧಿ ಅನುಗ್ರಹಿಸಲಿ’ ಎಂಬ ಕೋರಿಕೆಗಳನ್ನು ಮಂಡಿಸಿದರು.

‘ಹೆಣ್ಣು ಭ್ರೂಣ ಹತ್ಯೆ ತಡೆಯುವಲ್ಲಿ ಹೆಣ್ಣು ದೇವತೆಗಳು ತೆಪ್ಪಗಿರುವುದು ಕಂಡು ಅಚ್ಚರಿಯಾಗುತ್ತದೆ. ದೇವರುಗಳಿಗೂ ಬಲಿಷ್ಠರನ್ನು ಕಂಡರೆ ಭಯ. ಈ ದೇವರುಗಳು ಕೂಡ ಕೋಳಿ, ಕುರಿ, ಮೇಕೆ ಬಲಿ ಬೇಡುವರೆ ಹೊರತು ಹುಲಿ, ಸಿಂಹ, ಚಿರತೆ ಕಿರುಬ ಬಲಿ ಕೊಡಿ ಎಂದು ಕೇಳಲು ಹೆದರಿಕೆ’ ಎಂದು ವಿಷಾದಿಸಿದರು.

‘ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಶಾಸನ ಸಭೆ ಲೋಕಸಭೆಯಲ್ಲಿ ಸ್ತ್ರೀಯರಿಗೆ ಸೂಕ್ತ ಪ್ರಾತಿನಿಧ್ಯ ಕೊಡುವ ಮಸೂದೆಗೆ ಅಡ್ಡಿ ಮಾಡುತ್ತಲೇ ಇದ್ದಾರೆ. ಹೆಣ್ಣುಮಕ್ಕಳು ಶಾಲೆಗೆ ಹೋಗಕೂಡದೆಂದು ಬೆದರಿಸುವ ದೇಶವೂ ಇದೆಯೆಂಬುದು ಶೋಚನೀಯವಷ್ಟೇ ಅಲ್ಲ, ಖಂಡನೀಯ ಕೂಡ’ ಎಂದರು.

‘ಸಂವಿಧಾನದ ಆಶಯಗಳಂತೆಯೇ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ’ ಎಂದು ಸಚಿವ ಡಾ.ಎಚ್.ಸಿ. ಮಹದೇವಪ್ಪ ತಿಳಿಸಿದರು. ಸಂವಿಧಾನ ಪ್ರಸ್ತಾವನೆಯ ಪ್ರತಿಜ್ಞಾ ವಿಧಿಯನ್ನು ಕಾರ್ಯಕ್ರಮದಲ್ಲಿ ಬೋಧಿಸಿದ್ದು ಗಮನ ಸೆಳೆಯಿತು.



ಸಾಂಸ್ಕೃತಿಕ ಕಾರ್ಯಕ್ರಮಗಳ ಉದ್ಘಾಟನೆಯಲ್ಲಿ ಶಹನಾಯ್ ವಾದಕ ಪಂಡಿತ್ ಬಸವರಾಜ ಭಜಂತ್ರಿ ಅವರಿಗೆ ‘ರಾಜ್ಯ ಸಂಗೀತ ವಿದ್ವಾನ್ ಪ್ರಶಸ್ತಿ’ಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರದಾನ ಮಾಡಿದರು. ಶಾಸಕ ಡಿ.ರವಿಶಂಕರ್, ಸಚಿವ ಶಿವರಾಜ್ ಎಸ್.ತಂಗಡಗಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ಕೆ.ಗೋವಿಂದರಾಜು, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಡಾ.ಎಚ್.ಸಿ.ಮಹದೇವಪ್ಪ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

> **ನವದುರ್ಗೆಯರ ಕೃಪಾಶೀರ್ವಾದದಿಂದ ಕಾಂಗ್ರೆಸ್ ಸರ್ಕಾರ ಇನ್ನೂ 9 ವರ್ಷ ಅಬಾಧಿತವಾಗಿರಲಿದೆ**
> **ಡಿ.ಕೆ.ಶಿವಕುಮಾರ್,** ಉಪಮುಖ್ಯಮಂತ್ರಿ

ಹಂಪನಾ ಕೋರಿಕೆಗಳು

- ನಿರುದ್ಯೋಗದಿಂದ ಯುವಜನ ಹತಾಶರಾಗಿದ್ದಾರೆ. ನಿರುದ್ಯೋಗ ನಿವಾರಣೆಗೆ ಆದ್ಯತೆಯಿತ್ತು, ಕೇಂದ್ರ ಸರ್ಕಾರವು ಕ್ರಮ ಕೈಗೊಳ್ಳುವಂತೆ ದೇವಿ ಪ್ರೇರೇಪಿಸಲಿ
- ಕನ್ನಡ ನಾಡು, ನುಡಿ, ನೆಲ, ಜಲ, ಕಲೆ, ಸಂಸ್ಕೃತಿ ಸಂರಕ್ಷಣೆಗಾಗಿ ಹೋರಾಡುವವರನ್ನು ಕೊಲೆಗಾರರಂತೆ ಕಾಣದೆ, ಪ್ರೀತಿ, ಅಭಿಮಾನಗಳಿಂದ ಕಾಣುವಂತೆ ಆಡಳಿತಾಂಗಕ್ಕೆ ಚಾಮುಂಡೇಶ್ವರಿ ಪ್ರೇರಣೆ ಕೊಡಲಿ
- ದೋಷಾರೋಪಣೆ, ವೈಯಕ್ತಿಕ ನಿಂದನೆ, ಅವಾಚ್ಯ ಶಬ್ದ ಬಳಸುವ ಪದ್ಧತಿ ನಿಂತು, ಸಮಾಜಮುಖಿ ಚಿಂತನೆಯನ್ನು ಒಳಗೊಂಡು, ಸಮೃದ್ಧ ರಾಷ್ಟ್ರ ನಿರ್ಮಾಣದ ಯೋಜನೆಗಳನ್ನು ನಿರೂಪಿಸುವಂತೆ ಸ್ಫೂರ್ತಿ ಕೊಡಲಿ

‘ದಸರೆ ನಿಲ್ಲದಿರಲಿ’

‘ಮುಂದಿನ ತಲೆಮಾರಿಗೆ ಸಿಗದೆ ಮರೆಯಾಗಬಹುದಾದ ಈ ಮಣ್ಣಿನ, ಈ ನೆಲದ ಘಮಲು, ದೇಸಿ ಸೊಗಡು ತುಂಬಿರುವ ನಾಡಹಬ್ಬ ನಿಲ್ಲಬಾರದು. ಕುಸ್ತಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು’ ಎಂದ ಪ್ರೊ.ಹಂಪನಾ, ಬಾಲ್ಯದಲ್ಲಿ ಪೈಲ್ವಾನ್ ಆಗಲು ಹೋಗಿ ತಲೆ ಬೋಳಿಸಿಕೊಂಡ ಪ್ರಸಂಗವನ್ನು ಹೇಳಿ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸಿದರು.

‘ಎಷ್ಟೇ ಅಡ್ಡಿ ಆತಂಕಗಳು ಎದುರಾಗುತ್ತಿದ್ದರೂ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎದೆಗುಂದದೆ ಸಡ್ಡು ಹೊಡೆದು ಗಟ್ಟಿಯಾಗಿ ನಿಂತಿರುವುದನ್ನು ನೋಡಿದರೆ ಅವರೂ ಕೂಡ ಗರಡಿಮನೆಯಲ್ಲಿ ಸಾಮು ಮಾಡಿರಬೇಕೆಂಬ ಗುಮಾನಿ ನನಗಿದೆ’ ಎಂದು ಹೇಳಿ ಮತ್ತೆ ನಗೆ ಉಕ್ಕಿಸಿದರು. ತೀರ್ಥಂಕರರ ಪುತ್ಥಳಿ ನೀಡಿ ಹಂಪನಾ ಅವರನ್ನು ಸ್ವಾಗತಿಸಿದ್ದು ವಿಶೇಷವಾಗಿತ್ತು.

ವಾಂಗ್ಚುಕ್ ಬಿಡುಗಡೆ ನಿಷೇಧಾಜ್ಞೆ ರದ್ದು

ನವದೆಹಲಿ (ಪಿಟಿಐ): ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಮತ್ತು ಅವರ ಬೆಂಬಲಿಗರನ್ನು ಪೊಲೀಸ್ ವಶದಿಂದ ಬಿಡುಗಡೆ ಮಾಡಲಾಗಿದೆ ಎಂದು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಗುರುವಾರ ದೆಹಲಿ ಹೈಕೋರ್ಟ್‌ಗೆ ತಿಳಿಸಿದರು.

ದೆಹಲಿಯ ವಿವಿಧ ಭಾಗಗಳಲ್ಲಿ ಸಭೆ ಮತ್ತು ಪ್ರತಿಭಟನೆಗಳನ್ನು ನಿಷೇಧಿಸಿ ದೆಹಲಿ ಪೊಲೀಸರು ಹೊರಡಿಸಿದ್ದ ಆದೇಶವನ್ನು ಸಹ ಹಿಂಪಡೆಯಲಾಗಿದೆ ಎಂದು ಮೆಹ್ತಾ, ಮುಖ್ಯ ನ್ಯಾಯಮೂರ್ತಿ ಮನಮೋಹನ್ ಮತ್ತು ನ್ಯಾಯಮೂರ್ತಿ ತುಷಾರ್ ರಾವ್ ಗೆಡೆಲಾ ಅವರಿದ್ದ ಪೀಠಕ್ಕೆ ತಿಳಿಸಿದರು.

ಬದ್ಲಾಪುರ ದೌರ್ಜನ್ಯ ಪ್ರಕರಣ: ಇಬ್ಬರು ಆರೋಪಿಗಳ ಬಂಧನ

ಮುಂಬೈ (ಪಿಟಿಐ): ಠಾಣೆ ಜಿಲ್ಲೆಯ ಬದ್ಲಾಪುರದ ಶಾಲೆಯಲ್ಲಿ ನಡೆದ ಲೈಂಗಿಕ ದೌರ್ಜನ್ಯ ಪ್ರಕರಣಕ್ಕೆ ಸಂಬಂಧಿಸಿದಂತೆ ಶಾಲೆಯ ಅಧ್ಯಕ್ಷ ಹಾಗೂ ಕಾರ್ಯದರ್ಶಿಯನ್ನು ಬಂಧಿಸಲಾಗಿದೆ.

ಈ ಇಬ್ಬರನ್ನು ಈವರೆಗೆ ಬಂಧಿಸದೇ ಇರುವುದಕ್ಕೆ ಬಾಂಬೆ ಹೈಕೋರ್ಟ್, ಆಕ್ರೋಶ್ ವ್ಯಕ್ತಪಡಿಸಿತ್ತು. ಇಬ್ಬರ ನಿರೀಕ್ಷಣಾ ಜಾಮೀನು ಅರ್ಜಿಯನ್ನು ವಜಾಗೊಳಿಸಿದ ಮರುದಿನವೇ ಇವರನ್ನು ಬಂಧಿಸಲಾಗಿದೆ.

ನ.18ರೊಳಗೆ ತನಿಖಾ ವರದಿ ನೀಡಿ: ಈ ಪ್ರಕರಣದ ಆರೋಪಿ ಅಕ್ಷಯ್ ಶಿಂದೆ, ಪೊಲೀಸ್ ಶೂಟೌಟ್‌ನಲ್ಲಿ ಹತ್ಯೆಯಾದ ಪ್ರಕರಣದ ತನಿಖಾ ವರದಿಯನ್ನು ನ.18ರ ಒಳಗಾಗಿ ಸಲ್ಲಿಸಬೇಕೆಂದು ಬಾಂಬೆ ಹೈಕೋರ್ಟ್ ಗುರುವಾರ ಮ್ಯಾಜಿಸ್ಟ್ರೇಟ್‌ಗೆ ನಿರ್ದೇಶನ ನೀಡಿದೆ.



ಉಡದಾರ ಕತ್ತರಿಸಿದರು...

ಕಲಬುರಗಿ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜು ಕೇಂದ್ರಕ್ಕೆ ಗುರುವಾರ ಪಿಎಸ್ಐ ನೇಮಕಾತಿ ಪರೀಕ್ಷೆ ಬರೆಯಲು ಬಂದ ಅಭ್ಯರ್ಥಿಯ ಉಡದಾರವನ್ನು ಪೊಲೀಸ್ ಸಿಬ್ಬಂದಿ ಕತ್ತರಿಸಿದರು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಸಂಕ್ಷಿಪ್ತ ಸುದ್ದಿ

‘ವಿನಯ ಕುಲಕರ್ಣಿ ಜೊತೆ ಗಲಾಟೆ ನಡೆದಿತ್ತು...’

ಬೆಂಗಳೂರು: ‘ವಿನಯ ಕುಲಕರ್ಣಿ ಮತ್ತು ನನ್ನ ತಮ್ಮ ಯೋಗೀಶ್ ಗೌಡರ್ ನಡುವೆ ಒಂದು ಬಾರಿ ಜಿಲ್ಲಾ ಪಂಚಾಯಿತಿ ಮೀಟಿಂಗ್‌ನಲ್ಲಿ ಗಲಾಟೆ ನಡೆದಿತ್ತು. ತದನಂತರದ ದಿನಗಳಲ್ಲಿ ನನ್ನ ತಮ್ಮನ ಕೊಲೆಯಾಯ್ತು’ ಎಂದು ಧಾರವಾಡ ಜಿಲ್ಲೆಯ ಹೆಬ್ಬಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರದ ಬಿಜೆಪಿ ಸದಸ್ಯರಾಗಿದ್ದ ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣದಲ್ಲಿ, ಮೃತರ ಅಣ್ಣ ಗುರುನಾಥ ಗೌಡ ವಿಚಾರಣಾ ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದರು.

ಯೋಗೀಶ್‌ಗೌಡ ಗೌಡರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದ ವಿಚಾರಣೆಯನ್ನು, ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯದ (ಸಿಸಿಎಚ್–82) ನ್ಯಾಯಾಧೀಶ ಸಂತೋಷ ಗಜಾನನ ಭಟ್ ಇದೇ 1ರಿಂದ ಪುನರಾರಂಭಿಸಿದ್ದಾರೆ.

ಹೇಳಿಕೆ ವಾಪಸ್ ಪಡೆದ ಸಚಿವೆ ಸುರೇಖಾ

ಹೈದರಾಬಾದ್: ‘ನಟಿ ಸಮಂತಾ ರುತ್ ಪ್ರಭು ಹಾಗೂ ನಟ ನಾಗಚೈತನ್ಯ ಅವರ ವಿಚ್ಛೇದನಕ್ಕೆ ಬಿಆರ್‌ಎಸ್ ಅಧ್ಯಕ್ಷ ಕೆ.ಟಿ. ರಾಮ್ ರಾವ್ ಕಾರಣ’ ಎಂದು ಸಚಿವೆ ಕೊಂಡಾ ಸುರೇಖಾ ಅವರು ನೀಡಿದ್ದ ಹೇಳಿಕೆಯನ್ನು ಗುರುವಾರ ವಾಪಸ್ ಪಡೆದಿದ್ದಾರೆ.

ತೆಲುಗು ಚಿತ್ರರಂಗದ ಕಲಾವಿದರು ಸುರೇಖಾ ಅವರ ವಿರುದ್ಧ ವಾಗ್ದಾಳಿ ನಡೆಸಿದ್ದರು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ನಾಯಕ ರಾಹುಲ್ ಗಾಂಧಿ, ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರನ್ನು ಟ್ಯಾಗ್ ಮಾಡಿ ಹಲವು ಕಲಾವಿದರು ಪೋಸ್ಟ್ ಮಾಡಿದ್ದರು.

ಇದನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸಿದೆ. ತಕ್ಷಣವೇ ಕ್ಷಮೆ ಕೇಳುವಂತೆ ಹೈಕಮಾಂಡ್ ಸುರೇಖಾ ಅವರಿಗೆ ಸೂಚನೆ ನೀಡಿತ್ತು’ ಎಂದು 'ದಿ ಹಿಂದೂ' ವರದಿ ಮಾಡಿದೆ.

‘ನನ್ನ ವಿರುದ್ಧ ಕೆಟಿಆರ್ ಹಾಗೂ ಅವರ ಪಕ್ಷದ ಬೆಂಬಲಿಗರು ಸಾಮಾಜಿಕ ಜಾಲತಾಣಗಳಲ್ಲಿ ಕೆಟ್ಟ ಅಭಿರುಚಿಯ ಕಮೆಂಟ್‌ಗಳನ್ನು ಮಾಡುತ್ತಿದ್ದರು. ಈ ಬಗ್ಗೆ ಮಾತನಾಡುತ್ತಾ ಭಾವುಕಳಾದೆ. ಇದೇ ಕಾರಣಕ್ಕೆ ಸಮಂತಾ ಅವರ ಹೆಸರು ಹೇಳಿಬಿಟ್ಟೆ. ನಟಿಯ ವಿರುದ್ಧ ನನಗೆ ವೈಯಕ್ತಿಕ ದ್ವೇಷವೇನೂ ಇಲ್ಲ’ ಎಂದು ಸಚಿವೆ ಕೊಂಡಾ ಸುರೇಖಾ ಹೇಳಿದ್ದಾರೆ.

ಟಿಎಂಸಿ ಯುವ ನಾಯಕ ಬಂಧನ

ನವದೆಹಲಿ (ಪಿಟಿಐ): ಕೋಲ್ಕತ್ತದ ಆರ್.ಜಿ.ಕರ್ ಆಸ್ಪತ್ರೆ ಮತ್ತು ವೈದ್ಯಕೀಯ ಕಾಲೇಜಿನಲ್ಲಿ ನಡೆದಿರುವ ಭ್ರಷ್ಟಾಚಾರ ಪ್ರಕರಣದ ಜತೆ ಸಂಪರ್ಕ ಹೊಂದಿರುವ ಆರೋಪದ ಮೇಲೆ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಯುವ ನಾಯಕ ಆಶಿಶ್ ಪಾಂಡೆ ಅವರನ್ನು ಸಿಬಿಐ ಗುರುವಾರ ಬಂಧಿಸಿದೆ.

ಭ್ರಷ್ಟಾಚಾರ ಪ್ರಕರಣದ ಪ್ರಮುಖ ಆರೋಪಿಯಾಗಿರುವ ಕಾಲೇಜಿನ ಮಾಜಿ ಪ್ರಾಚಾರ್ಯ ಸಂದೀಪ್ ಘೋಷ್ ಅವರ ನಿಕಟವರ್ತಿಯಾದ ಆಶಿಶ್ ಪಾಂಡೆ ಅವರನ್ನು ಸಿಬಿಐ ಸೆಪ್ಟೆಂಬರ್ 30ರಂದು ವಿಚಾರಣೆಗೆ ಒಳಪಡಿಸಿತ್ತು. ಘೋಷ್ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಸೆಪ್ಟೆಂಬರ್ 2ರಂದು ಬಂಧಿಸಿತ್ತು.

ಮರಾಠಿಗೆ ಶಾಸ್ತ್ರೀಯ ಭಾಷೆಯ ಸ್ಥಾನ

ನವದೆಹಲಿ (ಪಿಟಿಐ): ಮರಾಠಿ, ಬಂಗಾಳಿ, ಪಾಲಿ, ಪ್ರಾಕೃತ ಹಾಗೂ ಅಸ್ಸಾಮಿ ಭಾಷೆಗಳಿಗೆ ಶಾಸ್ತ್ರೀಯ ಭಾಷೆಯ ಸ್ಥಾನ ನೀಡಲು ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ಸೂಚಿಸಿದೆ.

ಸಂಪುಟ ತೆಗೆದುಕೊಂಡ ಮಹತ್ವದ ನಿರ್ಧಾರದಿಂದಾಗಿ ಶಾಸ್ತ್ರೀಯ ಭಾಷೆ ಸ್ಥಾನ ಪಡೆದ ಭಾಷೆಗಳ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ತಮಿಳು, ಸಂಸ್ಕೃತ, ತೆಲುಗು, ಕನ್ನಡ, ಮಲಯಾಳ ಮತ್ತು ಒಡಿಯಾ ಭಾಷೆಗಳು ಈ ಹಿಂದೆಯೇ ಶಾಸ್ತ್ರೀಯ ಭಾಷೆಯ ಸ್ಥಾನ ಪಡೆದುಕೊಂಡಿವೆ.

ಭಾಷೆಗಳಿಗೆ ‘ಶಾಸ್ತ್ರೀಯ ಭಾಷೆ’ ಎಂಬ ಸ್ಥಾನ ನೀಡುವ ಪರಿಕಲ್ಪನೆಯನ್ನು ಕೇಂದ್ರ ಸರ್ಕಾರ 2004ರಲ್ಲಿ ಆರಂಭಿಸಿತ್ತು.

ರೈಲ್ವೆ ನೌಕರರಿಗೆ ಬೋನಸ್

ರೈಲ್ವೆ ಇಲಾಖೆಯ 11.72 ಲಕ್ಷಕ್ಕೂ ಹೆಚ್ಚಿನ ಸಿಬ್ಬಂದಿಗೆ 78 ದಿನಗಳ ಉತ್ಪಾದಕತೆ ಆಧಾರಿತ ಬೋನಸ್ ಪಾವತಿಸುವ ಪ್ರಸ್ತಾವಕ್ಕೆ ಕೇಂದ್ರ ಸಚಿವ ಸಂಪುಟವು ಗುರುವಾರ ಒಪ್ಪಿಗೆ ನೀಡಿದೆ. ಇದಕ್ಕಾಗಿ ₹2,028.57 ಕೋಟಿ ವೆಚ್ಚವಾಗಲಿದೆ.

ಕೇಂದ್ರ ಸಂಪುಟವು ಪ್ರಮುಖ ಬಂದರುಗಳು ಮತ್ತು ಹಡಗುಕಟ್ಟೆ ಕಾರ್ಮಿಕ ಮಂಡಳಿ ನೌಕರರಿಗೆ ಈಗ ಜಾರಿಯಲ್ಲಿ ಇರುವ ಉತ್ಪಾದಕತೆ ಆಧಾರಿತ ಪ್ರತಿಫಲ ಯೋಜನೆಯಲ್ಲಿ 2020–21ರಿಂದ 2025–26ರವರೆಗೆ ಅನ್ವಯವಾಗುವಂತೆ ಬದಲಾವಣೆ ತರುವುದಕ್ಕೆ ಕೂಡ ಒಪ್ಪಿಗೆ ನೀಡಿದೆ.

ಮುಡಾ ಹಗರಣ: ವಿವರಣೆ ಪಡೆದ ಜಾರಿ ನಿರ್ದೇಶನಾಲಯದ ಅಧಿಕಾರಿಗಳು; ಸಿ.ಎಂ ರಾಜೀನಾಮೆಗೆ ಬಿಜೆಪಿ ಆಗ್ರಹ

ಇ.ಡಿಗೆ ದಾಖಲೆ ಸಲ್ಲಿಸಿದ ಸ್ನೇಹಮಯಿ ಕೃಷ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧದ ಪ್ರಕರಣದಲ್ಲಿ ಮುಡಾ ನಿವೇಶನ ಹಂಚಿಕೆಗೆ ಸಂಬಂಧಿಸಿದ ದಾಖಲೆಗಳನ್ನು ದೂರುದಾರ ಸ್ನೇಹಮಯಿ ಕೃಷ್ಣ ಜಾರಿ ನಿರ್ದೇಶನಾಲಯಕ್ಕೆ ಸಲ್ಲಿಸಿದ್ದಾರೆ. ಆ ದಾಖಲೆಗಳ ಸಂಬಂಧ ಅವರಿಂದ ಇ.ಡಿ ವಿವರಣೆ ಪಡೆದುಕೊಂಡಿದೆ.

ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯವು ನೀಡಿದ್ದ ಆದೇಶದ ಅನ್ವಯ ಲೋಕಾಯುಕ್ತ ಪೊಲೀಸರು ಪ್ರಕರಣ ದಾಖಲಿಸಿ, ತನಿಖೆ ಆರಂಭಿಸಿದ್ದರು. ಇದರ ಬೆನ್ನಲ್ಲೇ ಇ.ಡಿಗೆ ದೂರು ನೀಡಿದ್ದ ಕೃಷ್ಣ, ಪ್ರಕರಣ ದಾಖಲಿಸಿಕೊಳ್ಳುವಂತೆ ಕೋರಿದ್ದರು. ಇ.ಡಿ ಪ್ರಕರಣ ದಾಖಲಿಸಿಕೊಂಡಿತ್ತು.

ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ಸಲ್ಲಿಸುವಂತೆ ಸ್ನೇಹಮಯಿ ಕೃಷ್ಣ ಅವರಿಗೆ ಇ.ಡಿ ಸಮನ್ಸ್ ನೀಡಿತ್ತು. ಅದರಂತೆ ಕೃಷ್ಣ ಅವರು ಗುರುವಾರ ಬೆಳಿಗ್ಗೆ ಇ-ಮೇಲ್ ಮೂಲಕ ಎಲ್ಲ ದಾಖಲೆಗಳನ್ನು ಸಲ್ಲಿಸಿದ್ದರು ಮತ್ತು ನಿರ್ದೇಶನಾಲಯದ ಬೆಂಗಳೂರು ಕಚೇರಿಗೆ ಭೇಟಿ ನೀಡಿ, ದಾಖಲೆಗಳ ಪ್ರತಿಗಳನ್ನೂ ನೀಡಿದರು.

'ಸಿದ್ದರಾಮಯ್ಯ ಕುಟುಂಬ ಅಕ್ರಮವಾಗಿ ನಿವೇಶನ ಪಡೆದುಕೊಂಡ ಬಗೆ ಹೇಗೆ ಎಂಬುದನ್ನು ವಿವರಿಸುವ ದಾಖಲೆಗಳು, ಮತ್ತು ಈಚಿನ ವರ್ಷಗಳಲ್ಲಿ ಮುಡಾದಲ್ಲಿ ನಡೆದಿರುವ ನಿವೇಶನ ಹಂಚಿಕೆ ಪ್ರಕರಣಗಳಿಗೆ ಸಂಬಂಧಿಸಿದ ದಾಖಲೆಗಳನ್ನು ಅವರು ಸಲ್ಲಿಸಿದ್ದಾರೆ' ಎಂದು ಇ.ಡಿ ಮೂಲಗಳು ಹೇಳಿವೆ.

ದಾಖಲೆಗಳನ್ನು ಪರಿಶೀಲಿಸಿದ ಇ.ಡಿ ಅಧಿಕಾರಿಗಳು ಕೃಷ್ಣ ಅವರನ್ನು ಕಚೇರಿಗೆ ಕರೆಸಿಕೊಂಡು, ವಿವರಣೆ ಪಡೆದುಕೊಂಡಿದ್ದಾರೆ. ಮಧ್ಯಾಹ್ನ ಕಚೇರಿಗೆ ಹೋಗಿದ್ದ ಅವರು, ಸಂಜೆಯವರೆಗೆ ದಾಖಲೆಗಳನ್ನು ವಿವರಿಸಿದ್ದಾರೆ.



ಅಕ್ರಮಕ್ಕೆ ಸಂಬಂಧಿಸಿದ 500ಕ್ಕೂ ಹೆಚ್ಚು ದಾಖಲೆ ನೀಡಿದ್ದು, ಯಾವ ಹಂತದಲ್ಲಿ ಅಕ್ರಮವಾಗಿದೆ ಎಂಬುದರ ವಿವರಣೆಯನ್ನೂ ನೀಡಿದ್ದೇನೆ
ಸ್ನೇಹಮಯಿ ಕೃಷ್ಣ, ಮುಡಾ ಪ್ರಕರಣದ ದೂರುದಾರ



ಹಗರಣದಲ್ಲಿ ಸಿದ್ದರಾಮಯ್ಯ ಕೈ–ಕಾಲು, ಬಾಯಿ ಸುಟ್ಟುಕೊಂಡಿದ್ದು ಸಾಕು. ಒಂದು ತಪ್ಪು ಮುಚ್ಚಲು ಹೋಗಿ ಐವತ್ತು ತಪ್ಪುಮಾಡಿದ್ದೀರಿ. ರಾಜೀನಾಮೆ ನೀಡಿ ಮಾದರಿಯಾಗಿ
ವಿ.ಸೋಮಣ್ಣ, ರೈಲ್ವೆ ರಾಜ್ಯ ಸಚಿವ



ಕಾಂಗ್ರೆಸ್ ಹೈಕಮಾಂಡ್‌ಗೆ ಹಲ್ಲು ಇಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಪಡೆಯಲು ಆಗುತ್ತಿಲ್ಲ
ಎನ್.ರವಿಕುಮಾರ್, ವಿಧಾನ ಪರಿಷತ್ ಬಿಜೆಪಿ ಸದಸ್ಯ



ನಾವು ಹೇಳುತ್ತಿರುವುದನ್ನೇ ಇದೀಗ ಜಿ.ಟಿ. ದೇವೇಗೌಡ, ಎಸ್.ಟಿ. ಸೋಮಶೇಖರ್ ಹೇಳುತ್ತಿದ್ದಾರೆ. ಸಿದ್ದರಾಮಯ್ಯ ರಾಜೀನಾಮೆ ಕೊಡುವುದಿಲ್ಲ
ಜಮೀರ್ ಅಹಮದ್ ಖಾನ್, ಸಚಿವ

ಸಿಎಸ್ ಭೇಟಿ ಮಾಡಿದ ಎಡಿಜಿಪಿ ಚಂದ್ರಶೇಖರ್: (ಬೆಂಗಳೂರು ವರದಿ): 'ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ನನ್ನ ವಿರುದ್ಧ ಅವಹೇಳನಕಾರಿ ಮತ್ತು ಆಧಾರರಹಿತ ಆರೋಪಗಳನ್ನು ಮಾಡಿ, ಬೆದರಿಕೆ ಹಾಕಿದ್ದಾರೆ' ಎಂದು ತಮ್ಮ ಸಹೋದ್ಯೋಗಿಗಳಿಗೆ ಪತ್ರ ಬರೆದಿದ್ದ, ಲೋಕಾಯುಕ್ತ ವಿಶೇಷ ತನಿಖಾ ತಂಡದ ಎಡಿಜಿಪಿ ಎಂ. ಚಂದ್ರಶೇಖರ್ ಅವರು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಗುರುವಾರ ಭೇಟಿ ಮಾಡಿದರು.

ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಚಂದ್ರಶೇಖರ್, 'ಕುಮಾರಸ್ವಾಮಿ ಮಾಡಿದ್ದ ಆರೋಪಗಳು ಸುಳ್ಳು ಎಂದು ಹೇಳಿದ್ದೇನೆ. ಪತ್ರವನ್ನೂ ಬರೆದಿದ್ದೇನೆ. ಮುಖ್ಯ ಕಾರ್ಯದರ್ಶಿಯನ್ನು ಭೇಟಿ ಮಾಡಲು ಬಂದಿದ್ದೆ. ನಾನು ರಿಯಲ್ ಎಸ್ಟೇಟ್ ವ್ಯವಹಾರದಲ್ಲಿ ಭಾಗಿ ಆಗಿರುವ ಆರೋಪ ಸುಳ್ಳು. ಯತೋ ಧರ್ಮಸ್ತತೋ ಜಯಃ (ಎಲ್ಲಿ ಧರ್ಮವಿದೆಯೋ ಅಲ್ಲಿ ಜಯವಿದೆ) ಎಂದರು.

ಈ ಬಗ್ಗೆ ಮುಖ್ಯ ಕಾರ್ಯದರ್ಶಿ ಅವರನ್ನು ಪ್ರಶ್ನಿಸಿದಾಗ, 'ಅವರು (ಚಂದ್ರಶೇಖರ್) ಕಚೇರಿ ವಿಷಯ ಮಾತನಾಡಲು ಬಂದಿದ್ದರು. ಅವರು ಏನು ಮಾತನಾಡಿದರೆಂದು ಬಹಿರಂಗಪಡಿಸಲು ಸಾಧ್ಯವಿಲ್ಲ' ಎಂದರು.

'ಎಂ. ಚಂದ್ರಶೇಖರ್ ಒಬ್ಬ ಭ್ರಷ್ಟ ಅಧಿಕಾರಿ' ಎಂದು ಕುಮಾರಸ್ವಾಮಿ ಆರೋಪಿಸಿದ್ದರು. ಚಂದ್ರಶೇಖರ್ ಸಹೋದ್ಯೋಗಿಗಳಿಗೆ ಬರೆದಿದ್ದ ಪತ್ರದಲ್ಲಿ ಜಾರ್ಜ್ ಬರ್ನಾರ್ಡ್ ಶಾ ಮಾತನ್ನು ಉಲ್ಲೇಖಿಸಿ, 'ಹಂದಿಗಳೊಂದಿಗೆ ಎಂದಿಗೂ ಗುದ್ದಾಡಬೇಡಿ. ಗುದ್ದಾಡಿದರೆ ಹೊಲಸು ನಿಮಗೂ ಮೆತ್ತಿಕೊಳ್ಳುತ್ತದೆ, ಹಂದಿಗೂ ಮೆತ್ತಿಕೊಳ್ಳುತ್ತದೆ. ಆದರದು ಹಂದಿಗೆ ಇಷ್ಟವಾಗುತ್ತದೆ' ಎಂದಿದ್ದರು. ಈ ವಿಚಾರವಾಗಿ ಕೇಂದ್ರ ಗೃಹ ಸಚಿವ ಅಮಿತ್ ಶಾಗೆ ಪತ್ರ ಕೂಡ ಬರೆದಿರುವುದಾಗಿ ಕುಮಾರಸ್ವಾಮಿ ಹೇಳಿದ್ದರು.

ಪ್ಲಾನ್ ಎ ಅಷ್ಟೇ ಇದೆ– ಜಾರಕಿಹೊಳಿ

ನವದೆಹಲಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆಗೆ ಬಲವಾಗಿ ನಿಲ್ಲಬೇಕು ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ನಿವಾಸದಲ್ಲಿ ನಡೆದ ಸಭೆಯಲ್ಲಿ ಚರ್ಚೆಯಾಗಿದೆ. ನಮ್ಮಲ್ಲಿರುವುದು ಪ್ಲಾನ್ ಎ ಅಷ್ಟೆ, ಪ್ಲಾನ್ ಬಿ ಇಲ್ಲವೇ ಇಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಹೇಳಿದರು.

ಕಾಂಗ್ರೆಸ್ ಹೈಕಮಾಂಡ್ ನಾಯಕರನ್ನು ಭೇಟಿಯಾಗಲು ರಾಷ್ಟ್ರ ರಾಜಧಾನಿಗೆ ಬಂದಿರುವ ಅವರು ಗುರುವಾರ ಸುದ್ದಿಗಾರರ ಜತೆಗೆ ಮಾತನಾಡಿದರು. ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಭೇಟಿಯಾಗುವ ನಿರೀಕ್ಷೆ ಇದೆ.

'ಶಾಸಕ ಜಿ.ಟಿ.ದೇವೇಗೌಡರು ಉತ್ತಮ ಮಾತುಗಳನ್ನು ಹೇಳಿದ್ದಾರೆ. ಅವರ ಮಾತನ್ನು ಅವರ ಪಕ್ಷದ ಎಲ್ಲರೂ ಪಾಲನೆ ಮಾಡಬೇಕು. ಬೇರೆ ಬೇರೆ ರಾಜ್ಯಗಳ ಸಚಿವರ ಮೇಲೆ ಪ್ರಕರಣಗಳು ದಾಖಲಾಗಿವೆ. ಅವರೆಲ್ಲ ರಾಜೀನಾಮೆ ಕೊಡುತ್ತಾರಾ' ಎಂದು ಅವರು ಪ್ರಶ್ನಿಸಿದರು.

'ಆರ್. ಅಶೋಕ ಮೊದಲು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಲಿ. ನಂತರದ ವಿಷಯವನ್ನು ನಾವು ಹೇಳುತ್ತೇವೆ. ಅವರು ಏನು ಮಾಡುತ್ತಾರೆ ಎಂಬುದನ್ನು ಕಾದು ನೋಡೋಣ' ಎಂದು ಅವರು ತಿಳಿಸಿದರು.

ಸಿ.ಎಂ ಬಂಧಿಸಿ: ಪ್ರದೀಪ್ ಕುಮಾರ್ ಮನವಿ

'ಮುಡಾ ನಿವೇಶನ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷ್ಯಗಳನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನಾಶ ಮಾಡುತ್ತಿದ್ದಾರೆ. ಅವರನ್ನು ಕೂಡಲೇ ಬಂಧಿಸಿ, ಸಾಕ್ಷ್ಯ ನಾಶವನ್ನು ತಡೆಗಟ್ಟಿ' ಎಂದು ಪ್ರದೀಪ್ ಕುಮಾರ್ ಎಸ್.ಪಿ. ಜಾರಿ ನಿರ್ದೇಶನಾಲಯಕ್ಕೆ ಮನವಿ ಸಲ್ಲಿಸಿದ್ದಾರೆ.

ಸಿದ್ದರಾಮಯ್ಯ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅನುಮತಿ ನೀಡಿ ಎಂದು ರಾಜ್ಯಪಾಲರಿಗೆ ಅರ್ಜಿ ಸಲ್ಲಿಸಿದ್ದವರಲ್ಲಿ ಜೆಡಿಎಸ್‌ನ ಪ್ರದೀಪ್ ಕುಮಾರ್ ಸಹ ಒಬ್ಬರು. ಮುಖ್ಯಮಂತ್ರಿ ವಿರುದ್ಧ ತನಿಖೆಗೆ ಅನುಮತಿ ನೀಡುವಲ್ಲಿ ಇವರ ಮನವಿಯನ್ನೂ ರಾಜ್ಯಪಾಲರು ಪರಿಗಣಿಸಿದ್ದರು.

'ಮುಖ್ಯಮಂತ್ರಿ, ಯತೀಂದ್ರ ಸಿದ್ದರಾಮಯ್ಯ, ಪಾರ್ವತಿ ಹಾಗೂ ಮುಡಾ ಆಯುಕ್ತರ ವಿರುದ್ಧ ಸಾಕ್ಷ್ಯ ನಾಶಕ್ಕೆ ಸಂಬಂಧಿಸಿದ ಸೆಕ್ಷನ್‌ಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು, ಕೂಡಲೇ ಬಂಧಿಸಬೇಕು. ನಿವೇಶನಗಳನ್ನು ಮುಟ್ಟುಗೋಲು ಹಾಕಿಕೊಳ್ಳಬೇಕು' ಎಂದು ಕೋರಿದ್ದಾರೆ.

ಸಿ.ಎಂ ಆತ್ಮಸಾಕ್ಷಿ ಹುಡುಕುವುದೆಲ್ಲಿ?

ನವದೆಹಲಿ: 'ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆತ್ಮಸಾಕ್ಷಿಯನ್ನು ನೋಡುವವರು ಯಾರು? ಅದನ್ನು ಎಲ್ಲಿಂದ ಹುಡುಕಬೇಕು? ಅವರ ಆತ್ಮಸಾಕ್ಷಿ ನಡೆಯಿಂದ ಗೊತ್ತಾಗಬೇಕೇ ಹೊರತು ನುಡಿಯಿಂದ ಅಲ್ಲ' ಎಂದು ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಆತ್ಮಸಾಕ್ಷಿಯೇ ಅಂತಿಮ ನ್ಯಾಯಾಲಯ ಎಂಬ ಸಿದ್ದರಾಮಯ್ಯ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ಸಿದ್ದರಾಮಯ್ಯ ಜೊತೆಗೆ ಸರ್ಕಾರಕ್ಕೂ ಅಭದ್ರತೆ ಕಾಡುತ್ತಿದೆ' ಎಂದರು.

'ಮುಂದಿನ ಮೂರು ವರ್ಷ ನಾನೇ ಮುಖ್ಯಮಂತ್ರಿ ಎಂದು ಸಿದ್ದರಾಮಯ್ಯ ಪ್ರತಿದಿನ ಹೇಳುತ್ತಿದ್ದಾರೆ. ಅವರಿಗೆ ಅಭದ್ರತೆ ಕಾಡುತ್ತಿರುವುದಕ್ಕೆ ಈ ಹೇಳಿಕೆಯೇ ಸಾಕ್ಷಿ. ರಾಜ್ಯದಲ್ಲಿ ಯಾವುದೇ ಅಭಿವೃದ್ಧಿ ಕೆಲಸ ಆಗುತ್ತಿಲ್ಲ. ಕಾಂಗ್ರೆಸ್‌ನವರು ಜನಪರ ಕೆಲಸ ಮಾಡಬೇಕು. ಇಲ್ಲದಿದ್ದರೆ ಜಾಗ ಖಾಲಿ ಮಾಡಬೇಕು' ಎಂದು ಅವರು ಒತ್ತಾಯಿಸಿದರು.

'ಆರ್.ಅಶೋಕ ಪ್ರಕರಣಕ್ಕೂ ಸಿದ್ದರಾಮಯ್ಯ ಪ್ರಕರಣಕ್ಕೂ ವ್ಯತ್ಯಾಸ ಇದೆ. ಅಶೋಕ ಅವರು ಪ್ರಕರಣ ದಾಖಲಾಗುವ ಮುನ್ನವೇ ಜಮೀನು ವಾಪಸ್ ಕೊಟ್ಟಿದ್ದರು' ಎಂದರು.

ಸುದ್ದಿ 2 ನಿಮಿಷ

48 ಗಂಟೆಗಳಲ್ಲಿ 4,200 ಕಾರ್ಮಿಕರ ಮರುನೇಮಕ: ಎಚ್‌ಡಿಕೆ

ನವದೆಹಲಿ: ವೈಜಾಗ್ ಉಕ್ಕು ಕಾರ್ಖಾನೆಯ 4200 ಗುತ್ತಿಗೆ ಕಾರ್ಮಿಕರನ್ನು 48 ಗಂಟೆಗಳಲ್ಲಿ ಮರು ನೇಮಕ ಮಾಡಲಾಗಿದೆ ಎಂದು ಕೇಂದ್ರ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಸ್ಪಷ್ಟಪಡಿಸಿದ್ದಾರೆ. ಈ ವಿಷಯದಲ್ಲಿ ಕಾಂಗ್ರೆಸ್ ಪಕ್ಷ ರಾಜಕೀಯ ಮಾಡುತ್ತಿದೆ ಎಂದೂ ಆರೋಪಿಸಿದ್ದಾರೆ.

'ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಅವರು ಉಕ್ಕು ಕಾರ್ಖಾನೆಯ ಬಗ್ಗೆ ಸುಳ್ಳುಗಳನ್ನು ಹಬ್ಬಿಸುತ್ತಿದ್ದಾರೆ. ಅವರ ಹೇಳಿಕೆಯಲ್ಲಿ ಹುರುಳಿಲ್ಲ. ರಾಜಕೀಯ, ಮತಬ್ಯಾಂಕ್ ರಾಜಕಾರಣಕ್ಕಾಗಿ ಅವರು ಕಾರ್ಖಾನೆಯ ಕಾರ್ಮಿಕರು, ಸಾರ್ವಜನಿಕರ ಭಾವನೆಗಳ ಜತೆ ಆಡುತ್ತಿದ್ದಾರೆ' ಎಂದು ಕಿಡಿಕಾರಿದ್ದಾರೆ.

ಸೆಪ್ಟೆಂಬರ್ 27ರಂದು ಸೇವೆಯಿಂದ ತೆಗೆದು ಹಾಕಲ್ಪಟ್ಟ ಕಾರ್ಖಾನೆಯ 4,200 ಗುತ್ತಿಗೆ ಕಾರ್ಮಿಕರನ್ನು 48 ಗಂಟೆಗಳ ಒಳಗಾಗಿ ಮರು ನೇಮಕ ಮಾಡಿಕೊಳ್ಳಲಾಗಿದೆ. ಸೆಪ್ಟೆಂಬರ್ 29ಕ್ಕೆ ಎಲ್ಲ ನೌಕರರಿಗೂ ಮತ್ತೆ ಉದ್ಯೋಗ ಕಲ್ಪಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಎಚ್‌ಡಿಕೆ–ಅಗರವಾಲ್ ಚರ್ಚೆ



ನವದೆಹಲಿ: ಬಿಜೆಪಿ ಕರ್ನಾಟಕ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್ ಅವರನ್ನು ಕೇಂದ್ರದ ಭಾರಿ ಕೈಗಾರಿಕೆ ಹಾಗೂ ಉಕ್ಕು ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಗುರುವಾರ ಸಂಜೆ ಭೇಟಿ ಮಾಡಿ 45 ನಿಮಿಷ ಸಮಾಲೋಚನೆ ನಡೆಸಿದರು.

'ಮುಡಾ ಹಗರಣದ ಕುರಿತು ಬಿಜೆಪಿ–ಜೆಡಿಎಸ್ ನಡೆಸಿದ ಜಂಟಿ ಹೋರಾಟಕ್ಕೆ ಉತ್ತಮ ಫಲ ಸಿಕ್ಕಿದೆ. ಇದೊಂದು ಮಾದರಿ ಹೋರಾಟ. ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜೀನಾಮೆ ನೀಡುವವರೆಗೆ ಹೋರಾಟ ಮುಂದುವರಿಸಬೇಕು. ಕಾಂಗ್ರೆಸ್ ಸರ್ಕಾರದ ಹಗರಣ ಹಾಗೂ ವೈಫಲ್ಯಗಳ ಮೇಲೆ ಬೆಳಕು ಚೆಲ್ಲಬೇಕು' ಎಂದು ಅಗರವಾಲ್ ಸಲಹೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ಚನ್ನಪಟ್ಟಣ ಕ್ಷೇತ್ರದ ಉಪಚುನಾವಣೆ ಅಭ್ಯರ್ಥಿ ಆಖೈರುಗೊಳಿಸುವ ಕುರಿತು ಉಭಯ ನಾಯಕರು ಚರ್ಚಿಸಿದರು. ಬಿಜೆಪಿ ಮುಖಂಡ ಸಿ.ಪಿ.ಯೋಗೇಶ್ವರ ನಡೆಸುತ್ತಿರುವ ಚಟುವಟಿಕೆಗಳ ಕುರಿತು ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು. 'ಕಳೆದ ಚುನಾವಣೆಯಲ್ಲಿ ಗೆದ್ದ ಕ್ಷೇತ್ರವನ್ನು ಬಿಜೆಪಿಗೆ ಬಿಟ್ಟುಕೊಡಲು ಸಾಧ್ಯವಿಲ್ಲ. ಕಾರ್ಯಕರ್ತರೊಬ್ಬರಿಗೆ ಟಿಕೆಟ್ ನೀಡಿ ಗೆಲ್ಲಿಸಿಕೊಂಡು ಬರುವ ಹೊಣೆ ನನ್ನದು' ಎಂದು ಕುಮಾರಸ್ವಾಮಿ ಭರವಸೆ ನೀಡಿದರು ಎಂದು ಮೂಲಗಳು ತಿಳಿಸಿವೆ.

ದಿನಕ್ಕೆ 300 ಮಂದಿಗೆ ಚಾರಣಕ್ಕೆ ಅವಕಾಶ: ಸಚಿವ ಈಶ್ವರ ಖಂಡ್ರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಎಲ್ಲ ಚಾರಣ ಪಥಗಳಲ್ಲಿ ಪ್ರತಿದಿನ ತಲಾ 300 ಚಾರಣಿಗರಿಗೆ ಮಾತ್ರ ಅವಕಾಶ ನೀಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಆನ್‌ಲೈನ್ ಮೂಲಕ ಚಾರಣ ಪಥಗಳ ಟಿಕೆಟ್ ಕಾಯ್ದಿರಿಸಲು ಅವಕಾಶ ಕಲ್ಪಿಸುವ ವೆಬ್‌ಸೈಟ್‌ಗೆ ಚಾಲನೆ ನೀಡಿ ಅವರು ಮಾತನಾಡಿದರು.

ಜನವರಿ26ಮತ್ತು27ರಂದುಕುಮಾರಪರ್ವತಕ್ಕೆ 5,000 ದಿಂದ 6,000 ಪ್ರವಾಸಿಗರು ಒಂದೇ ದಿನ ಬಂದ ಕಾರಣ ಗೊಂದಲ ನಿರ್ಮಾಣವಾಗಿತ್ತು. ಇಂತಹ ಗೊಂದಲ ನಿವಾರಿಸಲು ಚಾರಣಿಗರ ಸಂಖ್ಯೆಗೆ ಮಿತಿ ವಿಧಿಸಲಾಗಿದೆ ಎಂದರು.

ಈಗ ಆರಂಭಿಸಿರುವ ವೆಬ್‌ಸೈಟ್‌ನಲ್ಲಿ ರಾಜ್ಯದ ಎಲ್ಲ ಚಾರಣಪಥಗಳ ಟಿಕೆಟ್ ಅನ್ನು ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗಿದೆ. ಇದರಿಂದ ಒಂದು ಚಾರಣ ಪಥಕ್ಕೆ ನಿರ್ದಿಷ್ಟ ದಿನ ಟಿಕೆಟ್ ಸಿಗದವರು ಬೇರೆ ಚಾರಣಪಥವನ್ನು ಆಯ್ಕೆ ಮಾಡಿಕೊಳ್ಳಬಹುದು ಎಂದು ಖಂಡ್ರೆ ಹೇಳಿದರು.

ಒಂದು ದೂರವಾಣಿ ಸಂಖ್ಯೆಯ ಮೂಲಕ 10 ಟಿಕೆಟ್‌ಗಳನ್ನು ಮುಂಗಡವಾಗಿ ಕಾಯ್ದಿರಿಸಲು ಅವಕಾಶವಿದೆ. ಮುಂಗಡ ಕಾಯ್ದಿರಿಸಿದವರು ಏಳು ದಿನಗಳ ಮೊದಲು ರದ್ದು ಮಾಡಿದರೆ ಪೂರ್ಣ ಹಣ ಮರಳಿಸಲು ಅವಕಾಶ ಇದೆ. ನಂತರದ ರದ್ದತಿಗೆ ಪೂರ್ತಿ ಹಣ ಸಿಗುವುದಿಲ್ಲ. ಭಾಗಶಃ ಕಡಿತ ಮಾಡಲಾಗುವುದು ಎಂದು ವಿವರಿಸಿದರು.

'ಈಗ 5 ತಾಣಗಳಿಗೆ ಟಿಕೆಟ್ ಕಾದಿರಿಸಬಹುದಾಗಿದ್ದು, ಈ ತಿಂಗಳ ಕೊನೆಯೊಳಗೆ 40 ಚಾರಣಪಥಗಳನ್ನು ಸೇರಿಸಲಾಗುವುದು. ವನ್ಯಜೀವಿ ಸಫಾರಿ ಮತ್ತು ಬೋಟ್ ಸಫಾರಿಗೂ ಇದರಲ್ಲೇ ಟಿಕೆಟ್ ಕಾಯ್ದಿರಿಸಲು ಅವಕಾಶ ಕಲ್ಪಿಸಲಾಗುವುದು ಎಂದರು. ಚಾರಣ ಪಥಗಳ ಟಿಕೆಟ್ ಕಾಯ್ದಿರಿಸಲು ಅವಕಾಶ ಕಲ್ಪಿಸುವ https://aranyavihaara.karnataka.gov.in ವೆಬ್ ಸೈಟ್

ಮುಡಾ ಕಚೇರಿಯಲ್ಲಿ ದಾಖಲೆಗಳ ಶೋಧ

ಲೋಕಾಯುಕ್ತ ಪೊಲೀಸರಿಂದ ತನಿಖೆ ಮುಂದುವರಿಕೆ; ದಾಖಲೆಗಳ ವಶ

ಪ್ರಜಾವಾಣಿ ವಾರ್ತೆ

ಮೈಸೂರು: ಮುಡಾ ನಿವೇಶನಗಳ ಅಕ್ರಮ ಹಂಚಿಕೆ ಆರೋಪ ಪ್ರಕರಣದ ತನಿಖೆ ನಡೆಸಿರುವ ಲೋಕಾಯುಕ್ತ ಪೊಲೀಸರು ಗುರುವಾರ ಇಲ್ಲಿನ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ದಾಖಲೆಗಳ ಶೋಧ ನಡೆಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ದಸರಾ ಉದ್ಘಾಟನೆಯಲ್ಲಿ ಪಾಲ್ಗೊಂಡಿರುವ ವೇಳೆಯೇ ಲೋಕಾಯುಕ್ತ ಎಸ್.ಪಿ. ಉದೇಶ್ ನೇತೃತ್ವದ ತನಿಖಾಧಿಕಾರಿಗಳ ತಂಡವು ಬೆಳಿಗ್ಗೆ ಮುಡಾ ಕಚೇರಿಗೆ ಧಾವಿಸಿತು. ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ಕ್ಕೆ ಸಂಬಂಧಿಸಿದ ದಾಖಲೆಗಳು, ದೇವನೂರು ಬಡಾವಣೆ ನಿರ್ಮಾಣದ ನಕ್ಷೆ, ಆ ಬಡಾವಣೆಯಲ್ಲಿ ಹಂಚಿಕೆಯಾದ ಹಾಗೂ ಖಾಲಿ ಇರುವ ನಿವೇಶನಗಳು, ಮುಡಾ ಸಭೆಯ ನಡಾವಳಿ ಸೇರಿದಂತೆ ಕೆಲವು ದಾಖಲೆಗಳ ಮೂಲಪ್ರತಿಗಳನ್ನು ಪರಿಶೀಲಿಸಿತು. ವಿವಾದಿತ ಜಮೀನಿಗೆ ಸಂಬಂಧಿಸಿದ ಆಕಾರ್‌ಬಂದ್, ಎಡ–ಬಲ ನಕ್ಷೆ ಮೊದಲಾದ ದಾಖಲೆಗಳನ್ನು ವಶಕ್ಕೆ ಪಡೆಯಿತು. ರಾತ್ರಿವರೆಗೂ ಶೋಧ ಮುಂದುವರಿದಿತ್ತು.

ಮಂಗಳವಾರ ಕೆಸರೆಯಲ್ಲಿ ಸರ್ವೆ ನಡೆಸಿದ್ದ ತಂಡವು, ಗುರುವಾರ ಪಾರ್ವತಿ ಅವರಿಗೆ ಮುಡಾ ನೀಡಿದ್ದ 14 ನಿವೇಶನಗಳ ಸ್ಥಳ ಮಹಜರು ನಡೆಸಲು ಉದ್ದೇಶಿಸಿತ್ತು. ಆದರೆ ದೂರುದಾರ ಸ್ನೇಹಮಯಿ ಕೃಷ್ಣ ಗುರುವಾರ ಬೆಂಗಳೂರಿನಲ್ಲಿ ಇದೇ ಪ್ರಕರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ ಕಚೇರಿಯಲ್ಲಿ ವಿಚಾರಣೆಗೆಂದು ತೆರಳಿದ್ದರಿಂದ ನಿವೇಶನಗಳ ಸ್ಥಳ ಮಹಜರು ಮುಂದೂಡಿತು.

ತಂಡವು ತನಿಖೆಗೆ ಬರುವ ನಿರೀಕ್ಷೆಯಲ್ಲಿದ್ದ ಮುಡಾ ಸಿಬ್ಬಂದಿ ಮಂಗಳವಾರವೇ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ಕಡತಗಳನ್ನೂ ತಾಂತ್ರಿಕ ಶಾಖೆಯಿಂದ ಕಾನೂನು ಶಾಖೆಗೆ ಸ್ಥಳಾಂತರಿಸಿ ಇಟ್ಟುಕೊಂಡಿದ್ದರು. ಮುಡಾ ಆಯುಕ್ತ ರಘುನಂದನ್ ದಸರಾ ಆಹಾರ ಮೇಳದ ವಿಶೇಷಾಧಿಕಾರಿಯಾಗಿದ್ದು, ಮೇಳದಲ್ಲಿ ಪಾಲ್ಗೊಂಡ ಕಾರಣ ಪರಿಶೀಲನೆ ವೇಳೆ ಹಾಜರಿರಲಿಲ್ಲ. ಮುಡಾ ಕಾರ್ಯದರ್ಶಿ ಪ್ರಸನ್ನ ನೇತೃತ್ವದ ತಂಡವು ಅಧಿಕಾರಿಗಳಿಗೆ ಅಗತ್ಯ ಮಾಹಿತಿ ಒದಗಿಸಿತು.

ಮುಡಾ ಹೆಸರಿಗೆ ನಿವೇಶನ ವಾಪಸ್

ಮುಖ್ಯಮಂತ್ರಿ ಸಿದ್ದರಾಮಯ್ಯ ಪತ್ನಿ ಬಿ.ಎಂ. ಪಾರ್ವತಿ ಅವರಿಗೆ ನೀಡಿದ್ದ 14 ನಿವೇಶನಗಳನ್ನು ಮುಡಾ ವಾಪಸ್ ಪಡೆದಿದ್ದು, ಅದರ ಪ್ರಕ್ರಿಯೆಯು ಗುರುವಾರ ಪೂರ್ಣಗೊಂಡಿತು.

ಮುಡಾದಿಂದ ತಮಗೆ ಮಂಜೂರಾಗಿದ್ದ 14 ನಿವೇಶನಗಳನ್ನು ವಾಪಸ್ ನೀಡಿ ಪಾರ್ವತಿ ಮಂಗಳವಾರ ಮುಡಾ ಆಯುಕ್ತರಿಗೆ ಪತ್ರ ಬರೆದಿದ್ದರು. ಅದನ್ನು ಆಧರಿಸಿ ನಿವೇಶನಗಳ ಕ್ರಯಪತ್ರಗಳನ್ನು ಆಯುಕ್ತರು ರದ್ದುಗೊಳಿಸಿ ಆದೇಶಿಸಿದ್ದರು. ನಂತರ, ಉಪನೋಂದಣಾಧಿಕಾರಿ ರುಕ್ಮಿಣಿ ನೇತೃತ್ವದ ತಂಡವು ಪಾರ್ವತಿ ಅವರ ಸಹಿ ಪಡೆದು ಕ್ರಯಪತ್ರಗಳ ನೋಂದಣಿ ರದ್ದುಗೊಳಿಸಿತು.

ಇದೀಗ ನಿವೇಶನಗಳು ಮತ್ತೆ ಮುಡಾ ಹೆಸರಿಗೆ ಖಾತೆಯಾಗಿವೆ. ಉಪನೋಂದಣಿ ಇಲಾಖೆಯ ಋಣಭಾರ ಪತ್ರದಲ್ಲೂ ದಾಖಲೆಗಳು ನಮೂದಾಗಿವೆ.

ಪರಿಷತ್ ಉಪಚುನಾವಣೆ ಐವರಿಂದ ನಾಮಪತ್ರ ಸಲ್ಲಿಕೆ

ಪ್ರಜಾವಾಣಿ ವಾರ್ತೆ

ಮಂಗಳೂರು: ವಿಧಾನ ಪರಿಷತ್‌ನ ದಕ್ಷಿಣ ಕನ್ನಡ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಉಪ ಚುನಾವಣೆಗೆ ಒಟ್ಟು ಐವರು ನಾಮಪತ್ರ ಸಲ್ಲಿಸಿದ್ದಾರೆ.

ಕಿಶೋರ್ ಬಿ.ಆರ್ (ಬಿಜೆಪಿ), ರಾಜು ಪೂಜಾರಿ (ಕಾಂಗ್ರೆಸ್), ಅನ್ವರ್ ಸಾದತ್ ಎಸ್. ಮತ್ತು ಮುಹಮ್ಮದ್ ರಿಯಾಝ್ (ಸೋಷಿಯಲ್ ಡೆಮಾಕ್ರೆಟಿಕ್ ಪಾರ್ಟಿ ಆಫ್ ಇಂಡಿಯಾ) ಅವರು ನಾಮಪತ್ರ ಸಲ್ಲಿಕೆಯ ಕೊನೆಯ ದಿನವಾದ ಗುರುವಾರ ಉಮೇದುವಾರಿಕೆ ಸಲ್ಲಿಸಿದರು.

ಪಕ್ಷೇತರ ಅಭ್ಯರ್ಥಿಯಾಗಿ ದಿನಕರ ಉಳ್ಳಾಲ ಮಂಗಳವಾರ ನಾಮಪತ್ರ ಸಲ್ಲಿಸಿದ್ದರು. ಒಟ್ಟು ಐವರು ಅಭ್ಯರ್ಥಿಗಳಿಂದ ಎಂಟು ನಾಮಪತ್ರಗಳು ಸಲ್ಲಿಕೆಯಾಗಿವೆ.

ಅ.4ರಂದು ನಾಮಪತ್ರ ಪರಿಶೀಲನೆ ನಡೆಯಲಿದ್ದು, ಹಿಂಪಡೆಯಲು ಅ.7 ಕೊನೆಯ ದಿನ. ಅ. 21ರಂದು ಮತದಾನ, 24ರಂದು ಮತ ಎಣಿಕೆ ನಡೆಯಲಿದೆ.

ಈ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಕೋಟ ಶ್ರೀನಿವಾಸ ಪೂಜಾರಿ ಸಂಸದರಾಗಿ ಆಯ್ಕೆಯಾದ ನಂತರ ರಾಜೀನಾಮೆ ನೀಡಿದ್ದರಿಂದ ಈಗ ಉಪ ಚುನಾವಣೆ ನಡೆಯುತ್ತಿದೆ.

'ಬೆಳಗಾವಿಯಲ್ಲೂ ಭೂ ಕಬಳಿಕೆ'

ಬೆಳಗಾವಿ: 'ಬೆಳಗಾವಿ ಜಿಲ್ಲೆ ಸಚಿವರೊಬ್ಬರ ಭೂ ಕಬಳಿಕೆ ಪ್ರಕರಣದ ಕುರಿತು ಶೇ 70ರಷ್ಟು ದಾಖಲೆ ಸಂಗ್ರಹವಾಗಿದೆ. ಆದಷ್ಟು ಬೇಗ ಬಯಲಿಗೆ ಎಳೆಯುವೆ' ಎಂದು ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ತಿಳಿಸಿದರು.

'ಕಾಂಗ್ರೆಸ್ ಸರ್ಕಾರದಲ್ಲಿ ಎಲ್ಲ ಸಚಿವರೂ ಒಂದಿಲ್ಲೊಂದು ಅಕ್ರಮ ಎಸಗಿದ್ದಾರೆ. ಈಗ ಬೆಳಗಾವಿ ಜಿಲ್ಲೆಯ ಅಕ್ರಮ ಬಯಲಿಗೆ ಎಳೆಯುವ ಸರದಿ ಬಂದಿದೆ' ಎಂದು ಅವರು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು. ಆದರೆ, ಸಚಿವರ ಹೆಸರು ಅವರು ಬಹಿರಂಗಪಡಿಸಲಿಲ್ಲ.

'ಕಳಂಕಿತ ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ದಸರಾ ಉತ್ಸವದ ಉದ್ಘಾಟನೆಯಲ್ಲಿ ಭಾಗಿಯಾಗಿದ್ದು ಸರಿಯಲ್ಲ. ಇದು ಪ್ರಜಾತಂತ್ರ ವ್ಯವಸ್ಥೆಗೆ ಮಾಡಿದ ಅಪಚಾರ' ಎಂದರು.

'ಗೋಮಾಂಸ ಸೇವನೆ ಬೆಂಬಲಿಸುತ್ತೀರಾ?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಗೋಮಾಂಸ ತಿನ್ನುವುದನ್ನು ದಿನೇಶ್ ಗುಂಡೂರಾವ್ ಬೆಂಬಲಿಸುತ್ತಾರಾ' ಎಂದು ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ ರವಿ ಪ್ರಶ್ನಿಸಿದರು.



ಸಿ.ಟಿ.ರವಿ

'ಬ್ರಾಹ್ಮಣರಾಗಿದ್ದರೂ ಸಾವರ್ಕರ್ ಗೋಮಾಂಸ ತಿನ್ನುತ್ತಿದ್ದರು' ಎಂಬ ಸಚಿವ ದಿನೇಶ್ ಗುಂಡೂರಾವ್ ಹೇಳಿಕೆ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಅವರು ಯಾವುದನ್ನು ಉತ್ತೇಜಿಸಲು ಹೊರಟಿದ್ದಾರೆ? ಹೊಸ ದಂಧೆ ಆರಂಭಿಸಿದ್ದಾರೆಯೇ' ಎಂದು ಮರುಪ್ರಶ್ನೆ ಹಾಕಿದರು.

'ಒಂದೇ ದಿನ ಅಧಿಕಾರ ಸಿಕ್ಕರೆ ಗೋಹತ್ಯೆ ನಿಷೇಧಿಸುತ್ತೇನೆ ಎಂದು ಗಾಂಧಿ ಹೇಳಿದ್ದರು. ಅವರು ಗಾಂಧಿ ವಿಚಾರಧಾರೆಯನ್ನು ಒಪ್ಪುತ್ತಾರೆಯೇ ಅಥವಾ ಜಿನ್ನಾ ವಿಚಾರಧಾರೆಯನ್ನು ಒಪ್ಪುತ್ತಾರೆಯೇ?' ಎಂದರು.

'ಜಿನ್ನಾ ಮೂಲಭೂತವಾದಿಯಾಗಿದ್ದರು, ಸಾವರ್ಕರ್ ಅಲ್ಲ. ದೇಶವನ್ನು ಬಲಪಡಿಸುವುದು ಅವರ ಗುರಿಯಾಗಿತ್ತು' ಎಂದೂ ಅವರು ಹೇಳಿದ್ದಾರೆ.

ನಗರದಲ್ಲಿ ಬುಧವಾರ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ 'ಗಾಂಧಿಯ ಹಂತಕ' ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ್ದ ದಿನೇಶ್ ಗುಂಡೂರಾವ್, 'ಸಾವರ್ಕರ್ ಆ ಕಾಲಕ್ಕೆ ಆಧುನಿಕ ಚಿಂತನೆಗಳನ್ನು ಹೊಂದಿದ್ದರು. ಬ್ರಾಹ್ಮಣರಾಗಿದ್ದೂ ಮಾಂಸ ತಿನ್ನುತ್ತಿದ್ದರು. ಅವರು ಗೋಮಾಂಸ ತಿನ್ನುತ್ತಿದ್ದರು ಎಂಬ ಮಾತೂ ಇದೆ. ಅವರೇ ಈ ಬಗ್ಗೆ ಹೇಳಿಕೊಂಡಿದ್ದರ ದಾಖಲೆಗಳು ಪುಸ್ತಕದಲ್ಲಿ ಇವೆ' ಎಂದು ಹೇಳಿದ್ದರು.

ದಿನೇಶ್ ಅವರ ಈ ಮಾತು ಇರುವ ವಿಡಿಯೊ ತುಣುಕನ್ನು ಕರ್ನಾಟಕ ಬಿಜೆಪಿ ಘಟಕವು ತನ್ನ ಅಧಿಕೃತ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿದೆ. 'ಸಾವರ್ಕರ್ ಗೋಮಾಂಸ ತಿನ್ನುತ್ತಿದ್ದರು ಎಂದು ನಿಮ್ಮ ಬ್ರಾಹ್ಮಣ ತಂದೆ ಗುಂಡೂರಾವ್ ಹೇಳಿದ್ದರೋ ಅಥವಾ ಮುಸ್ಲಿಂ ಸಮುದಾಯದ ನಿಮ್ಮ ಪತ್ನಿ ತಬುಸ್ಸಮ್ ಹೇಳಿದ್ದರೋ' ಎಂದು ಆ ಪೋಸ್ಟ್‌ನಲ್ಲಿ ಪ್ರಶ್ನಿಸಲಾಗಿದೆ.

ಸಾವರ್ಕರರೇ ಹೇಳಿಕೊಂಡಿದ್ದಾರೆ: ದಿನೇಶ್

'ಸಾವರ್ಕರ್ ಆಧುನಿಕ ಮನಸ್ಥಿತಿ ಹೊಂದಿದ್ದರೂ, ಮೂಲಭೂತವಾದಿಯಾಗಿದ್ದರು. ಮಾಂಸಹಾರಿಯಾಗಿದ್ದರು. ಗೋಹತ್ಯೆಯನ್ನು ಅವರು ವಿರೋಧಿಸಿರಲಿಲ್ಲ. ಇದನ್ನು ಅವರೇ ಹಲವು ಪ್ರಸಂಗಗಳಲ್ಲಿ ಹೇಳಿಕೊಂಡಿದ್ದಾರೆ. ಇದನ್ನ ನಾನು ಹೊಸದಾಗಿ ಹೇಳುತ್ತಿಲ್ಲ' ಎಂದು ಸಚಿವ ದಿನೇಶ್ ಗುಂಡೂರಾವ್ ಸ್ಪಷ್ಟನೆ ನೀಡಿದ್ದಾರೆ.

'ಮಾಧ್ಯಮಗಳು ಇದನ್ನು ವಿವಾದವಾಗಿಸುವ ಅಗತ್ಯವಿಲ್ಲ' ಎಂದೂ ಅವರು ಹೇಳಿದ್ದಾರೆ.



ದಿನೇಶ್ ಗುಂಡೂರಾವ್



ದಸರಾ ಸಂಭ್ರಮ...

ದಸರಾ ಅಂಗವಾಗಿ ಮಂಗಳೂರಿನ ಕುದ್ರೋಳಿ ಶ್ರೀ ಗೋಕರ್ಣನಾಥ ಕ್ಷೇತ್ರದಲ್ಲಿ ಪ್ರತಿಷ್ಠಾಪನೆಗೊಂಡ ಶಾರದಾದೇವಿಯ ಮೂರ್ತಿಯನ್ನು ಗುರುವಾರ ಮೆರವಣಿಗೆಯಲ್ಲಿ ತರಲಾಯಿತು

ಪ್ರಜಾವಾಣಿ ಚಿತ್ರ : ಫಕ್ರುದ್ದೀನ್ ಎಚ್

ಎಚ್‌ಡಿಕೆ ವಿರುದ್ಧ ಎಫ್‌ಐಆರ್

ಒಂದನೇ ಪುಟದಿಂದ...

'2018ರಿಂದಲೂ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದು, ನನ್ನ ಕೆಲಸ ಗುರುತಿಸಿ ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡ ಅವರು ಪದ್ಮನಾಭನಗರದ ನಿವಾಸಕ್ಕೆ ಕರೆಸಿಕೊಂಡು ಕುಮಾರಸ್ವಾಮಿ ಅವರ ಸಮ್ಮುಖದಲ್ಲೇ ಅಭಿನಂದಿಸಿದ್ದರು. ಅಲ್ಲದೇ ಪಕ್ಷದ ಸಾಮಾಜಿಕ ಜಾಲತಾಣ ವಿಭಾಗದ ಉಪಾಧ್ಯಕ್ಷನ್ನಾಗಿಯೂ ನನ್ನನ್ನು ನೇಮಿಸಿದ್ದರು. ನೇಮಕವಾದ ನಂತರ ಪಕ್ಷದ ಹಿರಿಯರ ಜತೆಗೆ ಸಭೆ ನಡೆಸಿದ್ದೇನೆ. 2019ರಲ್ಲಿ ನಿಖಿಲ್ ಕುಮಾರಸ್ವಾಮಿ ಅವರು ಮಂಡ್ಯ ಲೋಕಸಭಾ ಕ್ಷೇತ್ರದಿಂದ ಚುನಾವಣೆಗೆ ಸ್ಪರ್ಧಿಸಿದ್ದಾಗ ವೈಯಕ್ತಿಕವಾಗಿ ಹಣ ಖರ್ಚು ಮಾಡಿದ್ದೆ. ಇತ್ತೀಚೆಗೆ ರಿಯಲ್ ಎಸ್ಟೇಟ್ ಉದ್ಯಮದಲ್ಲಿ ಸಕ್ರಿಯ ಆಗಿದ್ದರಿಂದ ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರಲಿಲ್ಲ. ರಮೇಶ್‌ಗೌಡ ಅವರು ಇತ್ತೀಚೆಗೆ ಮನೆಗೆ ಬಂದು ಪಕ್ಷದ ಚಟುವಟಿಕೆಗಳಲ್ಲಿ ತೊಡಗಿಕೊಳ್ಳವಂತೆ ಮನವಿ ಮಾಡಿದ್ದರು' ಎಂದು ವಿಜಯ್ ತಾತಾ ಮಾಡಿರುವ ಆರೋಪವನ್ನು ಎಫ್‌ಐಆರ್ ಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

'ಕಳೆದ ಆಗಸ್ಟ್ 24ರಂದು ಮನೆಗೆ ಬಂದಿದ್ದ ರಮೇಶ್‌ಗೌಡ ಅವರು ಚನ್ನಪಟ್ಟಣಕ್ಕೆ ನಿಖಿಲ್ ಕುಮಾರಸ್ವಾಮಿ ಅವರಿಗೆ ಟಿಕೆಟ್ ಅಂತಿಮವಾಗಿದೆ ಎಂದು ಮಾಹಿತಿ ನೀಡಿದ್ದರು. ಅದೇ ಸಂದರ್ಭದಲ್ಲಿ ಕುಮಾರಸ್ವಾಮಿ ಅವರೂ ಕರೆಮಾಡಿ, ಉಪ ಚುನಾವಣೆ ಕುರಿತು ಪ್ರಸ್ತಾಪಿಸಿದರು. ಚುನಾವಣೆಯಲ್ಲಿ ಗೆಲುವು ಅನಿವಾರ್ಯವಾಗಿದ್ದು, ₹50 ಕೋಟಿ ಕೊಡುವಂತೆ ಹೇಳಿದರು. ಅಷ್ಟೊಂದು ಹಣ ನನ್ನ ಬಳಿ ಇಲ್ಲ. ರಿಯಲ್ ಎಸ್ಟೇಟ್ ಯೋಜನೆಗಳನ್ನು ಪೂರ್ಣಗೊಳಿಸಬೇಕಿದ್ದು, ಪಕ್ಷದ ಚಟುವಟಿಕೆಯಲ್ಲಿ ತೊಡಗಿಕೊಳ್ಳುವುದಾಗಿ ಹೇಳಿದ್ದೆ' ಎಂದು ವಿವರಿಸಲಾಗಿದೆ.

'ನನ್ನ ಮಾತಿನಿಂದ ಕೋಪಗೊಂಡ ಕುಮಾರಸ್ವಾಮಿ ಅವರು, ಬದುಕುವುದು ಕಷ್ಟವಾಗುತ್ತದೆ ಎಂದು ಬೆದರಿಕೆ ಹಾಕಿ ಕರೆ ಅಂತ್ಯಗೊಳಿಸಿದರು. ರಮೇಶ್‌ಗೌಡ ಅವರು ಕುಮಾರಸ್ವಾಮಿ ಹೇಳಿದಂತೆ ₹50 ಕೋಟಿ ಸಿದ್ಧಪಡಿಸಿಕೊಳ್ಳಬೇಕು. ನಾನೂ ದೇವಾಲಯ ಹಾಗೂ ಶಾಲೆ ನಿರ್ಮಿಸುತ್ತಿದ್ದು, ₹5 ಕೋಟಿ ನೀಡಬೇಕು ಎಂದು ಒತ್ತಾಯಿಸಿದರು. ಹಣ ನೀಡದಿದ್ದರೆ ತೊಂದರೆ ಆಗುತ್ತದೆ ಎಂದು ಬೆದರಿಸಿದರು. ಆಗಸ್ಟ್ 30, ಸೆ.6 ಹಾಗೂ 11ರಂದು ವಾಟ್ಸ್‌ಆ್ಯಪ್ ಮೂಲಕ ಸಂದೇಶ ಕಳುಹಿಸಿದ್ದರು' ಎಂದು ವಿಜಯ್ ನೀಡಿರುವ ದೂರನ್ನು ಎಫ್‌ಐಆರ್‌ನಲ್ಲಿ ವಿವರಿಸಲಾಗಿದೆ.

ರಮೇಶ್‌ಗೌಡರಿಂದ ಪ್ರತಿದೂರು

'ಸುಳ್ಳು ದೂರು ನೀಡಲಾಗಿದೆ' ಎಂದು ಆರೋಪಿಸಿ, ರಮೇಶ್‌ಗೌಡ ಅವರೂ ವಿಜಯ್ ತಾತಾ ವಿರುದ್ಧ ಪ್ರತಿ ದೂರು ನೀಡಿದ್ದಾರೆ.

'ವಿಜಯ್ ತಾತಾ ಅವರು ಜೆಡಿಎಸ್‌ನ ಸಾಮಾಜಿಕ ಜಾಲತಾಣ ವಿಭಾಗದ ಉಪಾಧ್ಯಕ್ಷ ಎಂದು ಸುಳ್ಳು ಹೇಳಿಕೊಂಡು, ಎಚ್.ಡಿ.ಕುಮಾರಸ್ವಾಮಿ ಅವರ ವಿರುದ್ಧ ಆಧಾರರಹಿತ ಆರೋಪ ಮಾಡಿದ್ದಾರೆ' ಎಂದು ಜೆಡಿಎಸ್ ಸಾಮಾಜಿಕ ಜಾಲತಾಣ ವಿಭಾಗದ ರಾಜ್ಯ ಘಟಕದ ಅಧ್ಯಕ್ಷ ಎಚ್.ಎಸ್.ಚಂದನ್ ತಿಳಿಸಿದ್ದಾರೆ.

'ವಿಜಯ್ ಅವರು ಜೆಡಿಎಸ್‌ನ ಸಾಮಾಜಿಕ ಜಾಲತಾಣ ವಿಭಾಗದಲ್ಲಿ ಯಾವುದೇ ಸ್ಥಾನಮಾನ ಹೊಂದಿಲ್ಲ. ಅವರಿಗೂ ಪಕ್ಷಕ್ಕೂ ಯಾವುದೇ ಸಂಬಂಧ ಇಲ್ಲ. ಅವರು ಸುಳ್ಳನ್ನೇ ಬಂಡವಾಳ ಮಾಡಿಕೊಂಡಿದ್ದಾರೆ. ಯಾರದ್ದೋ ಆಮಿಷದಿಂದ ಸುಳ್ಳು ಆರೋಪ ಮಾಡುತ್ತಿದ್ದಾರೆ' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜೀನಾಮೆ ರಾಜಕಾರಣ....

ಒಂದನೇ ಪುಟದಿಂದ...

ಅಷ್ಟಕ್ಕೇ ನಿಲ್ಲದೆ, ಸಿದ್ದರಾಮಯ್ಯನವರ ರಾಜೀನಾಮೆ ಕೇಳುತ್ತಿರುವವರ ವಿರುದ್ಧವೂ ಹರಿಹಾಯ್ದರು. ತಮ್ಮ ಪಕ್ಷದ ನಾಯಕ, ಎಚ್.ಡಿ. ಕುಮಾರಸ್ವಾಮಿ ಹೆಸರು ಉಲ್ಲೇಖಿಸದ ಅವರು, 'ಕೇಂದ್ರದಿಂದ ಆಗಬೇಕಾದ ಕೆಲಸ ಮಾಡಿ' ಎಂದು ಕಿವಿಮಾತು ಹೇಳಿದರು.

ಸಾರ್ವಜನಿಕ ವೇದಿಕೆಯಲ್ಲಿಯೇ ತಮ್ಮ ಎದುರಾಳಿ ಬೆಂಬಲಕ್ಕೆ ನಿಂತಿದ್ದನ್ನು ಕಂಡು ಹುರುಪುಗೊಂಡ ಸಿದ್ದರಾಮಯ್ಯ, 'ಜಿ.ಟಿ.ದೇವೇಗೌಡರು ಇಂದು ತಮ್ಮ ಆತ್ಮಸಾಕ್ಷಿಯ ಕರೆಗೆ ಓಗೊಟ್ಟು, ತಾಯಿ ಚಾಮುಂಡೇಶ್ವರಿಯನ್ನು ಸಾಕ್ಷಿಯಾಗಿಟ್ಟುಕೊಂಡು ದಸರಾ ಹಬ್ಬದ ಬೃಹತ್ ಸಮಾರಂಭದಲ್ಲಿ ಸತ್ಯ ಮಾತನಾಡಿದ್ದಾರೆ. ಜನರ ಆಶೀರ್ವಾದದಿಂದ ನಾವು ಆಡಳಿತಕ್ಕೆ ಬಂದಿದ್ದೇವೆ. ಐದು ವರ್ಷ ರಾಜ್ಯದ ಜನರು ನಮಗೆ ಅವಕಾಶ ಕೊಟ್ಟಿದ್ದಾರೆ. ಎಷ್ಟೇ ತೊಡಕುಗಳು ಎದುರಾದರೂ ತಾಯಿ ಚಾಮುಂಡೇಶ್ವರಿ ಆಶೀರ್ವಾದ ನಮ್ಮ ಮೇಲಿದೆ. ಐದು ವರ್ಷ ನಾವು ಆಡಳಿತ ಮಾಡಿಯೇ ತೀರುತ್ತೇವೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿ.ಟಿ. ದೇವೇಗೌಡರ ಹೇಳಿಕೆ ರಾಜಕೀಯ ಸಪ್ಪಳಕ್ಕೆ ಕಾರಣವಾಗಿದ್ದು, ಪರ–ವಿರೋಧದ ಹೇಳಿಕೆಗಳೂ ವ್ಯಕ್ತವಾಗಿವೆ. ಅವರ ಮಾತಿಗೆ ಬೆಂಗಳೂರಿನಲ್ಲಿ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, 'ರಾಜೀನಾಮೆ ಕೊಡಬೇಕೆಂದರೆ ಕೊಡೋಣ' ಎಂದು ವ್ಯಂಗ್ಯವಾಗಿ ಹೇಳಿದ್ದಲ್ಲದೇ, 'ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ' ಎಂದೂ ಕುಟುಕಿದರು.

'ನಿವೇಶನ ಹಂಚಿಕೆಯಾದಾಗ ಬಿಜೆಪಿಯೇ ಅಧಿಕಾರದಲ್ಲಿತ್ತು. ಸಿದ್ದರಾಮಯ್ಯ ಏಕೆ ರಾಜೀನಾಮೆ ಕೊಡಬೇಕು' ಎಂದು ಬಿಜೆಪಿ ಶಾಸಕ ಎಸ್.ಟಿ. ಸೋಮಶೇಖರ್ ಅವರು ಹೇಳಿದ್ದರು. ಈ ಸಾಲಿಗೆ ಜೆಡಿಎಸ್ ಶಾಸಕರೊಬ್ಬರೂ ಸೇರಿದಂತಾಗಿದೆ.

ಸಿದ್ದರಾಮಯ್ಯ ಹೇಳಿದ್ದೇನು?: ದಸರಾ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಸಿದ್ದರಾಮಯ್ಯ, 'ಮೊದಲ ಬಾರಿಗೆ ಸಚಿವನಾಗಿ 40 ವರ್ಷವಾಯಿತು. ಚಾಮುಂಡೇಶ್ವರಿ ದೇವಿಯ ಕೃಪೆಯಿಂದ ಯಾವ ತಪ್ಪನ್ನೂ ಮಾಡಿಲ್ಲ. ಮಾಡಿದ್ದರೆ ರಾಜಕಾರಣದಲ್ಲಿ ಇಷ್ಟು ದೀರ್ಘ ಕಾಲ ನಿಲ್ಲಲು ಆಗುತ್ತಿರಲಿಲ್ಲ' ಎಂದು ಹೇಳಿದರು.

'ಅಧಿಕಾರಕ್ಕಾಗಿ ವಾಮಮಾರ್ಗ ಹಿಡಿಯುವ ಪ್ರಜಾಪ್ರಭುತ್ವ ವಿರೋಧಿ ನಿಲುವು ಸರಿಯಲ್ಲವೆಂದು, ಬೇರೆ ಪಕ್ಷದಲ್ಲಿದ್ದರೂ, ದೇವೇಗೌಡರು ಸತ್ಯವನ್ನು ಹೇಳಿದ್ದಾರೆ. ಮುಡಾ ಸದಸ್ಯರೂ ಆಗಿರುವ ಅವರ ಮಾತಿನಿಂದ ನನಗೆ ಬಲ ಬಂದಂತಾಗಿದೆ. ಸತ್ಯಕ್ಕೇ ಸದಾ ಜಯ' ಎಂದರು.

'ರಾಜಕೀಯವಾಗಿ ನಾವು ಬೇರೆ ಬೇರೆ ಪಕ್ಷಗಳಲ್ಲಿ ಇರಬಹುದು. ಆದರೆ ಸತ್ಯ ಮತ್ತು ನ್ಯಾಯಕ್ಕೆ ಪಕ್ಷ ಇಲ್ಲ. ಅದು ವ್ಯಕ್ತಿಯ ಆತ್ಮಸಾಕ್ಷಿಗೆ ಸಂಬಂಧಿಸಿದ್ದಾಗಿದೆ' ಎಂದು ಹೇಳಿದರು.

'ನಾನೆಂದೂ ದ್ವೇಷದ ರಾಜಕೀಯ ಮಾಡಿದವನಲ್ಲ. ವಿರೋಧಿ ರಾಜಕಾರಣಿಗಳ ವೈಯಕ್ತಿಕ ಬದುಕು ಇಲ್ಲವೆ, ಅವರ ಕುಟುಂಬವನ್ನು ರಾಜಕೀಯ ಜಿದ್ದಾಜಿದ್ದಿಗೆ ಬಳಸಿಕೊಂಡವನಲ್ಲ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದಲ್ಲಿರುವ ಅನೇಕ ನಾಯಕರಿಗೆ ದೇವೇಗೌಡರು ಹೇಳಿರುವ ಸತ್ಯ ಗೊತ್ತಿದೆ. ಆದರೆ, ತಮ್ಮ ಪಕ್ಷದ ಕೆಲವು ಹಿರಿಯ ನಾಯಕರ ಒತ್ತಡಕ್ಕೆ ಬಲಿಯಾಗಿ ಮೌನವಾಗಿದ್ದಾರೆ. ಅವರು ಕೂಡಾ ಮುಕ್ತವಾಗಿ ಮಾತನಾಡಬೇಕಾದ ಕಾಲ ಸನ್ನಿಹಿತವಾಗಿದೆ' ಎಂದರು.

'ರಾಜಕೀಯವನ್ನು ರಾಜಕೀಯವಾಗಿ ಎದುರಿಸಬೇಕೇ ವಿನಾ ಸುಳ್ಳು ಆರೋಪಗಳ ಮೂಲಕ ಹೆಣೆಯುವ ಷಡ್ಯಂತ್ರದಿಂದ ಅಲ್ಲ. ಈ ಕೆಟ್ಟ ಪರಂಪರೆಯನ್ನು ತಡೆಗಟ್ಟಬೇಕಾದರೆ ನಮ್ಮ ರಾಜಕೀಯ ನಾಯಕರೆಲ್ಲರೂ ಪಕ್ಷಾತೀತವಾಗಿ ಸತ್ಯ ಮತ್ತು ನ್ಯಾಯದ ಪರವಾಗಿ ನಿಲ್ಲುವ ಧೈರ್ಯ ಮಾಡಬೇಕಾಗುತ್ತದೆ. ಈ ಮೂಲಕ ಕರ್ನಾಟಕದಿಂದ ಹೊಸ ರಾಜಕೀಯ ಪರಂಪರೆಗೆ ನಾಂದಿ ಹಾಡಬೇಕಾಗುತ್ತದೆ' ಎಂದು ಪ್ರತಿಪಾದಿಸಿದರು.

'ಎಫ್‌ಐಆರ್ ಆದವರೆಲ್ಲರೂ ರಾಜೀನಾಮೆ ಕೊಡಿ'

ಒಂದನೇ ಪುಟದಿಂದ...

ಸಿದ್ದರಾಮಯ್ಯ ಅವರನ್ನು 'ಚಾಮುಂಡೇಶ್ವರಿಯ ವರಪುತ್ರ' ಎಂದು ಕರೆದ ಅವರು, 'ಎಂಥದ್ದೇ ಸಂದರ್ಭದಲ್ಲೂ ಚಾಮುಂಡೇಶ್ವರಿ ಹಾಗೂ ಜನರ ಆಶೀರ್ವಾದದಿಂದಲೇ ಸಿದ್ದರಾಮಯ್ಯನವರಿಗೆ ಇನ್ನೂ ಹೆಚ್ಚಿನ ಶಕ್ತಿ ಬಂದಿದೆ' ಎಂದರು.

'ಮುಡಾ ಪ್ರಕರಣ ಸಿದ್ದರಾಮಯ್ಯನವರ ಜೀವನದಲ್ಲಿ ನಡೆದಿರುವ ಅನಿರೀಕ್ಷಿತ ಘಟನೆ. ಅವರು ಮಾಡಿರುವ ಒಳ್ಳೆಯ ಕೆಲಸಗಳನ್ನೆಲ್ಲ ಬದಿಗೊತ್ತಿ, ರಾಜೀನಾಮೆ ಕೊಡಿ ಎನ್ನುತ್ತಿದ್ದಾರೆ. ರಾಜೀನಾಮೆ ಕೊಡಿ, ಜೈಲಿಗೆ ಹಾಕಿ ಎಂದು ಯಾವ ಕಾನೂನು ಹೇಳಿದೆ ಎಂಬುದನ್ನು ತೋರಿಸಿ' ಎಂದು ಸವಾಲು ಹಾಕಿದರು. 'ನೀವು ಕೇಂದ್ರದಲ್ಲಿರುವವರು ಅಭಿವೃದ್ಧಿ ಮಾಡಿ. ಕೇಂದ್ರದಿಂದ ತರಬೇಕಾದ್ದೇನು? ರಾಜ್ಯಕ್ಕೆ ಕೊಡಬೇಕಾದ್ದೇನು ಎಂಬುದರತ್ತ ಗಮನ ಹರಿಸಿ' ಎಂದು ಆಗ್ರಹಿಸಿದರು. ದೃಶ್ಯಮಾಧ್ಯಮಗಳ ಕಾರ್ಯವೈಖರಿಯನ್ನೂ ಟೀಕಿಸಿದರು.

'ರಾಜೀನಾಮೆ ಕೊಡೋಣ ಬಿಡಿ'

ಒಂದನೇ ಪುಟದಿಂದ...

'ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ ಅಗತ್ಯವಿಲ್ಲ ಎಂದು ಜಿ.ಟಿ. ದೇವೇಗೌಡ ಹೇಳಿದ್ದಾರೆ. ಸಿದ್ದರಾಮಯ್ಯ ವಿರುದ್ಧ ಎಫ್‌ಐಆರ್ ದಾಖಲಾದ ನಂತರ ನಾನೂ ಅವರ ರಾಜೀನಾಮೆ ಕೇಳಿಲ್ಲ. ಎರಡನೇ ಬಾರಿ ಮುಖ್ಯಮಂತ್ರಿಯಾದ ನಂತರ ಅವರ ನಡವಳಿಕೆ ಬದಲಾಗಿದೆ. ಅಧಿಕಾರ ದುರುಪಯೋಗ ಮಾಡಿಕೊಂಡಿದ್ದಾರೆ. ಹಾಗಾಗಿ, ಅವರ ರಾಜೀನಾಮೆಗೆ ನಿರಂತರ ಒತ್ತಾಯಿಸಿದ್ದೆ. ಈಗ ಅಧಿಕಾರಿಗಳ ಮೂಲಕ ಸಾಕ್ಷ್ಯ ನಾಶ ಮಾಡಲು ಹೊರಟಿದ್ದಾರೆ' ಎಂದು ದೂರಿದರು.

ಜೈಲುಗಳಲ್ಲಿನ ಕೈಪಿಡಿಗೆ ತಿದ್ದುಪಡಿ ತರಲು ರಾಜ್ಯಗಳಿಗೆ ಸುಪ್ರೀಂ ಕೋರ್ಟ್ ನಿರ್ದೇಶನ

ಜಾತಿ ಆಧಾರಿತ ತಾರತಮ್ಯ ಸಹಿಸಲ್ಲ: ಸುಪ್ರೀಂ

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ (ಪಿಟಿಐ): ದೇಶದ ಯಾವುದೇ ಜೈಲಿನಲ್ಲಿ ಜಾತಿ ಆಧಾರಿತ ತಾರತಮ್ಯವನ್ನು ಸಹಿಸಲಾಗದು ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದ್ದು, ಅಂತಹ ಭೇದಭಾವಕ್ಕೆ ಅವಕಾಶ ಮಾಡಿಕೊಡುವ ಜೈಲು ಕೈಪಿಡಿಯಲ್ಲಿರುವ ನಿಬಂಧನೆಗಳನ್ನು ರದ್ದುಗೊಳಿಸಿತು.

ದೇಶದ ಕೆಲವು ರಾಜ್ಯಗಳ ಜೈಲು ಕೈಪಿಡಿಗಳು ಜಾತಿ ಆಧಾರಿತ ತಾರತಮ್ಯ ಪ್ರೋತ್ಸಾಹಿಸುತ್ತಿವೆ ಎಂದು ಆರೋಪಿಸಿ ಸಲ್ಲಿಸಲಾಗಿದ್ದ ಅರ್ಜಿಯ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿಗಳಾದ ಜೆ.ಬಿ ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ, ಮಹತ್ವದ ತೀರ್ಪು ಪ್ರಕಟಿಸಿದೆ.



ಪೀಠ ಹೇಳಿದ್ದು...

- ಜೈಲಿನಲ್ಲಿರುವವರೂ ಘನತೆಯಿಂದ ಬದುಕುವ ಹಕ್ಕು ಹೊಂದಿರುವರು
- ಕೈದಿಗಳನ್ನು ಅಮಾನವೀಯವಾಗಿ ನಡೆಸಿಕೊಂಡರೆ ಆಯಾ ರಾಜ್ಯಗಳನ್ನು ಹೊಣೆಗಾರರನ್ನಾಗಿ ಮಾಡಲಾಗುವುದು.
- ಶೌಚ ಗುಂಡಿ, ಒಳಚರಂಡಿ ಸ್ವಚ್ಛಗೊಳಿಸುವಂತಹ ಅಪಾಯಕಾರಿ ಕೆಲಸಗಳಲ್ಲಿ ಕೈದಿಗಳನ್ನು ತೊಡಗಿ ಸುವಂತಿಲ್ಲ.
- ಪರಿಶಿಷ್ಟ ಜಾತಿ, ಪರಿಶಿಷ್ಟ ಸಮುದಾಯ ಹಾಗೂ ಬುಡಕಟ್ಟು ಸಮುದಾಯದವರ ವಿರುದ್ಧದ ತಾರತಮ್ಯ ಮುಂದುವರಿದಿದ್ದು, ಅವರ ರಕ್ಷಣೆಗಿರುವ ಕಾನೂನುಗಳ ಅನುಷ್ಠಾನವನ್ನು ನ್ಯಾಯಾಲಯಗಳು ಖಾತರಿಪಡಿಸಿಕೊಳ್ಳಬೇಕು.
- ಜಾತಿ ಆಧಾರಿತ ತಾರತಮ್ಯದ ವಿರುದ್ಧದ ಹೋರಾಟವನ್ನು ರಾತ್ರೋರಾತ್ರಿ ಗೆಲ್ಲಲು ಆಗದು. ಅದಕ್ಕೆ ನಿರಂತರ ಪ್ರಯತ್ನ ಮತ್ತು ಸಮರ್ಪಣೆಯ ಅಗತ್ಯವಿದೆ.

‘2016ರ ಕೈಪಿಡಿಯಲ್ಲಿ ಲೋಪ’

‘ಕೇಂದ್ರ ಸರ್ಕಾರದ 2016ರ ಜೈಲು ಕೈಪಿಡಿಯು ಲೋಪದಿಂದ ಕೂಡಿದೆ. 2016ರ ಕೈಪಿಡಿಯು ಕೈದಿಗಳನ್ನು ಜಾತಿ ಆಧಾರದ ಮೇಲೆ ವರ್ಗೀಕರಿಸುವುದನ್ನು ತಡೆಯಬೇಕು. ಕೈದಿಗಳಿಗೆ ಅವರ ಜಾತಿಯ ಆಧಾರದ ಮೇಲೆ ಕೆಲಸಗಳನ್ನು ಹಂಚಿಕೆ ಮಾಡುವುದು ಅಸಾಂವಿಧಾನಿಕ’ ಎಂದು ಪೀಠವು ಹೇಳಿತು.

‘ಕಾರಾಗೃಹಗಳಲ್ಲಿ ಕೈದಿಗಳಿಗೆ ಕೆಲಸದ ಹಂಚಿಕೆ ಮತ್ತು ಅವರನ್ನು ಯಾವ ಕೊಠಡಿಯಲ್ಲಿ ಇರಿಸಬೇಕು ಎಂಬುದನ್ನು ಜಾತಿಯ ಆಧಾರದಲ್ಲಿ ನಿರ್ಧರಿಸುವುದನ್ನು ಒಪ್ಪಲಾಗದು’ ಎಂದು ಪೀಠ ಹೇಳಿತು.

ಈಗ ನೀಡಿರುವ ತೀರ್ಪಿನ ಅನುಸಾರ ಮೂರು ತಿಂಗಳೊಳಗೆ ಜೈಲು ಕೈಪಿಡಿಗಳಲ್ಲಿ ತಿದ್ದುಪಡಿ ಮಾಡುವಂತೆ 10 ರಾಜ್ಯಗಳಿಗೆ ನಿರ್ದೇಶನ ನೀಡಿದ ಪೀಠ, ಅನುಪಾಲನಾ ವರದಿ ಸಲ್ಲಿಸುವಂತೆ ತಾಕೀತು ಮಾಡಿತು.

ಜಾತಿ, ಲಿಂಗ ಅಥವಾ ಅಂಗವೈಕಲ್ಯದ ಆಧಾರದ ಮೇಲೆ ಜೈಲಿನಲ್ಲಿ ಯಾವುದೇ ತಾರತಮ್ಯ ಕಂಡುಬಂದರೆ ಮೂರು ತಿಂಗಳ ಬಳಿಕ ಪ್ರಕರಣವನ್ನು ಸುಪ್ರೀಂ ಕೋರ್ಟ್‌ನ ಸೂಕ್ತ ಪೀಠದ ಮುಂದೆ ಪಟ್ಟಿ ಮಾಡುವಂತೆ ರಿಜಿಸ್ಟ್ರಿಗೆ ನಿರ್ದೇಶನ ನೀಡಿತು. ‘ಸಮಾಜದ ಅಂಚಿನಲ್ಲಿರುವ ಜಾತಿಯಿಂದ ಬಂದವರಿಗೆ ಸ್ವಚ್ಛತೆಯ ಕೆಲಸಗಳನ್ನು ವಹಿಸುವುದು ಮತ್ತು ಮೇಲ್ವರ್ಗದಿಂದ ಬಂದವರಿಗೆ ಅಡುಗೆಯ ಕೆಲಸವನ್ನು ಕೊಡುವುದು ಸಂವಿಧಾನದ 15ನೇ ವಿಧಿಯ ಉಲ್ಲಂಘನೆಯಾಗಿದೆ’ ಎಂದು ಹೇಳಿತು.

ಉತ್ತರ ಪ್ರದೇಶದ ಜೈಲು ಕೈಪಿಡಿಯಲ್ಲಿರುವ ಜಾತಿ ತಾರತಮ್ಯದ ನಿಯಮಗಳನ್ನು ಉಲ್ಲೇಖಿಸಿದ ಪೀಠ, ‘ಯಾವುದೇ ವರ್ಗವು ಸ್ಕ್ಯಾವೆಂಜರ್ ಅಥವಾ ಕೀಳು ಕೆಲಸ ಮಾಡುವ ವರ್ಗವಾಗಿ ಹುಟ್ಟಿರುವುದಿಲ್ಲ. ಕೈದಿಗಳನ್ನು ಜಾತಿಯ ಅಧಾರದಲ್ಲಿ ಅಡುಗೆ ಮಾಡುವ ಮತ್ತು ಅಡುಗೆ ಮಾಡದ ವರ್ಗದವರು ಎಂದು ಬೇರ್ಪಡಿಸುವುದು ಅಸ್ಪೃಶ್ಯತೆಯ ಆಚರಣೆಯಲ್ಲದೆ ಬೇರೇನೂ ಅಲ್ಲ’ ಎಂದಿತು.

ಮಹಾರಾಷ್ಟ್ರದ ಕಲ್ಯಾಣ್‌ನ ನಿವಾಸಿ ಸುಕನ್ಯಾ ಶಾಂತಾ ಅವರು ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಈ ತೀರ್ಪು ನೀಡಿದೆ.

ತಿರುಪತಿ ಲಾಡು ವಿವಾದ: ವಿಚಾರಣೆ ಇಂದು

ತಿರುಪತಿ ಲಾಡು ವಿವಾದದ ಬಗ್ಗೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಯಬೇಕೆಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ಕೈಗೆತ್ತಿಕೊಳ್ಳಲಿದೆ.

ಅರ್ಜಿಗಳ ವಿಚಾರಣೆ ಗುರುವಾರ ಮಧ್ಯಾಹ್ನ 3.30ಕ್ಕೆ ನಿಗದಿಯಾಗಿತ್ತು. ಆದರೆ ವಿಚಾರಣೆಯನ್ನು ಶುಕ್ರವಾರ ಬೆಳಿಗ್ಗೆ 10.30ಕ್ಕೆ ಕೈಗೆತ್ತಿಕೊಳ್ಳುವಂತೆ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು ಮಾಡಿದ ಮನವಿಯನ್ನು ಪೀಠವು ಪುರಸ್ಕರಿಸಿತು.

ಈಶಾ ಫೌಂಡೇಷನ್: ಕ್ರಮಕ್ಕೆ ತಡೆ

ನವದೆಹಲಿ (ಪಿಟಿಐ): ಜಗ್ಗಿ ವಾಸುದೇವ ಅವರ ‘ಈಶಾ ಫೌಂಡೇಷನ್’ ವಿರುದ್ಧ ಆರಂಭಿಸಿರುವ ಕ್ರಮವನ್ನು ನಿಲ್ಲಿಸಬೇಕು ಎಂದು ತಮಿಳುನಾಡು ಪೊಲೀಸರಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚನೆ ನೀಡಿದೆ.

ಇಬ್ಬರು ಹೆಣ್ಣುಮಕ್ಕಳನ್ನು ‘ಈಶಾ ಫೌಂಡೇಷನ್’ನ ಆಶ್ರಮದಲ್ಲಿ ಬಲವಂತವಾಗಿ ಇರಿಸಿಕೊಳ್ಳಲಾಗಿದೆ ಎಂಬ ದೂರಿನ ಕುರಿತು ತನಿಖೆ ನಡೆಸುವಂತೆ ಪೊಲೀಸರಿಗೆ ಮದ್ರಾಸ್ ಹೈಕೋರ್ಟ್ ಸೂಚನೆ ನೀಡಿತ್ತು.

ಮದ್ರಾಸ್ ಹೈಕೋರ್ಟ್‌ನಲ್ಲಿ ದಾಖಲಾಗಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ಸುಪ್ರೀಂ ಕೋರ್ಟ್ ತನ್ನಲ್ಲಿಗೆ ವರ್ಗಾಯಿಸಿಕೊಂಡಿದೆ. ತಮ್ಮ ಇಬ್ಬರು ಹೆಣ್ಣುಮಕ್ಕಳನ್ನು ‘ಈಶಾ ಫೌಂಡೇಷನ್’ ಆಶ್ರಮದಲ್ಲಿ ಒತ್ತಾಯಪೂರ್ವಕವಾಗಿ ಇರಿಸಿಕೊಳ್ಳಲಾಗಿದೆ ಎಂದು ವ್ಯಕ್ತಿಯೊಬ್ಬರು ಈ ಹೇಬಿಯಸ್ ಕಾರ್ಪಸ್ ಅರ್ಜಿ ಸಲ್ಲಿಸಿದ್ದಾರೆ. ‘ಪೊಲೀಸ್ ಪಡೆಯನ್ನು ಇಂತಹ ಸಂಸ್ಥೆಗಳೊಳಗೆ ಪ್ರವೇಶಿಸಲು ಅವಕಾಶ ಕೊಡಲಾಗದು’ ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ಈಶಾ ಫೌಂಡೇಷನ್’ ವಿರುದ್ಧ ದಾಖಲಾಗಿರುವ ಎಲ್ಲ ಪ್ರಕರಣಗಳ ವಿವರ ಸಂಗ್ರಹಿಸುವಂತೆ ಕೊಯಮತ್ತೂರು ಪೊಲೀಸರಿಗೆ ಮದ್ರಾಸ್ ಹೈಕೋರ್ಟ್ ನೀಡಿದ್ದ ಸೂಚನೆಯನ್ನು ಪ್ರಶ್ನಿಸಿ ‘ಈಶಾ ಫೌಂಡೇಷನ್’ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದೆ. ಅದು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ನೇತೃತ್ವದ ಪೀಠವು ನಡೆಸಿತು. ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಮನೋಜ್ ಮಿಶ್ರಾ ಅವರೂ ಈ ಪೀಠದಲ್ಲಿದ್ದಾರೆ.

ಮದ್ರಾಸ್ ಹೈಕೋರ್ಟ್ ಸೆಪ್ಟೆಂಬರ್ 30ರ ಆದೇಶದಲ್ಲಿ ಸೂಚಿಸಿರುವಂತೆ ವಸ್ತುಸ್ಥಿತಿ ವರದಿಯನ್ನು ಪೊಲೀಸರು ತನಗೆ ಸಲ್ಲಿಸಬೇಕು ಎಂದು ಪೀಠವು ಹೇಳಿದೆ. ಈಶಾ ಫೌಂಡೇಷನ್ ಪರವಾಗಿ ವಾದಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ, ಅಂದಾಜು 150 ಪೊಲೀಸರು ಆಶ್ರಮ ಪ್ರವೇಶಿಸಿದ್ದಾರೆ, ಅವರು ಪ್ರತಿ ಮೂಲೆಯನ್ನೂ ತಪಾಸಣೆಗೆ ಒಳಪಡಿಸಿದ್ದಾರೆ ಎಂದು ಹೇಳಿದರು.

ಇಬ್ಬರು ಹೆಣ್ಣುಮಕ್ಕಳ ಜೊತೆ ವಿಡಿಯೊ ಕಾನ್ಫರೆನ್ಸ್ ಮೂಲಕ ಮಾತುಕತೆ ನಡೆಸಿದ ಪೀಠವು, ತಾವು ಆಶ್ರಮದಲ್ಲಿ ಸ್ವಇಚ್ಛೆಯಿಂದ ವಾಸಿಸುತ್ತಿರುವುದಾಗಿ ಅವರು ಹೇಳಿರುವುದನ್ನು ದಾಖಲಿಸಿಕೊಂಡಿತು. ವಿಚಾರಣೆಯನ್ನು ಅಕ್ಟೋಬರ್ 18ಕ್ಕೆ ಮುಂದೂಡಲಾಗಿದೆ.

ಇ.ಡಿ. ವಿಚಾರಣೆಗೆ ಅಜರುದ್ದೀನ್ ಗೈರು

ಹೈದರಾಬಾದ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ, ಕಾಂಗ್ರೆಸ್ ಮುಖಂಡ ಮೊಹಮ್ಮದ್ ಅಜರುದ್ದೀನ್ ಹೈದರಾಬಾದ್ ಕ್ರಿಕೆಟ್ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ ಹಣಕಾಸಿನ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯದ (ಇ.ಡಿ) ವಿಚಾರಣೆಗೆ ಗುರುವಾರ ಹಾಜರಾಗಲಿಲ್ಲ.



ಅಕ್ಟೋಬರ್ 3ರಂದು ಹಾಜರಾಗುವಂತೆ ಅಜರುದ್ದೀನ್ ಅವರಿಗೆ ಇ.ಡಿ ನೋಟಿಸ್ ನೀಡಿತ್ತು. ‘ನನಗೆ ತನಿಖೆಗೆ ಹಾಜರಾಗಲು ಇನ್ನಷ್ಟು ಸಮಯ ಬೇಕು’ ಎಂದು ಅಜರುದ್ದೀನ್ ಅವರು ತನಿಖಾ ಸಂಸ್ಥೆಗೆ ಮನವಿ ಮಾಡಿದರು. ಆದ್ದರಿಂದ ಅಕ್ಟೋಬರ್ 8ರಂದು ವಿಚಾರಣೆಗೆ ಹಾಜರಾಗುವಂತೆ ಅಜರುದ್ದೀನ್ ಅವರಿಗೆ ಇ.ಡಿ ನೋಟಿಸ್ ನೀಡಿದೆ. ಅಜರುದ್ದೀನ್ ಅವರು ಕ್ರಿಕೆಟ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಹಣಕಾಸಿನ ಅವ್ಯವಹಾರ ನಡೆದಿದೆ ಎನ್ನುವ ಆರೋಪದಲ್ಲಿ, ಕಳೆದ ವರ್ಷದ ನವೆಂಬರ್‌ನಲ್ಲಿ ತನಿಖಾ ಸಂಸ್ಥೆಯು ಕ್ರಿಕೆಟ್ ಸಂಸ್ಥೆ ಕಚೇರಿಯ ಮೇಲೆ ದಾಳಿ ನಡೆಸಿತ್ತು.

ವೈವಾಹಿಕ ಅತ್ಯಾಚಾರ: ಪತಿ ವಿರುದ್ಧ ಕಾನೂನು ಕ್ರಮ

‘ವಿನಾಯಿತಿ ರದ್ದತಿಯಿಂದ ವ್ಯಾಪಕ ಪರಿಣಾಮ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ಒಬ್ಬ ವ್ಯಕ್ತಿ ತನ್ನ ಪತ್ನಿಯೊಂದಿಗೆ ನಡೆಸುವ ಸಂಭೋಗ ಅಥವಾ ಲೈಂಗಿಕ ಕ್ರಿಯೆಗಳನ್ನು ದಂಡನಾರ್ಹ ‘ಅತ್ಯಾಚಾರ’ ಎಂಬುದಾಗಿ ಪರಿಗಣಿಸಿದಲ್ಲಿ, ಅದು ವೈವಾಹಿಕ ಸಂಬಂಧದ ಮೇಲೆ ವ್ಯಾಪಕ ಪರಿಣಾಮ ಬೀರಲಿದೆ’ ಎಂದು ಕೇಂದ್ರ ಸರ್ಕಾರ ಸುಪ್ರೀಂ ಕೋರ್ಟ್‌ಗೆ ಗುರುವಾರ ತಿಳಿಸಿದೆ.



ವೈವಾಹಿಕ ಸಂಬಂಧದಲ್ಲಿ ಅತ್ಯಾಚಾರ ನಡೆದರೆ, ಕಾನೂನಿನ ತತ್ವಗಳ ಆಧಾರದಲ್ಲಿ, ಪತಿಗೆ ಕ್ರಿಮಿನಲ್ ಕ್ರಮದಿಂದ ವಿನಾಯಿತಿ ನೀಡಿರುವುದನ್ನು ತೆಗೆದುಹಾಕಿದಲ್ಲಿ ಅದು ವೈವಾಹಿಕ ಸಂಬಂಧದ ಮೇಲೆ ಅಗಾಧ ಪರಿಣಾಮ ಬೀರಲಿದೆ ಎಂದೂ ತಿಳಿಸಿದೆ.

‘ಸಾಮಾಜಿಕ ಮತ್ತು ಕೌಟುಂಬಿಕ ಸಂರಚನೆಯಲ್ಲಿ ವೇಗದ ಬದಲಾವಣೆಗಳನ್ನು ಕಾಣುತ್ತಿದ್ದೇವೆ. ಈಗ, ಈ ವಿಷಯಕ್ಕೆ ಸಂಬಂಧಿಸಿದ ಕಾನೂನಿನಲ್ಲಿನ ಅವಕಾಶಗಳಲ್ಲಿ ಮಾಡುವ ತಿದ್ದುಪಡಿಗಳ ದುರ್ಬಳಕೆಯಾಗುತ್ತದೆ ಎಂಬುದನ್ನು ಅಲ್ಲಗಳೆಯಲಾಗದು’ ಎಂದೂ ಕೇಂದ್ರ ಸರ್ಕಾರ ತಿಳಿಸಿದೆ.

ವೈವಾಹಿಕ ಸಂಬಂಧದಲ್ಲಿ ನಡೆಯುವ ಅತ್ಯಾಚಾರಕ್ಕೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಪ್ರತಿಕ್ರಿಯೆಯಲ್ಲಿ ಕೇಂದ್ರವು ಈ ಅಭಿಪ್ರಾಯ ತಿಳಿಸಿದೆ.

‘ನಮ್ಮ ಸಾಮಾಜಿಕ ಮತ್ತು ಕಾನೂನು ದೃಷ್ಟಿಕೋನದಿಂದ ವಿವಾಹ ಸಂಬಂಧದ ಸ್ವರೂಪವನ್ನು ಅವಲೋಕಿಸಿದಲ್ಲಿ ಹಾಗೂ ಇಂತಹ ಸಂಬಂಧದ ರಕ್ಷಣೆ ಅಗತ್ಯ ಎಂಬುದು ಕಾನೂನಿನ ಆಶಯವೂ ಆಗಿದ್ದಾಗ, ವೈವಾಹಿಕ ಅತ್ಯಾಚಾರ ಕುರಿತಂತೆ ಕಾನೂನು ಕ್ರಮದಿಂದ ಪತಿಗೆ ನೀಡಿರುವ ವಿನಾಯಿತಿಯನ್ನು ಮುಂದುವರಿಸಬೇಕು’ ಎಂದೂ ಕೇಂದ್ರ ತಿಳಿಸಿದೆ.

ಕೇಂದ್ರದ ಪ್ರಮಾಣಪತ್ರದಲ್ಲಿನ ಪ್ರಮುಖ ಅಂಶಗಳು

- ವೈವಾಹಿಕ ಸಂಬಂಧದಲ್ಲಿ ಅತ್ಯಾಚಾರ ನಡೆದರೆ, ಪತಿಗೆ ಕ್ರಿಮಿನಲ್ ಕ್ರಮದಿಂದ ವಿನಾಯಿತಿ ನೀಡಿರುವುದು ನ್ಯಾಯಯುತವಾಗಿದೆ. ಈ ವಿಷಯವನ್ನು ಕಟ್ಟುನಿಟ್ಟಿನ ಕಾನೂನಾತ್ಮಕ ದೃಷ್ಟಿಯಿಂದ ನೋಡುವ ಬದಲು ಸಮಗ್ರವಾಗಿ ನೋಡಬೇಕು
- ಪತ್ನಿಯ ಒಪ್ಪಿಗೆಗೆ ವಿರುದ್ಧವಾಗಿ ನಡೆದುಕೊಳ್ಳುವ ಮೂಲಭೂತ ಹಕ್ಕನ್ನು ಪತಿ ಹೊಂದಿಲ್ಲ. ಆದರೆ, ವೈವಾಹಿಕ ಸಂಬಂಧದಲ್ಲಿ, ‘ಅತ್ಯಾಚಾರ’ ಸ್ವರೂಪದಲ್ಲಿ ಅಪರಾಧವಾಗಿ ಪರಿಗಣಿಸುವುದು ವಿಪರೀತ ಕಠಿಣವೆಂದೇ ಪರಿಗಣಿಸಬಹುದು. ಹೀಗಾಗಿ, ಇದು ಅಳತೆಮೀರಿದ ಕ್ರಮವೆನಿಸಲಿದೆ
- ಒಬ್ಬ ವಿವಾಹಿತ ಮಹಿಳೆ ಹಾಗೂ ಆಕೆಯ ಪತಿಗೆ ಸಂಬಂಧಿಸಿದ ಪ್ರಕರಣವನ್ನು ಇತರ ಪ್ರಕರಣಗಳಂತೆ ಪರಿಗಣಿಸಬಾರದು. ಮಹಿಳೆ ಮೇಲಿನ ಅತ್ಯಾಚಾರಕ್ಕೆ ಸಂಬಂಧಿಸಿ ಪ್ರಕರಣಗಳಲ್ಲಿ ಕಾನೂನು ಕ್ರಮಕ್ಕೆ ಬೇರೆ ಬೇರೆ ಅವಕಾಶಗಳಿವೆ
- ವೈವಾಹಿಕ ಸಂಬಂಧದಲ್ಲಿ, ಲೈಂಗಿಕ ಕ್ರಿಯೆಗೆ ಸಂಬಂಧಿಸಿ ಪರಸ್ಪರರಲ್ಲಿ ನಿರಂತರ ನಿರೀಕ್ಷೆಗಳು ಇರುತ್ತವೆ. ಇಂತಹ ನಿರೀಕ್ಷೆಯು ಲೈಂಗಿಕ ಕ್ರಿಯೆಗಾಗಿ ಪತ್ನಿಯನ್ನು ಬಲವಂತ ಮಾಡುವ ಅಥವಾ ಆಕೆಯ ಇಚ್ಛೆಗೆ ವಿರುದ್ಧವಾಗಿ ನಡೆದುಕೊಳ್ಳುವ ಹಕ್ಕನ್ನು ಪತಿಗೆ ನೀಡುವುದಿಲ್ಲ. ಆದರೆ, ಇತರ ಅನ್ಯೋನ್ಯ ಸಂಬಂಧ ಅಥವಾ ಅಪರಿಚಿತನಿಂದ ಲೈಂಗಿಕ ಕ್ರಿಯೆಗೆ ಒತ್ತಾಯ ಕಂಡುಬಂದಲ್ಲಿ ಪ್ರಕರಣವೇ ಬೇರೆಯಾಗುತ್ತದೆ. ಆಗ, ವೈವಾಹಿಕ ಸಂಬಂಧದಲ್ಲಿಯೇ ಒಪ್ಪಿತ ಲೈಂಗಿಕತೆ ಹಾಗೂ ವಿವಾಹೇತರ ಸಂಬಂಧದಲ್ಲಿ ಲೈಂಗಿಕತೆ ನಡುವಿನ ವ್ಯತ್ಯಾಸವನ್ನು ನಿರೂಪಿಸಲು ಕಾನೂನು ರಚನೆಗೆ ಆಧಾರವಾಗಲಿದೆ

ಹರಿಯಾಣ ವಿಧಾನಸಭೆ ಚುನಾವಣೆ: ಬಹಿರಂಗ ಪ್ರಚಾರ ಅಂತ್ಯ • ನಾಳೆ ಮತದಾನ

ಬಿಜೆಪಿ ಕನಸು ಕಮರಿಸಲು ‘ಕೈ’ ಯತ್ನ

ಪ್ರಜಾವಾಣಿ ವಾರ್ತೆ

ನವದೆಹಲಿ: ಹರಿಯಾಣ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಗುರುವಾರ ತೆರೆ ಬಿದ್ದಿದೆ. ಮೂರನೇ ಅವಧಿಗೆ ಅಧಿಕಾರಕ್ಕೆ ಏರುವುದಕ್ಕಾಗಿ ಬಿಜೆಪಿಯಿಂದ ಬಿರುಸಿನ ಪ್ರಚಾರ ನಡೆದರೆ, ಅಧಿಕಾರ ಗದ್ದುಗೆ ಏರುವ ಕೇಸರಿ ಪಕ್ಷದ ಕನಸು ಛಿದ್ರ ಮಾಡಬೇಕು ಎಂಬ ಉಮೇದಿನೊಂದಿಗೆ ಕಾಂಗ್ರೆಸ್ ಭರ್ಜರಿ ಪ್ರಚಾರ ನಡೆಸಿದೆ.

90 ಶಾಸಕರ ಆಯ್ಕೆಗಾಗಿ ಶನಿವಾರ ಮತದಾನ ನಡೆಯಲಿದ್ದು, 2 ಕೋಟಿಯಷ್ಟು ಮತದಾರರು ತಮ್ಮ ಹಕ್ಕು ಚಲಾಯಿಸಲಿದ್ದಾರೆ. ಅ.8ರಂದು ಮತ ಎಣಿಕೆ ನಡೆಯಲಿದೆ.

2019ರಲ್ಲಿ ನಡೆದ ಚುನಾವಣೆಯಲ್ಲಿ ಬಹುಮತಕ್ಕೆ ಅಗತ್ಯವಿರುವಷ್ಟು ಸ್ಥಾನಗಳನ್ನು ಪಡೆಯುವಲ್ಲಿ ಬಿಜೆಪಿ ವಿಫಲವಾಗಿತ್ತು. ಆದರೆ, ಜೆಜೆಪಿಯೊಂದಿಗೆ ಮೈತ್ರಿ ಮಾಡಿಕೊಂಡಿದ್ದರಿಂದ ಸರ್ಕಾರ ರಚನೆಗೆ ಬೇಕಾಗಿದ್ದ 46 ಸ್ಥಾನಗಳ ಗಡಿಯನ್ನು ದಾಟಿ, ಅಧಿಕಾರಕ್ಕೆ ಏರಿತ್ತು.

ಈಗ, ರಾಜಕೀಯ ಸಮೀಕರಣ ಬದಲಾಗಿದ್ದು, ವರ್ಷದ ಆರಂಭದಲ್ಲಿ ಬಿಜೆಪಿ ಜೊತೆಗಿನ ಸಖ್ಯವನ್ನು ಜೆಜೆಪಿ ತೊರೆದಿದೆ.

ಬಹಿರಂಗ ಪ್ರಚಾರ ಅಂತ್ಯಗೊಂಡ ಗುರುವಾರ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ನೂಹ್ ಮತ್ತು ಭವರಿಯಾದಲ್ಲಿ ಮತ ಯಾಚನೆ ಮಾಡಿದರು.



ಹರಿಯಾಣದ ಮಹೇಂದ್ರಗಢ ಜಿಲ್ಲೆಯಲ್ಲಿ ಗುರುವಾರ ನಡೆದ ಪ್ರಚಾರ ಸಭೆಯಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರೊಂದಿಗೆ ಪಕ್ಷದ ಮುಖಂಡರಾದ ಕೆ.ಸಿ.ವೇಣುಗೋಪಾಲ್ ಹಾಗೂ ಭೂಪಿಂದರ್ ಸಿಂಗ್ ಚರ್ಚೆಯಲ್ಲಿ ತೊಡಗಿದ್ದರು –ಪಿಟಿಐ ಚಿತ್ರ

ಬಿಜೆಪಿಯ ಹಿರಿಯ ನಾಯಕರ ಪೈಕಿ, ಪ್ರಧಾನಿ ನರೇಂದ್ರ ಮೋದಿ ಕೊನೆಯ ಎರಡು ದಿನ ರಾಜ್ಯದಲ್ಲಿನ ಪ್ರಚಾರದಿಂದ ದೂರ ಉಳಿದಿದ್ದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಹಿಂದಿನ ನಾಲ್ಕು ದಿನ ಪ್ರಚಾರ ಕೈಗೊಂಡಿರಲಿಲ್ಲ.

ಹಣಾಹಣಿ: ಹರಿಯಾಣದಲ್ಲಿ ಈ ಚುನಾವಣೆಯಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ. ಇನ್ನೊಂದೆಡೆ, ಆಮ್ ಆದ್ಮಿ ಪಕ್ಷ (ಎಎಪಿ), ಜೆಜೆಪಿ–ಎಎಸ್‌ಪಿ(ಕಾನ್ಶೀರಾಂ) ಮತ್ತು ಐಎನ್‌ಎಲ್‌ಡಿ–ಬಿಎಸ್‌ಪಿ ಅಭ್ಯರ್ಥಿಗಳು ಕೂಡ ಕಣದಲ್ಲಿದ್ದಾರೆ.

ಯಾವ ಪಕ್ಷ ಇಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಬಹುದು ಎಂಬ ಲೆಕ್ಕಾಚಾರ ಇದ್ದರೂ ಓ.ಪಿ.ಚೌಟಾಲಾ ಅವರ ಪುತ್ರರ ನೇತೃತ್ವದ ಐಎನ್‌ಎಲ್‌ಡಿ ಮತ್ತು ಜೆಜೆಪಿ ಎಷ್ಟು ಸ್ಥಾನಗಳನ್ನು ಗೆಲ್ಲಲಿವೆ ಎಂಬುದರ ಮೇಲೆಯೇ ಎಲ್ಲರ ಗಮನ ಕೇಂದ್ರೀಕೃತವಾಗಿದೆ.

ಕಾಂಗ್ರೆಸ್ ಸೇರಿದ ಮತ್ತೊಬ್ಬ ಎಎಪಿ ಅಭ್ಯರ್ಥಿ (ಚಂಡೀಗಢ ವರದಿ): ಹರಿಯಾಣದಲ್ಲಿ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಮತ್ತೊಂದು ಹಿನ್ನಡೆಯಾಗಿದೆ. ನಿಲೋಖೇಡಿ (ಮೀಸಲು) ಕ್ಷೇತ್ರದ ಎಎಪಿ ಅಭ್ಯರ್ಥಿ ಅಮರ್ ಸಿಂಗ್ ಅವರು ಕಾಂಗ್ರೆಸ್ ಸೇರಿದ್ದಾರೆ. ಕೆಲವು ದಿನಗಳ ಹಿಂದಷ್ಟೇ ಎಎಪಿಯ ಫರೀದಾಬಾದ್ ಅಭ್ಯರ್ಥಿ ಪ್ರವೇಶ್ ಮೆಹ್ತಾ ಅವರು ಬಿಜೆಪಿಗೆ ಸೇರಿದ್ದರು.

ಪಕ್ಷಗಳ ಲೆಕ್ಕಾಚಾರ

ಕಾಂಗ್ರೆಸ್, ಬಿಜೆಪಿ ಸೇರಿದಂತೆ ಎಲ್ಲ ಪಕ್ಷಗಳು ವಿವಿಧ ವಿಷಯಗಳನ್ನು ಮುಂದಿಟ್ಟುಕೊಂಡು ಮತ ಯಾಚಿಸಿವೆ.

ಕಾಂಗ್ರೆಸ್ ಪಕ್ಷ ಪ್ರಮುಖವಾಗಿ ‘ಜವಾನ್–ಕಿಸಾನ್–ಪೈಲ್ವಾನ್’ (ಸೈನಿಕ, ರೈತ ಹಾಗೂ ಕುಸ್ತಿಪಟು) ಅವರಲ್ಲಿನ ಆಕ್ರೋಶದ ಲಾಭ ಪಡೆದು ಬಿಜೆಪಿಯನ್ನು ಮಣಿಸುವ ಕಾರ್ಯತಂತ್ರ ರೂಪಿಸಿದೆ.

ಕೃಷಿ ಉತ್ಪನ್ನಗಳ ಕನಿಷ್ಠ ಬೆಂಬಲ ಬೆಲೆಗೆ (ಎಂಎಸ್‌ಪಿ) ಕಾನೂನಾತ್ಮಕ ಬೆಂಬಲ ನೀಡದಿರುವುದು ಹಾಗೂ ತಾವು ನಡೆಸಿದ ಪ್ರತಿಭಟನೆಯನ್ನು ನಿರ್ವಹಣೆ ಮಾಡಿದ ವೈಖರಿ ವಿಚಾರವಾಗಿ ರೈತರಲ್ಲಿ ಬಿಜೆಪಿ ಕುರಿತು ಅಸಮಾಧಾನ ಇದೆ. ಇನ್ನು, ‘ಅಗ್ನಿವೀರ’ ಯೋಜನೆ ಹಾಗೂ ಮಹಿಳಾ ಕುಸ್ತಿಪಟು ಗಳಿಗೆ ಲೈಂಗಿಕ ದೌರ್ಜನ್ಯ ನೀಡಿದ ಆರೋಪ ಕುರಿತು ನಡೆದ ಕುಸ್ತಿಪಟುಗಳ ಪ್ರತಿಭಟನೆಯನ್ನು ನಿರ್ವಹಿಸಿದ ವಿಚಾರವಾಗಿಯೂ ಬಿಜೆಪಿ ಮೇಲೆ ರೈತರಿಗೆ ಸಿಟ್ಟಿದೆ.

ಆದರೆ, ಜಾಟ್ ಹೊರತುಪಡಿಸಿದಂತೆ ಇತರ ಸಮುದಾಯಗಳ ಮತಗಳು ಈ ಬಾರಿ ತನ್ನ ಕೈಹಿಡಿಯಲಿವೆ. ಇದು, ತಾನು ಎದುರಿಸುತ್ತಿರುವ ಆಡಳಿತ ವಿರೋಧಿ ಅಲೆ ಹಾಗೂ ಕಾಂಗ್ರೆಸ್‌ನ ತಂತ್ರಗಾರಿಕೆ ಮೆಟ್ಟಿ ನಿಲ್ಲವುದಕ್ಕೂ ನೆರವಾಗಲಿದೆ ಎಂಬುದು ಬಿಜೆಪಿಯ ನಂಬಿಕೆ.

ಪ್ರಮುಖ ಅಂಶಗಳು

- ಕಾಂಗ್ರೆಸ್, ಬಿಜೆಪಿ ಎರಡೂ ಪಕ್ಷಗಳಿಗೆ ಬಣಗಳ ಬಿಸಿ
- ಕಾಂಗ್ರೆಸ್ ಸಂಸದೆ ಸೆಲ್ಜಾ ಕುಮಾರಿ ಪ್ರಚಾರ ಸಭೆಗಳಿಂದ ಬಹುತೇಕ ದೂರ ಉಳಿದಿದ್ದರು
- ಒಳಜಗಳ, ಪ್ರಚಾರ ಸಭೆಗಳ ನಿರ್ವಹಣೆ ವಿಚಾರವಾಗಿ ರಾಹುಲ್ ಗಾಂಧಿ ಅಸಮಾಧಾನ ಹೊರಹಾಕಿದ್ದರು ಎಂದು ಮೂಲಗಳ ಹೇಳಿಕೆ
- ಮಾಜಿ ಮುಖ್ಯಮಂತ್ರಿ ಹಾಗೂ ಕೇಂದ್ರ ಸಚಿವ ಮನೋಹರಲಾಲ್ ಖಟ್ಟರ್ ಅವರನ್ನು ಪಕ್ಷದ ರ‍್ಯಾಲಿಗಳಿಂದ ದೂರ ಇಟ್ಟಿದ್ದ ಬಿಜೆಪಿ
- ನಾಯಬ್ ಸಿಂಗ್ ಸೈನಿ ಅವರಿಗೇ ಸಿ.ಎಂ ಪಟ್ಟ– ಕೇಂದ್ರ ಗೃಹ ಸಚಿವ ಅಮಿತ್ ಶಾ ಸುಳಿವು

ತಿರುಮಲ: ಇಂದಿನಿಂದ ಬ್ರಹ್ಮೋತ್ಸವ

ತಿರುಪತಿ (ಪಿಟಿಐ): ತಿರುಮಲದ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ವಾರ್ಷಿಕವಾಗಿ ನಡೆಯುವ 9 ದಿನಗಳ ಬ್ರಹ್ಮೋತ್ಸವವು ಶುಕ್ರವಾರದಿಂದ ಆರಂಭವಾಗಲಿದೆ.

ಬ್ರಹ್ಮೋತ್ಸವವ ಅ.4ರಿಂದ 12ರವರೆಗೆ ನಡೆಯಲಿದ್ದು, ಈ ವೇಳೆ ದೇವಸ್ಥಾನಕ್ಕೆ ಪ್ರತಿ ದಿನ 2 ಲಕ್ಷಕ್ಕೂ ಅಧಿಕ ಭಕ್ತಾದಿಗಳು ಆಗಮಿಸುವ ನಿರೀಕ್ಷೆ ಇದೆ. ಈ ಸಂದರ್ಭದಲ್ಲಿ ಶಿಷ್ಟಾಚಾರಕ್ಕೆ ಅನುಗುಣವಾಗಿ ಕೆಲವು ಸೇವೆಗಳು, ಅಂಗ ಪ್ರದಕ್ಷಿಣೆ ಹಾಗೂ ವಿಐಪಿ ದರ್ಶನ ವ್ಯವಸ್ಥೆಯನ್ನು ರದ್ದು ಮಾಡಲಾಗುವುದು ಎಂದು ‘ತಿರುಮಲ ತಿರುಪತಿ ದೇವಸ್ಥಾನಂ’ (ಟಿಟಿಡಿ) ಹೇಳಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜೆ. ಶ್ಯಾಮಲ ರಾವ್, ‘ಭಕ್ತರಿಗಾಗಿ 7 ಲಕ್ಷ ಲಾಡುಗಳನ್ನು ಈಗಾಗಲೇ ತಯಾರಿಸಲಾಗಿದೆ’ ಎಂದರು.

ಅಲ್ಲದೇ ‘ಭಕ್ತರ ನೆರವಿಗಾಗಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. 11.5 ಲಕ್ಷ ಜನರಿಗೆ ಪ್ರಸಾದ ವ್ಯವಸ್ಥೆ ಮಾಡಲಾಗಿದೆ. ಸುಮಾರು 45,000 ಭಕ್ತರಿಗೆ ತಿರುಮಲದಲ್ಲಿ ತಂಗಲು ವ್ಯವಸ್ಥೆ ಮಾಡಲಾಗಿದೆ’ ಎಂದು ಮಾಹಿತಿ ನೀಡಿದರು.

ಮಣಿಪುರದ ಉಖ್ರುಲ್‌ನಲ್ಲಿ ಹಿಂಸಾಚಾರ

ಠಾಣೆಗೆ ನುಗ್ಗಿ ಶಸ್ತ್ರಾಸ್ತ್ರ ದೋಚಿದ ಗುಂಪು

ಇಂಫಾಲ್ (ಪಿಟಿಐ): ಮಣಿಪುರದ ಉಖ್ರುಲ್ ಪಟ್ಟಣದಲ್ಲಿ ಎರಡು ಗುಂಪುಗಳ ನಡುವಿನ ಘರ್ಷಣೆಯ ಸಂದರ್ಭದಲ್ಲಿ ಗುಂಪೊಂದು ಪೊಲೀಸ್ ಠಾಣೆಗೆ ನುಗ್ಗಿ ಶಸ್ತ್ರಾಸ್ತ್ರಗಳನ್ನು ದೋಚಿದೆ ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

‘ಸ್ವಚ್ಛತಾ ಅಭಿಯಾನ’ದ ಅಂಗವಾಗಿ ಪಟ್ಟಣದ ವಿವಾದಿತ ಜಾಗವನ್ನು ಸ್ವಚ್ಛಗೊಳಿಸುವ ವಿಚಾರವಾಗಿ ಬುಧವಾರ ಎರಡು ಗುಂಪುಗಳ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ ಮೂವರು ಮೃತಪಟ್ಟು 20 ಮಂದಿ ಗಾಯಗೊಂಡಿದ್ದಾರೆ.

ಮೃತ ಮೂವರಲ್ಲಿ ಒಬ್ಬರು ರಾಜ್ಯ ಸರ್ಕಾರದ ಅಧೀನದ ಸಶಸ್ತ್ರ ಪಡೆ ಮಣಿಪುರ ರೈಫಲ್ಸ್‌ನ ಕರ್ತವ್ಯದಲ್ಲಿದ್ದವರು. ತೀವ್ರವಾಗಿ ಗಾಯಗೊಂಡ ಹತ್ತು ಮಂದಿಯನ್ನು ಇಂಫಾಲ್‌ನ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಉಳಿದವರು ಉಖ್ರುಲ್ ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಹಿಂಸಾಚಾರದ ವೇಳೆ, ಅಸ್ಸಾಂ ರೈಫಲ್ಸ್ ಶಿಬಿರದಿಂದ ಕೆಲವೇ ಮೀಟರ್ ದೂರದಲ್ಲಿರುವ ಉಖ್ರುಲ್ ಪೊಲೀಸ್ ಠಾಣೆ ಮೇಲೂ ದಾಳಿ ನಡೆದಿದೆ.

‘ಉಖ್ರುಲ್ ಪಟ್ಟಣದಲ್ಲಿ ಹಿಂಸಾಚಾರ ಭುಗಿಲೆದ್ದ ನಂತರ, ಬಹುಪಾಲು ಯುವಕರೇ ಇದ್ದ ಗುಂಪೊಂದು ವಿನೋ ಬಜಾರ್‌ನಲ್ಲಿರುವ ಪೊಲೀಸ್ ಠಾಣೆಗೆ ನುಗ್ಗಿತು. ಠಾಣೆಯಲ್ಲಿದ್ದ ಶಸ್ತ್ರಾಸ್ತ್ರಗಳನ್ನು ದೋಚಿಕೊಂಡು ಪರಾರಿಯಾಯಿತು’ ಎಂದು ಅಧಿಕಾರಿಗಳು ಹೇಳಿದ್ದಾರೆ.

ನಾಗಾ ಜನರು ಬಹುಸಂಖ್ಯಾತರಾಗಿರುವ ಪ್ರದೇಶದಲ್ಲಿ ಪೊಲೀಸ್ ಠಾಣೆ ಮೇಲೆ ದಾಳಿ ನಡೆದಿರುವುದು ಇದೇ ಮೊದಲು ಎಂದು ಮೂಲಗಳು ತಿಳಿಸಿವೆ.

‘ಯಾವ ಬಗೆಯ ಮತ್ತು ಎಷ್ಟು ಶಸ್ತ್ರಾಸ್ತ್ರಗಳನ್ನು ಗುಂಪು ಲೂಟಿ ಮಾಡಿದೆ ಎನ್ನುವುದನ್ನು ತಕ್ಷಣಕ್ಕೆ ಖಚಿತಪಡಿಸಲಾಗದು. ಸದ್ಯ, ತನಿಖೆ ಮುಂದುವರಿದಿದೆ’ ಎಂದು ಅವರು ಹೇಳಿದ್ದಾರೆ. ಯುವಕರ ಗುಂಪು, ಪೊಲೀಸ್ ಠಾಣೆಯಿಂದ ಎಕೆ–47 ಮತ್ತು ಐಎನ್‌ಎಸ್‌ಎಎಸ್ (ಇನ್ಸಾಸ್) ರೈಫಲ್‌ಗಳನ್ನು ದೋಚಿಕೊಂಡು ಪರಾರಿಯಾಗಿದೆ ಎಂದು ಅಧಿಕೃತವಲ್ಲದ ಮೂಲಗಳು ಹೇಳಿವೆ.

ಉಖ್ರುಲ್ ಪಟ್ಟಣದಲ್ಲಿ ನಿಷೇಧಾಜ್ಞೆ: ನಾಗಾ ಸಮುದಾಯದ ಎರಡು ಗುಂಪುಗಳ ನಡುವೆ ಘರ್ಷಣೆ ನಡೆದ ನಂತರ ಪಟ್ಟಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ. ಮೊಬೈಲ್, ಇಂಟರ್‌ನೆಟ್ ಸಂಪರ್ಕ ಸೇವೆಗಳನ್ನು ಸ್ಥಗಿತಗೊಳಿಸಲಾಗಿದೆ. ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತರಲು ಹೆಚ್ಚುವರಿ ಪಡೆಗಳನ್ನು ಕೂಡ ಜಿಲ್ಲೆಗೆ ಕರೆಸಲಾಗಿದೆ ಎಂದು ಮೂಲಗಳು ಹೇಳಿವೆ.

ಒತ್ತೆಯಾಳಾಗಿದ್ದ ಇಬ್ಬರು ಯುವಕರ ಬಿಡುಗಡೆ

ಇಂಫಾಲ್ (ಪಿಟಿಐ): ಮಣಿಪುರದ ಕಾಂಗ್‌ಪೋಕ್ಪಿ ಜಿಲ್ಲೆಯಲ್ಲಿ ಶಸ್ತ್ರಧಾರಿಗಳು ಒತ್ತೆ ಇರಿಸಿಕೊಂಡಿದ್ದ ಇಬ್ಬರು ಯುವಕರನ್ನು ಏಳು ದಿನಗಳ ನಂತರ ಗುರುವಾರ ಬೆಳಿಗ್ಗೆ ಬಿಡುಗಡೆ ಮಾಡಿದ್ದು, ಯುವಕರು ಪೊಲೀಸರ ಸುಪರ್ದಿಯಲ್ಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಒಯಿನಮ್ ಥೋಯಿಥೋಯಿ ಸಿಂಗ್ ಮತ್ತು ಟಿ. ಥೋಯಿಥೋಯ್ಬಾ ಸಿಂಗ್ ಎಂಬ ಇಬ್ಬರು ಯುವಕರನ್ನು ಬೆಳಿಗ್ಗೆ 5 ಗಂಟೆಗೆ ಗಮ್ಗಿಫೈ ನಾಕಾದಲ್ಲಿ ಕಾಂಗ್‌ಪೋಕ್ಪಿ ಪೊಲೀಸ್ ವರಿಷ್ಠಾಧಿಕಾರಿಗೆ ಹಸ್ತಾಂತರಿಸಲಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ರಾಜ್ಯ ಪೊಲೀಸರು ಮತ್ತು ಅಸ್ಸಾಂ ರೈಫಲ್ಸ್ ಬೆಂಗಾವಲಿನಲ್ಲಿ ಇಬ್ಬರು ಯುವಕರು ಸುರಕ್ಷಿತವಾಗಿ ಇಂಫಾಲ್ ತಲುಪಿದ್ದಾರೆ. ಈಗ ಅವರು ಇಂಫಾಲ್ ಪೊಲೀಸ್ ಠಾಣೆಯಲ್ಲಿದ್ದು, ಕೆಲವು ಪ್ರಕ್ರಿಯೆಗಳು ಪೂರ್ಣಗೊಂಡ ನಂತರ ಶೀಘ್ರವೇ ಅವರನ್ನು ಕುಟುಂಬದವರ ಸುಪರ್ದಿಗೆ ಒಪ್ಪಿಸಲಾಗುವುದು ಎಂದು ಹೇಳಿದ್ದಾರೆ.

ಭಾರತದ ವನಿತೆಯರಿಗೆ ಕಿವೀಸ್ ಸವಾಲು ಇಂದು • ಮಂದಾನ, ಶಫಾಲಿ ಮೇಲೆ ನಿರೀಕ್ಷೆ

ಕೌರ್ ಬಳಗಕ್ಕೆ ಶುಭಾರಂಭದ ವಿಶ್ವಾಸ

ದುಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನಾಯಕತ್ವದ ಭಾರತ ವನಿತೆಯರ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಕ್ರವಾರ ಅಭಿಯಾನ ಆರಂಭಿಸಲಿದೆ. ಎ ಗುಂಪಿನ ಪಂದ್ಯದಲ್ಲಿ ಭಾರತವು ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

ಈ ಬಾರಿ ತಂಡವು ವಿಶ್ವಕಪ್ ಜಯಿಸಬೇಕೆಂದರೆ ಅನುಭವಿ ಆಟಗಾರ್ತಿಯರು ಜವಾಬ್ದಾರಿಯುತ ಆಟವಾಡಲೇಬೇಕಾದ ಅನಿವಾರ್ಯತೆ ಇದೆ. 2020ರಲ್ಲಿ ಮೆಲ್ಬರ್ನ್‌ನಲ್ಲಿ ಫೈನಲ್ ಪ್ರವೇಶಿಸಿದ್ದ ಭಾರತ ತಂಡಕ್ಕೆ ವಿಜಯ ಒಲಿದಿರಲಿಲ್ಲ. ಅಲ್ಪ ಅಂತರದಲ್ಲಿ ವಿಶ್ವಕಪ್ ಕೈತಪ್ಪಿತ್ತು. ಆ ಟೂರ್ನಿಯಲ್ಲಿ ಆಡಿರುವ ಅನುಭವಿಗಳ ಜೊತೆಗೆ ಹೊಸಪ್ರತಿಭೆಗಳೂ ಈ ಬಾರಿ ತಂಡದಲ್ಲಿವೆ.

ಆರು ಬಾರಿಯ ಚಾಂಪಿಯನ್ ಆಸ್ಟ್ರೇಲಿಯಾದಷ್ಟೇ ಸಮರ್ಥ ಆಟಗಾರ್ತಿಯರು ಭಾರತ ತಂಡದಲ್ಲಿದ್ದಾರೆ. ಆದರೂ ಇದುವರೆಗೆ ಒಂದೂ ವಿಶ್ವಕಪ್ ಜಯಿಸಲು ತಂಡಕ್ಕೆ ಸಾಧ್ಯವಾಗಿಲ್ಲ. ಈ ಬಾರಿ ಪ್ರಶಸ್ತಿ ಬರ ನೀಗಿಸುವ ಅವಕಾಶ ಒದಗಿಬಂದಿದೆ. ತಂಡದ ಆಟಗಾರ್ತಿ ಯರಿಗೆ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ (ಎನ್‌ಸಿಎ)ಯಲ್ಲಿ ವಿಶೇಷ ತರಬೇತಿ ನೀಡಲಾಗಿದೆ. ಇದರಿಂದಾಗಿ ತಂಡದ ಆತ್ಮಸ್ಥೈರ್ಯ ವೃದ್ಧಿಸಿದೆ

ನ್ಯೂಜಿಲೆಂಡ್ ತಂಡವು ಆಸ್ಟ್ರೇಲಿಯಾದಷ್ಟು ಬಲಾಢ್ಯವಾಗಿಲ್ಲ. ಆದರೆ ಎರಡು ಬಾರಿ ರನ್ನರ್ಸ್ ಅಪ್ ಆಗಿರುವ ಕಿವೀಸ್ ವನಿತೆಯರು ಕಠಿಣ ಪೈಪೋಟಿಯೊಡ್ಡುವ ಸಾಮರ್ಥ್ಯ ಹೊಂದಿದ್ದಾರೆ. ಆದ್ದರಿಂದ ಕಿವೀಸ್ ಎದುರಿಗೆ ಜಯಿಸುವುದರಿಂದ ಭಾರತ ತಂಡದ ಆತ್ಮವಿಶ್ವಾಸ ಹೆಚ್ಚುವುದಂತೂ ದಿಟ.


ನ್ಯೂಜಿಲೆಂಡ್ ತಂಡದ ನಾಯಕಿ ಸೋಫಿ ಡಿವೈನ್

35 ವರ್ಷ ವಯಸ್ಸಿನ ಹರ್ಮನ್ ಪ್ರೀತ್, ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ, ಜಿಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ಆಲ್‌ರೌಂಡರ್ ದೀಪ್ತಿ ಶರ್ಮಾ ಅವರು ತಮ್ಮ ಅನುಭವಕ್ಕೆ ತಕ್ಕ ಆಟ ಆಡಿದರೆ ಯಶಸ್ಸಿನ ಹಾದಿ ಸುಲಭ. ಶಫಾಲಿ ಮತ್ತು ಮಂದಾನ ಅವರು ಉತ್ತಮ ಲಯದಲ್ಲಿದ್ದಾರೆ. ಮಂದಾನ ಅವರು ಕಳೆದ ಐದು ಟಿ20 ಇನಿಂಗ್ಸ್‌ಗಳಲ್ಲಿ 3 ಅರ್ಧಶತಕ ಗಳಿಸಿದ್ದಾರೆ. ಶಫಾಲಿ ಮತ್ತು ಕೌರ್ ಅವರು ಕೆಲವು ಇನಿಂಗ್ಸ್‌ಗಳಲ್ಲಿ ಚೆನ್ನಾಗಿ ಆಡಿದ್ದಾರೆ.

ಇಲ್ಲಿಯ ಧಗೆಯ ವಾತಾವರಣ ಮತ್ತು ಪಿಚ್‌ಗಳಲ್ಲಿ ಬೌಲರ್‌ಗಳ ಸತ್ವಪರೀಕ್ಷೆಯಾಗಲಿದೆ. ಭಾರತ ತಂಡದಲ್ಲಿ ಮಧ್ಯ-ಮವೇಗಿಗಳಾದ ರೇಣುಕಾ ಸಿಂಗ್, ಪೂಜಾ ವಸ್ತ್ರಕರ್ ಮತ್ತು ಅರುಂಧತಿ ರೆಡ್ಡಿ ಅವರ ಹೊಣೆ ಹೆಚ್ಚಿದೆ. ಸ್ಪಿನ್ ವಿಭಾಗದಲ್ಲಿಯೂ ಉತ್ತಮ ಬೌಲರ್‌ಗಳಿದ್ದಾರೆ. ಲೆಗ್‌ಸ್ಪಿನ್ನರ್ ಆಶಾ ಶೋಭನಾ, ಎಡಗೈ ಸ್ಪಿನ್ನರ್ ರಾಧಾ ಯಾದವ್ ಮತ್ತು ಆಫ್ ಸ್ಪಿನ್ನರ್, ಕನ್ನಡತಿ ಶ್ರೇಯಾಂಕಾ ಪಾಟೀಲ ಅವರು ಪ್ರಮುಖರಾಗಿದ್ದಾರೆ.

ಕಿವೀಸ್ ತಂಡದ ಸೂಜಿ ಬೇಟ್ಸ್, ನಾಯಕಿ ಸೋಫಿ ಡಿವೈನ್, ಆಲ್‌ರೌಂಡರ್ ಅಮೆಲಿಯಾ ಕೆರ್ ಅವರನ್ನು ಕಟ್ಟಿಹಾಕುವುದು ಭಾರತಕ್ಕೆ ಪ್ರಮುಖ ಸವಾಲಾಗಲಿದೆ.


ಶ್ರೇಯಾಂಕಾ ಪಾಟೀಲ

ಐಸಿಸಿ ಮಹಿಳೆಯರ ಟಿ20 ವಿಶ್ವಕಪ್ 2024

ಇಂದಿನ ಪಂದ್ಯ

ದಕ್ಷಿಣ ಆಫ್ರಿಕಾ Vs ವೆಸ್ಟ್ ಇಂಡೀಸ್ — ಮಧ್ಯಾಹ್ನ 3.30 ರಿಂದ

ಭಾರತ Vs ನ್ಯೂಜಿಲೆಂಡ್ — ರಾತ್ರಿ 7.30 ರಿಂದ

ಲೈವ್: ಸ್ಟಾರ್ ಸ್ಪೋರ್ಟ್ಸ್, ಹಾಟ್ ಸ್ಟಾರ್


ಭಾರತ ತಂಡದ ಸ್ಮೃತಿ ಮಂದಾನ ಮತ್ತು ಹರ್ಮನ್‌ಪ್ರೀತ್ ಕೌರ್ –ಪಿಟಿಐ ಚಿತ್ರ

ಬಲಾಬಲ (ಟಿ20)

ಪಂದ್ಯ	ಭಾರತ ಜಯ	ನ್ಯೂಜಿಲೆಂಡ್ ಜಯ	ಟೈ
25	14	10	1

ವಿಯಾನಿಗೆ 'ಡಬಲ್' ಸಂಭ್ರಮ

ಚೆಸ್ ಟೂರ್ನಿ: ಜೀವಿತೇಶ್, ಮಾರ್ತಾಂಡನ್ ರನ್ನರ್ ಅಪ್

ಪ್ರಜಾವಾಣಿ ವಾರ್ತೆ

ಮಂಗಳೂರು: ಮೊದಲ ಸುತ್ತಿನಿಂದಲೇ ಪಾರಮ್ಯ ಮೆರೆದ ಅಗ್ರಶ್ರೇಯಾಂಕಿತ ಆಟಗಾರ ಮಂಗಳೂರಿನ ವಿಯಾನಿ ಆ್ಯಂಟೊನಿಯೊ ಡಿಕುನ್ಹಾ ಗುರುವಾರ ಮುಕ್ತಾಯಗೊಂಡ ಅಖಿಲ ಭಾರತ ಫಿಡೆ ರೇಟೆಡ್ ರ‍್ಯಾಪಿಡ್ ಮುಕ್ತ ಚೆಸ್ ಟೂರ್ನಿಯ ಪ್ರಶಸ್ತಿ ಗೆದ್ದುಕೊಂಡರು. ಬ್ಲಿಟ್ಜ್ ಟೂರ್ನಿಯ ಪ್ರಶಸ್ತಿಯೂ ಅವರ ಪಾಲಾಯಿತು.

ದಕ್ಷಿಣ ಕನ್ನಡ ಜಿಲ್ಲಾ ಚೆಸ್ ಸಂಸ್ಥೆ ನಗರದ ಪುರಭವನದಲ್ಲಿ ಆಯೋಜಿಸಿದ್ದ ಟೂರ್ನಿಯ ಕೊನೆಯ ಹಾಗೂ 9ನೇ ಸುತ್ತಿನ ಮುಕ್ತಾಯಕ್ಕೆ ಇಂಟರ್‌ನ್ಯಾಷನಲ್ ಮಾಸ್ಟರ್‌ಗಳಾದ ವಿಯಾನಿ ಮತ್ತು ತೆಲಂಗಾಣದ ಸಾಯ್ ಅಗ್ನಿ ಜೀವಿತೇಶ್ ತಲಾ 8.5 ಪಾಯಿಂಟ್ ಗಳಿಸಿ ಸಮಬಲ ಸಾಧಿಸಿದ್ದರು. ಉತ್ತಮ ಟೈಬ್ರೇಕರ್ ಆಧಾರದಲ್ಲಿ ವಿಯಾನಿ ಪ್ರಶಸ್ತಿ ತಮ್ಮದಾಗಿ-ಸಿಕೊಂಡರು. ಕೇರಳದ ಮಾರ್ತಾಂಡನ್, ತಮಿಳುನಾಡಿನ ರಾಮನಾಥನ್ ಬಾಲ-ಸುಬ್ರಹ್ಮಣ್ಯಂ, ಕರ್ನಾಟಕದ ಸಿದ್ಧಾಂತ್ ಪೂಂಜಾ, ಲಕ್ಷಿತ್ ಸಾಲಿಯಾನ್, ಕೇರಳದ ಸಾವಂತ್ ಕೃಷ್ಣನ್ ಮತ್ತು ಗೋವಾದ ಚೈತನ್ಯ ಗಾಂವ್ಕರ್ ತಲಾ 7.5 ಪಾಯಿಂಟ್ ಗಳಿಸಿದರು. ಟೈಬ್ರೇಕರ್ ಆಧಾರದಲ್ಲಿ ಅವರಿಗೆ ಕ್ರಮವಾಗಿ 3ರಿಂದ 8ನೇ ಸ್ಥಾನ ನೀಡಲಾಯಿತು. ವಿಜೇತರು ₹ 30 ಸಾವಿರ ನಗದು ಮತ್ತು ಟ್ರೋಫಿ, ರನ್ನರ್ ಅಪ್ ₹ 20 ಸಾವಿರ ಮತ್ತು ಟ್ರೋಫಿ, ಮೂರನೇ ಸ್ಥಾನ ಗಳಿಸಿದವರು ₹ 10 ಸಾವಿರ ಮತ್ತು ಟ್ರೋಫಿ ಪಡೆದರು.

ಬ್ಲಿಟ್ಜ್ ಟೂರ್ನಿಯಲ್ಲಿ ವಿಯಾನಿ 8.5 ಪಾಯಿಂಟ್ ಕಲೆ ಹಾಕಿದರೆ 8 ಪಾಯಿಂಟ್ ಗಳಿಸಿದ ಮಾರ್ತಾಂಡನ್ ರನ್ನರ್ ಅಪ್ ಆದರು. ಸಾಯ್ ಅಗ್ನಿ ಜೀವಿತೇಶ್ 7.5 ಪಾಯಿಂಟ್‌ಗಳೊಂದಿಗೆ ಮೂರನೇ ಸ್ಥಾನಕ್ಕೆ ಸಮಾಧಾನಪ-ಟ್ಟುಕೊಂಡರು. ಇವರಿಗೆ ಕ್ರಮವಾಗಿ ₹5 ಸಾವಿರ, ₹4 ಸಾವಿರ ಮತ್ತು ₹ 3 ಸಾವಿರ ಮೊತ್ತದ ಪ್ರಶಸ್ತಿ ನೀಡಲಾಯಿತು. ಕರ್ನಾಟಕದ ದೃಕ್ಷು ವಸಂತ್, ಅಪೂರ್ವ ಕಾಂಬ್ಳೆ, ಕೇರಳದ ಜ್ಯೋತಿಲಾಲ್, ಕರಣ್, ಕರ್ನಾಟಕದ ಆಗಸ್ಟಿನ್, ಗೋವಾದ ಚೈತನ್ಯ ಗಾಂವ್ಕರ್ ಮತ್ತು ಕೇರಳದ ಮಧುಸೂದನನ್ ಕ್ರಮವಾಗಿ 4ರಿಂದ 10ರ ವರೆಗಿನ ಸ್ಥಾನ ಗಳಿಸಿದರು.


ಪ್ರಶಸ್ತಿ ಗೆದ್ದ ವಿಯಾನಿ ಆ್ಯಂಟೊನಿಯೊ (ಮಧ್ಯೆ), ರನ್ನರ್ ಅಪ್ ಸಾಯ್ ಅಗ್ನಿ ಜೀವಿತೇಶ್ (ಎಡ) ಮತ್ತು 3ನೇ ಸ್ಥಾನ ಗಳಿಸಿದ ಮಾರ್ತಾಂಡನ್

ರ‍್ಯಾಪಿಡ್ ಮುಕ್ತ ಚೆಸ್ ಟೂರ್ನಿಯ ಕೊನೆಯ ಸುತ್ತಿನ ಪ್ರಮುಖ ಫಲಿತಾಂಶಗಳು: ತೆಲಂಗಾಣದ ಸಾಯ್ ಅಗ್ನಿ ಜೀವಿತೇಶ್‌ಗೆ ಕರ್ನಾಟಕದ ಅಪೂರ್ವ ಕಾಂಬ್ಳೆ ವಿರುದ್ಧ ಜಯ; ಕರ್ನಾಟಕದ ವಿಯಾನಿ ಆ್ಯಂಟೊನಿಯೊ ಡಿಕುನ್ಹಾಗೆ ಕೇರಳದ ಜ್ಯೋತಿಲಾಲ್ ಎದುರು ಗೆಲುವು; ಕರ್ನಾಟಕದ ಲಕ್ಷಿತ್ ಸಾಲಿಯಾನ್‌ಗೆ ಕರ್ನಾಟಕದ ಆಗಸ್ಟಿನ್ ವಿರುದ್ಧ, ಕೇರಳದ ಮಾರ್ತಾಂಡನ್‌ಗೆ ಕರ್ನಾಟಕದ ಚರಿತ್ ಭಟ್ ವಿರುದ್ಧ, ತಮಿಳುನಾಡಿನ ರಾಮನಾಥನ್‌ಗೆ ಕೇರಳದ ಅಬ್ದುಲ್ ಮಜೀದ್ ವಿರುದ್ಧ, ಕರ್ನಾಟಕದ ಸಿದ್ಧಾಂತ್ ಪೂಂಜಾಗೆ ಗೋವಾದ ಪರಬ್ ವಿರುದ್ಧ, ಗೋವಾದ ಚೈತನ್ಯ ಗಾಂವ್ಕರ್‌ಗೆ ತೆಲಂಗಾಣದ ಕಾರ್ತಿಕ್ ಸಾಯ್ ವಿರುದ್ಧ, ಕೇರಳದ ಸಾವಂತ್ ಕೃಷ್ಣನ್‌ಗೆ ಕೇರಳದ ಅಭಿಷೇಕ್ ವಿರುದ್ಧ, ಕೇರಳದ ಮಧುಸೂದನನ್‌ಗೆ ಕರ್ನಾಟಕದ ರವೀಶ್ ಕೋಟೆ ವಿರುದ್ಧ, ಕರ್ನಾಟಕದ ಲೀಲಾ ಜಯಕೃಷ್ಣನ್‌ಗೆ ಕೇರಳದ ಸಂದೀಪ್ ವಿರುದ್ಧ ಜಯ.

ಬ್ಲಿಟ್ಜ್ ಟೂರ್ನಿಯ ಕೊನೆಯ ಸುತ್ತಿನ ಪ್ರಮುಖ ಫಲಿತಾಂಶಗಳು: ವಿಯಾನಿ ಆ್ಯಂಟೊನಿಯೊ ಮತ್ತು ಸಾಯ್ ಅಗ್ನಿ ಜೀವಿತೇಶ್ ನಡುವಿನ ಪಂದ್ಯ ಡ್ರಾ; ಮಾರ್ತಾಂಡನ್‌ಗೆ ಅಪೂರ್ವ ಕಾಂಬ್ಳೆ ವಿರುದ್ಧ ಜಯ; ದೃಕ್ಷು ವಸಂತ್‌ಗೆ ಚಿನ್ಮಯ್ ಕೌಶಿಕ್ ಎದುರು, ಆಗಸ್ಟಿನ್‌ಗೆ ವಿಹಾನ್ ಲೋಬೊ ವಿರುದ್ಧ ಜಯ; ರಾಮನಾಥನ್ ಬಾಲಸುಬ್ರಹ್ಮಣ್ಯಂ ಮತ್ತು ಆರಾಧ್ಯೊ ಭಟ್ಟಾಚಾರ್ಯ ನಡುವೆ ಡ್ರಾ, ಚೈತನ್ಯ ಗಾಂವ್ಕರ್‌ಗೆ ಸಿದ್ಧಾಂತ್ ಪೂಂಜಾ ವಿರುದ್ಧ, ಜ್ಯೋತಿಲಾಲ್‌ಗೆ ಗೌರಿಶಂಕರ್ ವಿರುದ್ಧ, ಮಧುಸೂದನನ್‌ಗೆ ಆರುಷ್ ಭಟ್ ವಿರುದ್ಧ, ಕರಣ್‌ಗೆ ಲಕ್ಷಿತ್ ಸಾಲಿಯಾನ್ ವಿರುದ್ಧ ಮತ್ತು ಪರಬ್‌ಗೆ ಸುಶಾಂತ್ ವಿರುದ್ಧ ಗೆಲುವು.

ರಿತು ಮೋನಿ ಉತ್ತಮ ಬೌಲಿಂಗ್: ಸ್ಕಾಟ್ಲೆಂಡ್‌ಗೆ ನಿರಾಶೆ

ಆತಿಥೇಯ ಬಾಂಗ್ಲಾ ಜಯಭೇರಿ

ಶಾರ್ಜಾ(ಪಿಟಿಐ): ಮಧ್ಯಮವೇಗಿ ರಿತು ಮೋನಿ ಅವರ ನಿಖರ ದಾಳಿಯ ನೆರವಿನಿಂದ ಆತಿಥೇಯ ಬಾಂಗ್ಲಾದೇಶ ಮಹಿಳಾ ಕ್ರಿಕೆಟ್ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಶಾರ್ಜಾ ಕ್ರಿಕೆಟ್ ಕ್ರೀಡಾಂಗಣ-ದಲ್ಲಿ ಗುರುವಾರ ನಡೆದ ಬಿ ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ತಂಡದ ದಿಟ್ಟ ಹೋರಾಟವನ್ನು ಮೀರಿ ನಿಂತ ಬಾಂಗ್ಲಾ 16 ರನ್‌ಗಳ ಜಯ ಸಾಧಿಸಿತು. ಟಾಸ್ ಗೆದ್ದ ಬಾಂಗ್ಲಾ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 119 ರನ್ ಗಳಿಸಿತು. ಆರಂಭಿಕ ಬ್ಯಾಟರ್ ಶತಿ ರಾಣಿ (29; 32ಎ) ಹಾಗೂ ಶೋಭನಾ ಮೊಸ್ತಾರಿ (36; 38ಎ) ಅವರು ಉತ್ತಮವಾಗಿ ಬ್ಯಾಟಿಂಗ್ ಮಾಡಿದರು. ಆದರೆ ಉಳಿದ ಬ್ಯಾಟರ್‌ಗಳು ಹೆಚ್ಚು ರನ್ ಗಳಿಸಲಿಲ್ಲ. ಸ್ಕಾಟ್ಲೆಂಡ್ ತಂಡದ ಸಾಸ್ಕಿಯಾ ಹಾರ್ಲಿ (13ಕ್ಕೆ3) ಉತ್ತಮ ದಾಳಿ ನಡೆಸಿದರು.

ಗುರಿ ಬೆನ್ನಟ್ಟಿದ ಸ್ಕಾಟ್ಲೆಂಡ್ ತಂಡಕ್ಕೆ ಸಾರಾ ಬ್ರೈಸ್ (ಔಟಾಗದೆ 49; 52ಎ, 4X1) ದಿಟ್ಟ ಹೋರಾಟ ಮಾಡಿದರು. ಇದರಿಂದಾಗಿ ಒಂದು ಹಂತದಲ್ಲಿ ಸ್ಕಾಟ್ಲೆಂಡ್ ಜಯಿಸುವ ನಿರೀಕ್ಷೆ ಮೂಡಿತ್ತು. ಆದರೆ ಉಳಿದ ಬ್ಯಾಟರ್‌ಗಳು ನಿರೀಕ್ಷಿತ ಸಾಮರ್ಥ್ಯ ತೋರಲಿಲ್ಲ. ಬೌಲರ್ ರಿತು (15ಕ್ಕೆ2) ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ವಿಕೆಟ್ ಗಳಿಸಿದರು. ಅಂತಿಮ ಹಂತದ ಓವರ್‌ಗಳಲ್ಲಿ ಬಾಂಗ್ಲಾ ಬೌಲರ್‌ಗಳು ರನ್‌ಗಳಿಗೆ ಕಡಿವಾಣ ಹಾಕಿದರು. ಇದರಿಂದಾಗಿ ಸ್ಕಾಟ್ಲೆಂಡ್ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 103 ರನ್ ಗಳಿಸಿ ಪರಾಭವಗೊಂಡಿತು.


ಗೆಲುವಿನ ಸಂಭ್ರಮದಲ್ಲಿ ಬಾಂಗ್ಲಾದೇಶದ ತಂಡದ ಆಟಗಾರ್ತಿಯರು – ಎಕ್ಸ್ ಚಿತ್ರ

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 119 (ಶತಿ ರಾಣಿ 29, ಶೋಭನಾ ಮೊಸ್ತಾರಿ 36, ನಿಜರ್ ಸುಲ್ತಾನಾ 18, ಸಾಸ್ಕಿಯಾ ಹಾರ್ಲಿ 13ಕ್ಕೆ3) ಸ್ಕಾಟ್ಲೆಂಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 103 (ಸಾರಾ ಬ್ರೈಸ್ ಔಟಾಗದೆ 49, ರಿತು ಮೋನಿ 15ಕ್ಕೆ2) **ಫಲಿತಾಂಶ:** ಬಾಂಗ್ಲಾದೇಶ ತಂಡಕ್ಕೆ 16 ರನ್‌ಗಳ ಜಯ. ಪಂದ್ಯದ ಆಟಗಾರ್ತಿ: ರಿತು ಮೋನಿ.

ಸನಾ ಆಲ್‌ರೌಂಡ್ ಆಟ ಪಾಕ್‌ಗೆ ಮಣಿದ ಶ್ರೀಲಂಕಾ

ಶಾರ್ಜಾ (ಪಿಟಿಐ): ಫಾತಿಮಾ ಸನಾ (30 ರನ್, 10ಕ್ಕೆ 2) ಅವರ ಆಲ್‌ರೌಂಡ್ ಆಟದ ನೆರವಿನಿಂದ ಪಾಕಿಸ್ತಾನ ಮಹಿಳೆಯರ ಕ್ರಿಕೆಟ್ ತಂಡವು ಗುರುವಾರ 31 ರನ್‌ಗಳಿಂದ ಶ್ರೀಲಂಕಾ ತಂಡವನ್ನು ಮಣಿಸಿತು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಗುರುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಪಾಕ್ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಲಂಕಾ ಬೌಲರ್‌ಗಳು ನಿಖರ ದಾಳಿ ನಡೆಸಿ, ಎದುರಾಳಿ ತಂಡವನ್ನು ಸಾಧಾರಣ ಮೊತ್ತಕ್ಕೆ ಕಟ್ಟಿ ಹಾಕಿದರು.

ಪಾಕ್ ತಂಡವು 20 ಓವರ್‌ಗಳಲ್ಲಿ 116 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು. ಫಾತಿಮಾ ಮತ್ತು ನಿದಾ ಧಾರ್ (23; 22ಎ) ಅವರ ಆಟದಿಂದಾಗಿ ತಂಡವು ಮೂರಂಕಿ ಮೊತ್ತ ಗಳಿಸಿತ್ತು. ಲಂಕಾದ ಉದೇಶಿಕಾ ಪ್ರಭೋದಿನಿ, ಸುಗಂಧಿಕಾ ಕುಮಾರಿ ಮತ್ತು ಚಾಮರಿ ಅಟಪಟ್ಟು ಅವರು ತಲಾ 3 ವಿಕೆಟ್ ಗಳಿಸಿದರು.

ಗುರಿಯನ್ನು ಬೆನ್ನಟ್ಟಿದ ಲಂಕಾ ತಂಡಕ್ಕೆ ಫಾತಿಮಾ ಆರಂಭದಲ್ಲೇ ಪೆಟ್ಟು ನೀಡಿದರು. 6 ರನ್ ಗಳಿಸಿದ್ದ ನಾಯಕಿ ಚಾಮರಿ ಅಟಪಟ್ಟು ಅವರ ವಿಕೆಟ್ ಪಡೆದು ಸಂಭ್ರಮಿಸಿದರು. ನಂತರ ಬಂದ ಬ್ಯಾಟರ್‌ಗಳೂ ನಿರಾಸೆ ಮೂಡಿಸಿದರು. 22 ರನ್ ಗಳಿಸಿದ ನೀಲಕ್ಷಿಕಾ ದಯಯಂತಿ ಲಂಕಾ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡರು. ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 85 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಸಾದಿಯಾ ಇಕ್ಬಾಲ್ ಮೂರು ವಿಕೆಟ್ ಪಡೆದರೆ, ಒಮೈಮಾ ಸೊಹೈಲ್ ಮತ್ತು ನಶ್ರಾ ಸಂಧು ತಲಾ ಎರಡು ವಿಕೆಟ್ ಗಳಿಸಿದರು

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 116 (ನಿದಾ ಧಾರ್ 23, ಫಾತಿಮಾ ಸನಾ 30, ಒಮೈಮಾ ಸೊಹೈಲ್ 18; ಪ್ರಭೋದಿನಿ 20ಕ್ಕೆ3, ಸುಗಂಧಿಕಾ ಕುಮಾರಿ 19ಕ್ಕೆ3, ಚಾಮರಿ ಅಟಪಟ್ಟು 18ಕ್ಕೆ3). ಶ್ರೀಲಂಕಾ: 20 ಓವರ್‌ಗಳಲ್ಲಿ 9ಕ್ಕೆ 85 (ವಿಶ್ಮಿ ಗುಣರತ್ನೆ 20, ನೀಲಕ್ಷಿಕಾ ದಯಯಂತಿ 22; ಫಾತಿಮಾ ಸನಾ 10ಕ್ಕೆ 2, ಸಾದಿಯಾ ಇಕ್ಬಾಲ್ 17ಕ್ಕೆ 3, ಒಮೈಮಾ ಸೊಹೈಲ್ 17ಕ್ಕೆ 2, ನಶ್ರಾ ಸಂಧು 15ಕ್ಕೆ 2). **ಫಲಿತಾಂಶ:** ಪಾಕಿಸ್ತಾನಕ್ಕೆ 31 ರನ್ ಜಯ. ಪಂದ್ಯದ ಆಟಗಾರ್ತಿ: ಫಾತಿಮಾ ಸನಾ.

ಚೆಸ್: ಪ್ರಶಸ್ತಿಯತ್ತ ಲಿಸೆಂಕೊ ಲುಬೊವ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಮೇಘಾ ಚಕ್ರವರ್ತಿ ವಿರುದ್ಧ 52 ನಡೆಗಳಲ್ಲಿ ಜಯಗಳಿಸಿದ ಅಗ್ರ ಶ್ರೇಯಾಂಕದ ಝಿಲ್ವ್‌ಝೊವಾ ಲಿಸೆಂಕೊ ಲುಬೊವ್ ಅವರು 12ನೇ ಐಬಿಸಿಎ ಮಹಿಳಾ ವಿಶ್ವ ಚಾಂಪಿಯನ್‌ಷಿಪ್‌ನ ಚೆಸ್ ಟೂರ್ನಿಯ ಆರನೇ ಸುತ್ತಿನ ನಂತರ ಗರಿಷ್ಠ ಆರು ಪಾಯಿಂಟ್‌ಗಳೊಂದಿಗೆ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ.

ಎರಡನೇ ಸ್ಥಾನದಲ್ಲಿರುವ ಪೋಲೆಂಡ್‌ನ ಇಗೆಮನ್ ಎಮಿಲಿಯಾ (4.5) ಅವರು ಅಗ್ರಸ್ಥಾನದಲ್ಲಿರುವ ಉಕ್ರೇನ್ ಸ್ಪರ್ಧಿಗಿಂತ ಒಂದೂವರೆ ಪಾಯಿಂಟ್‌ನಷ್ಟು ಹಿಂದೆಯಿದ್ದಾರೆ. ಹೀಗಾಗಿ ಲುಬೊವ್ ಈ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿಯೊಂದಿಗೆ ದಶಕದ ತಮ್ಮ ಪಾರಮ್ಯ ಮುಂದುವರಿಸುವುದು ಬಹುತೇಕ ಖಚಿತವಾಗಿದೆ. ಗುರುವಾರ ನಡೆದ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದ ಇಗೆಮನ್, ಅಮೆರಿಕದ ಟ್ರಿಯಾನ್‌ಸ್ಕಾ ಎಮಿಲಿಯಾ ವಿರುದ್ಧ ಜಯಗಳಿಸಿದರು. 19ನೇ ನಡೆಯಲ್ಲಿ ಅಕ್ರಮಣಕ್ಕೆ ಅವಕಾಶ ಕಲ್ಪಿಸಲು ತಪ್ಪು ನಡೆಯೊಂದನ್ನು ಇಟ್ಟ ಟ್ರಿಯಾನ್‌ಸ್ಕಾ ಕ್ರಮೇಣ ಮೇಲುಗೈ ಕಳೆದುಕೊಂಡು, 38ನೇ ನಡೆಯಲ್ಲಿ ಸೋಲೊಪ್ಪಿಕೊಂಡರು.


ಗ್ರಾಡಿಸೆಕ್ ಬೊರ್

ಮೂರು ಮಂದಿ ಆಟಗಾರ್ತಿಯರು– ಟ್ರಿಯಾನ್‌ಸ್ಕಾ, ಬೊಂದರ್ ಒಲೆನಾ (ಉಕ್ರೇನ್) ಮತ್ತು ಅಮೆರಿಕದ ಲೌಸರ್ ಜೆಸಿಕಾ ತಲಾ ನಾಲ್ಕು ಪಾಯಿಂಟ್‌ಗಳೊಡನೆ ಮೂರನೇ ಸ್ಥಾನ ಹಂಚಿಕೊಂಡಿದ್ದಾರೆ.

ಜೂನಿಯರ್ (ಓಪನ್) ವಿಭಾಗದಲ್ಲಿ ಭಾಗವಹಿಸಿರುವ ಏಕೈಕ ಆಟಗಾರ್ತಿ ಸಾಲೊಮನ್ ಜೂಲಿಯಾ (ಪೋಲೆಂಡ್) (5 ಪಾಯಿಂಟ್) ಅಗ್ರಸ್ಥಾನದಲ್ಲಿದ್ದಾರೆ. ಹಾಲಿ ಚಾಂಪಿಯನ್, ಪೋಲೆಂಡ್‌ನ ರೇಸಿಸ್ ಮೈಕೆಲ್ (4.5) ಎರಡನೇ ಸ್ಥಾನದಲ್ಲಿದ್ದಾರೆ. ಮೈಕೆಲ್ ಜೊತೆ ಡ್ರಾ ಮಾಡಿಕೊಂಡ ಸ್ಲೊವೇನಿಯಾದ ಗ್ರಾಡಿಸೆಕ್ ಬೊರ್ ಮತ್ತು ಕಜಕಸ್ತಾನದ ಕುವಾನ್ಶಲಿ ನುರ್ಗಿಸ (ತಲಾ 4) ಮೂರನೇ ಸ್ಥಾನದಲ್ಲಿದ್ದಾರೆ.

ಶೂಟಿಂಗ್: ಖುಷಿಗೆ ಕಂಚಿನ ಪದಕ

ಲಿಮಾ, ಪೆರು (ಪಿಟಿಐ): ಭಾರತದ ಖುಷಿ, ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಜೂನಿಯರ್ ವಿಶ್ವ ಚಾಂಪಿಯನ್‌ಷಿಪ್ ನಲ್ಲಿ ಮಹಿಳೆಯರ 50 ಮೀಟರ್ ರೈಫಲ್ 3 ಸ್ಪರ್ಧೆಯಲ್ಲಿ ಕಂಚು ಗೆದ್ದರು. ಈ ಮೂಲಕ ಭಾರತದ ಪದಕಗಳ ಸಂಖ್ಯೆ 15ಕ್ಕೆ ಏರಿಕೆಯಾಗಿದೆ.

ಖುಷಿ 447.3 ಅಂಕಗಳೊಂದಿಗೆ ಮೂರನೇ ಸ್ಥಾನ ಪಡೆದರು. ನಾರ್ವೆಯ ಸಿನೋವ್ ಬರ್ಗ್ ಮತ್ತು ಕ್ಯಾರೋಲಿನ್ ಲುಂಡ್ ಕ್ರಮವಾಗಿ ಚಿನ್ನ ಮತ್ತು ಬೆಳ್ಳಿ ಜಯಿಸಿದರು.

ನಾಟಕೀಯ ಬೆಳವಣಿಗೆಯ ಬಳಿಕ ಖುಷಿ ಫೈನಲ್ ತಲುಪಿದ್ದರು. ಅರ್ಹತಾ ಸುತ್ತಿನಲ್ಲಿ ಖುಷಿ ಸೇರಿದಂತೆ ಇಟಲಿಯ ಅನ್ನಾ ಶಿಯಾವೊನ್, ಸ್ವಿಟ್ಜರ್ಲೆಂಡ್‌ನ ಅಲೆಕ್ಸಾ ತೇಲಾ ಮತ್ತು ಎಮೆಲಿ ಜೆಗ್ಗಿ ಅವರು ತಲಾ 585 ಪಾಯಿಂಟ್ಸ್ ಗಳಿಸಿದ್ದರು. ಟೈ ಬ್ರೇಕರ್ ಮೂಲಕ ಖುಷಿ (29) ಮತ್ತು ಅನ್ನಾ (29) ಫೈನಲ್‌ಗೆ ಅರ್ಹತೆ ಪಡೆದರೆ, ಸ್ವಿಟ್ಜರ್ಲೆಂಡ್‌ನ ಶೂಟರ್‌ಗಳು (27) ಹೊರಬಿದ್ದರು.


ಪದಕದೊಂದಿಗೆ ಖುಷಿ

ಇರಾನಿ ಟ್ರೋಫಿ: ಮುಂಬೈಗೆ ರೆಸ್ಟ್ ಆಫ್ ಇಂಡಿಯಾ ಪ್ರತ್ಯುತ್ತರ

ಅಭಿಮನ್ಯು ಈಶ್ವರನ್ ಅಮೋಘ ಶತಕ

ಲಖನೌ (ಪಿಟಿಐ): ಅಭಿಮನ್ಯು ಈಶ್ವರನ್ ಅವರ ಅಮೋಘ ಶತಕದ ಬಲದಿಂದ ರೆಸ್ಟ್ ಆಫ್ ಇಂಡಿಯಾ ತಂಡವು ಇಲ್ಲಿ ನಡೆಯುತ್ತಿರುವ ಇರಾನಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಮುಂಬೈ ತಂಡದ ಸವಾಲಿಗೆ ದಿಟ್ಟ ಪ್ರತ್ಯುತ್ತರ ನೀಡಿತು.

ಮುಂಬೈ ಬಳಗವು ಮೊದಲ ಇನಿಂಗ್ಸ್‌ನಲ್ಲಿ ಸರ್ಫರಾಜ್ ಖಾನ್ (ಔಟಾಗದೇ 222 ರನ್) ಅವರ ದ್ವಿಶತಕದ ಬಲದಿಂದ 141 ಓವರ್‌ಗಳಲ್ಲಿ 537 ರನ್ ಪೇರಿಸಿದೆ. ಅದಕ್ಕುತ್ತರ ವಾಗಿ ಮೂರನೇ ದಿನದಾಟದ ಅಂತ್ಯಕ್ಕೆ ರೆಸ್ಟ್ ಆಫ್ ಇಂಡಿಯಾ ತಂಡವು 74 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 289 ರನ್ ಗಳಿಸಿದೆ.

ಇನಿಂಗ್ಸ್ ಆರಂಭದಲ್ಲಿಯೇ ನಾಯಕ ಋತುರಾಜ್ ಗಾಯಕವಾಡ (9 ರನ್) ಔಟಾದರು. ಇದರಿಂದಾಗಿ ತಂಡದ ಮೇಲೆ ಉಂಟಾದ ಒತ್ತಡವನ್ನು ಅಭಿಮನ್ಯು ಸಮರ್ಥವಾಗಿ ನಿಭಾಯಿಸಿದರು. ಅಭಿಮನ್ಯು (ಬ್ಯಾಟಿಂಗ್ 151; 212ಎ, 4X12, 6X1) ತಂಡದ ಮರುಹೋರಾಟಕ್ಕೆ ಮರುಜೀವ ತುಂಬಿದರು. ಅವರು ಮತ್ತು ಧ್ರುವ ಜುರೇಲ್ (ಬ್ಯಾಟಿಂಗ್ 30) ಕ್ರೀಸ್‌ನಲ್ಲಿದ್ದಾರೆ.

ಸಾಯಿ ಸುದರ್ಶನ್ (32 ರನ್), ದೇವದತ್ತ ಪಡಿಕ್ಕಲ್ (16 ರನ್) ಮತ್ತು ಇಶಾನ್ ಕಿಶನ್ (38 ರನ್) ದೀರ್ಘ ಇನಿಂಗ್ಸ್ ಆಡುವಲ್ಲಿ ವಿಫಲರಾದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಮುಂಬೈ: 141 ಓವರ್‌ಗಳಲ್ಲಿ 537 (ಸರ್ಫರಾಜ್ ಖಾನ್ ಅಜೇಯ 222, ಅಜಿಂಕ್ಯ ರಹಾನೆ 97, ಮುಕೇಶ್ ಕುಮಾರ್ 110ಕ್ಕೆ5, ಯಶ್ ದಯಾಳ್ 89ಕ್ಕೆ2, ಪ್ರಸಿದ್ಧಕೃಷ್ಣ 102ಕ್ಕೆ2). ರೆಸ್ಟ್ ಆಫ್ ಇಂಡಿಯಾ: 74 ಓವರ್‌ಗಳಲ್ಲಿ 4ಕ್ಕೆ289 (ಅಭಿಮನ್ಯು ಈಶ್ವರನ್ ಬ್ಯಾಟಿಂಗ್ 151, ಮೋಹಿತ್ ಅವಸ್ತಿ 66ಕ್ಕೆ2)


ಅಭಿಮನ್ಯು ಈಶ್ವರನ್

ಐಒಎ ವಿಶೇಷ ಸಭೆ ಕರೆದ ಉಷಾ

ನವದೆಹಲಿ (ಪಿಟಿಐ): ಸಿಇಒ ರಘುರಾಮ್ ಅಯ್ಯರ್ ನೇಮಕ, ಖಜಾಂಚಿ ಸಹದೇವ್ ಯಾದವ್ ವಿರುದ್ಧದ ಭ್ರಷ್ಟಾಚಾರದ ದೂರು ಮತ್ತು ಕಾರ್ಯಕಾರಿ ಮಂಡಳಿಯ ಕೆಲ ಸದಸ್ಯರ ಅನರ್ಹತೆ ಸೇರಿದಂತೆ ಹಲವು ವಿಷಯಗಳ ಕುರಿತು ಚರ್ಚಿಸಲು ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ. ಉಷಾ ಇದೇ 25ರಂದು ವಿಶೇಷ ಸಾಮಾನ್ಯಸಭೆ ಕರೆದಿದ್ದಾರೆ.

ಈ ಎಲ್ಲ ವಿಷಯಗಳ ಕುರಿತು ಉಷಾ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ನಡುವೆ ಭಿನ್ನಾಭಿಪ್ರಾಯವಿದೆ. ಈ ಬಗ್ಗೆ ಸಮಾಲೋಚನೆಗಾಗಿ ಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಸಭೆಯನ್ನು ಕರೆಯಲಾಗಿದೆ.


ಮೈಸೂರಿನಲ್ಲಿ ಗುರುವಾರ ನಡೆದ 'ಸಿಎಂ ಕಪ್' ದಸರಾ ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಸನ್ಮಾನಿಸಿದರು. ಶಾಸಕ ಎ.ಆರ್. ಕೃಷ್ಣಮೂರ್ತಿ, ರಾಜ್ಯ ಒಲಿಂಪಿಕ್ಸ್ ಸಂಸ್ಥೆ ಅಧ್ಯಕ್ಷ ಗೋವಿಂದರಾಜು, ಸಚಿವ ಎಚ್‌.ಸಿ. ಮಹದೇವಪ್ಪ, ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ, ಕ್ರೀಡಾ ಇಲಾಖೆ ಕಾರ್ಯದರ್ಶಿ ಡಿ. ರಂದೀಪ್ ಹಾಜರಿದ್ದರು – ಪ್ರಜಾವಾಣಿ ಚಿತ್ರ

ದಸರಾ: ಹರ್ಮನ್ ಆಕರ್ಷಣೆ

ಮೈಸೂರು: ಪ್ಯಾರಿಸ್ ಒಲಿಂಪಿಕ್ಸ್‌ನ ಕಂಚಿನ ಪದಕವಿಜೇತ ಭಾರತ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಗುರುವಾರ ಇಲ್ಲಿ ಆರಂಭಗೊಂಡ ದಸರಾ ಕ್ರೀಡಾಕೂಟದ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಆಕರ್ಷಣೆಯಾದರು. ಅವರೊಟ್ಟಿಗೆ ಸೆಲ್ಫಿ ತೆಗೆಸಿಕೊಳ್ಳಲು ಕ್ರೀಡಾಪಟುಗಳು ಮುಗಿಬಿದ್ದರು.

ಚಾಮುಂಡಿವಿಹಾರ ಕ್ರೀಡಾಂಗಣದಲ್ಲಿ ಸಂಜೆ ನಡೆದ ಕಾರ್ಯಕ್ರಮದಲ್ಲಿ ಹರ್ಮನ್‌ಪ್ರೀತ್ ಅವರನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮೈಸೂರು ಪೇಟ ತೊಡಿಸಿ, ₹ 5 ಲಕ್ಷ ಚೆಕ್ ನೀಡಿ ಸನ್ಮಾನಿಸಿದರು.

'ಒಲಿಂಪಿಕ್ಸ್‌ನಲ್ಲಿ ಪದಕ ಗೆಲ್ಲುವುದು ನನ್ನ ಕನಸಾಗಿತ್ತು. ಪ್ಯಾರಿಸ್‌ನಲ್ಲಿ ಅದು ನನಸಾಗಿದೆ. ಕರ್ನಾಟಕದಲ್ಲಿ ಉತ್ತಮ ಕ್ರೀಡಾಸೌಲಭ್ಯ ಇರುವುದು ಒಳ್ಳೆಯ ಬೆಳವಣಿಗೆ. ಇಲ್ಲಿಂದ ಉತ್ತಮ ಕ್ರೀಡಾಪಟುಗಳು ಹೊರಹೊಮ್ಮಲಿ' ಎಂದು ಹರ್ಮನ್ ಆಶಿಸಿದರು.

ಮೈಸೂರು ದಸರೆಗೆ ನಾಡಕುಸ್ತಿಯ ರಂಗು

ವಿಕಾಸ್ ಪಟ್ಟು: ರಾಘವೇಂದ್ರ ಚಿತ್

ಪ್ರಜಾವಾಣಿ ವಾರ್ತೆ

ಮೈಸೂರು: ದಸರಾ ಉತ್ಸವದಲ್ಲಿ ನಾಡಕುಸ್ತಿ ರಂಗೇರಿದ್ದು, ಸ್ಥಳೀಯ ಪೈಲ್ವಾನ್ ವಿಕಾಸ್ ಅವರು ಗುರುವಾರ ಇಲ್ಲಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಆರಂಭಗೊಂಡ ಟೂರ್ನಿಯ ಉದ್ಘಾಟನಾ ಪಂದ್ಯದಲ್ಲಿ ದಾವಣಗೆರೆ ಕ್ರೀಡಾ ನಿಲಯದ ರಾಘವೇಂದ್ರ ವಿರುದ್ಧ ಜಯಿಸಿದರು.

ಒಂದು ಗಂಟೆ ನಡೆದ ಮಾರ್ಫಿಟ್ ಕುಸ್ತಿಯಲ್ಲಿ ಉಭಯ ಪೈಲ್ವಾನರೂ ಪ್ರಬಲ ಪೈಪೋಟಿ ತೋರಿದರು. ಈ ಜಟ್ಟಿಗಳ ಪಟ್ಟುಗಳನ್ನು ಕಂಡು ಪ್ರೇಕ್ಷಕರು 'ಚಿತ್' ಆದರು. ನಿಗದಿತ ಅವಧಿಯಲ್ಲಿ ಫಲಿತಾಂಶ ಬಾರದ ಕಾರಣ ಮಾರ್ಫಿಟ್ ಕುಸ್ತಿಯನ್ನು 5 ನಿಮಿಷ ಅವಧಿಯ ಪಾಯಿಂಟ್ ಕುಸ್ತಿಯನ್ನಾಗಿ ಪರಿವರ್ತಿಸಲಾಯಿತು. 4ನೇ ನಿಮಿಷದಲ್ಲಿ ವಿಕಾಸ್ ಎದುರಾಳಿಯನ್ನು ಕೆಡವಿ 2 ಅಂಕ ಗಳಿಸುವ ಮೂಲಕ ಜಯಿಸಿದರು.

ಮಹಿಳೆಯರ ಕುಸ್ತಿಯಲ್ಲಿ ಮೈಸೂರಿನ ಗಾಣಿಗರಕೊಪ್ಪಲಿನ ನಂದಿನಿ ಗೆಲುವಿನ ನಗೆ ಬೀರಿದರು. ಅವರು ಮಳವಳ್ಳಿಯ ಮೋನಿಕಾ ಅವರನ್ನು ಕೇವಲ 1ನಿಮಿಷ, 40 ಸೆಕೆಂಡುಗಳಲ್ಲಿ ಮಣಿಸಿದರು. ಮತ್ತೊಂದು ಪಂದ್ಯದಲ್ಲಿ ಮೈಸೂರಿನ ಯಶಸ್ವಿನಿ ಮಂಡ್ಯದ ಸುಹಾನ ಅವರನ್ನು 2ನಿಮಿಷ, 30 ಸೆಕೆಂಡುಗಳಲ್ಲಿ ಪರಾಭವಗೊಳಿಸಿದರು.

ಅ.9 ರವರೆಗೂ ದಸರಾ ನಾಡಕುಸ್ತಿ, ಪಂಜಾ ಕುಸ್ತಿ ಮತ್ತು ಪಾಯಿಂಟ್ ಕುಸ್ತಿಗಳು ನಡೆಯಲಿವೆ. ರಾಜ್ಯಮಟ್ಟದಲ್ಲಿ 'ದಸರಾ ಕಿಶೋರ' (57 ರಿಂದ 65 ಕೆ.ಜಿ.) ಮತ್ತು 'ದಸರಾ ಕಿಶೋರಿ' (57 ರಿಂದ 62 ಕೆ.ಜಿ) ಕುಸ್ತಿ ಆಯೋಜಿಸಲಾಗಿದೆ.


ಮೈಸೂರಿನ ಡಿ.ದೇವರಾಜ ಅರಸು ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ಗುರುವಾರ ಆರಂಭಗೊಂಡ ದಸರಾ ನಾಡಕುಸ್ತಿಯ ಉದ್ಘಾಟನಾ ಪಂದ್ಯದಲ್ಲಿ ಮೈಸೂರಿನ ವಿಕಾಸ್ ಅವರು ದಾವಣಗೆರೆಯ ರಾಘವೇಂದ್ರ ಮೇಲೆ ಹಿಡಿತ ಸಾಧಿಸಲು ಯತ್ನಿಸಿದ ಕ್ಷಣ – ಪ್ರಜಾವಾಣಿ ಚಿತ್ರ/ ಹಂಪಾ ನಾಗರಾಜು